ಗುರುವಾರ, ಮಾರ್ಚ್ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 62 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾ ವಾಣಿ**
ಯುಪಿಎಸ್‌ಸಿ ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದಿನಾಂಕ ನಿಗದಿಯಾಗಿದೆ. ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವವರು ಅನುಸರಿಸಬಹುದಾದ ಸರಳ ಸೂತ್ರಗಳು ಇಲ್ಲಿವೆ.



**ಆಳ-ಅಗಲ**
ರಣಜಿ:ದೇಶಿ ಕ್ರಿಕೆಟ್ 'ರಾಜ'ನಿಗೆ ಐದು ಸಾವಿರದ ಗರಿ


ಹರ್ಷನ ಕುಟುಂಬಕ್ಕೆ ₹ 2 ಕೋಟಿ ನೆರವು 4
ದ್ವಿತೀಯ ಪಿಯುಸಿ: ಪರಿಷ್ಕೃತ ವೇಳಾಪಟ್ಟಿ 5


| ಸೆನ್ಸೆಕ್ಸ್ | ನಿಫ್ಟಿ | ₹/$ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) |
|---|---|---|---|---|
| 55,469 ▼ | 16,606 ▼ | 75.80 ▼ | ₹53,050 (ಬೆಂಗಳೂರು) | ₹69,300 (ಬೆಂಗಳೂರು) |


CCA ಚಾಣಕ್ಯ ಕರಿಯರ್ ಅಕಾಡೆಮಿ ವಿಜಯಪುರ
ESTD: 1999 (IAS & KAS ತರಬೇತಿ ಕೇಂದ್ರ)
KAS PSI 66ನೇ ಬ್ಯಾಚ್
POLICE 16ನೇ ಬ್ಯಾಚ್
ಮೊದಲು ಬಂದವರಿಗೆ ಮೊದಲ ಆದ್ಯತೆ
ಪ್ರವೇಶ ಪ್ರಾರಂಭ: 01-03-2022
ತರಗತಿ ಪ್ರಾರಂಭ: 10-03-2022
ಮಲಘಾಣ ಬಿಲ್ಡಿಂಗ್, ಮೀನಾಕ್ಷಿ ಚೌಕ, ವಿಜಯಪುರ
☎: 08352-222197, 240197
Cell : 9448179762, 9900056218


ರಷ್ಯಾ ಮಾಹಿತಿಯ ಮೇರೆಗೆ ತೆರವು ಕಾರ್ಯಾಚರಣೆಗೆ ಸಿದ್ಧತೆ: ಭಾರತ

# ಹಾರ್ಕಿವ್ ತೊರೆಯಲು ವಿದ್ಯಾರ್ಥಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಯುದ್ಧಪೀಡಿತ ಉಕ್ರೇನ್‌ನ ಹಾರ್ಕಿವ್‌ನಲ್ಲಿರುವ ಎಲ್ಲಾ ಭಾರತೀಯರು ಸಂಜೆ 6ರ ವೇಳೆಗೆ (ಭಾರತೀಯ ಕಾಲಮಾನ ರಾತ್ರಿ 9.30) ನಗರವನ್ನು ತೊರೆಯಿರಿ ಎಂದು ಉಕ್ರೇನ್‌ನಲ್ಲಿನ ಭಾರತದ ರಾಯಭಾರ ಕಚೇರಿ ಸೂಚನೆ ನೀಡಿದೆ. ಹಾರ್ಕಿವ್ ಅನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಬುಧವಾರ ತಡರಾತ್ರಿ ಅಥವಾ ಗುರುವಾರ ನಸುಕಿನಲ್ಲಿ ಭಾರಿ ಸೇನಾ ಕಾರ್ಯಾಚರಣೆ ನಡೆಸುವ ಬಗ್ಗೆ ರಷ್ಯಾ ಮಾಹಿತಿ ನೀಡಿದೆ. ಈ ಮಾಹಿತಿಯನ್ನು ಆಧರಿಸಿ ರಾಯಭಾರ ಕಚೇರಿಯು ಈ ಸೂಚನೆ ನೀಡಿದೆ.

ಕರ್ನಾಟಕದ ಹಾವೇರಿ ನವೀನ್ ಶೇಖರಪ್ಪ ಗ್ಯಾನಗೌಡರ್ (21) ಅವರು ಉಕ್ರೇನ್‌ನ ಹಾರ್ಕಿವ್‌ನಲ್ಲಿ ಮಂಗಳವಾರ ನಡೆದಿದ್ದ ಶೆಲ್ ದಾಳಿಯಲ್ಲಿ ಮೃತಪಟ್ಟಿದ್ದರು. ಆನಂತರ, ವಿದ್ಯಾರ್ಥಿಗಳ ತೆರವಿಗೆ ತ್ವರಿತ ಕ್ರಮ ತೆಗೆದುಕೊಳ್ಳಿ ಎಂದು ಪೋಷಕರು ಮತ್ತು ವಿರೋಧ ಪಕ್ಷಗಳು ಆಗ್ರಹಿಸಿದ್ದವು.

'ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತೆರವು ಮಾಡಲು ಅನುವು ಮಾಡಿ ಕೊಡಿ ಎಂದು ಉಕ್ರೇನ್ ಮತ್ತು ರಷ್ಯಾವನ್ನು ಮಂಗಳವಾರ ತಡರಾತ್ರಿ ಕೋರಲಾಗಿತ್ತು' ಎಂದು ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಅವರು ಹೇಳಿದ್ದರು. ಭಾರತದಲ್ಲಿನ ರಷ್ಯಾದ ರಾಯಭಾರ ಕಚೇರಿಯು ಬುಧವಾರ ಮಧ್ಯಾಹ್ನ 'ಭಾರತೀಯ ವಿದ್ಯಾರ್ಥಿಗಳನ್ನು ತೆರವು ಮಾಡಲು ಸುರಕ್ಷಿತ ಕಾರಿಡಾರ್ ವ್ಯವಸ್ಥೆ ಮಾಡುತ್ತೇವೆ' ಎಂದು ಘೋಷಿಸಿತ್ತು. ಆದರೆ, ಅದರ ಬೆನ್ನಲ್ಲೇ ಮಾಸ್ಕೋದಲ್ಲಿರುವ ಭಾರತದ ರಾಯಭಾರ ಕಚೇರಿಗೆ ರಷ್ಯಾ ರಕ್ಷಣಾ ಸಚಿವಾಲಯವು ದಾಳಿ ತೀವ್ರಗೊಳಿಸುವ ಮಾಹಿತಿ ನೀಡಿದೆ ಎಂದು ಮೂಲಗಳು ಹೇಳಿವೆ.

ಹೀಗಾಗಿ ಬುಧವಾರ ಸಂಜೆ ಆರರ ವೇಳೆಗೆ ಉಕ್ರೇನ್‌ನಲ್ಲಿನ ಭಾರತದ ರಾಯಭಾರ ಕಚೇರಿಯು ಮತ್ತೊಂದು ಸಲಹೆ ನೀಡಿ,

'ಹಾರ್ಕಿವ್‌ನಲ್ಲಿರುವ ಭಾರತದ ಎಲ್ಲಾ ಪ್ರಜೆಗಳು ತಕ್ಷಣವೇ ನಗರವನ್ನು ತೊರೆಯಿರಿ' ಎಂದು ಸೂಚನೆ ನೀಡಿತು.

6ನೇ ಪುಟ ನೋಡಿ

ಉಕ್ರೇನ್‌ನ ಹಾರ್ಕಿವ್‌ನಲ್ಲಿರುವ ಪ್ರಾದೇಶಿಕ ಪೊಲೀಸ್ ಇಲಾಖೆಯ ಕಟ್ಟಡದ ಮೇಲೆ ಬುಧವಾರ ರಷ್ಯಾ ನಡೆಸಿದ ಶೆಲ್ ದಾಳಿಯಿಂದ ಹೊತ್ತಿಕೊಂಡ ಬೆಂಕಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ನಂದಿಸಲು ಯತ್ನಿಸಿದರು — ಎಎಫ್‌ಪಿ ಚಿತ್ರ

## 'ವಿದ್ಯಾರ್ಥಿಗಳ ಕರೆತರಲು ಸರ್ವ ಯತ್ನ'

**ಚಳಗೇರಿ (ಹಾವೇರಿ):** 'ಕಠಿಣ ಪರಿಸ್ಥಿತಿಯಲ್ಲಿಯೂ ಉಕ್ರೇನ್‌ನಿಂದ ಈವರೆಗೆ 12 ಸಾವಿರ ವಿದ್ಯಾರ್ಥಿಗಳನ್ನು ದೇಶಕ್ಕೆ ಸುರಕ್ಷಿತವಾಗಿ ಕರೆತರಲಾಗಿದೆ. ಅಲ್ಲಿ ಇನ್ನೂ ಸಿಲುಕಿರುವ 8 ಸಾವಿರ ಭಾರತೀಯ ವಿದ್ಯಾರ್ಥಿಗಳನ್ನು ತಾಯ್ನಾಡಿಗೆ ಕರೆತರಲು ಕೇಂದ್ರ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ರಾಣೆಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮಕ್ಕೆ ಬುಧವಾರ ಭೇಟಿ ನೀಡಿದ ಸಂದರ್ಭ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

'ನವೀನ್ ಅವರ ಪಾರ್ಥಿವ ಶರೀರವನ್ನು ಭಾರತಕ್ಕೆ ತರಲು ನಿರಂತರವಾಗಿ ಪ್ರಯತ್ನ ಮಾಡಲಾಗುತ್ತಿದೆ' ಎಂದರು.

## 'ಡೊನೇಶನ್ ಹಾವಳಿ ನಿಯಂತ್ರಿಸಿ'

'ನಮ್ಮ ದೇಶದ ಪ್ರತಿಭಾವಂತ ವಿದ್ಯಾರ್ಥಿಗಳು ಮೆಡಿಕಲ್ ಸೀಟಿಗೆ ಕೋಟಿಗಟ್ಟಲೆ ಡೊನೇಶನ್ ಕಟ್ಟಲು ಸಾಧ್ಯವಾಗದೆ ವಿದೇಶಗಳಿಗೆ ಹೋಗುತ್ತಿದ್ದಾರೆ. ಡೊನೇಶನ್ ಹಾವಳಿಗೆ ಕಡಿವಾಣ ಹಾಕಿ, ಬಡಮಕ್ಕಳಿಗೆ ಉನ್ನತ ಶಿಕ್ಷಣ ದೊರಕಿಸಲು ಸರ್ಕಾರ ಮುಂದಾಗಬೇಕು' ಎಂದು ಮೃತ ನವೀನ್ ಅವರ ತಂದೆ ಶೇಖರಪ್ಪ ಗ್ಯಾನಗೌಡರ್ ಹೇಳಿದರು.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಕರ್ನಾಟಕಕ್ಕೆ ಹೋಲಿಸಿದರೆ ಉಕ್ರೇನ್‌ನಲ್ಲಿ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ. ನನ್ನ ಮಗ ಶೇ 97ರಷ್ಟು ಅಂಕ ಪಡೆದಿದ್ದರೂ ಇಲ್ಲಿ ಎಂಬಿಬಿಎಸ್ ಸೀಟು ಸಿಗಲಿಲ್ಲ' ಎಂದು ದುಃಖ ತೋಡಿಕೊಂಡರು.

## ಚಿನ್ನದ ದರ ಹೆಚ್ಚಳ

**ನವದೆಹಲಿ (ಪಿಟಿಐ):** 10 ಗ್ರಾಂ ಚಿನ್ನದ ದರ ₹ 1,202 ರಷ್ಟು ಹೆಚ್ಚಾಗಿ ₹ 51,889ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 2,148ರಷ್ಟು ಹೆಚ್ಚಾಗಿ ₹ 67,956ರಂತೆ ಮಾರಾಟವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

## ಚಿನಕುರಳಿ

ಪ್ರಕಾಶ್ ಶೆಟ್ಟಿ

Birthday Remembrance

Sri B. S. Narayan
03.03.1932
You will live forever in our hearts
Your ideals are always there as beacons of Inspiration
Fondly Remembered by:
Dr. B. S. Ragini Narayan
Donor Trustee & Chairperson, BMS Educational Trust
Life Trustee, BMS Hospital Trust



ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಕಾಡ್ಗಿಚ್ಚಿನಿಂದ ಅರಣ್ಯ ಮತ್ತು ವನ್ಯಜೀವಿಗಳನ್ನು ರಕ್ಷಿಸಿ

ಬೆಂಕಿಯಿಂದ ಅರಣ್ಯವನ್ನು ಸಂರಕ್ಷಿಸೋಣ, ಅಂತೆಯೇ ಕಾಡಿನಲ್ಲಿ ಬೆಂಕಿ ಕಾಣಿಸಿಕೊಂಡಲ್ಲಿ ತಕ್ಷಣವೇ 1926ಗೆ (ಟೋಲ್ ಫ್ರೀ 24x7) ಕರೆಮಾಡಿ ಮಾಹಿತಿ ನೀಡಿ. ಇದುವೇ ನಾಗರಿಕ ಪ್ರಜ್ಞೆ ಮತ್ತು ಜವಾಬ್ದಾರಿ.

ಶ್ರೀ ಉಮೇಶ್ ಕತ್ತಿ
ಮಾನ್ಯ ಅರಣ್ಯ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕರ ವ್ಯವಹಾರಗಳ ಸಚಿವರು ಪರಿಸರ ಹಾಗೂ ವನ್ಯಜೀವಿ ಸಂಕ್ಷಣೆಗಾಗಿ ಆಯೋಜಿಸಿದ್ದ ಸಪ್ತಾಹದ ಜಾಥಾದಲ್ಲಿ ಪಾಲ್ಗೊಂಡಿರುವುದು

- ಕಾಡುಗಳು ಅಮೂಲ್ಯ ನೈಸರ್ಗಿಕ ಸಂಪನ್ಮೂಲಗಳ ಆಗರ. ಜೀವ ವೈವಿಧ್ಯತೆಗಳ ಆವಾಸ ಸ್ಥಾನ.
- ಬೇಸಿಗೆಯ ಋತುಮಾನ ಕಾಲಿಡುತ್ತಿದ್ದಂತೆ ರಾಶಿ ರಾಶಿಯಾಗಿ ಉದುರುವ ತರಗೆಲೆಗಳು, ಸುಲಭವಾಗಿ ಕಾಡುಗಳಿಗೆ ಬೆಂಕಿಯ ಅಪಾಯವನ್ನು ತಂದೊಡ್ಡುತ್ತವೆ.
- ಒಣ ಎಲೆಗಳ ಮೇಲೆ ಬೀಳುವ ಸಣ್ಣ ಬೆಂಕಿಯ ಕಿಡಿ ಕಾಡ್ಗಿಚ್ಚಾಗಿ ಹರಡಿ ಇಡೀ ಕಾಡನ್ನೇ ಬಲಿತೆಗೆದುಕೊಳ್ಳುವುದು.
- ಅಂತೆಯೇ ಕಾಡಿನಲ್ಲಿ ಆಸರೆ ಪಡೆದ ವೈವಿಧ್ಯಮಯ ವನ್ಯಜೀವಿಗಳು ಪ್ರಾಣ ಕಳೆದುಕೊಳ್ಳುವವು.
- ಇದರಿಂದ ಪರಿಸರಕ್ಕೂ ಹಾನಿ ಹಾಗೂ ಅಮೂಲ್ಯ ಜೈವಿಕ ಸಂಪನ್ಮೂಲ ನಷ್ಟ.

ಇಂತಹ ಘೋರ ಪರಿಣಾಮ ನಾವು ಅನುಭವಿಸಬೇಕೆ? ನಮಗೆ ಇದು ಬೇಕೆ? ಖಂಡಿತಾ ಬೇಡ!
ಕರ್ನಾಟಕ ಅರಣ್ಯ ಕಾಯಿದೆ ಹಾಗೂ ನಿಯಮಗಳ ಪ್ರಕಾರ ಕಾಡಿಗೆ ಬೆಂಕಿ ಹಚ್ಚುವುದು ದಂಡನೀಯ ಅಪರಾಧವಾಗಿದ್ದು, ಗರಿಷ್ಟ 3 ವರ್ಷಗಳ ಜೈಲು ಶಿಕ್ಷೆ ಇರುತ್ತದೆ.

ಭಾರತದ ಸಂವಿಧಾನದ ಆರ್ಟಿಕಲ್ 51(ಎ)(ಜಿ) ಪ್ರಕಾರ ಅರಣ್ಯ ಮತ್ತು ವನ್ಯಜೀವಿಗಳನ್ನು ಸಂರಕ್ಷಿಸುವುದು ಭಾರತದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವಾಗಿರುತ್ತದೆ.

ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಣೆ : ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ಅರಣ್ಯ ಇಲಾಖೆ
ನಮ್ಮ ಅತ್ಯಮೂಲ್ಯ ಅರಣ್ಯ ಮತ್ತು ವನ್ಯಜೀವಿಗಳನ್ನು ಕಾಳ್ಗಿಚ್ಚಿನಿಂದ ರಕ್ಷಿಸೋಣ
ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ | ಅರಣ್ಯ ಸಹಾಯವಾಣಿ : 1926 | Likes on



ಗಮನಿಸಿರಿ ಎಲ್‌ಐಸಿ ಪಾಲಿಸಿದಾರರೇ
ಸಮಯಕ್ಕೆ ಸರಿಯಾಗಿ ಕ್ಲೇಮ್ ಸಂದಾಯ ಮಾಡಲು ನಮಗೆ ಸಹಾಯ ಮಾಡಿ.

ಮೆಚ್ಯುರಿಟಿ ತಾರೀಖು/ಸರ್ವೈವಲ್ ಬೆನಿಫಿಟ್ ತಾರೀಖು, ಇವುಗಳಿಗಾಗಿ ದಯವಿಟ್ಟು ನಿಮ್ಮ ಪಾಲಿಸಿ ದಸ್ತಾವೇಜನ್ನು ಪರಿಶೀಲಿಸಿರಿ

- ವಿವರಗಳೊಂದಿಗೆ ಯಾವುದೇ ಶಾಖೆಯನ್ನು ಸಂಪರ್ಕಿಸಿರಿ
- ಬ್ಯಾಂಕ್ ಅಕೌಂಟ್ (NEFT) ವಿವರಗಳನ್ನು ಒದಗಿಸಿರಿ. NEFT ಮ್ಯಾಂಡೇಟ್ ಫಾರ್ಮ್ ನಮ್ಮ ಎಲ್ಲಾ ಆಫೀಸುಗಳಲ್ಲಿ ಲಭ್ಯವಿದೆ ಅಥವಾ ಎಲ್‌ಐಸಿಯ ವೆಬ್‌ಸೈಟ್ www.licindia.in ನಲ್ಲಿ "Download Form" ಲಿಂಕ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಿ
- NEFT ವಿವರಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು.
- ಕ್ಲೇಮ್ ಡಿಸ್‌ಚಾರ್ಜ್ ಫಾರ್ಮ್ಸ್ ಮತ್ತು ಪಾಲಿಸಿ ದಸ್ತಾವೇಜನ್ನು ಸಲ್ಲಿಸಿರಿ
- KYC ಸಲ್ಲಿಸಿರಿ ಮತ್ತು ಅಪ್‌ಡೇಟ್ ಮಾಡಿರಿ – ಮನೆಯ ವಿಳಾಸ, ಫೋನ್/ಮೊಬೈಲ್ ನಂ., ಈ-ಮೇಲ್ ಐಡಿ ಮುಂತಾದವುಗಳು.

LIC/PRA/2021-22/47/Kan

LICHELP <ಪಾಲಿಸಿ ನಂ.> ಇದನ್ನು 9222492224ಗೆ SMS ಮಾಡಿ ಅಥವಾ licclaims@licindia.comಗೆ ಈಮೇಲ್ ಮಾಡಿ

ತಕ್ಷಣ ಕ್ಲೇಮ್ ಸೆಟಲ್‌ಮೆಂಟ್‌ಗಾಗಿ ಎಲ್ಲಾ ಅವಶ್ಯಕತೆಗಳೊಂದಿಗೆ ನಿಮ್ಮ ಏಜಂಟ್/ಬ್ರಾಂಚ್‌ನ್ನು ಸಂಪರ್ಕಿಸಿರಿ.
ಕಾಲ್ ಸೆಂಟರ್ ಸರ್ವಿಸ್ (022) 6827 6827 | ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ "MyLIC" | ಸಂದರ್ಶಿಸಿರಿ: licindia.in
ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಶೂರನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ನೀಡಬೇಕಾಗಿ ವಿನಂತಿ.
ನಮ್ಮನ್ನು ಫಾಲೋ ಮಾಡಿರಿ: LIC India Forever
IRDAI Regn No.: 512
LIC ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

ಗುರುವಾರದ ಉಷ್ಣಾಂಶ 31° ಗರಿಷ್ಠ 18° ಕನಿಷ್ಠ

**ಹವಾಮಾನ ಮುನ್ಸೂಚನೆ** ನಗರದಲ್ಲಿ ಬೆಳಿಗ್ಗೆ ಮಂಜು ಮತ್ತು ಮೋಡ ಕವಿದ ವಾತಾವರಣ. ನಂತರ ಶುಭ್ರ ಆಕಾಶ ಇರಲಿದೆ.

ಮುನ್ಸೂಚನೆ: ಶುಕ್ರವಾರ 29° 19° | ಶನಿವಾರ 30° 19° | ಭಾನುವಾರ 31° 19°

## ಲಂಚ ಪ್ರಕರಣ: ಭೋವಿ ಅಭಿವೃದ್ಧಿ ನಿಗಮ ಎಫ್‌ಡಿಎ ಬಂಧನ

ಬೆಂಗಳೂರು: ಸ್ವಯಂ ಉದ್ಯೋಗಕ್ಕೆ ಸಾಲ ಮತ್ತು ಸಹಾಯಧನ ಯೋಜನೆಯಡಿ ಮಂಜೂರಾಗಿದ್ದ ಅನುದಾನ ಬಿಡುಗಡೆಗೆ ₹ 25,000 ಲಂಚ ಪಡೆಯುತ್ತಿದ್ದ ಭೋವಿ ಅಭಿವೃದ್ಧಿ ನಿಗಮದ ಬೆಂಗಳೂರು ನಗರ ಜಿಲ್ಲಾ ಕಚೇರಿಯ ಪ್ರಥಮ ದರ್ಜೆ ಸಹಾಯಕ ದಶರಥ್ ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ಬಂಧಿಸಿದೆ.

ಚಾಮರಾಜಪೇಟೆ ನಿವಾಸಿಯೊಬ್ಬರು ಸ್ವಯಂ ಉದ್ಯೋಗಕ್ಕೆ ನೆರವು ಕೋರಿ ಅರ್ಜಿ ಸಲ್ಲಿಸಿದ್ದರು. ಹಣ ಬಿಡುಗಡೆ ಮಾಡಲು ₹ 50,000 ಲಂಚ ನೀಡುವಂತೆ ದಶರಥ್ ಮತ್ತು ನಿಗಮದ ಜಿಲ್ಲಾ ವ್ಯವಸ್ಥಾಪಕ ಸುಬ್ಬಪ್ಪ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕದ ಕಚೇರಿಗೆ ದೂರು ಸಲ್ಲಿಸಿದ್ದರು.


### ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, (1) ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲಾ ಹೋಬಳಿ, ವಿದ್ಯಾನಗರ ಕ್ರಾಸ್, ನಂ.9 ರಲ್ಲಿ ವಾಸವಾಗಿರುವ ಶ್ರೀ ದೇವರಾಜೆಗೌಡ ಬಿನ್ ಲೇಟ್ ತಿಮ್ಮೇಗೌಡ ಮತ್ತು (2) ಬೆಂಗಳೂರು – 562 157, ಬೆಟ್ಟಹಲಸೂರು, ಕಾಡಿಗಾನಹಳ್ಳಿ, ಎನ್.ಆರ್.ವಿ. ಆಸ್ಪತ್ರೆ, ವಿಮಾನ ನಿಲ್ದಾಣ ರಸ್ತೆ, ನಂ.4/1 ರಲ್ಲಿ ವಾಸವಾಗಿರುವ ಶ್ರೀಮತಿ ಅನುರಾಧ ಕೋಂ ಶ್ರೀ ಕೆ.ವಿ.ವೀರಪ್ಪ (ಮಾಲೀಕರು), ಇವರು, ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮದ ಸರ್ವೆ ನಂ.90/6, 90/7, 90/8, 90/9 ಮತ್ತು 94/3 ಹಾಗು ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಚೊಕ್ಕನಹಳ್ಳಿ ಗ್ರಾಮದ ಸರ್ವೆ ನಂ.23, ತಮ್ಮ ಜಮೀನಿಗೆ ಸಂಬಂದಿಸಿದಂತೆ ಈ ಕೆಳಗೆ ತಿಳಿಸಿರುವ ಮೂಲ ದಾಖಲಾತಿಗಳನ್ನು ಕಳೆದುಕೊಂಡಿರುವುದಾಗಿ, ಅದನ್ನು ಎಷ್ಟೇ ಹುಡುಕಿದರೂ ಸಹ ಸಿಕ್ಕಿರುವುದಿಲ್ಲ ಎಂದು ನಮಗೆ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ಸರ್ವೆ ನಂ. | ದಿನಾಂಕ | ದಾಖಲೆ ಸಂಖ್ಯೆ | ವಾಲ್ಯೂಂ | ಪುಟ | ಉಪನೋಂದಣಾಧಿಕಾರಿಗಳ ಕಚೇರಿ |
|---|---|---|---|---|---|---|
| ಪುಸ್ತಕ 1 ರಲ್ಲಿ ನೋಂದಾವಣೆಯಾಗಿರುವ ಬೆಟ್ಟಹಲಸೂರಿಗೆ ಸಂಬಂಧಿಸಿದ ಕ್ರಯ ಪತ್ರಗಳು | | | | | | |
| 1. | 90/6 | 08.01.1997 | 4930/96–97 | 986 | 58–61 | ಯಲಹಂಕ |
| 2. | 90/7 | 10.02.1959 | 3077/58–59 | 748 | 74–76 | ದೇವನಹಳ್ಳಿ |
| 3. | 90/7 | 11.02.1959 | 3083/58–59 | 748 | 81 – 82 | ದೇವನಹಳ್ಳಿ |
| 4. | 90/8 | 11.03.1970 | 3628/69–70 | 1050 | 119–120 | ದೇವನಹಳ್ಳಿ |
| 5. | 90/8 | 08.04.1993 | 187/93–94 | 367 | 158–161 | ಯಲಹಂಕ |
| 6. | 125 (90/9 & 94/3) | 17.11.1969 | 2627/69–70 | 1040 | 205–208 | ದೇವನಹಳ್ಳಿ (ಮೊದಲನೆಯ ಎರೆಡು ಪುಟಗಳು) |
| ಪುಸ್ತಕ 1 ರಲ್ಲಿ ನೋಂದಾವಣೆಯಾಗಿರುವ ಚೊಕ್ಕನಹಳ್ಳಿಗೆ ಸಂಬಂಧಿಸಿದ ಕ್ರಯ ಪತ್ರ | | | | | | |
| 7. | 23 | 17.07.1992 | 1743/92–93 | 268 | 167–170 | ಯಲಹಂಕ |
| ಪುಸ್ತಕ 1 ರಲ್ಲಿ ನೋಂದಾವಣೆಯಾಗಿರುವ ಬೆಟ್ಟಹಲಸೂರಿಗೆ ಸಂಬಂಧಿಸಿದ ತಿದ್ದುಪಡಿ ಪತ್ರ | | | | | | |
| 8. | 90/9 & 94/3 | 06.08.1999 | 2139/99–2000 | - | - | ಪೋಟೋ ರಿಜಿಸ್ಟ್ರಾರ್ ಯಲಹಂಕ |

ಈ ಮೇಲೆ ತಿಳಿಸಿರುವ ಮೂಲ ದಾಖಲಾತಿಗಳು ಸಾಗಾಣೆ ಮಾಡುವಾಗ ಕಳೆದುಕೊಂಡಿರುವುದಾಗಿ, ಹಾಗು ಸದರಿ ಮಾಲೀಕರು ದಿನಾಂಕ 24.02.2022 ರಲ್ಲಿ ದೂರು ಸಂಖ್ಯೆ 0167453/2022 ಮತ್ತು ದಿನಾಂಕ 25.02.2022ರಲ್ಲಿ ದೂರು ಸಂಖ್ಯೆ 0168434/2022 ರಲ್ಲಿ ಬೆಂಗಳೂರು ಜಿಲ್ಲೆ ಪೋಲೀಸ್‌ಗೆ ಮೂಲದಾಖಲೆಗಳು ಕಳೆದು ಹೋಗಿರುವ ಬಗ್ಗೆ ದೂರು ಸಲ್ಲಿಸಿರುತ್ತಾರೆ. ಯಾರಿಗಾದರೂ ಈ ಮೇಲೆ ತಿಳಿಸಿರುವ ದಾಖಲಾತಿಗಳು ಸಿಕ್ಕಿದಲ್ಲಿ, ಈ ಕೆಳಗೆ ಸಹಿ ಮಾಡಿರುವವರಿಗೆ ಅಥವಾ ಅದರ ಮಾಲೀಕರಿಗೆ ತಲುಪಿಸಲು ಕೋರಲಾಗಿದೆ.

ಜೆರಾಲ್ಡ್ ಮನೋಹರನ್, ಪಾಲುದಾರರು, ಜೆ.ಎಸ್.ಎ, ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್, 3, ಕಸ್ತೂರಬಾ ರಸ್ತೆ, ಬೆಂಗಳೂರು – 560 001. ದೂ: 080–43503600/080–43503610. ಈ–ಮೇಲ್: gerald@jsalaw.com

ದಿನಾಂಕ: 03.03.2022. ಸ್ಥಳ: ಬೆಂಗಳೂರು

### NOTICE INVITING APPLICATIONS FOR ALLOTMENT OF SHOPS AT TB-III, MEG & CENTRE, BANGALORE-560 033

1. CO, Trg Bn-III, MEG & Centre, Bangalore-33 invites application for allotment of various Regimental shops on rental basis at this Bn. Shops would be alloted to the highest bidder based on undermentioned priority in descending order of applications:-

(a) War widows/widows of def personnel killed while on duty (b) Disabled Soldiers (c) Ex-Servicemen (d) Spouse/Widow of ex-servicemen

2. Details of shops are an under:-

| Ser No. | Bldg No. | Type of Shop | Sqft |
|---|---|---|---|
| (a) | T-21/3 | Tailor Shop | 250 |
| (b) | T-21/6 | Gen Store | 750 |
| (c) | T-28/1 | Boot Repair Shop | 250 |
| (d) | T-103/1 | Gen Store | 250 |
| (e) | T-29/3 | Tailor Shop | 250 |
| (f) | RC Line | Provn Store | 300 |

3. The license fees and rebate will be intimated during collection of application form.
4. Application forms will be available at 'Q' Br of this Bn. The same may be obtained by drawing DD on all working days:-
   (a) Issue of Application form : 03 Mar 22 to 10 Mar 22 (0900h to 1300h)
   (b) Date of receipt of application : 17 Mar 22 (Upto 1100h)
   (c) DD in favour of : Regt Fund Acct TB-III MEG & Centre Payable at SBI TB-IIII MEG & Centre
   (d) DD Amount: 500/- (refundable to those not allotted shop & will be adjusted towards security deposit of those allotted shop).

### PUBLIC NOTICE

NOTICE is hereby given to the public at large that my Clients (1) Smt. R. Radha W/o. Late S. Krishnan, (2) Loksunder K(Lok Sunder Krishnan),(3) Dr. Dhruva Kumar Krishnan, (4) Dr. Meenakshi K and (5) Smt. Lavanya K are the absolute owners of, and in possession of Item No. 1, Item 2 and Item No. 3 of the Schedule Property specified herein below.

It has come to the knowledge of my Clients that certain unknown mischievous individuals representing themselves to be owners / agent of above specified owners of the Item No. 1, Item 2 and Item No. 3 of the Schedule Property are unscrupulously and fraudulently trying to enter into agreement(s), Sale Deeds, etc with General Public, builders, Companies, etc.

It has also come to the knowledge of my Clients that efforts are being made by certain mischievous and fraudulent elements to impersonate Smt. R. Radha W/o. Late S. Krishnan, who is one of the owners of the Schedule Property and to enter into agreement(s), Sale Deeds with General Public, builders, Companies, etc., in her name, through fake documents.

Public is hereby informed that my Clients have neither entered into any agreement / Sale Deed of any kind nor intend to dispose / alienate / enter into any agreement(s) of anykind whatsoever w.r.t., the Item No. 1, Item 2 and Item No. 3 of the Schedule Property.

In the above circumstances, my Clients hereby caution the General Public not to enter into any transactions whatsoever w.r.t., item No. 1, Item 2 and Item No. 3 of the below specified Schedule Property or any part thereof.

Any such transactions by and between any persons w.r.t., Item No. 1, Item 2 and Item No. 3 of the Schedule Property entered into, with such fraudulent persons claiming to be owners / agent of owners shall and will not be legal and will be at their own risk and consequence.

My Clients will not be liable or responsible for any such fraudulent transaction(s).

**SCHEDULE PROPERTY**

**ITEM No. 1**: ALL THAT PIECE AND PARCEL of dry land measuring 4 acres, 25 guntas (less 10 guntas of phot kharab) in Survey No. 20, Bandapura Village, BidarahalliHobli, Hoskote Taluk, Bengaluru District, bounded as follows **East by:** Survey. No. 44/1 and S.. No.47, **West by:** Road leading to Bandapura and S. No. 19 and S. No. 22, **North by:** Survey. No. 21, **South by:** Survey. No. 16

**ITEM No. 2**: ALL THAT PIECE AND PARCEL of dry land Originally measuring 5 acres, 23 guntas, less 10 guntas of phut kharab, less 2700 Sq. meters acquired by Government of India, towards northern portion for widening / development of Highway) in Survey No. 21, Bandapura Village, Bidarahalli Hobli, Hoskote Taluk, Bengaluru District bounded as follows: **East by:** Survey. No. 43 and S. No. 44/1, **West by:** Road leading to Bandapura and S. No. 22, **North by:** Old Madras Road, from Bengaluru to Hoskote, **South by:** Survey. No. 20.

**ITEM No. 3**: ALL THAT PIECE AND PARCEL of dry land measuring 3 acres, 31 guntas in S. No. 44/1, Bandapura Village, Bidarahalli Hobli, Hoskote Taluk, Bengaluru district bounded as follows: **East by:** Survey. No. 44/2, **West by:** Survey. No. 20 & 21, **North by:** Survey. No. 43, **South by:** Survey. No. 2 and 47.

**R. Nanje Gowda**, Advocate
No 34, 2nd Floor, 11th Cross, 1st Stage, Indiranagar, Bangalore-560038.
Mob:9880425906 Dated: 02/03/2022


## ಉದ್ದಿಮೆ ಪರವಾನಗಿ ದಂಡರಹಿತ ನವೀಕರಣ–ಅವಧಿ ವಿಸ್ತರಣೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಉದ್ದಿಮೆದಾರರು ಉದ್ದಿಮೆ ಪರವಾನಗಿಯನ್ನು ದಂಡರಹಿತವಾಗಿ ನವೀಕರಿಸುವ ಅವಧಿಯನ್ನು ಇದೇ 31ರವರೆಗೆ ವಿಸ್ತರಿಸಲಾಗಿದೆ.

ಪರವಾನಿಗೆ ನವೀಕರಣ ಅವಧಿ ಫೆ.28ಕ್ಕೆ ಕೊನೆಗೊಂಡಿತ್ತು. ನಂತರ ನವೀಕರಿಸುವವರು ಶೇ 25 ರಷ್ಟು ದಂಡ ಪಾವತಿಸಬೇಕಿತ್ತು. ಆದರೆ, ಈಗ ಒಂದು ತಿಂಗಳು ದಂಡ ಪಾವತಿಯಿಂದ ವಿನಾಯಿತಿ ಸಿಗಲಿದೆ. ಈ ಅವಕಾಶ ಬಳಸಿಕೊಂಡು 31ರಒಳಗೆ ದಂಡವಿಲ್ಲದೆ ಪರವಾನಗಿ ನವೀಕರಿಸಿಕೊಳ್ಳಬೇಕು ಎಂದು ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ.ಬಾಲಸುಂದರ್ ತಿಳಿಸಿದ್ದಾರೆ.

'ಏಪ್ರಿಲ್ 1ನಂತರ ಪರವಾನಗಿ ನವೀಕರಣಕ್ಕಾಗಿ ಶೇ 100 ರಷ್ಟು ದಂಡ ಹಾಗೂ ನವೀಕರಣ ಶುಲ್ಕ ಪಾವತಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಪಾಲಿಕೆಯ ವೆಬ್ ಸೈಟ್ (www.bbmp.gov.in) ನೋಡಬಹುದು' ಎಂದೂ ತಿಳಿಸಿದ್ದಾರೆ.


**AIR FORCE SCHOOL HEBBAL**
HQTC(U) AF, JC Nagar Post, Bengaluru - 06
(Under the aegis of the IAF Educational & Cultural Society)

**Staff Recruitment 2022-23**
(Refer Advertisement dated 02 Jan 22)

**Amendment notice**

Following posts which was earlier advertised under contractual category is now changed to Regular post

**PRT -02 & NTT -04**

All applications already received for above mentioned posts will be considered regular and need not to re-apply.

**Contractual post :** Interested candidate may apply for contractual post of PGT legal studies, PGT Psychology and PGT Political Science. Minimum Qualification for PGT Legal Studies has been revised.

For QRs, application, pay scale and more details please log on to **www.afshebbal.ac.in**

Last date for submission of applications for above posts only extended to **10 Mar 22.**

**CHAIRMAN**


### ಯಲಹಂಕ ವ್ಯಾಪ್ತಿಯ ಕಾಮಗಾರಿ • ಬಿಬಿಎಂಪಿ ಮುಖ್ಯ ಆಯುಕ್ತ ಸೂಚನೆ

# 110 ಹಳ್ಳಿ: ರಸ್ತೆ ದುರಸ್ತಿ ಚುರುಕುಗೊಳಿಸಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ರಸ್ತೆಗಳು ವಾಹನ ಸುಗಮ ಸಂಚಾರಕ್ಕೆ ಪೂರಕವಾಗಿರಲಿ
- ನಿಗದಿತ ಸಮಯದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ

ಬೆಂಗಳೂರು: ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ '110 ಹಳ್ಳಿ ಯೋಜನೆ'ಯಡಿ ಕುಡಿಯುವ ನೀರು ಹಾಗೂ ಒಳಚರಂಡಿ ಕೊಳವೆಗಳ ಅಳವಡಿಕೆಗಾಗಿ ಅಗೆದಿರುವ ರಸ್ತೆಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಟ್ಟೂರು ವಾರ್ಡ್ ವ್ಯಾಪ್ತಿಯ ಅನಂತಪುರ, ಎ.ಎಂ.ಎಸ್ ಲೇಔಟ್ ವ್ಯಾಪ್ತಿಯಲ್ಲಿ ರಸ್ತೆಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ಅವರು ಬುಧವಾರ ಪರಿಶೀಲಿಸಿದರು. ರಸ್ತೆಗಳು ವಾಹನಗಳ ಸುಗಮ ಸಂಚಾರಕ್ಕೆ ಪೂರಕವಾಗಿರಬೇಕು. ನಿಗದಿತ ಸಮಯದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

'ಕುಡಿಯುವ ನೀರು ಸರಬರಾಜು ಕೊಳವೆ ಮತ್ತು ಒಳಚರಂಡಿ ಮಾರ್ಗದ ಕಾಮಗಾರಿಯನ್ನು ಜಲಮಂಡಳಿ ಪೂರ್ಣಗೊಳಿಸಿರುವ ಕಡೆ ರಸ್ತೆ ದುರಸ್ತಿಯನ್ನು ಕೂಡಲೇ ನಡೆಸಬೇಕು. ಪಾದಚಾರಿ ಮಾರ್ಗವನ್ನೂ ಅಭಿವೃದ್ಧಿಪಡಿಸಬೇಕು. ಕಾಮಗಾರಿ ವೇಳೆ ಸ್ಥಳೀಯರಿಗೆ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು.

ಕಾರ್ಯಪಾಲಕ ಎಂಜಿನಿಯರ್ ಸುಧಾಕರ್ ರೆಡ್ಡಿ, 'ಯಲಹಂಕ ಕ್ಷೇತ್ರದ ವ್ಯಾಪ್ತಿಯಲ್ಲಿ ಅನಂತಪುರ, ಚಿಕ್ಕಬೆಟ್ಟಹಳ್ಳಿ, ದೊಡ್ಡಬೆಟ್ಟಹಳ್ಳಿ, ಕೆಂಚೇನಹಳ್ಳಿ, ಹಾರೋಹಳ್ಳಿ, ನಾಗೇನಹಳ್ಳಿ, ವಡೇರಪುರ, ಗೋವಿಂದಪುರಗಳಲ್ಲಿ ಈ ಯೋಜನೆಯಡಿ ಕಾಮಗಾರಿಗಳು ಪ್ರಗತಿಯಲ್ಲಿವೆ. ವಡೇರಪುರ, ಗೋವಿಂದಪುರ ಹೊರತುಪಡಿಸಿ ಉಳಿದೆಡೆ ರಸ್ತೆಗಳ ಮರು ನಿರ್ಮಾಣ ಪ್ರಗತಿಯಲ್ಲಿದೆ' ಎಂದು ಹೇಳಿದರು.

'ಕುಡಿಯುವ ನೀರಿನ ಕೊಳವೆ ಹಾಗೂ ಒಳಚರಂಡಿ ಮಾರ್ಗ ಅಭಿವೃದ್ಧಿಗೆ 151 ಕಿ.ಮೀ. ಉದ್ದದ ರಸ್ತೆ ಅಗೆಯಲಾಗಿದ್ದು, ಈಗಾಗಲೇ 60 ಕಿ.ಮೀ ಉದ್ದದ ರಸ್ತೆ ಕಾಮಗಾರಿ ಮುಗಿದಿದೆ. ಉಳಿದದ್ದನ್ನು ಶೀಘ್ರವೇ ದುರಸ್ತಿಗೊಳಿಸಲಾಗುವುದು' ಎಂದು ತಿಳಿಸಿದರು.

ಅಟ್ಟೂರು ವಾರ್ಡ್‌ನಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ರಸ್ತೆ ದುರಸ್ತಿ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿದರು. ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ, ಮುಖ್ಯ ಎಂಜಿನಿಯರ್ ರಂಗನಾಥ್, ಕಾರ್ಯಪಾಲಕ ಎಂಜಿನಿಯರ್ ಸುಧಾಕರ ರೆಡ್ಡಿ ಇದ್ದರು


### ನಗರಸಭಾ ಕಾರ್ಯಾಲಯ, ರಾಮನಗರ

ರಾಮನಗರ ಜಿಲ್ಲೆ–562159
ದೂರವಾಣಿ: 080–27271286, ಹೆಲ್ಪ್‌ಲೈನ್: 080–27276070
Website: www.ramanagaracity.mrc.gov.in e-Mail: itstaff_ulb_ramanagaram@yahoo.com

ಸಂಖ್ಯೆ: ನಸರಾ/ಎಸ್.ವಿ.ಐ/ಸಿ.ಆರ್/08/2021–22 ದಿನಾಂಕ: 02.03.2022

**ಟೆಂಡರ್ ಪ್ರಕಟಣೆ**

ಕರ್ನಾಟಕ ಪಾರದರ್ಶಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999 ನಿಯಮ 2000 ದಂತೆ **ರಾಮನಗರ ನಗರಸಭೆಯ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿನ ಕಂಪ್ಯೂಟರ್ ಸೆಂಟರ್‌ನಲ್ಲಿ ಕಂಪ್ಯೂಟರ್, ಎ.ಸಿ., ಜನರೇಟರ್,** ಸಿ.ಸಿ **ಟಿ.ವಿ ಇತ್ಯಾದಿ ಉಪಕರಣಗಳನ್ನು ರಿಪೇರಿ ಮಾಡುವುದು ಹಾಗೂ ವಾರ್ಷಿಕ ನಿರ್ವಹಣೆ ಮಾಡಲು** ಅರ್ಹ ಸಂಸ್ಥೆ / ಏಜೆನ್ಸಿ / ಸರಬರಾಜುದಾರರಿಂದ ಪೌರಾಯುಕ್ತರು, ನಗರಸಭೆ, ರಾಮನಗರ ಇವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ನಿಗದಿತ ಶುಲ್ಕವನ್ನು ಡಿ.ಡಿ ಮುಖಾಂತರ ಸಲ್ಲಿಸಿ ಟೆಂಡರ್ ದಸ್ತಾವೇಜು ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಅರ್ಜಿ ಪಡೆಯಲು ಕಚೇರಿಯ ವೇಳೆಯಲ್ಲಿ ಆಡಳಿತ ಶಾಖೆಯ ಸಿಬ್ಬಂದಿಯನ್ನು ಸಂಪರ್ಕಿಸುವುದು.

| ಕ್ರ ಸಂ | ವಿವರ | ಅಂದಾಜು ವೆಚ್ಚ (ರೂ. ಗಳಲ್ಲಿ) | ಇ.ಎಂ.ಡಿ ಮೊತ್ತ | ಅರ್ಜಿ ಶುಲ್ಕ (ತೆರಿಗೆ ಶುಲ್ಕ ಸೇರಿ) |
|---|---|---|---|---|
| 1 | ಕಂಪ್ಯೂಟರ್, ಎ.ಸಿ., ಜನರೇಟರ್, ಸಿ.ಸಿ ಟಿ.ವಿ ಇತ್ಯಾದಿ ಉಪಕರಣಗಳನ್ನು ವಾರ್ಷಿಕ ನಿರ್ವಹಣೆ ಮಾಡುವುದು | 4,50,000/– | 11,250/– | 1,000/– |
| 2 | ಕಂಪ್ಯೂಟರ್, ಎ.ಸಿ., ಜನರೇಟರ್, ಸಿ.ಸಿ ಟಿ.ವಿ ಇತ್ಯಾದಿ ಉಪಕರಣಗಳನ್ನು ರಿಪೇರಿ ಮಾಡುವುದು | 4,75,000/– | 11,875/– | 1,000/– |

(1) ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವ ಹಾಗೂ ಫಾರಂ ವಿತರಿಸುವ ಕಡೆಯ **ದಿನಾಂಕ: 01.04.2022 ರಂದು ಸಂಜೆ 4:00 ಗಂಟೆಯವರೆಗೆ.** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 01.04.2022ರಂದು ಸಂಜೆ 4:30 ಗಂಟೆಯವರೆಗೆ.** (3) ಟೆಂಡರ್ ತೆರೆಯುವ **ದಿನಾಂಕ: 04.04.2022ರಂದು ಸಂಜೆ 4:30 ಗಂಟೆಗೆ.**

ಸಹಿ/– ಪೌರಾಯುಕ್ತರು
ನಗರಸಭೆ, ರಾಮನಗರ

ವಾಸಾಸಂಇ/ರಾನ/ಬ್ರಾಂಜ್./523/2021–22


## ಲುಲು ಮಾಲ್‌ನಲ್ಲಿ ರಿಯಾಯಿತಿ ಕೊಡುಗೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲುಲು ಮಾಲ್‌ನಲ್ಲಿ ಮಾರ್ಚ್ 10ರವರೆಗೆ ಹಲವು ಬಗೆಯ ರಿಯಾಯಿತಿಗಳು ಲಭ್ಯವಿರಲಿವೆ. ಹೈಪರ್ ಮಾರ್ಕೆಟ್, ಲಗೇಜ್, ಫ್ಯಾಷನ್ ಮತ್ತು ಕನೆಕ್ಟ್‌ಗಳಲ್ಲಿ ರಿಯಾಯಿತಿ ಕೊಡುಗೆಗಳು ಇರಲಿವೆ.

ಲುಲು ಫ್ಯಾಷನ್ ಸ್ಟೋರ್‌ನಲ್ಲಿ ಆಕರ್ಷಕ ದರದಲ್ಲಿ ಉತ್ಪನ್ನಗಳ ಮಾರಾಟ ಇರಲಿದೆ. ಎಲೆಕ್ಟ್ರಾನಿಕ್ಸ್ ಉಪಕರಣಗಳು ವಿಶೇಷ ದರದಲ್ಲಿ ಮಾರಾಟಕ್ಕೆ ಇರಲಿವೆ. ಸ್ಮಾರ್ಟ್‌ಫೋನ್, ಕಂಪ್ಯೂಟರ್, ಮ್ಯೂಸಿಕ್ ಸಿಸ್ಟಂ ಸೇರಿದಂತೆ ಹಲವು ಬಗೆಯ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು ಲಭ್ಯವಿರಲಿವೆ ಎಂದು ಪ್ರಕಟಣೆ ತಿಳಿಸಿದೆ.

ದಿನಸಿ, ಹಣ್ಣುಗಳು, ತರಕಾರಿಗಳ ಮೇಲೆ ಕೊಡುಗೆಗಳು ಇರಲಿವೆ. ಅರ್ಮಾನಿ, ಗೂಚಿ ಮತ್ತು ಪೊಲೀಸ್ ಬ್ರ್ಯಾಂಡ್‌ನ ಕನ್ನಡಕಗಳ ಮೇಲೆ, ಲಗೇಜ್ ಬ್ಯಾಗ್‌ಗಳ ಮೇಲೆ ಶೇಕಡ 25ರವರೆಗೆ ರಿಯಾಯಿತಿ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ.

## ಎಂಬಿಎ: ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಎಂಬಿಎ ಕೋರ್ಸ್‌ನ ಖಾಲಿ ಸ್ಥಾನಗಳ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2021–22ನೇ ಶೈಕ್ಷಣಿಕ ಸಾಲಿಗೆ ಎಂಬಿಎ (ಹಗಲು) ಹಾಗೂ ಎಂಬಿಎ (ಸಂಜೆ) ಕೋರ್ಸ್‌ಗಳಿಗೆ ಖಾಲಿ ಸೀಟುಗಳು ಲಭ್ಯವಿವೆ. ₹100 ದಂಡ ಶುಲ್ಕದೊಂದಿಗೆ ಮಾರ್ಚ್ 5ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರ್ಚ್ 7ರಂದು ಅರ್ಹತಾ ಪಟ್ಟಿ ಪ್ರಕಟಿಸಲಿದ್ದು, 10ರಂದು ಕೌನ್ಸೆಲಿಂಗ್ ಮತ್ತು ಪ್ರವೇಶ ಪ್ರಕ್ರಿಯೆ ನಡೆಯಲಿದೆ ಎಂದೂ ತಿಳಿಸಿದ್ದಾರೆ.

₹ 1,050 ಕೋಟಿ ಮೊತ್ತದ ಕಾಮಗಾರಿ ● ಎಸಿಬಿಯಿಂದ ಮೂರನೇ ದಿನವೂ ಶೋಧ

# ಟೆಂಡರ್ ಅಕ್ರಮ, ದಾಖಲೆಗಳ ವಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಕಚೇರಿಗಳಲ್ಲಿ ನಡೆದಿರುವ ಅಕ್ರಮದ ಕುರಿತು ತನಿಖೆ ಮುಂದುವರಿಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ರಾಜಕಾಲುವೆ ವಿಭಾಗದಲ್ಲಿ 2017ರಿಂದ ಈವರೆಗೆ ನಡೆದಿರುವ ₹ 1,050 ಕೋಟಿ ಮೊತ್ತದ ಕಾಮಗಾರಿಗಳ ಟೆಂಡರ್ ದಾಖಲೆಗಳನ್ನು ಬುಧವಾರ ವಶಕ್ಕೆ ಪಡೆದಿದೆ.

ಶನಿವಾರ ಮತ್ತು ಸೋಮವಾರ ಬಿಬಿಎಂಪಿ ಕಚೇರಿಗಳಲ್ಲಿ ಎಸಿಬಿ ಶೋಧ ನಡೆಸಿತ್ತು. ಬುಧವಾರವೂ ಕಾರ್ಯಾಚರಣೆ ಮುಂದುವರಿಸಿದ ತನಿಖಾ ಸಂಸ್ಥೆಯ 35 ತಂಡಗಳು 33 ಸ್ಥಳಗಳಲ್ಲಿ ಶೋಧ ನಡೆಸಿದವು. ರಾಜಕಾಲುವೆಗಳ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣದಿಂದ ಟೆಂಡರ್ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

‘ನಕಲಿ ದಾಖಲೆ ಸೃಷ್ಟಿಸಿ ಬಿಲ್ ಪಾವತಿಸಿರುವುದು ಪತ್ತೆಯಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿ, ರಾಜಕಾಲುವೆ ಒತ್ತುವರಿ ತೆರವಿಗೆ ಸಂಬಂಧಿಸಿದ ದಾಖಲೆಗಳನ್ನೂ ವಶಪಡಿಸಿಕೊಳ್ಳಲಾಗಿದೆ. ಕೆಲವೇ ಗುತ್ತಿಗೆದಾರರಿಗೆ ಕಾಮಗಾರಿ ನೀಡಿರುವುದು ಕಂಡುಬಂದಿದೆ. ಈ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯಲ್ಲಿ ₹ 1.18 ಲಕ್ಷ ನಗದು ಕೂಡ ಪತ್ತೆಯಾಗಿದೆ’ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

### ಟೆಂಡರ್, ಬಿಲ್ ಪಾವತಿಯಲ್ಲಿ ಅಕ್ರಮ

‘ಬೃಹತ್ ಕಾಮಗಾರಿಗಳ ಟೆಂಡರ್ ಮತ್ತು ಬಿಲ್ ಪಾವತಿಯಲ್ಲಿ ಅಕ್ರಮ ಎಸಗಿರುವುದು ಪತ್ತೆಯಾಗಿದೆ. ದೊಡ್ಡ ಕಾಮಗಾರಿಗಳ ಗುತ್ತಿಗೆದಾರರಿಗೆ ಬಿಲ್ ಪಾವತಿಸಿ, ಸಣ್ಣ ಕಾಮಗಾರಿಗಳ ಗುತ್ತಿಗೆದಾರರಿಗೆ ಬಾಕಿ ಇರಿಸಲಾಗಿದೆ. ನಕಲಿ ದಾಖಲೆಗಳನ್ನು ಬಳಸಿ ಅಕ್ರಮವಾಗಿ ಬಿಲ್ ಪಾವತಿಸಲಾಗಿದೆ’ ಎಂದು ಎಸಿಬಿ ಅಧಿಕಾರಿಗಳು ವಿವರ ನೀಡಿದ್ದಾರೆ.

ಕೆಲವು ಪ್ರಕರಣಗಳಲ್ಲಿ ತರಾತುರಿಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ವಿಲೇವಾರಿಗೆ ಬಾಕಿ ಇರುವ ಟೆಂಡರ್ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

### ₹ 15 ಕೋಟಿ ತೆರಿಗೆ ಪಾವತಿ

ಎಸಿಬಿ ಅಧಿಕಾರಿಗಳು ಶನಿವಾರ ಶೋಧ ಆರಂಭಿಸಿದ್ದರು. ಆ ಬಳಿಕ ಮೂರೇ ದಿನಗಳಲ್ಲಿ ಕೆಲವು ಖಾಸಗಿ ಸಂಸ್ಥೆಗಳು ಹಾಗೂ ಸಾರ್ವಜನಿಕರು ₹ 15 ಕೋಟಿ ಆಸ್ತಿ ತೆರಿಗೆಯನ್ನು ಬಿಬಿಎಂಪಿಗೆ ಪಾವತಿಸಿರುವುದು ಬುಧವಾರದ ಪರಿಶೀಲನೆ ವೇಳೆ ಕಂಡುಬಂದಿದೆ.

**ನೂರಾರು ಕೋಟಿ ನಷ್ಟ:** ಜಾಹೀರಾತು ವಿಭಾಗದಲ್ಲಿ ₹ 300 ಕೋಟಿಗೂ ಹೆಚ್ಚು ತೆರಿಗೆ ವಸೂಲಿ ಮಾಡದೇ ನಷ್ಟ ಉಂಟುಮಾಡಿರುವುದು ಪತ್ತೆಯಾಗಿದೆ. ₹ 267 ಕೋಟಿ ಜಾಹೀರಾತು ತೆರಿಗೆ ಹಲವು ವರ್ಷಗಳಿಂದ ಬಾಕಿ ಇದೆ. ಪ್ರಯಾಣಿಕರ ತಂಗುದಾಣ ಮತ್ತು ಸ್ಕೈವಾಕ್‌ಗಳಲ್ಲಿ ಜಾಹೀರಾತು ಅಳವಡಿಸಿರುವವರಿಂದ ₹ 27 ಕೋಟಿ ಬಾಕಿ ಇದೆ. ಹೊಸದಾಗಿ ನಿರ್ಮಿಸಿದ ಪ್ರಯಾಣಿಕರ ತಂಗುದಾಣಗಳಲ್ಲಿ ಅಳವಡಿಸಿರುವ ಜಾಹೀರಾತುಗಳಿಂದಲೂ ₹ 6 ಕೋಟಿ ಶುಲ್ಕ ಬಾಕಿ ಇರುವುದು ಪತ್ತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕಂದಾಯ ವಿಭಾಗದಲ್ಲಿ ಭಾರಿ ಪ್ರಮಾಣದ ಅಕ್ರಮಗಳು ಪತ್ತೆಯಾಗಿವೆ. ತೆರಿಗೆ ನಿಗದಿಯಲ್ಲಿ ಮೋಸ ಮಾಡಿ ₹ 217 ಕೋಟಿ ನಷ್ಟ ಉಂಟುಮಾಡಿರುವ ಆರೋಪದ ಮೇಲೆ ಏಳು ಕಡತಗಳನ್ನು ವಶಕ್ಕೆ ಪಡೆಯಲಾಗಿದೆ. ವಾಣಿಜ್ಯ ಉದ್ದೇಶದ ಸ್ವತ್ತುಗಳನ್ನು ವಸತಿ ಉದ್ದೇಶದ ಸ್ವತ್ತುಗಳೆಂದು ನಮೂದಿಸಿ ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಆಸ್ತಿಗಳ ವಿಸ್ತೀರ್ಣ ಕಡಿಮೆ ನಮೂದಿಸಿರುವುದು, ಪೆಂಟ್ ಹೌಸ್‌ಗಳಿಗೆ ತೆರಿಗೆ ವಿಧಿಸದೇ ಇರುವುದು ಮತ್ತು ಆಸ್ತಿ ತೆರಿಗೆ ನಿಗದಿ ಪಡಿಸುವಾಗ ವಲಯಗಳನ್ನು ತಪ್ಪಾಗಿ ನಮೂದಿಸಿ ಅಕ್ರಮ ಎಸಗಿದ್ದಾರೆ ಎಂದು ತನಿಖಾ ಸಂಸ್ಥೆ ಹೇಳಿದೆ.

ನಗರ ಯೋಜನಾ ವಿಭಾಗದ ಅಧಿಕಾರಿಗಳು ಕೆರೆ ಮತ್ತು ನಿರ್ಬಂಧಿತ ವಲಯಗಳಲ್ಲಿ ಅಕ್ರಮವಾಗಿ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಾಣಕ್ಕೆ ಅನುಮತಿ ನೀಡಿರುವುದು ಕಂಡುಬಂದಿದೆ. ಸ್ಥಳ ಪರಿಶೀಲಿಸದೇ ನಕ್ಷೆಗೆ ಅನುಮೋದನೆ ನೀಡಿರುವುದು ಪತ್ತೆಯಾಗಿದೆ. ನಿರ್ಮಾಣ ಹಂತದ ಕಟ್ಟಡಗಳಿಗೂ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ನೀಡಿರುವ ದಾಖಲೆಗಳು ಲಭಿಸಿವೆ ಎಂದು ಮಾಹಿತಿ ನೀಡಿದೆ.

ಮೂರು ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆದು ಆರಕ್ಕೂ ಹೆಚ್ಚು ಅಂತಸ್ತು ನಿರ್ಮಿಸಲಾಗಿದೆ. ಆದರೂ ನಗರ ಯೋಜನಾ ವಿಭಾಗವು ಮಾಲೀಕರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. 10ಕ್ಕಿಂತ ಹೆಚ್ಚಿನ ಮಹಡಿಗಳ ಎಲ್ಲ ಕಟ್ಟಡಗಳು ಹಾಗೂ ಎರಡು ಎಕರೆ ಮತ್ತು ಅದಕ್ಕಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ನಿರ್ಮಿಸಲಾದ ಎಲ್ಲ ಕಟ್ಟಡಗಳಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲನೆಗಾಗಿ ವಶಕ್ಕೆ ಪಡೆಯಲಾಗಿದೆ. ಅಕ್ರಮ ನಿರ್ಮಾಣಗಳು ಪತ್ತೆಯಾದರೂ ಬಿಬಿಎಂಪಿ ವಿಚಕ್ಷಣಾ ದಳ ಕ್ರಮ ಜರುಗಿಸಿಲ್ಲ ಎಂದು ಎಸಿಬಿ ಹೇಳಿದೆ.

**ಟಿಡಿಆರ್‌ನಲ್ಲಿ ಮತ್ತಷ್ಟು ಅಕ್ರಮ:** ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರ ವಿತರಣೆಯಲ್ಲಿ ಮತ್ತಷ್ಟು ಅಕ್ರಮಗಳು ಪತ್ತೆಯಾಗಿವೆ. ರಸ್ತೆ ವಿಸ್ತರಣೆ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಕಳಪೆ ಕಟ್ಟಡ ನಿರ್ಮಿಸಿ ಟಿಡಿಆರ್ ಪಡೆದಿರುವುದು, ಸರ್ಕಾರದ ಜಮೀನುಗಳಿಗೆ ಟಿಡಿಆರ್ ಪಡೆದಿರುವುದು, ಬಹುಮಹಡಿ ಕಟ್ಟಡಗಳ ಎಫ್‌ಎಆರ್ ಹೆಚ್ಚಿಸಲು ನೀಡಿದ್ದ ಅಭಿವೃದ್ಧಿ ಹಕ್ಕು ಪ್ರಮಾಣಪತ್ರಗಳನ್ನು (ಡಿಆರ್‌ಸಿ) ಅಕ್ರಮವಾಗಿ ಟಿಡಿಆರ್ ಆಗಿ ಪರಿವರ್ತಿಸಿರುವುದು ಕಂಡುಬಂದಿದೆ ಎಂದು ತನಿಖಾ ತಂಡ ತಿಳಿಸಿದೆ.

**₹ 75 ಕೋಟಿ ಹೆಚ್ಚುವರಿ ಪಾವತಿ:** ಕಸ ವಿಲೇವಾರಿ ಗುತ್ತಿಗೆದಾರರಿಗೆ ₹ 75 ಕೋಟಿಯನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಪತ್ತೆಯಾಗಿದ್ದರೂ, ಹಿಂಪಡೆಯಲು ಕ್ರಮ ಕೈಗೊಂಡಿಲ್ಲ. ಈ ವಿಭಾಗದಲ್ಲಿ ₹ 100 ಕೋಟಿಗೂ ಹೆಚ್ಚಿನ ಮೊತ್ತದ ಅಕ್ರಮ ನಡೆದಿರುವ ಆರೋಪದ ಮೇಲೆ ಹಲವು ಕಡತಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸಿಬಿ ಹೇಳಿದೆ.

**ಬ್ರಹ್ಮ ಮಹೋತ್ಸವ** ಶಿವರಾತ್ರಿ ಪ್ರಯುಕ್ತ ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಬುಧವಾರ ನೆರವೇರಿದ ಭ್ರಮರಾಂಬ ಸಮೇತ ಕಾಡುಮಲ್ಲಿಕಾರ್ಜುನಸ್ವಾಮಿ ಬ್ರಹ್ಮರಥೋತ್ಸವದಲ್ಲಿ ಕಂಡುಬಂದ ಭಕ್ತರ ಸಮೂಹ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

## ಯುದ್ಧದ ವೇಳೆಯೂ ರಾಜಕಾರಣ–ಸಿ.ಎಂ

**ಬೆಂಗಳೂರು:** ಯುದ್ಧದ ಸಂದರ್ಭದಲ್ಲೂ ಕಾಂಗ್ರೆಸ್ ರಾಜಕಾರಣ ಮಾಡುತ್ತದೆ ಎಂದರೆ, ಆ ಪಕ್ಷ ಎಷ್ಟು ಕೆಳಮಟ್ಟಕ್ಕೆ ಇಳಿದಿದೆ ಎಂಬುದಕ್ಕೆ ಸಾಕ್ಷಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಹರಿಹಾಯ್ದಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕಾಂಗ್ರೆಸ್‌ಗೆ ಜನರ ಸಂಕಷ್ಟಕ್ಕಿಂತಲೂ ರಾಜಕಾರಣವೇ ಮುಖ್ಯವಾಗಿದೆ. ಹೀಗಾಗಿ ಯುದ್ಧದ ಸಾವಿನಲ್ಲೂ ರಾಜಕೀಯ ಬೆರಸುತ್ತಿದೆ’ ಎಂದರು. ಉಕ್ರೇನ್‌ನಲ್ಲಿ ನವೀನ್ ಮೃತಪಟ್ಟಿದ್ದಕ್ಕೆ ಬಿಜೆಪಿ, ಪ್ರಧಾನಿ ಮೋದಿಯೇ ಕಾರಣ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಯನ್ನು ಟೀಕಿಸಿದರು. ಯುಪಿಎ ಇದ್ದಾಗಲೂ ಯುದ್ಧ ನಡೆದಿತ್ತು. ಒಬ್ಬ ಭಾರತೀಯನನ್ನೂ ಕರೆತರಲು ಸಾಧ್ಯವಾಗಲಿಲ್ಲ. ಇದೀಗ ಯುದ್ಧ ಆರಂಭವಾದ ದಿನದಿಂದಲೂ ದೊಡ್ಡ ಪ್ರಮಾಣದಲ್ಲಿ ದೇಶದ ವಿದ್ಯಾರ್ಥಿಗಳು ಮತ್ತು ನಾಗರಿಕರನ್ನು ದೇಶಕ್ಕೆ ಕರೆತರಲಾಗುತ್ತಿದೆ. ಉಕ್ರೇನ್‌ನಿಂದ ದೊಡ್ಡ ಪ್ರಮಾಣದಲ್ಲಿ ರಕ್ಷಣಾ ಕಾರ್ಯ ನಡೆಸುತ್ತಿರುವುದು ಸದ್ಯಕ್ಕೆ ಭಾರತ ಮಾತ್ರ ಎಂದರು.

13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ

# ಇಂದಿನಿಂದ ಚಲನಚಿತ್ರಗಳ ಹಬ್ಬ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಹು ನಿರೀಕ್ಷಿತ ಬೆಂಗಳೂರು 13ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ನಗರದ ಕೃಷಿ ವಿಶ್ವವಿದ್ಯಾಲಯ (ಜಿಕೆವಿಕೆ) ಆವರಣದಲ್ಲಿ ಗುರುವಾರ ಸಂಜೆ 4.30ಕ್ಕೆ ಚಾಲನೆ ದೊರೆಯಲಿದೆ.

ಕರ್ನಾಟಕ ಚಲನಚಿತ್ರ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸಹಯೋಗದಲ್ಲಿ ಈ ಉತ್ಸವ ನಡೆಯಲಿದೆ. 2020–2021ನೇ ಸಾಲಿನ ಅತ್ಯುತ್ತಮ ಚಿತ್ರಗಳ ಪ್ರದರ್ಶನಕ್ಕೆ ಈ ಉತ್ಸವ ವೇದಿಕೆಯಾಗಲಿದೆ. ಈಗಾಗಲೇ ಪ್ರದರ್ಶನಗೊಳ್ಳಲಿರುವ ಚಿತ್ರಗಳ ಪಟ್ಟಿಯೂ ಅಂತಿಮವಾಗಿದೆ. ಉದ್ಘಾಟನಾ ಚಿತ್ರವಾಗಿ ಸೋನಿಯಾ ಲಿಸಾ ನಿರ್ದೇಶನದ ‘ಟೈಲರ್’ ಚಿತ್ರ ಪ್ರದರ್ಶನಗೊಳ್ಳಲಿದೆ.

ಉದ್ಘಾಟನೆಗೂ ಮುನ್ನ ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ಸವಕ್ಕೆ ರಂಗು ತುಂಬಲಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉತ್ಸವವನ್ನು ಉದ್ಘಾಟಿಸಲಿದ್ದು, ನಟ ದರ್ಶನ್ ಚಿತ್ರೋತ್ಸವದ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಪಂಚಭಾಷಾ ತಾರೆ ಭಾರತಿ ವಿಷ್ಣುವರ್ಧನ್, ಹೆಸರಾಂತ ಚಿತ್ರ ನಿರ್ದೇಶಕ ಪ್ರಿಯದರ್ಶನ್ ವಿಶೇಷ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮಾರ್ಚ್ 4ರಿಂದ ರಾಜಾಜಿನಗರದ ಒರಾಯನ್ ಮಾಲ್‌ನಲ್ಲಿರುವ ‘ಪಿವಿಆರ್ ಸಿನಿಮಾ’ದ 11 ಪರದೆಗಳಲ್ಲಿ, ಚಾಮರಾಜಪೇಟೆಯಲ್ಲಿರುವ ಕಲಾವಿದರ ಸಂಘದ ಡಾ.ರಾಜ್ ಭವನ ಹಾಗೂ ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾ ಸಿನಿ ಅಕಾಡೆಮಿಯಲ್ಲಿ ಪ್ರದರ್ಶನಗಳು ನಡೆಯಲಿವೆ’ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಹೇಳಿದರು.

‘ಈ ಚಲನಚಿತ್ರೋತ್ಸವದಲ್ಲಿ 2020 ಮತ್ತು 2021ರಲ್ಲಿ ನಿರ್ಮಾಣವಾದ 55 ರಾಷ್ಟ್ರಗಳ 200 ಚಿತ್ರಗಳು ಪ್ರದರ್ಶನಗೊಳ್ಳಲಿವೆ.

### ಏನಿದು ಫಿಯಾಫ್?

ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಫಿಲ್ಮ್ ಪ್ರೊಡ್ಯೂಸರ್ಸ್ ಅಸೋಸಿಯೇಷನ್ (ಚಲನಚಿತ್ರ ನಿರ್ಮಾಪಕರ ಅಂತರರಾಷ್ಟ್ರೀಯ ಒಕ್ಕೂಟ) ಹೃಸ್ವರೂಪವೇ ಫಿಯಾಫ್ (FIAPF). 30 ದೇಶಗಳ 37 ಚಲನಚಿತ್ರ ನಿರ್ಮಾಪಕರ ರಾಷ್ಟ್ರ ಮಟ್ಟದ ಸಂಘಗಳ ಒಕ್ಕೂಟವಿದು.

ಫಿಯಾಫ್ ಪ್ರತಿನಿಧಿಗಳು ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಆಯೋಜನೆಯ ಪ್ರತಿಯೊಂದು ಹೆಜ್ಜೆಯನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸಿ ಈ ಮಾನ್ಯತೆ ನೀಡಿದ್ದಾರೆ.

‘ಫಿಯಾಫ್ ಮಾನ್ಯತೆಯಿಂದ ಸಿನಿ ಕ್ಷೇತ್ರದ ಹೊಸ ಪೀಳಿಗೆಗೆ ತುಂಬಾ ಅನುಕೂಲವಾಗುತ್ತದೆ. ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಜಾಗತಿಕಮಟ್ಟದಲ್ಲಿ ನೋಡುವ ರೀತಿಯೇ ಬೇರೆ. ಹೊಸ ಪ್ರತಿಭೆಗಳಿಗೆ ಅವಕಾಶ ದೊರೆಯುತ್ತದೆ. ಮಾರುಕಟ್ಟೆ ವೃದ್ಧಿ, ಗುಣಮಟ್ಟ ವರ್ಧನೆಗೆ ಕೂಡ ಅವಕಾಶ ತೆರೆದುಕೊಳ್ಳುತ್ತವೆ’ ಎಂದು ಪುರಾಣಿಕ್ ಹೇಳಿದರು.

**ಚಿತ್ರೋತ್ಸವ ವಿಶೇಷ:** ಈ ಚಲನಚಿತ್ರೋತ್ಸವಕ್ಕೆ ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಫಿಲ್ಮ್ ಪ್ರೊಡ್ಯೂಸರ್ಸ್ ಅಸೋಸಿಯೇಷನ್ (FIAPF) ಮಾನ್ಯತೆ ಸಿಕ್ಕಿದೆ. ಜಗತ್ತಿನಲ್ಲಿ ನಡೆಯುವ ಐದು ಸಾವಿರ ಚಿತ್ರೋತ್ಸವಗಳ ಪೈಕಿ ಇದುವರೆಗೆ 45 ಚಿತ್ರೋತ್ಸವಗಳಿಗೆ ಮಾತ್ರ ಈ ಮಾನ್ಯತೆ ಇತ್ತು. ಇದು ಆ ಗೌರವಕ್ಕೆ ಪಾತ್ರವಾಗಿರುವ 46ನೇ ಚಿತ್ರೋತ್ಸವವಿದು.

ಸ್ಪರ್ಧಾ ವಿಭಾಗ: ಏಷ್ಯಾ ಚಲನಚಿತ್ರ ವಿಭಾಗ, ಭಾರತೀಯ ಚಲನಚಿತ್ರಗಳ ವಿಭಾಗ, ಕನ್ನಡ ಚಲನಚಿತ್ರಗಳ ವಿಭಾಗ, ಕನ್ನಡದ ಜನಪ್ರಿಯ ಮನೋರಂಜನಾ ಪ್ರಧಾನ ಚಿತ್ರಗಳ ವಿಭಾಗದಲ್ಲಿ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

‘ಸಮಕಾಲೀನ ವಿಶ್ವ ಸಿನಿಮಾ, ವಿದೇಶವೊಂದರ ವಿಶೇಷ ನೋಟ (ಫ್ರಾನ್ಸ್ ಸಿನಿಮಾ ಕ್ಷೇತ್ರ), ಈಶಾನ್ಯ ರಾಜ್ಯಗಳ ವಿಶೇಷ ನೋಟ ಇರಲಿದೆ. ಆಸ್ಕರ್ ಪ್ರಶಸ್ತಿಗೆ ಅರ್ಹ ಸಿನಿಮಾಗಳ ಆಸ್ಕರ್ ವಿಭಾಗ ಇರಲಿದೆ. ಜೊತೆಗೆ ವಿಮರ್ಶಕರ ಸಪ್ತಾಹವೂ ಇದೆ’ ಎಂದು ಪುರಾಣಿಕ್ ಹೇಳಿದರು.

‘ಜರ್ಮನಿಯ ವೋಲ್ಕರ್‌ಸ್ಕೋಂಡ್ರಫ್, ಪಂಚಭಾಷಾ ತಾರೆ ಭಾರತಿ ವಿಷ್ಣುವರ್ಧನ್ ಅವರ ಸಿನಿಬದುಕಿನ ಪುನರವಲೋಕನ ನಡೆಯಲಿದೆ. ಸ್ವಾತಂತ್ರ್ಯೋತ್ಸವದ ಅಮೃತಮಹೋತ್ಸವದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಸಂಬಂಧಿಸಿದ ಐದು ಚಿತ್ರಗಳ ವಿಶೇಷ ಪ್ರದರ್ಶನ ನಡೆಯಲಿದೆ. ತುಳು ಚಿತ್ರರಂಗದ ಸುವರ್ಣ ಮಹೋತ್ಸವದ ಹಿನ್ನೆಲೆ ತುಳು ಚಿತ್ರರಂಗದ ಅವಲೋಕನ, ವಿಚಾರ ಸಂಕಿರಣ ನಡೆಯಲಿದೆ. ಚಿತ್ರೋತ್ಸವವು ಆಫ್‌ಲೈನ್ ಮತ್ತು ಆನ್‌ಲೈನ್ ಮಾದರಿಗಳಲ್ಲಿ (ಹೈಬ್ರಿಡ್) ನಡೆಯಲಿದೆ’ ಎಂದರು.

‘ಪುನೀತ್ ರಾಜ್‌ಕುಮಾರ್, ಸಂಚಾರಿ ವಿಜಯ್ ಅವರ ಸ್ಮರಣೆಯೂ ನಡೆಯಲಿದೆ. ಚಿತ್ರರಂಗಕ್ಕೆ ಸಂಬಂಧಿಸಿದ ಕಾರ್ಯಾಗಾರ, ಉಪನ್ಯಾಸ, ಸಂವಾದಗಳು ನಡೆಯಲಿವೆ’ ಎಂದು ತಿಳಿಸಿದರು.

ಐಐಎಸ್‌ಸಿಯ ಟಾಟಾ ಸಭಾಂಗಣದಲ್ಲಿ ಮಾ.10ರಂದು ಸಮಾರೋಪ ನಡೆಯಲಿದೆ.

## ರಾಜತಾಂತ್ರಿಕತೆಯಲ್ಲಿ ಕೇಂದ್ರ ಸಂಪೂರ್ಣ ವಿಫಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಉಕ್ರೇನ್‌ನಲ್ಲಿ ರಾಜ್ಯದ ನವೀನ್ ಸಾವಿಗೀಡಾಗಲು ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಹಾಗೂ ವೈಫಲ್ಯವೇ ಕಾರಣ. ರಾಜತಾಂತ್ರಿಕತೆ ಹಾಗೂ ವಿದೇಶಾಂಗ ವ್ಯವಹಾರಗಳಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ’ ಎಂದು ಕಾಂಗ್ರೆಸ್ ದೂರಿದೆ.

ಪಕ್ಷದ ಶಾಸಕರಾದ ಪ್ರಿಯಾಂಕ್ ಖರ್ಗೆ ಮತ್ತು ಅಜಯ್ ಸಿಂಗ್ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನ ಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, ‘ಕೇಂದ್ರ ಸರ್ಕಾರ ಕೇವಲ ಪ್ರಚಾರ ವಿಚಾರದಲ್ಲಿ ಗಮನ ಹರಿಸುತ್ತಿದೆಯೇ ಹೊರತು, ಮಾಡಬೇಕಿರುವ ಕೆಲಸದ ಬಗ್ಗೆ ಯೋಚಿಸುತ್ತಿಲ್ಲ’ ಎಂದು ಟೀಕಿಸಿದರು.

‘ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳ ಬಗ್ಗೆ ಸರ್ಕಾರಕ್ಕೆ ಕಾಳಜಿಯೇ ಇರಲಿಲ್ಲವೇ, ಭಾರತಕ್ಕೆ ಬಂದಿರುವ ವಿದ್ಯಾರ್ಥಿಗಳು ತಾವೇ ವಿಮಾನ ಟಿಕೆಟ್ ಬುಕ್ ಮಾಡಿಕೊಂಡು ಬಂದಿದ್ದಾರೆ. ಪ್ರಚಾರ ಪಡೆಯಲು ನಮ್ಮ ಸಚಿವರು ಮುಂಬೈ ಹಾಗೂ ದೆಹಲಿಗೆ ಹೋಗಿದ್ದಾರೆ’ ಎಂದು ದೂರಿದರು. ‘ನವೀನ್ ಕುಟುಂಬಕ್ಕೆ ಕೇವಲ ಸಾಂತ್ವನ ಹೇಳಿದರೆ ಸಾಲದು. ನವೀನ್ ವಿದ್ಯಾಭ್ಯಾಸಕ್ಕೆ ಕಟ್ಟಿರುವ ಶುಲ್ಕ ಹಾಗೂ ಪರಿಹಾರವನ್ನು ರಾಜ್ಯ ಸರ್ಕಾರ ನೀಡಬೇಕು. ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವುದು ಪ್ರಮುಖ ಆದ್ಯತೆಯಾಗಿರಬೇಕು’ ಎಂದರು. ‘ಉಕ್ರೇನ್ ಹಾಗೂ ಭಾರತದ ನಡುವೆ ಕೇವಲ ಒಂದು ವಿಮಾನ ಎರಡು ದಿನಕ್ಕೊಮ್ಮೆ ಸಂಚಾರ ಮಾಡುತ್ತದೆ. ನಮ್ಮ ನಾಗರಿಕರ ರಕ್ಷಣೆ ಮಾಡಲು ವಿಮಾನಗಳ ಅಗತ್ಯವಿದೆ ಎಂಬ ಸಾಮಾನ್ಯ ಪರಿಜ್ಞಾನ ಸರ್ಕಾರಕ್ಕೆ ಬೇಡವೇ’ ಎಂದು ಪ್ರಶ್ನಿಸಿದರು.

# ತಾಯ್ನಾಡಿಗೆ ಮರಳಿದ 31 ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಉಕ್ರೇನ್‌ನಿಂದ 'ಆಪರೇಷನ್ ಗಂಗಾ' ಕಾರ್ಯಾಚರಣೆ ಮೂಲಕ ಬುಧವಾರ ಕರ್ನಾಟಕದ 31 ವೈದ್ಯಕೀಯ ವಿದ್ಯಾರ್ಥಿಗಳು ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಪೋಷಕರ ಕಣ್ಣಾಲಿಗಳು ಒದ್ದೆಯಾದವು.

ಮಂಗಳವಾರ ರಾತ್ರಿ ದೆಹಲಿಯ ಕರ್ನಾಟಕ ಭವನದಲ್ಲಿ ತಂಗಿದ್ದ ಈ ವಿದ್ಯಾರ್ಥಿಗಳು ಬೆಂಗಳೂರಿಗೆ ಆಗ ಮಿಸಿದರು. ತಂದೆ, ತಾಯಿ ಕಂಡಾಕ್ಷಣ ಓಡೋಡಿ ಬಂದು ಬಿಗಿದಪ್ಪಿ ಭಾವುಕರಾದರು. ಫೆ. 27ರಿಂದ ಬುಧವಾರದವರೆಗೆ 86 ವಿದ್ಯಾರ್ಥಿಗಳು ಮರಳಿದ್ದಾರೆ.

'ಭಾರತಕ್ಕೆ ವಾಪಸ್ ಬರಲು ಫೆ. 24ರಂದೇ ಟಿಕೆಟ್ ಬುಕ್ ಮಾಡಿದ್ದೆವು. ಆದರೆ, ಅಂದೇ ರಷ್ಯಾದ ಸೈನ್ಯ ಕೀವ್‌ನ ವಿಮಾನ ನಿಲ್ದಾಣವನ್ನು ಸ್ಫೋಟಿಸಿತು.

ಅಮ್ಮನ್ನು ಸಮಾಧಾನಪಡಿಸುತ್ತಿರುವ ಬೆಂಗಳೂರಿನ ಧನಂಜಯ್ ಸಾಳಂಕೆ

ಜೀವಂತವಾಗಿ ತಾಯ್ನಾಡಿಗೆ ಬರುತ್ತೇವೆ ಎಂಬ ನಂಬಿಕೆಯೇ ಇರಲಿಲ್ಲ' ಎಂದು ನೆಲಮಂಗಲ ತಾಲ್ಲೂಕಿನ ಸೊಂಡೆಕೊಪ್ಪ ಗ್ರಾಮದ ವೈದ್ಯಕೀಯ ವಿದ್ಯಾರ್ಥಿನಿ ಭಾವನಾ ರಾಜಣ್ಣ 'ಪ್ರಜಾವಾಣಿ'ಗೆ ಹೇಳಿದರು.

'ಭಾರತೀಯ ರಾಯಭಾರಿ ಕಚೇರಿಯಲ್ಲಿ ಆಶ್ರಯ ಪಡೆದಿದ್ದೆವು. ರೈಲಿನ ಮೂಲಕ ಕೀವ್‌ನಿಂದ ಹೊರಬರಬೇಕಿತ್ತು. ಆದರೆ, ಕೀವ್ ಮತ್ತು ಹಾರ್ಕಿವ್‌ನಿಂದ ಹೊರಬರಲು ಕಷ್ಟಕರವಾದ ಸ್ಥಿತಿಯಿದೆ. ಕಾಲೇಜಿನ ಆಡಳಿತ ಮಂಡಳಿಯವರು ಬಸ್ ಮೂಲಕ ಗಡಿಯ ಭಾಗಕ್ಕೆ ಬಿಟ್ಟಿದ್ದರು. ರೊಮೇನಿಯಾ ಪ್ರವೇಶಿಸಲು ಲಗೇಜ್‌ನೊಂದಿಗೆ 10 ಕಿ.ಮೀ ದೂರ ಮೈಕೊರೆಯುವ ಚಳಿಯಲ್ಲಿ ಜೀವ ಉಳಿಸಿಕೊಳ್ಳಲು ಕಾಲ್ನಡಿಗೆಯಲ್ಲಿಯೇ ಬರುವ ಪರಿಸ್ಥಿತಿ ನಿರ್ಮಾಣವಾಗಿತ್ತು' ಎಂದು ಅನುಭವ ಹಂಚಿಕೊಂಡರು.

'ಉಕ್ರೇನ್‌ನಿಂದ ರೊಮೇನಿಯಾ ಗಡಿ ದಾಟಲು 25ರಿಂದ 30 ಕಿ.ಮೀ. ಗಟ್ಟಲೇ ಸಂಚಾರ ದಟ್ಟಣೆ ಉಂಟಾಗಿತ್ತು. ನಾನು 24 ಗಂಟೆ ಕಾಯ್ದ ನಂತರ ಗಡಿ ದಾಟಲು ಅವಕಾಶ ದೊರೆಯಿತು' ಎಂದು ಮಾಹಿತಿ ನೀಡಿದರು.

ಬೆಂಗಳೂರಿನ ಕುರುಬರಹಳ್ಳಿಯ ಧನಂಜಯ್ ಸಾಳಂಕೆ, 'ಜನವರಿ ಕೊನೆಯ ವಾರದಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ ಉಕ್ರೇನ್‌ಗೆ ಹೋಗಿದ್ದೆ. ಗಡಿಯ 1.5 ಕಿ.ಮೀ ದೂರದಲ್ಲಿ ಕಾಲೇಜು ಇದ್ದಿದ್ದರಿಂದ ಯಾವುದೇ ರೀತಿಯ ತೊಂದರೆಯಾಗಲಿಲ್ಲ. ಗಡಿ ದಾಟಲು ಸಾಕಷ್ಟು ದೈಹಿಕ ಶ್ರಮಬೇಕಿದ್ದು, ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಸಮಸ್ಯೆಯಾಯಿತು ಎಂದು ತಿಳಿಸಿದರು.

ಕೊಡಗಿನ ಗೋಣಿಕೊಪ್ಪದ ಅಲಿಶಾ ಸಯ್ಯದ್ ಅಲಿ, ಭಾರತೀಯ ರಾಜತಾಂತ್ರಿಕ ಅಧಿಕಾರಿಗಳು ನಮ್ಮ ಸುರಕ್ಷತೆಗಾಗಿ ದುಡಿಯುತ್ತಿದ್ದಾರೆ 'ಎಂದರು.

ಮಲ್ಲೇಶ್ವರ–ಗುಟ್ಟಹಳ್ಳಿ ಮುಖ್ಯರಸ್ತೆ • ಎರಡು ತಿಂಗಳಿಂದ ಸಂಪರ್ಕ ಕಡಿತ

# ಸೇತುವೆ ಒಡೆದು ಬಿಟ್ಟು ಹೋದರು...

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮಲ್ಲೇಶ್ವರದಿಂದ ಗುಟ್ಟಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ರಾಜಕಾಲುವೆಗೆ ಅಡ್ಡಲಾಗಿ ಹೊಸ ಸೇತುವೆ ನಿರ್ಮಿಸಲು ಹಳೇ ಸೇತುವೆ ಒಡೆದು ಎರಡು ತಿಂಗಳುಗಳು ಕಳೆದಿವೆ. ಸೇತುವೆ ಒಡೆಯುವಾಗ ಬಿಬಿಎಂಪಿ ಅಧಿಕಾರಿಗಳಿಗೆ ಇದ್ದ ತುರ್ತು, ಹೊಸ ಸೇತುವೆ ನಿರ್ಮಾಣ ಕಾಮಗಾರಿ ಆರಂಭಿಸಲು ಇಲ್ಲ. ಸಂಪರ್ಕ ಕಡಿತಗೊಂಡಿದ್ದರಿಂದ ಇಲ್ಲಿನ ನಿವಾಸಿಗಳು ಪರದಾಡುತ್ತಿದ್ದಾರೆ.

ಮಲ್ಲೇಶ್ವರದಿಂದ ವೈಯಾಲಿಕಾವಲ್, ಗುಟ್ಟಹಳ್ಳಿ ಮತ್ತು ಬಳ್ಳಾರಿ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದು. ದತ್ತಾತ್ರೇಯ ದೇವಸ್ಥಾನದ ಪಕ್ಕದಲ್ಲಿ ಹಾದು ಹೋಗಿರುವ ರಾಜಕಾಲುವೆಗೆ ಅಡ್ಡಲಾಗಿ ಸೇತುವೆಯೊಂದು ಇತ್ತು. ಹೊಸ ಸೇತುವೆ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿ ಹಳೇ ಸೇತುವೆಯನ್ನು ಒಡೆದಿರುವ ಬಿಬಿಎಂಪಿ ಅಧಿಕಾರಿಗಳು, ಕಾಮಗಾರಿ ಆರಂಭಿಸಿಯೇ ಇಲ್ಲ.

ಈ ರಸ್ತೆಯ ಎರಡೂ ಬದಿಯಲ್ಲಿ ಅಂಗಡಿಗಳಿವೆ. ಸೇತುವೆ ಒಡೆದ ಬಳಿಕ ಬಗೆದು ತೆಗೆದ ಮಣ್ಣನ್ನು ಅಂಗಡಿಗಳ ಬಾಗಿಲಿಗೇ ಸುರಿಯಲಾಗಿದೆ. ಅಂಗಡಿಗಳಿಗೆ ಸ್ವತಃ ಕಷ್ಟಪಟ್ಟು ಹೋಗಬೇಕಾದ ಸ್ಥಿತಿ ಇದೆ. ಅಂಗಡಿ ತೆರೆದರೂ ಗ್ರಾಹಕರಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ದಿನವಿಡೀ ಕಾಯ್ದು ಬರಿಗೈನಲ್ಲಿ ಮನೆಗೆ ಮರಳುವ ಸ್ಥಿತಿ ಇದೆ ಎಂದು ವ್ಯಾಪಾರಿಗಳು ಬೇಸರ ವ್ಯಕ್ತಪಡಿಸುತ್ತಾರೆ.



**ರಸ್ತೆ ಸಂಪರ್ಕ ಕಡಿತಗೊಂಡು ಎರಡು ತಿಂಗಳಾಗಿದೆ. ವ್ಯಾಪಾರ ಇಲ್ಲ ನಮ್ಮ ಕಷ್ಟ ಯಾರಿಗೆ ಹೇಳಬೇಕು ತಿಳಿಯುತ್ತಿಲ್ಲ. ತಾತ್ಕಾಲಿಕವಾಗಿ ಕಾಲು ಸೇತುವೆಯನ್ನಾದರೂ ನಿರ್ಮಿಸಿಕೊಡಬೇಕು**

**ಅಶ್ವತ್ಥನಾರಾಯಣ** ವರ್ತಕ

**ನಮ್ಮ ಗ್ಯಾರೇಜ್‌ಗೆ ವಾಹನಗಳು ಬರಲು ಜಾಗವೇ ಇಲ್ಲ. ಎರಡು ತಿಂಗಳಿಂದ ಬರಿಗೈನಲ್ಲಿ ಕುಳಿತಿದ್ದೇನೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡಬೇಕು**

**ಆಸಿಫ್** ಮೆಕ್ಯಾನಿಕ್

'ರಸ್ತೆಯಲ್ಲಿ ಎತ್ತರಕ್ಕೆ ಮಣ್ಣು ಸುರಿದಿರುವುದು ಕಳ್ಳಕಾಕರಿಗೆ ಅನುಕೂಲ ಆಗಿದೆ. ಎರಡು ತಿಂಗಳಲ್ಲೇ ಮೂರು ಅಂಗಡಿಯ ಬೀಗ ಒಡೆದು ಕಳ್ಳತನ ಮಾಡಲಾಗಿದೆ. ಸುಸ್ಥಿತಿಯಲ್ಲೇ ಇದ್ದ ಸೇತುವೆಯನ್ನು ಒಡೆದ ಅಧಿಕಾರಿಗಳು ಮತ್ತೆ ಇತ್ತ ನೋಡಿಲ್ಲ. ನಮ್ಮ ಕಷ್ಟ ಯಾರಿಗೆ ಹೇಳಬೇಕು? ಸಮಸ್ಯೆ ಹೇಳಿಕೊಳ್ಳೋಣ ಎಂದರೆ ಪಾಲಿಕೆ ಸದಸ್ಯರೂ ಇಲ್ಲ. ಸಿ.ಎನ್.ಅಶ್ವತ್ಥನಾರಾಯಣ ಅವರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರ ಇದಾಗಿದೆ. ಸಮಸ್ಯೆ ಹೇಳಿಕೊಳ್ಳಲು, ಸಚಿವರಾದ ಬಳಿಕ ಅವರೂ ಸಿಗುತ್ತಿಲ್ಲ. ಅವರ ಕಚೇರಿಗೆ ಮನವಿ ಪತ್ರ ಕೊಟ್ಟು ಬಂದರೂ ಪ್ರಯೋಜನವಾಗಿಲ್ಲ' ಎಂದು ಈ ಭಾಗದ ಅಂಗಡಿಗಳ ಮಾಲೀಕರು 'ಪ್ರಜಾವಾಣಿ' ಬಳಿ ಅಳಲು ತೋಡಿಕೊಂಡರು.

ಮಲ್ಲೇಶ್ವರ–ಗುಟ್ಟಹಳ್ಳಿ ಮುಖ್ಯ ರಸ್ತೆಯ ಸೇತುವೆ ಒಡೆದಿರುವುದರಿಂದ ಸಂಪರ್ಕ ಕಡಿತಗೊಂಡಿರುವುದು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

'ನೆಲದಡಿ ಹಾದು ಹೋಗಿರುವ ವಿದ್ಯುತ್ ಮಾರ್ಗದ ಬದಲಾವಣೆಗೆ ಬೆಸ್ಕಾಂಗೆ ಮನವಿ ಮಾಡಲಾಗಿದೆ. ಇಲ್ಲಿನ ವಿದ್ಯುತ್ ಮಾರ್ಗ ಸ್ಥಳಾಂತರ ಆಗದ ಹೊರತು ಕಾಮಗಾರಿ ಆರಂಭಿಸಲು ಸಾಧ್ಯವಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಸಬೂಬು ಹೇಳುತ್ತಿದ್ದಾರೆ. ನೆಲದಡಿ ಕೇಬಲ್ ಹಾದು ಹೋಗಿರುವ ವಿಷಯ ಬಿಬಿಎಂಪಿ ಅಧಿಕಾರಿಗಳಿಗೆ ಮೊದಲೇ ಗೊತ್ತಿರಲಿಲ್ಲವೇ?' ಎಂಬುದು ಸ್ಥಳೀಯರ ಪ್ರಶ್ನೆ.

'ತಾತ್ಕಾಲಿಕವಾಗಿ ಜನ ಸಂಚಾರಕ್ಕೆ ಅನುಕೂಲ ಆಗುವಂತೆ ಕನಿಷ್ಠ ಕಾಲು ಸೇತುವೆಯನ್ನಾದರೂ ನಿರ್ಮಿಸಿಕೊಡುವಂತೆ ಕೈಮುಗಿದು ಮನವಿ ಮಾಡುತ್ತಿದ್ದೇವೆ. ಅದನ್ನೂ ಮಾಡದೆ ಕಿಲೋ ಮೀಟರ್ ಸುತ್ತಾಡಿಕೊಂಡು ಬರಬೇಕಾದ ಅನಿವಾರ್ಯ ಸೃಷ್ಟಿಸಿದ್ದಾರೆ. ಸಮಸ್ಯೆ ಯಾರಿಗೆ ಹೇಳಬೇಕು ಎಂಬುದೇ ಗೊತ್ತಾಗುತ್ತಿಲ್ಲ' ಎಂದು ವರ್ತಕರು ನೋವಿನಿಂದ ಹೇಳಿದರು.

ಹೈಕೋರ್ಟ್‌ನಲ್ಲಿ ವೈದ್ಯೆಯ ಅಳಲು

# ನನ್ನಂಥವಳಿಗೇ ಹೀಗೇಕೆ ಆಗುತ್ತಿದೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲವೂ ನನಗೇ ಏಕೆ ಆಗುತ್ತಿದೆ ಎಂದು ಕೊರಗಬೇಡಿ. ತೆರೆದ ಅವಕಾಶಗಳನ್ನು ಅರಸಿಕೊಂಡು ಹೋಗಿ. ತಪ್ಪೆಲ್ಲಿದೆ ಎಂಬುದರ ಆತ್ಮಾವಲೋಕನ ಮಾಡಿಕೊಳ್ಳಿ. ಮನದ ಮನೆಯಲ್ಲಿ ಹರಿದಾಡುವ ಜಿರಲೆಗಳಿಗೆ ಇನ್ನಿಲ್ಲದ ಪ್ರಾಶಸ್ತ್ಯ ನೀಡಬೇಡಿ. ಸ್ವಲ್ಪ ಸಮಯದ ಬಳಿಕ ಅವು ತಮ್ಮಷ್ಟಕ್ಕೇ ತಾವೇ ಜಾಗ ಖಾಲಿ ಮಾಡುತ್ತವೆ. ಬದುಕು ತರ್ಕದ ತಳಹದಿಯ ಮೇಲೆ ನಿಂತಿಲ್ಲ...! '

ವಿದ್ಯಾವಂತ ವೈದ್ಯ ದಂಪತಿಯ ವಿಚ್ಛೇದನ ಪ್ರಕರಣದಲ್ಲಿ ಪತಿ–ಪತ್ನಿ ಇಬ್ಬರಿಗೂ ಹೈಕೋರ್ಟ್ ಹೇಳಿದ ಕಿವಿಮಾತಿದು.

'ಮಧ್ಯಂತರ ಜೀವನಾಂಶ ನೀಡುವಂತೆ ಕೌಟುಂಬಿಕ ನ್ಯಾಯಾಲಯಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಪತ್ನಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಬೆಳಗಿನ ಕಲಾಪದಲ್ಲಿ ಪ್ರಕರಣವನ್ನು ವಿಚಾರಣೆಗೆ ಪ್ರಕರಣ ಕೈಗೆತ್ತಿಕೊಂಡ ನ್ಯಾಯಪೀಠ, 'ಈ ಸಂಬಂಧ ನೀವು ಮತ್ತೆಂದೂ ಕೋರ್ಟ್ ಮೆಟ್ಟಿಲು ತುಳಿಯದಂತೆ ರಾಜಿಯಾಗಿ ವ್ಯಾಜ್ಯವನ್ನು ಬಗೆಹರಿಸಿಕೊಳ್ಳಿ' ಎಂದು ಮೌಖಿಕ ಸಲಹೆ ನೀಡಿತ್ತು. ಇದರನ್ವಯ ಮಧ್ಯಾಹ್ನದ ಕಲಪದಲ್ಲಿ ಪತಿ–ಪತ್ನಿ ಇಬ್ಬರೂ ರಾಜಿಯಾಗಲು ಒಪ್ಪಿರುವುದಾಗಿ ನ್ಯಾಯಪೀಠಕ್ಕೆ ಜಂಟಿ ಜ್ಞಾಪನಾ ಪತ್ರ ಸಲ್ಲಿಸಿದರು.

ಜ್ಞಾಪನಾ ಪತ್ರ ನೀಡುವಾಗ ಪತ್ನಿ, 'ಸ್ವಾಮಿ, ನನ್ನಂಥವಳಿಗೇ ಹೀಗಾಯಿತಲ್ಲ. ಇದೆಲ್ಲಾ ನನಗೇ ಏಕೆ ಆಗುತ್ತಿದೆ' ಎಂದು ಸ್ವತಃ ನೋವು ತೋಡಿಕೊಂಡರು. ಇದಕ್ಕೆ ನ್ಯಾಯಮೂರ್ತಿಗಳು ಷೇಕ್ಸ್‌ಪಿಯರ್‌ನ, 'ರೇಪ್ ಆಫ್ ಲ್ಯೂಕ್ರಿಸ್' ಸಾನೆಟ್ಟಿನ ಪಂಕ್ತಿಯೊಂದನ್ನು ಉದ್ಧರಿಸಿ, 'ಎಲ್ಲವೂ ನನಗೇ ಏಕೆ ಆಗುತ್ತಿದೆ, ಬೇರೆಯವರಿಗೆ ಏಕೆ ಇಂತಹ ಕಷ್ಟಗಳಿಲ್ಲ ಎಂದು ಭಾವಿಸಬೇಡಿ. ಬದುಕು ಎಂಬುದು ಕಂಡೆನೆಂದು ಹತ್ತಿರ ಹೋದರೆ ಕಾಣದಾಗುವ ಮರೀಚಿಕೆ. ಒಂದು ರೀತಿಯಲ್ಲಿ ಇದು; ಕಾಣುತ್ತೆ, ಆದರೂ ಕಾಣಾಕಿಲ್ಲ ಎಂಬಂತೆ' ಎಂದು ಹೇಳಿದರು.

ಮುಖ್ಯಾಂಶಗಳು

- ರೋಗಿಗಳ ಪ್ರಾಣ ಉಳಿಸುವ ವೈದ್ಯ ದಂಪತಿಗೆ ಬದುಕಿನ ಪಾಠ
- ಮುಕ್ತವಾಗಿ ಪತಿ–ಪತ್ನಿಯ ಮನವಿ ಆಲಿಸಿದ ನ್ಯಾಯಪೀಠ

**ಬದುಕಿನಲ್ಲಿ ಕೆಲವೊಮ್ಮೆ ಕಾರಣವಿಲ್ಲದೆ ಶಿಕ್ಷೆಗಳು ಎದುರಾಗುತ್ತವೆ. ಅವುಗಳಿಗೆ ತುಂಬಾ ಹೊತ್ತು ಕಾರಣ ಹುಡುಕುತ್ತಾ ಕೂರಬಾರದು. ಕಾರಣ ಇರುವುದಿಲ್ಲ ಎಂದಲ್ಲ. ಆದರೆ, ಬಸವಳಿದಾಗ ಅವು ಮನಜರ ಬುದ್ಧಿಗೆ ನಿಲುಕುವುದೇ ಇಲ್ಲ..!**

**ಕೃಷ್ಣ ಎಸ್.ದೀಕ್ಷಿತ್** ನ್ಯಾಯಮೂರ್ತಿ

'ನೀವಿಬ್ಬರೂ ಸಾಕಷ್ಟು ವಿದ್ಯಾವಂತರಿದ್ದೀರಿ, ವೈದ್ಯರಿದ್ದೀರಿ. ತರ್ಕಗಳನ್ನು ದಾಟಿ ನಿಂತಂತಹದ್ದು ಪರಸ್ಪರ ಕ್ಷಮಿಸುವ ಗುಣ. ಇದನ್ನು ಅರ್ಥಮಾಡಿಕೊಂಡು ಮುಂದಿನ ಜೀವನ ನಡೆಸಿ' ಎಂದು ಹೇಳಿತು.

ಆದೇಶ: 'ಅಧೀನ ನ್ಯಾಯಾಲಯಗಳಲ್ಲಿ ಇಬ್ಬರೂ ಪರಸ್ಪರ ದಾಖಲಿಸಿರುವ ಎಲ್ಲ ಪ್ರಕರಣಗಳಿಗೆ ಇನ್ನು ಮುಂದೆ ಪೂರ್ಣವಿರಾಮ ಹಾಕಬೇಕು. ಕ್ರಿಮಿನಲ್ ಕೇಸುಗಳು, ಆದಾಯ ತೆರಿಗೆ, ಶಿಸ್ತು ಸಮಿತಿ ಮುಂದಿನ ಪ್ರಕರಣ, ಇಬ್ಬರ ನಡುವಿನ ಕೌಟುಂಬಿಕ ವ್ಯಾಜ್ಯ ಹಾಗೂ ಸಂಬಂಧಿಸಿದ ಎಲ್ಲ ಬಗೆಯ ತಕರಾರುಗಳಿಗೆ ವಿಚಾರಣಾ ನ್ಯಾಯಾಲಯಗಳು ಗೌರವಯುತ ಅಂತ್ಯ ಹಾಡಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಪ್ರಕರಣವೇನು?: ಪತಿ ಪತ್ನಿ ಇಬ್ಬರೂ ವೈದ್ಯರು. 40ರ ಆಜುಬಾಜಿನ ವಯಸ್ಸು. 2012ರಲ್ಲಿ ಮದುವೆಯಾದರು. ಪತಿ ಎಂ.ಡಿ ಪದವೀಧರರಾಗಿದ್ದು ಎಂಡೊಕ್ರೊನೊಲಾಜಿಸ್ಟ್ (ಅಂತಃಸ್ರಾವ ಶಾಸ್ತ್ರಜ್ಞ) ಹಾಗೂ 'ಮ್ಯಾಗ್ನೆಟಿಕ್ ರಿಸೊನೆನ್ಸ್ ಕೊಲಾಂಜಿಯೊ ಪ್ಯಾಂಕ್ರಿಯಾಟೊಗ್ರಫಿ'ಯಲ್ಲಿ ಸೂಪರ್ ಸ್ಪೆಷಲಿಸ್ಟ್. ಪತ್ನಿಯೂ ಜನರಲ್ ಮೆಡಿಸನ್‌ನಲ್ಲಿ ಎಂಬಿಬಿಎಸ್ ಮುಗಿಸಿದವರು.

ಮದುವೆಯಾಗುವ ಸಮಯದಲ್ಲಿ ಪತ್ನಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿದ್ದರು. ಹಸೆಮಣೆ ತುಳಿದ ಒಂದೇ ವರ್ಷದಲ್ಲಿ ಇಬ್ಬರಲ್ಲೂ ಭಿನ್ನಾಭಿಪ್ರಾಯಗಳು ಬೆಳೆದ ಪರಿಣಾಮ ಪತಿ ಬೆಂಗಳೂರಿನ ಪ್ರಧಾನ ಕೌಟುಂಬಿಕ ನ್ಯಾಯಾಲಯದಲ್ಲಿ ಹಿಂದೂ ವಿವಾಹ ಕಾಯ್ದೆ–1955ರ ಕಲಂ 12 (1) (ಎ) (ಸಿ) ಅಡಿಯಲ್ಲಿ ವಿಚ್ಛೇದನದ ದಾವೆ ಹೂಡಿದರು.

ದಾವೆ ನಡೆಯುತ್ತಿದ್ದ ಸಮಯದಲ್ಲಿ ಪತ್ನಿ ಜೀವನಾಂಶ ಕೋರಿದಾಗ ಕೌಟುಂಬಿಕ ನ್ಯಾಯಾಲಯ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲು ತುಳಿದಿದ್ದರು. ಒಂಬತ್ತು ವರುಷಗಳಿಂದ ಬಾಕಿ ಇದ್ದ ಈ ವ್ಯಾಜ್ಯಕ್ಕೆ ಇತಿಶ್ರೀ ಹಾಡಿದ ನ್ಯಾಯಪೀಠ, 'ಪತಿ–ಪತ್ನಿ ತಮ್ಮ ಮನೋಕಾಮನೆಗೆ ಅನುಗುಣವಾಗಿ ಬದುಕು ನಡೆಸಲು ಸ್ವತಂತ್ರವಾಗಿದ್ದಾರೆ' ಎಂದು ಘೋಷಿಸಿತು.

## ಭಾರತೀಯರ ರಕ್ಷಣೆ: ಪುಟಿನ್–ಮೋದಿ ಚರ್ಚೆ

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿ ಗಂಭೀರ ಸ್ಥಿತಿ ಇರುವ ನಗರಗಳಲ್ಲಿ ಸಿಲುಕಿರುವ ಭಾರತೀಯರ ರಕ್ಷಣೆ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಬುಧವಾರ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜೊತೆಗೆ ಚರ್ಚಿಸಿದರು.

ಉಕ್ರೇನ್‌ನಲ್ಲಿನ ಸದ್ಯದ ಸ್ಥಿತಿ ಮುಖ್ಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ವಿದ್ಯಾರ್ಥಿಗಳು ಸಿಲುಕಿರುವ ಹಾರ್ಕಿವ್ ನಗರದ ಪರಿಸ್ಥಿತಿ ಕುರಿತು ಉಭಯ ಮುಖಂಡರು ಚರ್ಚಿಸಿದ್ದಾರೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

**ತುರ್ತಾಗಿ ಹಾರ್ಕಿವ್ ತೊರೆಯಿರಿ:** ಪರಿಸ್ಥಿತಿ ಹದಗೆಡುತ್ತಿರುವ ಉಕ್ರೇನ್‌ನ ಹಾರ್ಕಿವ್ ನಗರವನ್ನು ತಕ್ಷಣವೇ 'ಬರಿಗಾಲಲ್ಲಿ ನಡೆದುಕೊಂಡಾದರೂ' ತುರ್ತಾಗಿ ತೊರೆಯಬೇಕು ಎಂದು ಭಾರತ ಬುಧವಾರ ಉಕ್ರೇನ್‌ನಲ್ಲಿರುವ ತನ್ನ ನಾಗರಿಕರಿಗೆ ಸೂಚಿಸಿದೆ.

ಹಾರ್ಕಿವ್ ನಗರಕ್ಕೆ ಸಮೀಪದಲ್ಲಿರುವ ಪೆಸೊಚಿನ್ (11 ಕಿ.ಮೀ), ಬಬಾಯಿ (12 ಕಿ.ಮೀ.) ಬೆಜ್ಲ್ಯುಡಿವ್ಕಾ (16 ಕಿ.ಮೀ.)ಗೆ ತೆರಳಬೇಕು. ಇಲ್ಲಿಗೆ ಸುರಕ್ಷಿತವಾಗಿ ತಲುಪಲು 'ಮಾನವೀಯತೆಯ ಮಾರ್ಗ' ಒದಗಿಸುವ ಭರವಸೆಯನ್ನು ರಷ್ಯಾ ನೀಡಿದೆ ಎಂದು ಭಾರತ ಹೇಳಿದೆ.

## ಯುದ್ಧ: 498 ರಷ್ಯಾ ಯೋಧರ ಸಾವು

ಮಾಸ್ಕೊ: ಯುದ್ಧದಲ್ಲಿ ರಷ್ಯಾದ 498 ಯೋಧರು ಸತ್ತಿದ್ದಾರೆ ಮತ್ತು 1,597 ಜನರು ಗಾಯಗೊಂಡಿದ್ದಾರೆ ಎಂದು ರಷ್ಯಾ ಸೇನೆಯ ವಕ್ತಾರರು ಹೇಳಿದ್ದಾರೆ.

ಯುದ್ಧದಲ್ಲಿ ರಷ್ಯಾದ ಯೋಧರು ಅಗಣಿತ ಸಂಖ್ಯೆಯಷ್ಟು ಮೃತಪಟ್ಟಿದ್ದಾರೆ ಎಂಬ ವರದಿಯನ್ನು ಮೇಜರ್ ಜನರಲ್ ಇಗೊರ್ ಕೊನಾಶೆಂಕೋವ್ ತಳ್ಳಿಹಾಕಿದ್ದಾರೆ. ಯುದ್ಧ ಆರಂಭವಾದ ನಂತರ ರಷ್ಯಾ ಇದೇ ಮೊದಲ ಬಾರಿಗೆ ಆಗಿರುವ ನಷ್ಟವನ್ನು ಒಪ್ಪಿಕೊಂಡಿದೆ.

ಉಕ್ರೇನ್‌ನ 2,870ಕ್ಕೂ ಅಧಿಕ ಯೋಧರು ಸತ್ತಿದ್ದು, 572 ಯೋಧರನ್ನು ಸೇನೆಯು ಸೆರೆಹಿಡಿದಿದೆ ಎಂದು ರಷ್ಯಾದ ವಕ್ತಾರರು ತಿಳಿಸಿದ್ದಾರೆ. ಆದರೆ, ಈ ಬಗ್ಗೆ ಉಕ್ರೇನ್ ಪ್ರತಿಕ್ರಿಯೆಯನ್ನು ನೀಡಿಲ್ಲ.

# ಗೋಹತ್ಯೆ ನಿಷೇಧ ಕಾಯ್ದೆ ಬೊಕ್ಕಸಕ್ಕೆ ಹೊರೆ!

• ಭರತ್ ಜೋಷಿ

ಬೆಂಗಳೂರು: ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸುವುದನ್ನು ಪುನರ್ ಪರಿಶೀಲನೆ ನಡೆಸುವಂತೆ ಹಣಕಾಸು ಇಲಾಖೆಯ ಎಚ್ಚರಿಕೆಯನ್ನು ಲೆಕ್ಕಿಸದೇ, ಸರ್ಕಾರ ಅದನ್ನು ಜಾರಿ ಮಾಡಿರುವುದರಿಂದ ಬೊಕ್ಕಸಕ್ಕೆ ಭಾರಿ ಹೊರೆಯಾಗಲಿದೆ.

ಈ ಕಾಯ್ದೆ ಜಾರಿಗೆ ಬಂದ ನಂತರ ವಯಸ್ಸಾದ ಮತ್ತು ಬೀದಿಗೆ ಬಿಟ್ಟಿರುವ ಹಸುಗಳಿಗಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಗೋಶಾಲೆ ಆರಂಭಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿತ್ತು.

ಈ ಕಾನೂನು ಜಾರಿ ಮಾಡುವ ಬಗ್ಗೆ ಪುನರ್‌ಪರಿಶೀಲನೆ ನಡೆಸುವಂತೆ 2020ರ ಡಿಸೆಂಬರ್‌ನಲ್ಲಿ ಹಣಕಾಸು ಇಲಾಖೆ ಸರ್ಕಾರವನ್ನು ಕೇಳಿಕೊಂಡಿತ್ತು. 'ನಮ್ಮ ಪ್ರಮುಖ ಅವಶ್ಯಕತೆಗಳಿಗೆ ಹಣ ಹೊಂದಿಸಲು ಸಾಧ್ಯವಾಗದೇ ಇರುವಾಗ ಈ ರೀತಿ ವೆಚ್ಚ ಮಾಡುವುದನ್ನು ಒಪ್ಪಲು ಸಾಧ್ಯವಿಲ್ಲ. ಮುಂದಿನ ಎರಡು ವರ್ಷಗಳ ಬಜೆಟ್ ಗಾತ್ರವೂ ಕುಗ್ಗಲಿದೆ. ಆದ್ದರಿಂದ ಸಂಪುಟದ ನಿರ್ಣಯವನ್ನು ತಡೆ ಹಿಡಿಯುವುದು ಸೂಕ್ತ' ಎಂದು ಸಚಿವ ಸಂಪುಟ ಸಭೆಯ ಟಿಪ್ಪಣಿಯಲ್ಲಿ ಸೂಚಿಸಿತ್ತು. ಇದರ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಿದೆ.

ಆದರೆ, ಇದನ್ನು ಒಪ್ಪದ ಸರ್ಕಾರ ಕಾಯ್ದೆ ಜಾರಿಗೆ ತರಲು ಮುಂದಾಯಿತು. ಇದರಿಂದ ಮುಂದಿನ ನಾಲ್ಕು ವರ್ಷಗಳಿಗೆ ಒಟ್ಟು ₹5,240.18 ಕೋಟಿ ಬೇಕಾಗುತ್ತದೆ ಎಂದು ಹಣಕಾಸು ಇಲಾಖೆ ಹೇಳಿದೆ.

ನಿರ್ವಹಣೆಗೆ ಬೇಕಾಗುವ ಮೊತ್ತ

| ವರ್ಷ | ಜಾನುವಾರು ಸಂಖ್ಯೆ | ನಿರ್ವಹಣೆ ಮೊತ್ತ (₹ಕೋಟಿಗಳಲ್ಲಿ) |
|---|---|---|
| 1 | 1,81,672 | 464.17 |
| 2 | 3,05,337 | 780.13 |
| 3 | 4,04,269 | 1,032.90 |
| 4 | 4,83,415 | 1,235.12 |

ಪ್ರತಿಯೊಂದು ಜಾನುವಾರು ನಿರ್ವಹಣೆಗೆ ದಿನಕ್ಕೆ ₹70 ಬೇಕಾಗುತ್ತದೆ. ರಾಜ್ಯದಲ್ಲಿ 2,417 ಗೋಶಾಲೆಗಳ ಅಗತ್ಯವಿದ್ದು, ಪ್ರತಿ 200 ಹಸುಗಳನ್ನು ಒಳಗೊಂಡ ಒಂದು ಗೋಶಾಲೆ ಸ್ಥಾಪನೆಗೆ ₹50 ಲಕ್ಷ ಬೇಕಾಗುತ್ತದೆ.

ಗೋಶಾಲೆ ಸ್ಥಾಪನೆಗೆ ಪ್ರತಿ ಜಿಲ್ಲೆಗೆ ₹30 ಲಕ್ಷದಿಂದ ₹53.50 ಲಕ್ಷದಷ್ಟು ಹಣ ಬಿಡುಗಡೆ ಮಾಡಿದೆ. ಅಲ್ಲದೆ, ಮೂಲಸೌಕರ್ಯ ಸೃಷ್ಟಿಗೆ ಒಟ್ಟು ₹1,208.50 ಕೋಟಿ ಬೇಕಾಗುತ್ತದೆ. ಇದರಿಂದ 27,250 ಕೋಟಿ ಮೌಲ್ಯದ ಗೋ ಮಾಂಸ ಉತ್ಪಾದನೆಗೆ ಕಡಿವಾಣ ಬೀಳಲಿದೆ. ಆದರೆ, ಗೋಮಾಂಸ ಮಾರುವವರಿಗೆ ಪರಿಹಾರವಾಗಿ ₹519.36 ಕೋಟಿ ನೀಡುವ ಜವಾಬ್ದಾರಿಯೂ ಸರ್ಕಾರಕ್ಕಿದೆ. ಉತ್ತರಪ್ರದೇಶದಲ್ಲಿ ಬೀಡಾಡಿ ದನಗಳ ವಿಚಾರ ಚುನಾವಣೆಯಲ್ಲಿ ಪ್ರಮುಖ ವಿಷಯವಾಗಿ ಹೊರ ಹೊಮ್ಮಿದೆ.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ - 563101.
e-mail : eeklr@kpwd.gov.in. website: www.kpwd.gov.in
e-portal : http://eproc.karnataka.gov.in
ದೂರವಾಣಿ: 08152-222022 ಫ್ಯಾಕ್ಸ್: 08152-227443

ಇ-ಟೆಂಡರ್ ಪ್ರಕಟಣೆ– ಕಡಬ್ಲ್ಯು - 4
ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: 21-1/2021-22 ದಿನಾಂಕ: 15.02.2022
ಉಲ್ಲೇಖ: ಟೆಂಡರ್ ಅಧಿಸೂಚನೆ ಸಂಖ್ಯೆ: 21/2021-22 ದಿನಾಂಕ: 05.02.2022

ಕೋಲಾರ ಲೋಕೋಪಯೋಗಿ ಇಲಾಖೆ ಶ್ರೀನಿವಾಸಪುರ ಉಪ ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 4216-01-700-2-24-386-ನ್ಯಾಯಾಧೀಶರ ವಸತಿಗೃಹಗಳು ಅಡಿಯಲ್ಲಿ ಲೋ.ಇ. ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ: **ರೂ.220.00 ಲಕ್ಷಗಳು** ಇ.ಎಂ.ಡಿ. ಮೊತ್ತ **ರೂ. 3.30 ಲಕ್ಷಗಳು** ಕಾಲಾವಧಿ: **11 ತಿಂಗಳು.** ಗುತ್ತಿಗೆದಾರರು ಕಡಬ್ಲ್ಯೂ-4 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz, http://eproc.karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **18.03.2022 ರಂದು ಸಂಜೆ 16.00 ಗಂಟೆ ಒಳಗೆ** ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **19.03.2022 ರಂದು ಸಂಜೆ 16.30 ಗಂಟೆಯ ನಂತರ** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz, http://eproc.karnataka.gov.in)ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ ಕೋಲಾರ ವಿಭಾಗ ಕೋಲಾರ
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 409/ಎಂಸಿಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## PUBLIC NOTICE

**PUBLIC NOTICE**

My client intends to purchase the converted land mentioned in the Schedule hereunder from its owners, **Shri. S. Shankarachari**, son of Late Suryanarayanachari, and **Smt. Parijatha**, wife of Shri. S. Shankarachari ('Owners'). The Owners represent that they are the absolute owners of the Schedule Property and has good marketable, right, title and interest therein and there are no other person/s having any right or claim over the Schedule Property and that the Owners have not entered into any Agreements/Memorandum of Understanding etc, for sale of the Schedule Property. The Owners further represent that they have not mortgaged, created any lien or encumbered the Schedule Property or any part thereof in any manner, with any person/s. Any person/s having objection/s or claims shall with documentary evidence lodge their objection(s)/ claim(s) **within Ten (10) days** from the date of publication of this notice with the Undersigned, failing which my client shall proceed with the above-mentioned transactions.

**SCHEDULE**

All that piece and parcel of the commercially converted undeveloped land bearing Survey No. 38/1, measuring 18 guntas, situated at Varthur Village, Varthur Hobli, Bengaluru East Taluk and is bounded on the:

East by : Property belonging to Shri Manjunatha Swamy Temple
West by : Kerekatte
North by : Raja Kaluve
South by: Property bearing Survey No.38/2

**Vinay K. S.**
Advocate,
**Jayanth Pattanshetti Associates**
102, Ground Floor, "Rams Infantry Manor", No. 70, Infantry Road, Bengaluru-560 001.
Ph: 080 41238516/41238367
Place : Bengaluru
Date : 02-03-2022

## JOB OPPORTUNITIES

**Factory**

**10 UNSKILLED** WORKERS to work in Mineral Water Plant at Dabaspet. Attractive Salary. 9536601743, 9449835744.

## CONNECT

**BgSE Financials Limited**
**STOCK AND SHARE BROKERS**
No. 51, Stock Exchange Towers, 1st Cross, JC Road, Bangalore -560 027
SEBI Regn. No. INZ000095638 ARN - 2119
RTA Regn. No. INR000004041
(MEMBER OF NSE, BSE, MCX, DP OF NSDL & CDSL and category 1-RTA)
CIN: U67120KA1999PLC025860
• Open Free Demat and Trading Account - Offline / Online by clicking - www.bfsl.co.in
• Invest in Mutual Fund for long term goal / growth
• Trade in MCX-Gold / Silver / Other commodities
Contact: M: 7353760040 Tel: 080-66673310 / 66673333
Email: manager_mktg@bfsl.co.in | Visit: www.bfsl.co.in
Contact nearest investors service centre:

| | | |
|---|---|---|
| Mysore 8660290459 | Mangalore 8660321467 | Hubli 8660314806 |
| Davanagere 8660473295 | Chitradurga 8660316458 | Shimoga 8660312675 |
| Arsikere 8660523308 | Hosur 8660315064 | Chennai 8660286278 |
| Tumkur 8660511075 | Harihara 8660507809 | Madikeri 8660315194 |
| Dharwad 8660511854 | Hassan 8660325894 | Udupi 8660312689 |

*Investment in securities market are subject to market risk, read all the related documents carefully before investing.*

**Part-Time Jobs**

**THOSE WHO** Are Lost Job, MNC Provide Work From Home 30 to 35K: 7019215243/ 9886641282

**Teachers/ Professors**

**REQUIRES LADY** Teachers for English (M.A.BEd), Hindi (BA.BEd), Kannada (BA.BEd),Physic (MSc.BEd) Social Studies (BA.BEd), walkin-interview between 10:30am and 1pm. The Secretary, SriKrishna International School,ITI Layout,BSK 3rd stage, Bangalore-85 phone 080-26690799

**NRI'S INVESTMENT** And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

## AUTOMOTIVE

**Automobile Services**

**Auto Consultants**

**CERAMIC COATING:** USA make chemical application. OFFER PRICE Rs. 24990 all inclusive (Reg 35k) including windshield coat and full interior detail. Expires 31st March 2022. Book appointment: MidCity Motors 8147853841 Open 7am.

## BUSINESS

**Business Offers**

**Finance**

**WANTED BUSINESS** Partner Non Veg Hotel 5 to 10 Lakhs Investment Daily Income: 9606701007/ 8892501007

## REAL ESTATE SELLING

**Agricultural Land**

**Nelamangala**

**AGRICULTURE LAND** sale 39 lacs per acres marrur_ tipsandra 56 kms kungial road 9945080017, 8310414614

## PROPERTY CORNER

**EXPRESSION OF INTEREST (EOI)**
**CSITA Karnataka Central Diocese, Bangalore**

Invites interested parties possessing pre-qualification criteria of (a) proven financial viability and (b) demonstrated performance in leasing/renting and running commercial projects to express their interest for pre-qualification to participate in the competitive bidding.

**PROPERTY AVAILABLE FOR LEASE OR RENT**

on **"as is where is basis"** is on a sital area of 21978 Sq ft of "Demised Premises" of #145, Lalbagh Road, Ward No. 48, Bangalore 560 027 with built up area of 65575.31 Sq ft; G+3 with terrace and 2 basements.

The interested parties can participate in the Expression of Interest by submitting their credentials with Rs. 25,000/- DD in favour of CSITA Karnataka Central Diocese as EOI fee. Further to this the eligible parties will be invited to inspect the property and the building within **14 days from this publication**. Thereafter the parties should submit their bids by **3.00 pm Monday 21st March 2022 to The Treasurer, CSITA Karnataka Central Diocese, No. 20, 3rd Cross, CSI Compound, Bangalore-560027**.

1. CSITA KCD- Reserves the right to accept or reject any Application/Tenders without assigning any reason.
2. Bidders will be subjected to due diligence checks by the third parties.

ROUNAQH

**Sites**

**RMV**

**33X45** Site Sale Devinagar, Nagashettihally, near ring road rate 7500 per sft 8310414614, 9035315797

**Doddabalapur**

**BUY 30X40/** 40x60 Plots. Just Pay 1 Lakh Remaining from Bank Loan/ Instalment Facility. Doddaballapura Town Best Investment Opportunity: 9591146666

## PERSONAL

**Thanksgiving**

**THANK YOU** Lord Infant Jesus for your Blessings. Please protect our family always !

**Change of Name**

**I, ABHIJNA** Komath residing at No.1784, Ground floor, Garden Layout, Association, Sector- 2, HSR Layout, Bangalore- 5600102 have changed my name to ABHIGNA. K vide affidavit dated 25/02/2022 before notary B.M. Chandrashekar., Bangalore

**I, SHAIKH** ABDUL RAZZAQUE, have changed my name to RAZZAQUE AMBEDKAR, vide affidavit dated 15.02.2022, before Notary S. Vijayakumar, Bangalore.

**I, NEERAJ** SIVANNA, residing at 20, Beeresshwara 2nd cross, Chiranjeevi Layout, Hebbal, Bengaluru-560024, have changed my name to NEERAJJ HEGDE, vide affidavit dated 02.03.2022 sworn before Advocate & Notary L.B. Anasuyamma, Bengaluru.

**CHAINA PAL** W/o 14843133F– Hav–JAGADISH MANDAL R/a Bankadaha, Bishnupur, Bankura, WB changed name from CHAINA PAL to CHAINA PAL MANDAL notary KV Mani, Bangalore.

**I, MAHAJABEEN** KHAN, Spouse of Amanullah Rahiman Khan, resident of 1061, Sobha Chrysanthemum, Thanisandra main road, Bangalore 560077, have changed my name from MAHAJABEEN KHAN to MEHJABEEN KHAN as per affidavit dated 28.02.2022 before The Court of Chief Metropolitan Magistrate, Bangalore.

**Lost**

**LOST**
It is informed to the General Public that the following original document has been lost. Original Sale Deed R.No.2634 - 2011-2012 dated 22.07.2011 registered before the Sub-Registrar, Bangarpet, following the lost of document a complaint also registered in Robertsonpet Police Station Vide Lost Report No. 0156023/2022 dated 10.2.2022 if found please contact D.Velu Son of Dharman, residing at No 318, Reddys Garden, Mariamman Temple Street Near Bowrilalpet, Robertsonpet KGF 563122, Mobile No. 7760838299

**LOST**
I, **Gurumurthy G,** S/o Gaviyappa D. R/a 3049, 8th A Cross 14th Main, RPC Layout, Attiguppe, Vijayanagar Bangalore-40, have Lost my Original Sale Deed No.1082 Pages No.2849/1986/87 on 8-02-2022 while travelling on Bus, near Attiguppe, Bangalore.
**Finders please contact: 9342859595 / 9986421900 or inform near by Police Station**

## TOURS & TRAVEL

**Travel**

**VEG. FOOD** with AC Room 21-3-2022 Gujarat flight Tour 8 Day, 8-5-22 Vaishno Devi, Delhi Flight 8 Day, 28-5-22 Three Jyotirlinga (Madhya Pradesh, Kashi) Flight 7 Day.. 9-3-22 Tamil Nadu Bus Tour 4 Day.. 27-4-22 Hyderabad, Mantralaya, Shree Shaila Bus 5 Day 8496044942, Mallikarjuna Package Tours, Tumkur

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ

**BOOK YOUR REAL ESTATE**

Classified Advertisement In Deccan Herald & Prajavani

**SATURDAY & SUNDAY COMBO OFFER**

| Ordinary Per word | Bold Per word | Ordinary Semi Display Per word | Bold Semi Display Per word | Single Col CD Per sqcm |
|---|---|---|---|---|
| 80 | 125 | 95 | 155 | 570 |

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

### ಸಮಾರೋಪದಲ್ಲಿ 12 ರಾಜ್ಯಗಳ ಯುವ ಕಾಂಗ್ರೆಸ್ ಅಧ್ಯಕ್ಷರು ಭಾಗಿ– ಡಿಕೆಶಿ

# ‘ಮೇಕೆದಾಟು: ಹೋರಾಟ ನಿರಂತರ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದ ಮೂಲೆ ಮೂಲೆಯಿಂದ ಪಕ್ಷದ ಕಾರ್ಯಕರ್ತರು ಪಾದಯಾತ್ರೆಗೆ ಬರುತ್ತಿದ್ದು, ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಗುರುವಾರ ನಡೆಯಲಿರುವ ಬೃಹತ್ ಸಮಾವೇಶದಲ್ಲಿ 12 ರಾಜ್ಯಗಳ ಯುವ ಕಾಂಗ್ರೆಸ್ ಅಧ್ಯಕ್ಷರು ಭಾಗವಹಿಸಲಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಈ ಸಮಾವೇಶದ ಮೂಲಕ ಪಾದಯಾತ್ರೆ ಅಂತ್ಯವಾದರೂ, ನಮ್ಮ ಹೋರಾಟ ಮುಂದುವರಿಯಲಿದೆ. ಇದು ಹೋರಾಟದ ಮೊದಲ ಭಾಗ ಅಷ್ಟೇ’ ಎಂದರು.

‘ಸರ್ವಧರ್ಮ, ಜನಾಂಗ, ಪಕ್ಷಗಳಿಗೆ ಈ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಲು ಅವಕಾಶ ಮಾಡಿಕೊಡಲಾಗಿದೆ. ಕೇವಲ ಕಾಂಗ್ರೆಸಿಗರು ಮಾತ್ರವಿಲ್ಲ. ಎಲ್ಲ ವರ್ಗಗಳಿಗೆ ಸೇರಿದ ಕಾರ್ಮಿಕರು, ರೈತರು, ನಾಗರಿಕರು ದೊಡ್ಡ ಸಂಖ್ಯೆಯಲ್ಲಿ ಕೈ ಜೋಡಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಜತೆ ಗುರುತಿಸಿಕೊಳ್ಳಲಾಗದವರೂ ಈ ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ’ ಎಂದರು.

‘ಗುರುವಾರ ಪಾದಯಾತ್ರೆಯ ನೇತೃತ್ವವನ್ನು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮತ್ತು ಬೆಂಗಳೂರಿನ ಎಲ್ಲ ಶಾಸಕರು ವಹಿಸಲಿದ್ದಾರೆ. ರಾಜ್ಯದ ಎಲ್ಲ ಸಂಘಟನೆಗಳು, ಕನ್ನಡಪರ ಹೋರಾಟಗಾರರು, ರೈತರು, ಕಲಾವಿದರು, ಹೋಟೇಲ್ ಮಾಲೀಕರು, ಅಪಾರ್ಟ್‌ಮೆಂಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳನ್ನು ಸಮಾವೇಶಕ್ಕೆ ಆಹ್ವಾನಿಸುತ್ತೇನೆ’ ಎಂದರು.

**ಡಬ್ಬಾ ಎಂಜಿನ್ ಸರ್ಕಾರ:** ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ‘ಬಿಜೆಪಿಯವರು ಮೊದಲೇ ಹೊಟ್ಟೆಕಿಚ್ಚಿನ ಜನ. ಎರಡೂವರೆ ವರ್ಷದಿಂದ ರಾಜ್ಯದಲ್ಲಿ ಬಿಜೆಪಿಯವರು ಅಧಿಕಾರದಲ್ಲಿದ್ದಾರೆ. ಮೇಕೆದಾಟು ಯೋಜನೆಗೆ ಪರಿಸರ ಇಲಾಖೆ ಅನುಮತಿ ಕೊಟ್ಟಿದ್ದರೆ ನಾವು ಪಾದಯಾತ್ರೆ ಹಮ್ಮಿಕೊಳ್ಳುವ ಪ್ರಮೇಯವೇ ಎದುರಾಗುತ್ತಿರಲಿಲ್ಲ. ಅವರದ್ದು ಡಬಲ್ ಎಂಜಿನ್ ಸರ್ಕಾರ ಅಲ್ಲ, ಡಬ್ಬಾ ಎಂಜಿನ್ ಸರ್ಕಾರ’ ಎಂದು ಗೇಲಿ ಮಾಡಿದರು.

‘ಬ್ಯಾನರ್ ವಿಚಾರದಲ್ಲಿ ಬಿಜೆಪಿ ಚಿಲ್ಲರೆ ರಾಜಕೀಯ ಮಾಡುತ್ತಿದೆ. ಇತ್ತೀಚೆಗೆ ಬೊಮ್ಮನಹಳ್ಳಿ ಮೈದಾನ ಉದ್ಘಾಟನೆಗೆ ಮುಖ್ಯಮಂತ್ರಿ ಬಂದಿದ್ದಾಗ ಸಾವಿರಕ್ಕೂ ಅಧಿಕ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸಿದ್ದರು. ಆರ್.ಆರ್.ನಗರದಲ್ಲಿ ಶಿವರಾತ್ರಿ ಪ್ರಯುಕ್ತ 4 ಸಾವಿರದಿಂದ 5 ಸಾವಿರ ಫ್ಲೆಕ್ಸ್, ಅಶ್ವತ್ಥನಾರಾಯಣ, ಸೋಮಣ್ಣ ಹುಟ್ಟುಹಬ್ಬಕ್ಕೆ ಬೆಂಗಳೂರಿನ ತುಂಬ ಸಾವಿರಾರು ಫ್ಲೆಕ್ಸ್ ಹಾಕಿದ್ದಾರೆ. ಸಚಿವ ಗೋಪಾಲಯ್ಯ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ವಿಚಾರವಾಗಿ ಫ್ಲೆಕ್ಸ್ ಹಾಕಿಕೊಂಡಿದ್ದಾರೆ. ಬಿಜೆಪಿಯವರು ಫ್ಲೆಕ್ಸ್ ಹಾಕಬಹುದು ಆದರೆ, ಕಾಂಗ್ರೆಸ್ ಹೋರಾಟ ಪರವಾಗಿ ಸಂಘ ಸಂಸ್ಥೆಗಳು ಹಾಕಿರುವ ಫ್ಲೆಕ್ಸ್ ತೆಗೆಯುವುದು ಎಷ್ಟು ಸರಿ? ತೆಗೆದರೆ ಎಲ್ಲರದ್ದೂ ತೆಗೆಯಿರಿ. ಎಲ್ಲರಿಗೂ ಕಾನೂನು ಒಂದೇ’ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘1.5 ಕೋಟಿ ಜನಸಂಖ್ಯೆ ಇರುವ ಬೆಂಗಳೂರಿನಲ್ಲಿ ಶೇ 30ರಿಂದ ಶೇ 40ರಷ್ಟು ಜನರಿಗೆ ಮಾತ್ರ ಕಾವೇರಿ ನೀರು ಸಿಗುತ್ತಿದೆ. ನಾವು ಜನರಿಗಾಗಿ ಹೋರಾಟ ಮಾಡುತ್ತಿದ್ದೇವೆ. ಮೂರು ದಿನ ಸಂಚಾರ ದಟ್ಟಣೆ ಸಮಸ್ಯೆ ಎದುರಾಗಬಹುದು. ಆದರೆ, ಮುಂದಿನ 50 ವರ್ಷಗಳ ಕಾಲ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲಿದೆ. ಇದಕ್ಕೆ ಜನರ ಸಹಕಾರ ಅಗತ್ಯ’ ಎಂದರು.

ಪಾದಯಾತ್ರೆ ವೇಳೆ ಮಡಿವಾಳ ಮುಖ್ಯರಸ್ತೆಯಲ್ಲಿ ಕಂಡುಬಂದ ವಾಹನ ದಟ್ಟಣೆ– ಪ್ರಜಾವಾಣಿ ಚಿತ್ರ

**ಪಾದಯಾತ್ರೆಯಿಂದ ಬಿಜೆಪಿಗೆ ಭಯ ಶುರುವಾಗಿದೆ. ಅದೇ ಕಾರಣಕ್ಕೆ ತಡೆಯಲು ಏನೇನೋ ಕಸರತ್ತು ನಡೆಸುತ್ತಿದ್ದಾರೆ. ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ**

**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

**ಬಿಜೆಪಿಯವರು ಅಜ್ಞಾನಿಗಳು. ರಾಜ್ಯ ಮತ್ತು ಕೇಂದ್ರದಲ್ಲಿ ಅವರ ಪಕ್ಷ ಅಧಿಕಾರದಲ್ಲಿದೆ. ಅವರಿಗೆ ಜನರ ಸಮಸ್ಯೆ ಬಗ್ಗೆ ಬದ್ಧತೆ ಇಲ್ಲ**

**ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಪಾದಯಾತ್ರೆಯಲ್ಲಿ ಪಕ್ಷದ ಕಾರ್ಯಕರ್ತರ ಜೊತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಶಾಂತಿನಗರ ಕ್ಷೇತ್ರದ ಶಾಸಕ ಎನ್.ಎ. ಹ್ಯಾರಿಸ್ ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ

### ಮೇಕೆದಾಟು ಪಾದಯಾತ್ರೆ ಸಮಾರೋಪ ಇಂದು

# ನೀರಿಗಾಗಿ ನಡಿಗೆ; ನಾಯಕರಿಗೆ ಜೈಕಾರ

• ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಹಮ್ಮಿಕೊಂಡ ಎರಡನೇ ಹಂತದ ಪಾದಯಾತ್ರೆಯಲ್ಲಿ ಬುಧವಾರ ಕೂಡಾ ‘ಕೈ’ ನಾಯಕರ ಜೊತೆ ಅಪಾರ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಉತ್ಸಾಹದಿಂದ ಹೆಜ್ಜೆ ಹಾಕಿದರು. ಮಾರ್ಗದುದ್ದಕ್ಕೂ ‘ನೀರಿಗಾಗಿ ನಮ್ಮ ಹೋರಾಟ’ ಎನ್ನುತ್ತಲೇ, ಯಾತ್ರೆಯ ಮುಂಚೂಣಿಯಲ್ಲಿದ್ದ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಪರ ಜೈಕಾರ ಹಾಕಿದರು.

ರಾಮನಗರದಿಂದ ಆರಂಭಗೊಂಡ ‘ಮೇಕೆದಾಟು ಪಾದಯಾತ್ರೆ-2.0’ ನಾಲ್ಕನೇ ದಿನ ಅರಮನೆ ಮೈದಾನದಲ್ಲಿ ರಾತ್ರಿ ತಂಗಿದೆ. ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಗುರುವಾರ ಸಮಾರೋಪ ಸಮಾವೇಶ ನಡೆಯಲಿದೆ. ಕೊನೆಯ ದಿನ ಪಾದಯಾತ್ರೆಗೆ ಇನ್ನಷ್ಟು ಹುರುಪು ತುಂಬಲು ಕಾಂಗ್ರೆಸ್ ನಾಯಕರು ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದಾರೆ.

ಬಿಟಿಎಂ ಲೇಔಟ್‌ನ ಅದ್ವೈತ್ ಪೆಟ್ರೋಲ್ ಬಂಕ್ ಬಳಿಯಿಂದ ಬುಧವಾರ ಬೆಳಿಗ್ಗೆ ಆರಂಭಗೊಂಡ ಪಾದಯಾತ್ರೆ ಕೋರಮಂಗಲ ಫೋರಂ ಮಾಲ್, ವಿವೇಕ ನಗರ, ಟ್ರಿನಿಟಿ ವೃತ್ತ, ಮಿಲ್ಲರ್ಸ್ ರಸ್ತೆ, ಜೆ.ಸಿ. ನಗರ ಮಾರ್ಗವಾಗಿ ಮೇಕ್ರಿ ವೃತ್ತದ ಮೂಲಕ ಅರಮನೆ ಮೈದಾನ ತಲುಪಿತು. ಪಾದಯಾತ್ರೆ ಸಾಗಿದ ರಸ್ತೆಯುದ್ದಕ್ಕೂ ಸಂಚಾರ ದಟ್ಟಣೆ ಉಂಟಾಗಿದ್ದರಿಂದ ವಾಹನ ಪ್ರಯಾಣಿಕರು ಪರದಾಡಿದರು.

ಬೆಳಗ್ಗಿನ ಅವಧಿಯ ಪಾದಯಾತ್ರೆಯಲ್ಲಿ ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಆನೇಕಲ್, ಮಹದೇವಪುರ, ಹೊಸಕೋಟೆ, ಮಾಲೂರು ಭಾಗದ ಕಾರ್ಯಕರ್ತರು ಭಾಗವಹಿಸಿದರೆ, ಮಧ್ಯಾಹ್ನದ ಬಳಿಕ ಶಾಂತಿನಗರ, ಸಿ.ವಿ. ರಾಮನ್ ನಗರ, ಶಿವಾಜಿನಗರ, ಹೆಬ್ಬಾಳ, ಕೆ.ಆರ್. ಪುರದ ಕಾರ್ಯಕರ್ತರು ಭಾಗವಹಿಸಿದರು.

ತಮಟೆ ನಾದಕ್ಕೆ ಕಾರ್ಯಕರ್ತರ ಜೊತೆ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪ ಅಮರ್‌ನಾಥ್ ಮತ್ತು ಸಂಗಡಿಗರು ಕುಣಿದರು. ‘ಟಗರು ಬಂತು ಟಗರು’ ಹಾಡಿಗೆ ಸಿದ್ದರಾಮಯ್ಯ ಅವರ ಮುಂಭಾಗದಲ್ಲಿ ಕಾರ್ಯಕರ್ತರು ಭರ್ಜರಿ ಹೆಜ್ಜೆ ಹಾಕಿದರು. ಕಾರ್ಯಕರ್ತರ ಒತ್ತಾಯಕ್ಕೆ ಮಣಿದು ಸಿದ್ದರಾಮಯ್ಯ ಕೂಡಾ ಮೈ ಕುಲುಕಿಸಿದರು!

ರಸ್ತೆಯ ಉದ್ದಕ್ಕೂ ಹಾಕಲಾಗಿದ್ದ ಟೆಂಟ್‌ಗಳಲ್ಲಿ ಕಲ್ಲಂಗಡಿ ಹಣ್ಣು, ಜ್ಯೂಸ್, ಮಜ್ಜಿಗೆ ಹಂಚಿದರು.

ಆಸ್ಟಿನ್ ಟೌನ್ ಜಸ್ಮಾದೇವಿ ಭವನದ ಬಳಿ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಂದ ಪಾದಯಾತ್ರೆ ಅರಮನೆ ಮೈದಾನದ ಕಡೆ ಹೊರಟಿತು. ಟ್ರಿನಿಟಿ ವೃತ್ತದಲ್ಲಿ ಮಾಜಿ ಮೇಯರ್ ಸಂಪತ್ ರಾಜ್ ಅವರು ಸಿದ್ದರಾಮಯ್ಯ ಅವರಿಗೆ ಕ್ರೇನ್ ನೆರವಿನಿಂದ ಬೃಹತ್ ಹಾರ ಹಾಕಿದರು. ಪುಲಕೇಶಿನಗರದಲ್ಲಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮತ್ತು ಅವರ ಪರ ಕಾರ್ಯಕರ್ತರು ಸಿದ್ದರಾಮಯ್ಯಗೆ ಹೂವಿನ ಮಳೆಗೆರೆದರು.

ಪಾದಯಾತ್ರೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕರ್ತರು ಟ್ರಿನಿಟಿ ವೃತ್ತದ ಬಳಿ ನೃತ್ಯ ಪ್ರದರ್ಶಿಸುತ್ತಿರುವುದನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವೀಕ್ಷಿಸಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ

### ‘ಮುಂದಿನ ಸಿ.ಎಂ ಸಿದ್ದರಾಮಯ್ಯ’

ಪಾದಯಾತ್ರೆ ಆರಂಭವಾಗುತ್ತಿದ್ದಂತೆ ಸಿದ್ದರಾಮಯ್ಯ ಎಲ್ಲರಿಗಿಂತ ಮೊದಲು ಕಾಲ್ನಡಿಗೆ ಆರಂಭಿಸಿದರು. ಸಿದ್ದರಾಮಯ್ಯ ಮುಂದೆ ಹೋಗುತ್ತಿದ್ದಂತೆ, ವಾಹನ ಏರಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಕ್ರೇನ್ ಮೂಲಕ ಕಾರ್ಯಕರ್ತರು ಬೃಹತ್ ಹಾರ ಹಾಕಿದರು. ಜೊತೆಗೆ ಯು.ಟಿ. ಖಾದರ್ ಮತ್ತು ಶರತ್ ಬಚ್ಚೇಗೌಡ ಇದ್ದರು. ದಾರಿಯುದ್ದಕ್ಕೂ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಜೊತೆ ಫೋಟೊ ತೆಗೆಸಿಕೊಳ್ಳಲು ಜನ ಮುಗಿಬಿದ್ದರು. ಅನ್ನದಾತ, ಭಾಗ್ಯವಿದಾತ ಮುಖ್ಯಮಂತ್ರಿ ಎಂದು ಘೋಷಣೆ ಕೂಗಿದರು. ಮುಂದಿನ ಸಿ.ಎಂ ಸಿದ್ದರಾಮಯ್ಯ ಎಂಬ ಘೋಷಣೆಯೂ ಕೇಳಿಬಂತು.

### ‘ಮಹದಾಯಿ ಹೋರಾಟ ಮಾಡೋಣ ಕಣ್ರೀ’

ಹಲಸೂರು ಕೆರೆ ಬಳಿ ಕಾಲ್ನಡಿಗೆ ಸಾಗುತ್ತಿದ್ದಂತೆ, ಉತ್ತರ ಕರ್ನಾಟಕ ಭಾಗದ ಕೆಲವು ಕಾಂಗ್ರೆಸ್ ನಾಯಕರು ಸಿದ್ದರಾಮಯ್ಯ ಮುಂದೆ ಮಹದಾಯಿ ಹೋರಾಟದ ವಿಚಾರ ಪ್ರಸ್ತಾಪಿಸಿದರು. ಮೇಕೆದಾಟು ಪಾದಯಾತ್ರೆ ಮುಗಿಯುತ್ತಿದ್ದಂತೆ ಮಹದಾಯಿ ಹೋರಾಟ ಆರಂಭಿಸಬೇಕು ಎಂದು ಮನವಿ ಮಾಡಿದರು. ‘ನಮ್ಮ ಭಾಗದ ಜನರು ಹೋರಾಟಕ್ಕೆ ಕಾಯುತ್ತಿದ್ದಾರೆ’ ಎಂದು ಇತ್ತೀಚೆಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿರುವ ಕೋನರೆಡ್ಡಿ ಸೇರಿದಂತೆ ಹಲವರು ಹೇಳಿದರು. ಅದಕ್ಕೆ ಪ್ರತಿಕ್ರಿಯಿಸಿ ಸಿದ್ದರಾಮಯ್ಯ, ‘ಮಾಡೋಣ ಕಣ್ರೀ’ ಎಂದರು.

### ‘ಮೇಕೆದಾಟು ಹಿನ್ನಡೆಗೆ ಕಾಂಗ್ರೆಸ್ ಕಾರಣ’

**ಬೆಂಗಳೂರು:** ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಮೇಕೆದಾಟು ಯೋಜನೆಯ ಬಗ್ಗೆ ತೋರಿದ ಆಲಸ್ಯ ಮತ್ತು ಹೊಣೆಗೇಡಿತನದ ವರ್ತನೆಯಿಂದ ಯೋಜನೆಗೆ ಹಿನ್ನಡೆ ಆಯಿತು.ಜಲಸಂಪನ್ಮೂಲ ಇಲಾಖೆಯಲ್ಲಿರುವ ಕಡತಗಳೇ ಅದಕ್ಕೆ ಪುರಾವೆಗಳಾಗಿವೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದ್ದಾರೆ.

### ಹತ್ತು ರಾಷ್ಟ್ರಗಳು ಭಾಗಿ: ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ

# ಮಾರ್ಚ್ 7ರಿಂದ ಮೂರು ದಿನ ನ್ಯಾನೋ ಮೇಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 12ನೇ ವರ್ಷದ ‘ಬೆಂಗಳೂರು– ಇಂಡಿಯಾ ನ್ಯಾನೋ ಮೇಳ’ ಇದೇ 7ರಿಂದ 9ರವರೆಗೆ ವರ್ಚ್ಯುಯಲ್ ಮಾದರಿಯಲ್ಲಿ ನಡೆಯಲಿದೆ ಎಂದು ಮಾಹಿತಿ ತಂತ್ರಜ್ಞಾನಮತ್ತು ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಸುಸ್ಥಿರ ಅಭಿವೃದ್ಧಿಗಾಗಿ ನ್ಯಾನೋ ತಂತ್ರಜ್ಞಾನ’ ಎಂಬ ಧ್ಯೇಯ ವಾಕ್ಯದಡಿ ನಡೆಯುವ ಸಮಾವೇಶದಲ್ಲಿ ಕೆನಡಾ, ಇಸ್ರೇಲ್, ಜರ್ಮನಿ, ನೆದರ್ಲೆಂಡ್, ಜಪಾನ್ ಸೇರಿದಂತೆ ಹತ್ತು ರಾಷ್ಟ್ರಗಳು ಭಾಗವಹಿಸುತ್ತಿವೆ’ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಳ ಉದ್ಘಾಟಿಸುವರು. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಮಾರ್ಚ್ 7, 8ರಂದು ವಿವಿಧ ಚಟುವಟಿಕೆಗಳು ನಡೆಯಲಿವೆ. 9ರಂದು ಇಡೀ ದಿನ ತಲಾ ಒಂದು ಗಂಟೆ ಅವಧಿಯ ಟ್ಯೂಟೋರಿಯಲ್ ಮಾದರಿಯ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗಾಗಿ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ನ್ಯಾನೋ ಔಷಧಿ, ನ್ಯಾನೋ ಫೋಟೋನಿಕ್ಸ್, ಜವಳಿ ಕ್ಷೇತ್ರದಲ್ಲಿ ನ್ಯಾನೋ ತಂತ್ರಜ್ಞಾನದ ಬಳಕೆ, ಹೈಡ್ರೋಜನ್ ಆರ್ಥಿಕತೆ ಕುರಿತು ಹೆಚ್ಚಿನ ಗೋಷ್ಠಿಗಳು ನಡೆಯಲಿವೆ. ನವೋದ್ಯಮಗಳು, ಬೃಹತ್ ಕೈಗಾರಿಕೆಗಳು, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು, ವೆಂಚರ್ ಕ್ಯಾಪಿಟಲ್‌ಗಳನ್ನು ಕೇಂದ್ರೀಕರಿಸಲಾಗುವುದು ಎಂದರು.

ನ್ಯಾನೋ ವಿಜ್ಞಾನದಲ್ಲಿ ಪಿಎಚ್.ಡಿ ಅಧ್ಯಯನ ಮಾಡುತ್ತಿರುವ ಐವರು ಪ್ರತಿಭಾವಂತರಿಗೆ ರಾಜ್ಯ ಸರ್ಕಾರದಿಂದ ‘ನ್ಯಾನೋ ಎಕ್ಸಲೆನ್ಸ್ ಪುರಸ್ಕಾರ’ ಮತ್ತು ‘ಸಿ.ಎನ್.ಆರ್. ರಾವ್ ಪುರಸ್ಕಾರ’ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣರೆಡ್ಡಿ, ನ್ಯಾನೋ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷ ಪ್ರೊ.ನವಕಾಂತ ಭಟ್, ಸಮ್ಮೇಳನದ ಕಾರ್ಯಕಾರಿ ಸಮಿತಿ ಮುಖ್ಯಸ್ಥ ಜಗದೀಶ್ ಪಾಟಣಕರ್, ಅಧ್ಯಕ್ಷ ಪ್ರೊ.ಅಜಯ್ ಕುಮಾರ್ ಸೂದ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕ ಬಸವರಾಜ ಪತ್ರಿಕಾಗೋಷ್ಠಿಯಲ್ಲಿದ್ದರು.

### ನ್ಯಾನೋ ಫಾರ್ ಯಂಗ್: ಸ್ಪರ್ಧೆ

‘ನ್ಯಾನೋ ಫಾರ್ ಯಂಗ್’ ಮತ್ತು ‘ನ್ಯಾನೋ ಕ್ವಿಜ್’ ರಸಪ್ರಶ್ನೆ ಸ್ಪರ್ಧೆಗಳು ನಡೆಯಲಿವೆ. 23 ರಾಜ್ಯ ಮತ್ತು ಐದು ಕೇಂದ್ರಾಡಳಿತ ಪ್ರದೇಶಗಳ 650 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ಸಚಿವರು ಹೇಳಿದರು.

**ಅಂಕಿ-ಅಂಶಗಳು**

**25** ವಿವಿಧ ವಿಷಯದ ಗೋಷ್ಠಿ

**75** ಪರಿಣತರು ಭಾಗಿ

**40** ಪ್ರದರ್ಶನ ಮಳಿಗೆಗಳು

**4000** ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ

## ಸ್ಮಾರ್ಟ್‌ಸಿಟಿ ಯೋಜನೆ ಕಾಮಗಾರಿ ಪರಿಶೀಲಿಸಿದ ರಾಕೇಶ್ ಸಿಂಗ್

# ಕಬ್ಬನ್ ಉದ್ಯಾನ: ಕಾಮಗಾರಿಗಳಿಗೆ ಗಡುವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ಮಾರ್ಟ್‌ಸಿಟಿ ಯೋಜನೆಯಡಿ ಕಬ್ಬನ್ ಉದ್ಯಾನದಲ್ಲಿ ಕೈಗೆತ್ತಿಕೊಂಡಿರುವ ವಿವಿಧ ಕಾಮಗಾರಿಗಳನ್ನು ಮಾರ್ಚ್ ತಿಂಗಳ ಒಳಗೆ ಪೂರ್ಣಗೊಳಿಸಬೇಕು ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಅಧ್ಯಕ್ಷ ರಾಕೇಶ್ ಸಿಂಗ್ ಗಡುವು ವಿಧಿಸಿದರು.

ಬೆಂಗಳೂರು ಸ್ಮಾರ್ಟ್‌ಸಿಟಿ ಸಂಸ್ಥೆಯು ಕಬ್ಬನ್ ಉದ್ಯಾನದ ಅಭಿವೃದ್ಧಿಗಾಗಿ ಕೈಗೊಂಡ ವಿವಿಧ ಕಾಮಗಾರಿಗಳನ್ನು ಅವರು ಬುಧವಾರ ಪರಿಶೀಲಿಸಿದರು.

ಉದ್ಯಾನದಲ್ಲಿರುವ ಬಾಲಭವನ ಆವರಣದಲ್ಲೂ ಸ್ಮಾರ್ಟ್‌ಸಿಟಿ ಯೋಜನೆಯಡಿ ಬೋಟಿಂಗ್ ಕೊಳ, ಇಲ್ಲಿನ ಬಯಲು ರಂಗಮಂದಿರದ ಪುನರ್ನಿರ್ಮಾಣ, ವಿಜ್ಞಾನ ಪಾರ್ಕ್ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದರು.

ಬಾಲಭವನದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ರಾಕೇಶ್ ಸಿಂಗ್ ಮಾಹಿತಿ ಪಡೆದರು. ಬಾಲಭವನದ ಸೊಸೈಟಿ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್ ಹಾಗೂ ಅಧಿಕಾರಿಗಳು ಇದ್ದಾರೆ

‘ಶಾಲಾ ಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ಯೋಜನೆ ರೂಪಿಸಿ ಹಾಗೂ ವೈಜ್ಞಾನಿಕ ಅಂಶಗಳನ್ನು ಅಳವಡಿಸಿಕೊಂಡು ಕಾಮಗಾರಿಗಳನ್ನು ನಡೆಸಬೇಕು’ ಎಂದು ಗುತ್ತಿಗೆದಾರರಿಗೆ ರಾಕೇಶ್ ಸಿಂಗ್ ಸೂಚಿಸಿದರು.

ಬಾಲಭವನ ಸೊಸೈಟಿ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್, ಸ್ಮಾರ್ಟ್‌ಸಿಟಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪಿ.ರಾಜೇಂದ್ರ ಚೋಳನ್, ಮುಖ್ಯ ಎಂಜಿನಿಯರ್ ವಿನಾಯಕ ಸುಗೂರ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಬಾಲಕೃಷ್ಣ ಹಾಗೂ ಸಿಬ್ಬಂದಿ ಇದ್ದರು.




# ಲಸಿಕೆ: 4 ಜಿಲ್ಲೆಗಳಲ್ಲಿ ಶೇ 100 ಸಾಧನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಕೋವಿಡ್–19 ಲಸಿಕೆಯ ಎರಡನೇ ಡೋಸ್ ನೀಡುವಲ್ಲಿ ಶೇಕಡ 100ರಷ್ಟು ಪ್ರಗತಿ ಸಾಧಿಸಲಾಗಿದೆ.

ಬೆಂಗಳೂರು ಗ್ರಾಮಾಂತರ, ವಿಜಯಪುರ, ಕೊಡಗು ಮತ್ತು ಗದಗ ಜಿಲ್ಲೆಗಳಲ್ಲಿ ಈ ಸಾಧನೆ ಮಾಡಲಾಗಿದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.

ಒಟ್ಟು 4.89 ಕೋಟಿ ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು. ಆದರೆ, 4.97 ಕೋಟಿ ಮಂದಿಗೆ ಮೊದಲ ಡೋಸ್ ನೀಡುವ ಮೂಲಕ ಶೇ 102ರಷ್ಟು ಪ್ರಗತಿ ಸಾಧಿಸಲಾಗಿದೆ.

ಎರಡನೇ ಡೋಸ್ ಅನ್ನು 4.58 ಕೋಟಿ ಮಂದಿಗೆ ನೀಡುವ ಮೂಲಕ ಶೇ 94ರಷ್ಟು ಗುರಿ ಸಾಧಿಸಲಾಗಿದೆ. ರಾಯಚೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಶೇ 94ರಷ್ಟು ಮಂದಿಗೆ ಎರಡನೇ ಡೋಸ್ ನೀಡಲಾಗಿದೆ ಎಂದು ವಿವರಿಸಿದ್ದಾರೆ.

**ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ**

17,78,778 ಒಟ್ಟು ಪ್ರಕರಣಗಳು (17,78,672 ನಿನ್ನೆಯ ವಿವರ)

| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |
|---|---|---|
| 2,735 | 17,59,118 | 16,924 |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 106 |
| ಗುಣಮುಖ | 370 |
| ಸಾವು | 04 |

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಪರಸ್ಪರ ಅಂತರ ಕಾಯ್ದುಕೊಳ್ಳಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

# ‘ದುಡಿಯುವ ವರ್ಗಗಳಿಗೆ ಹೆಚ್ಚು ಅನುದಾನ ನೀಡಿ’

**ಬೆಂಗಳೂರು:** ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಮಹಿಳೆಯರು, ರೈತರು, ಕುಶಲಕರ್ಮಿಗಳು, ಯುವಜನರು ಸೇರಿದಂತೆ ದುಡಿಯುವ ವರ್ಗಗಳಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಅವರು, ‘2017-18ಕ್ಕೆ ಹೋಲಿಸಿದರೆ 2021-22ರಲ್ಲಿ ಈ ವರ್ಗಗಳಿಗೆ ಬಜೆಟ್‌ನಲ್ಲಿ ನೀಡಿದ ಪಾಲಿನಲ್ಲಿ ₹ 2,921 ಕೋಟಿ ಕಡಿಮೆಯಾಗಿತ್ತು' ಎಂದಿದ್ದಾರೆ.

2017-18ಕ್ಕೆ ಹೋಲಿಸಿದರೆ 2021-22ರ ವೇಳೆಗೆ ರಾಜ್ಯದ ಬಜೆಟ್ ಗಾತ್ರದಲ್ಲಿ ₹ 60,000 ಕೋಟಿ (ಶೇ 24.5) ಹೆಚ್ಚಾಗಿದೆ. ಆದರೆ, ದುಡಿಯುವ ವರ್ಗಗಳ ಅಭಿವೃದ್ಧಿಗಾಗಿ ಕೆಲಸ ಮಾಡುವ ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಯುವ ಸಬಲೀಕರಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಗಳಿಗೆ ನೀಡಿದ ಅನುದಾನದಲ್ಲಿ ಶೇ 20.59ರಷ್ಟು ಕಡಿಮೆಯಾಗಿದೆ ಎಂದು ಹೇಳಿದ್ದಾರೆ.

## ನಗರದಲ್ಲಿ ಇಂದು

**ವಿಶ್ವ ವನ್ಯಜೀವಿ ದಿನ ಆಚರಣೆ:** ಮಾತನಾಡುವವರು- ಅಮೆರಿಕದ ಎನ್.ಐ ವಿಶ್ವವಿದ್ಯಾಲಯದ ವಿದ್ಯಾರ್ಥಿ ದ್ರುವ್ ಪಾಟೀಲ, ಡಾ. ಅರವಿಂದ ಮಧ್ಯಸ್ಥ, ಆಯೋಜನೆ- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಸ್ಥಳ-ಪ್ರೊ.ಯು.ಆರ್.ರಾವ್ ವಿಜ್ಞಾನ ಭವನ, ಜಿಕೆವಿಕೆ, ಬೆಳಿಗ್ಗೆ 9.15

**ಸ್ಫೋಟಕಗಳನ್ನು ಜಾಗರೂಕವಾಗಿ ಉಪಯೋಗಿಸುವ ಮತ್ತು ಖನಿಜಗಳನ್ನು ತೆಗೆಯುವ ವಿಧಾನದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ:** ಮುಖ್ಯ ಅಥಿತಿ- ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ, ಅತಿಥಿಗಳು- ಗಣಿ ಮತ್ತು ಭೂವಿಜ್ಞಾನ ಇಲಾಖೆ ನಿರ್ದೇಶಕ ವಿ.ರಾಮ್‌ಪ್ರಕಾಶ್ ಮನೋಹರ್, ಮಲಯ್ ಟಿಕಧಾರ್, ಟಿ.ಸಾಮಿನಾಥನ್, ಆಯೋಜನೆ- ಮೈನಿಂಗ್ ಎಂಜಿನಿಯರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಸ್ಥಳ- ಹೋಟೆಲ್ ದಿ ಕ್ಯಾಪಿಟಲ್, ಬೆಳಿಗ್ಗೆ 9.30

**26ನೇ ವಾರ್ಷಿಕೋತ್ಸವ, ವೈಜ್ಞಾನಿಕ ವಿಚಾರ ಸಂಕಿರಣ ಮತ್ತು ಶಾಂತಲಾ ರಾಧಾಕೃಷ್ಣ ಪ್ರಶಸ್ತಿ ಪ್ರದಾನ:** ಉದ್ಘಾಟನೆ-ಆರೋಗ್ಯ ಸಚಿವ ಕೆ.ಸುಧಾಕರ್, ಅತಿಥಿಗಳು- ಆರೋಗ್ಯ ಇಲಾಖೆ ನಿರ್ದೇಶಕಿ ಎಂ.ಇಂಧುಮತಿ, ಅಂಗವಿಕಲರ ಕಲ್ಯಾಣ ಇಲಾಖೆ ನಿರ್ದೇಶಕಿ ಕೆ.ಎಸ್.ಲತಾಕುಮಾರಿ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರಭಟ್ಟ, ನರ ಸಮಸ್ಯೆ ಇರುವ ಮಕ್ಕಳ ಪುನವರ್ಸತಿ ಮತ್ತು ಅಭಿವೃದ್ಧಿ ಕೇಂದ್ರದ ನಿರ್ದೇಶಕ ಚಿತ್ತರಂಜನ್, ಆಯೋಜನೆ- ಎಸ್‌ಜಿಎಸ್ ವಾಗ್ದೇವಿ ಸೆಂಟರ್ ಫಾರ್ ರಿಹ್ಯಾಬಿಲಿಟೇಷನ್ ಇಂಪೇರ್ಡ್, ಸ್ಥಳ- ಎಸ್‌ಜಿಎಸ್ ವಾಗ್ದೇವಿ ಸೆಂಟರ್, ಬೆಳಿಗ್ಗೆ 10.30

**ಕರ್ನಾಟಕದ ಸ್ವಾತಂತ್ರ್ಯ ಮತ್ತು ಏಕೀಕರಣ ಇತಿಹಾಸ ಕುರಿತ ವಿಚಾರ ಸಂಕಿರಣ:** ಉದ್ಘಾಟನೆ- ಮಲ್ಲೇಪುರಂ ಜಿ. ವೆಂಕಟೇಶ್, ಪ್ರಾಸ್ತಾವಿಕ ನುಡಿ- ಡಾ.ಎಂ. ಕೊಟ್ರೇಶ್, ಅತಿಥಿಗಳು- ಕೇಂದ್ರ ಸಾಹಿತ್ಯ ಅಕಾಡೆಮಿ ಸಂಚಾಲಕ ಸರಜೂ ಕಾಟ್ಕರ್, ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಗವಿಸಿದ್ದಯ್ಯ, ಹಿರಿಯ ಸಹಾಯಕ ನಿರ್ದೇಶಕ ಡಾ.ಸದಾನಂದ ನೆಲ್ಕುದ್ರಿ, ಆಯೋಜನೆ-ರಾಜ್ಯ ಪತ್ರಾಗಾರ ಇಲಾಖೆ ಮತ್ತು ಕನ್ನಡ ಅಸೋಸಿಯೇಷನ್ ಇಟಲಿ, ಸ್ಥಳ- ಜೈನ್ ವಿಶ್ವವಿದ್ಯಾಲಯದ ಸಭಾಂಗಣ, ಬೆಳಿಗ್ಗೆ 10.30

**ಭಾರತ-ಜಪಾನ್ ಸ್ನೇಹ ಸಂಬಂಧದ 70ನೇ ವಾರ್ಷಿಕೋತ್ಸವ:** ಅತಿಥಿಗಳು- ಕೌನ್ಸಿಲ್ ಜನರಲ್ ಅಕಿಕೊ ಸುಗಿತ, ಸ್ಥಳ- ಶಾಂತಿನಿಕೇತನ ಶಾಲೆ, ಬೆಳಿಗ್ಗೆ 10.30

ಆರ್.ಎ.ಸುಧಾ ಅವರ ವನ್ಯಜೀವಿ ಚಿತ್ರಗಳ ಪ್ರದರ್ಶನ, ಸ್ಥಳ- ಬೆಂಗಳೂರು ಆರ್ಟ್ ಗ್ಯಾಲರಿ, ಜಯನಗರ, ಬೆಳಿಗ್ಗೆ 10.30

**ದ್ರಾಕ್ಷಿ -ಕಲ್ಲಂಗಡಿ ಮಾರಾಟ ಮೇಳ:** ಉದ್ಘಾಟನೆ- ತೋಟಗಾರಿಕಾ ಸಚಿವ ಮುನಿರತ್ನ, ವಿಶೇಷ ಆಹ್ವಾನಿತರು- ಶಾಸಕ ರಾಮಲಿಂಗಾರೆಡ್ಡಿ, ಅಧ್ಯಕ್ಷತೆ-ಶಾಸಕ ಉದಯ ಗರುಡಾಚಾರ್, ಆಯೋಜನೆ- ಹಾಪ್‌ಕಾಮ್ಸ್, ಸ್ಥಳ- ಪ್ರಧಾನ ಕಚೇರಿ ಹಾಪ್‌ಕಾಮ್ಸ್ ಆವರಣ, ಲಾಲ್‌ಬಾಗ್, ಬೆಳಿಗ್ಗೆ 11

**ವಿಶ್ವ ತ್ಯಾಜ್ಯ ಆಯುವವರ ದಿನಾಚರಣೆ:** ಭಾಗವಹಿಸುವವರು- ವಸತಿ ಸಚಿವ ವಿ.ಸೋಮಣ್ಣ, ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಶಾಸಕಿ ಸೌಮ್ಯರೆಡ್ಡಿ, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಆಯೋಜನೆ- ತ್ಯಾಜ್ಯ ಶ್ರಮಿಕ ಸಂಘಟನೆ, ಸ್ಥಳ-ಕೊಂಡಜ್ಜಿ ಬಸಪ್ಪ ಭವನ, ಬೆಳಿಗ್ಗೆ 11

**ಬಿಎಂಎಸ್ ಆಸ್ಪತ್ರೆಯ ಸಂಸ್ಥಾಪನಾ ದಿನ ಮತ್ತು ಹೊಸ ಬ್ಲಾಕ್ ಉದ್ಘಾಟನೆ:** ಉದ್ಘಾಟನೆ- ಆರೋಗ್ಯ ಸಚಿವ ಕೆ.ಸುಧಾಕರ್, ಅತಿಥಿಗಳು-ಸಂಸದ ತೇಜಸ್ವಿಸೂರ್ಯ, ಶಾಸಕ ರವಿ ಸುಬ್ರಹ್ಮಣ್ಯ, ವಿಧಾನ ಪರಿಷತ್ತಿನ ಸದಸ್ಯ ಯು.ಬಿ.ವೆಂಕಟೇಶ್, ಬಿಬಿಎಂಪಿ ಆರೋಗ್ಯಾಧಿಕಾರಿ ಡಾ.ಶಿವಕುಮಾರ್, ಆಯೋಜನೆ- ಬಿಎಂಎಸ್ ಆಸ್ಪತ್ರೆ, ಸ್ಥಳ- ಬಿಎಂಎಸ್ ಆಸ್ಪತ್ರೆ, ಬೆಳಿಗ್ಗೆ 11

**ಜಲಗಾರ ನಾಟಕ ಪ್ರದರ್ಶನ:** ಆಯೋಜನೆ- ಸಚಿವಾಲಯ ಕ್ಲಬ್, ಸ್ಥಳ- ಸಚಿವಾಲಯ ಕ್ಲಬ್‌ನ ಚನ್ನಬಸವಪ್ಪ ಸಭಾಂಗಣ, ಮಧ್ಯಾಹ್ನ 1.35

**ವಿದ್ವಾನ್ ಸುದರ್ಶನ ಭಟ್ ಅವರಿಂದ ಶ್ರೀಮದ್ ಭಗವತ ಸಪ್ತಾಹ ಪ್ರವಚನ ಕಾರ್ಯಕ್ರಮ:** ಸ್ಥಳ-ಉಡುಪಿ ಶ್ರೀ ಪಾಲಿಮಾರು ಮಠ, ಮಲ್ಲೇಶ್ವರ, ಸಂಜೆ 5

**ಕುವೆಂಪು ಶ್ರೀರಾಮಾಯಣ ದರ್ಶನಂ ಓದು:** ಕಾವ್ಯ ವಾಚನ- ಕೆ.ಎನ್. ಗಣೇಶಯ್ಯ, ಅಧ್ಯಕ್ಷತೆ- ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ, ಅತಿಥಿಗಳು- ಕನ್ನಡ ಯುವಜನ ಸಂಘದ ಅಧ್ಯಕ್ಷ ಜಗದೀಶ್ ರೆಡ್ಡಿ, ಹಂಪಿ ವಿಶ್ವವಿದ್ಯಾಲಯದ ಡಾ.ರಾಜ್‌ಕುಮಾರ್ ಅಧ್ಯಯನ ಕೇಂದ್ರದ ಮುಖ್ಯಸ್ಥ ಕೆ.ಸಿ. ಶಿವಾರೆಡ್ಡಿ, ಆಯೋಜನೆ- ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ, ಸ್ಥಳ- ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6

## ಗ್ರಾಮಸ್ಥರ ಆರೋಪ, ಜಮೀನು ವಾಪಸ್ ಪಡೆಯಲು ಆಗ್ರಹ

# ‘ಸರ್ಕಾರಿ ಜಾಗದಲ್ಲಿ ಅಕ್ರಮ ಬಡಾವಣೆ’

• ಡಿ.ಸುರೇಶ್

**ಯಲಹಂಕ:** ತಾಲ್ಲೂಕಿನ ಜಾಲ ಹೋಬಳಿಯ ಮಾರೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಂ.ಹೊಸಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಬಡಾವಣೆ ನಿರ್ಮಿಸಲಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲಿಸಿ, ಅಕ್ರಮವನ್ನು ತಡೆಗಟ್ಟುವ ಜತೆಗೆ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

‘ಆಂಧ್ರಪ್ರದೇಶ ಮೂಲದ ಶ್ರೀನಿವಾಸ್ ಎನ್ನುವವರು ಎಂ.ಹೊಸೂರು ಗ್ರಾಮ ವ್ಯಾಪ್ತಿಯಲ್ಲಿ ಸರ್ವೆ ನಂ.167ರಲ್ಲಿ ಸುಮಾರು 2.03 ಎಕರೆ ಜಮೀನಿನಲ್ಲಿ ಕಾನೂನುಬಾಹಿರವಾಗಿ ಬಡಾವಣೆ ನಿರ್ಮಿಸಿ, ಮಾರಾಟ ಮಾಡಿದ್ದದು, ಈಗ ಪಕ್ಕದ ಗೋಮಾಳದ ಸರ್ವೆ ನಂ. 89ರಲ್ಲಿ ಸುಮಾರು 3ಎಕರೆಯಲ್ಲಿ ಅಕ್ರಮ ಬಡಾವಣೆ ನಿರ್ಮಾಣ, ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ಬಡಾವಣೆ ನಿರ್ಮಿಸುತ್ತಿರುವ ಜಾಗದ ನಕಲಿ ಖಾತೆ ಮತ್ತು ಪಹಣಿಯನ್ನು ಒಂದು ತಿಂಗಳಿನಿಂದೀಚೆಗೆ ಸೃಷ್ಟಿಸಿದ್ದು, ಇದರಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ ನಿಯಮ ಉಲ್ಲಂಘನೆಯಾಗಿದೆ’ ಎಂದು ಮಂಚಪ್ಪನಹಳ್ಳಿ ಗ್ರಾಮದ ನಿವಾಸಿ ಎಂ.ಸತೀಶ್ ಆರೋಪಿಸಿದ್ದಾರೆ.

ಎಂ.ಹೊಸಹಳ್ಳಿಯಲ್ಲಿ ಬಡಾವಣೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ

‘ಈ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳು, ಸಂಬಂಧಪಟ್ಟ ಸಚಿವರಿಗೆ ದಾಖಲೆ ಸಮೇತ ದೂರು ನೀಡಿ ಕ್ರಮಕ್ಕೆ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ಅಧಿಕಾರಿಗಳು ತಕ್ಷಣ ಜಾಗದ ಸರ್ವೆ ಕಾರ್ಯ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

‘ಸಾತನೂರು ಗ್ರಾಮದ ಸರ್ವೆ ನಂ. 54ರಲ್ಲಿ ಪರಿಶಿಷ್ಟರು ಮತ್ತು ಮೂಲ ರೈತರಿಗೆ ಮಂಜೂರಾದ ಗೋಮಾಳ ಜಮೀನು ಮತ್ತು ಬೈಯಪ್ಪನಹಳ್ಳಿ ಗ್ರಾಮದ ಸರ್ವೆ ನಂ. 34ರಲ್ಲಿ ಪೋಡಿ, ಭೂಪರಿವರ್ತನೆ, ವಲಯ ಬದಲಾವಣೆ ಮತ್ತು ನಕ್ಷೆ ಮಂಜೂರಾತಿ ಇಲ್ಲದೆ ಅಕ್ರಮ ಬಡಾವಣೆಗಳು ಎಗ್ಗಿಲ್ಲದೆ ತಲೆಯೆತ್ತಿವೆ’ ಎಂದು ಎಂ.ಸತೀಶ್ ದೂರಿದ್ದಾರೆ.

‘ಬಂಡಿಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.14 ಮತ್ತು ಸುತ್ತಮುತ್ತಲಿನ ಜಮೀನಿನಲ್ಲಿ ಅಕ್ರಮ ಬಡಾವಣೆ ನಿರ್ಮಿಸಲಾಗಿದೆ. ಇದಕ್ಕೆ ನಮೂನೆ 9 ಮತ್ತು 10 ರಲ್ಲಿ ನಕಲಿ ಖಾತೆ ಸೃಷ್ಟಿಸಿ, ಸರ್ಕಾರ ಮತ್ತು ಸಾರ್ವಜನಿಕರಿಗೆ ವಂಚಿಸಿ ನಿವೇಶನಗಳನ್ನು ಮಾರಾಟ ಮಾಡಲಾಗುತ್ತಿದೆ’ ಎಂದು ದೂರಿದ್ದಾರೆ.

‘ಗೋಮಾಳ ಜಾಗದಲ್ಲಿ ಅಕ್ರಮವಾಗಿ ಬಡಾವಣೆ ನಿರ್ಮಿಸುತ್ತಿರುವುದನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆಯಬೇಕು. ಬಡವರಿಗೆ ನಿವೇಶನ, ಶಾಲೆ, ಆಟದ ಮೈದಾನ ಮತ್ತಿತರ ಸಾರ್ವಜನಿಕ ಉದ್ದೇಶಕ್ಕೆ ಜಾಗ ಮೀಸಲಿಡಬೇಕು’ ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮುನಿವೆಂಕಟಸ್ವಾಮಿ ಮನವಿ ಮಾಡಿದ್ದಾರೆ.

### ‘ಅತಿಕ್ರಮಣಕ್ಕೆ ಅವಕಾಶ ಇಲ್ಲ’

‘ಹೊಸಹಳ್ಳಿ ಗ್ರಾಮದ ಸರ್ಕಾರಿ ಜಾಗದಲ್ಲಿ ಅನಧಿಕೃತ ಬಡಾವಣೆ ನಿರ್ಮಿಸುತ್ತಿರುವ ಬಗ್ಗೆ ಗ್ರಾಮಸ್ಥರು ಹಾಗೂ ಮಾಜಿ ಶಾಸಕರೊಬ್ಬರಿಂದ ದೂರು ಬಂದಿದೆ. ಒತ್ತುವರಿಯಾಗಿದೆ ಎಂದು ಕಂಡು ಬಂದ ಜಾಗವನ್ನು ಸದ್ಯಕ್ಕೆ ತೆರವುಗೊಳಿಸಲಾಗಿದೆ. ಶೀಘ್ರದಲ್ಲೇ ಉಳಿದ ಜಾಗದ ಸರ್ವೆ ಕಾರ್ಯ ನಡೆಸಿ, ಪೂರ್ಣಪ್ರಮಾಣದಲ್ಲಿ ತೆರವುಗೊಳಿಸಲಾಗುವುದು. ಯಾವುದೇ ಕಾರಣಕ್ಕೂ ಸರ್ಕಾರಿ ಜಾಗದ ಅತಿಕ್ರಮಣಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಯಲಹಂಕ ತಾಲ್ಲೂಕು ತಹಶೀಲ್ದಾರ್ ಕೆ.ನರಸಿಂಹಮೂರ್ತಿ ತಿಳಿಸಿದ್ದಾರೆ.

# ಎಂಬಿಎ ಪದವೀಧರನಿಗೆ ಆಸರೆಯಾದ 'ಇಡ್ಲಿ'

● ನವೀನ್ ಕುಮಾರ್ ಜಿ.

**ಬೆಂಗಳೂರು:** 'ಇಡ್ಲಿ'... ಇದು ದಕ್ಷಿಣ ಭಾರತದವರ ಅತ್ಯಂತ ಜನಪ್ರಿಯ ಲಘು ಉಪಾಹಾರ. ಎಂ.ಕಾಂ., ಎಂಬಿಎ ವ್ಯಾಸಂಗ ಮಾಡಿ ಕೈತುಂಬ ಸಂಬಳ ದೊರೆಯುವ ಉದ್ಯೋಗ ಗಿಟ್ಟಿಸಿಕೊಂಡಿದ್ದರೂ ಇಡ್ಲಿಯನ್ನೇ ಮಾರಾಟ ಮಾಡಿ ಬದುಕು ಕಟ್ಟಿಕೊಳ್ಳುವ ಮೂಲಕ ಕಿರು ಉದ್ಯಮದಲ್ಲಿ ಯಶಸ್ಸು ಸಾಧಿಸಿದವರು ಕೃಷ್ಣನ್ ಮಹಾದೇವನ್.

ವಿಜ್ಞಾನ ನಗರದಲ್ಲಿ 'ಅಯ್ಯರ್ ಇಡ್ಲಿ' ಹೆಸರಿನಲ್ಲಿ ಹೋಟೆಲ್ ನಡೆಸುತ್ತಿರುವ ಕೃಷ್ಣನ್ ಅವರು, ತಂದೆ ಆರಂಭಿಸಿದ ಉದ್ಯಮವನ್ನು ಮುನ್ನಡೆಸಲು ಖಾಸಗಿ ಕಂಪನಿಯ ನೌಕರಿ ತ್ಯಜಿಸಿದರು. ಅದಕ್ಕೂ ಮೊದಲು ಎಂಟು ವರ್ಷ ಉಪನ್ಯಾಸಕರಾಗಿ ಕೆಲಸ ಮಾಡಿದ್ದರು.

ತಾಯಿ ಉಮಾ ಅವರ ಸಹಕಾರದಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿರುವ ಇವರು ಕೋವಿಡ್ ಸಂಕಷ್ಟದ ಕಾಲದಲ್ಲಿ ನೌಕರಿ ಕಳೆದುಕೊಂಡ ಹಲವರಿಗೆ ಇದೇ ಉದ್ಯಮ ಆರಂಭಿಸಲು ಮಾರ್ಗದರ್ಶನ ನೀಡಿದ್ದಾರೆ. ತಾವು ಸಿದ್ಧಪಡಿಸುವ ಇಡ್ಲಿ ಹಾಗೂ ಚಟ್ನಿಯ ರೆಸಿಪಿಯನ್ನೂ ಹೇಳಿಕೊಟ್ಟಿದ್ದಾರೆ. ಈ ಮೂಲಕ ಸಣ್ಣದಾಗಿ ಹೋಟೆಲ್ ಉದ್ಯಮ ಆರಂಭಿಸುವವರಿಗೆ ಮಾರ್ಗದರ್ಶಕರಾಗಿದ್ದಾರೆ.

'ಬೇರೆ ರಾಜ್ಯದವರೂ ಕೋವಿಡ್ ಕಾಲದಲ್ಲಿ ಈ ಉದ್ಯಮ ಆರಂಭಿಸುವ ಬಗ್ಗೆ ಮಾರ್ಗದರ್ಶನ ಪಡೆದಿದ್ದು, ತಮ್ಮ ಊರಲ್ಲಿ ಇಡ್ಲಿ ವ್ಯಾಪಾರ ಆರಂಭಿಸಿದ್ದಾರೆ. ಯಾವುದೇ ಉದ್ಯಮ ಇರಲಿ ಆರಂಭದಲ್ಲಿ ಸಣ್ಣಮಟ್ಟದಲ್ಲಿ ಆರಂಭಿಸಬೇಕು. ಆಗ ಖರ್ಚು ಕಡಿಮೆ ಇರುತ್ತೆ, ಗುಣಮಟ್ಟದ ಆಹಾರ ನೀಡಲು ಸಾಧ್ಯವಾಗುತ್ತದೆ. ಬಳಿಕ ಹಂತ ಹಂತವಾಗಿ ಬೆಳೆಯಬೇಕು' ಎಂದು ಕೃಷ್ಣನ್ ಹೇಳುತ್ತಾರೆ.

'ಆರಂಭದಲ್ಲಿ ತಂದೆಯವರು ಇಡ್ಲಿ ಹಾಗೂ ದೋಸೆ ಹಿಟ್ಟು ಮಾರಾಟ ಆರಂಭಿಸಿದ್ದರು. ಆಗ ಶಾಲೆಗೆ ಹೋಗುತ್ತಿದ್ದ ನಾನೂ ಅಂಗಡಿಗಳಿಗೆ ತೆರಳಿ ಹಿಟ್ಟು ಮಾರುತ್ತಿದ್ದೆ. 2001ರಲ್ಲಿ ಸಣ್ಣ ಹೋಟೆಲ್ ಆರಂಭಿಸಿದೆವು. 2009ರಲ್ಲಿ ತಂದೆ ತೀರಿಕೊಂಡ ಬಳಿಕ ತಾಯಿ ಹಾಗೂ ನಾನು ಈ ಉದ್ಯಮವನ್ನು ಮುನ್ನಡೆಸಿದೆವು. ನಾನು ಕಾಲೇಜಿನಲ್ಲಿ ಓದುತ್ತಿರುವಾಗಲೂ ಅನಂತರ ಕೆಲಸಕ್ಕೆ ಸೇರಿದ ಬಳಿಕವೂ ಕೆಲಸದ ಜೊತೆಗೆ ಈ ಉದ್ಯಮವನ್ನೂ ಮುನ್ನಡೆಸಿದ್ದೇನೆ. 2020ರಿಂದ ಪೂರ್ಣಪ್ರಮಾಣದಲ್ಲಿ ಇದರಲ್ಲೇ ತೊಡಗಿಸಿಕೊಂಡಿದ್ದೇನೆ' ಎಂದು ಅವರು ಉದ್ಯಮ ಬೆಳೆದು ಬಂದ ಬಗೆಯನ್ನು ವಿವರಿಸುತ್ತಾರೆ.

ಬೆಳಿಗ್ಗೆ 6.30ರಿಂದ 11.30ರವರೆಗೆ ಹಾಗೂ ಸಂಜೆ 6ರಿಂದ 9ರ ವರೆಗೆ 'ಅಯ್ಯರ್ ಇಡ್ಲಿ' ಹೋಟೆಲ್ ತೆರೆದಿರುತ್ತದೆ. ಭಾನುವಾರ ಸಂಜೆ ಇರುವುದಿಲ್ಲ. ಮೊದಲು ನಿತ್ಯ 200 ಇಡ್ಲಿಗಳು ವ್ಯಾಪಾರವಾಗುತ್ತಿತ್ತು. ಈಗ ತಿಂಗಳಿಗೆ ಅಂದಾಜು 50 ಸಾವಿರಕ್ಕೂ ಹೆಚ್ಚು ಇಡ್ಲಿ ಮಾರಾಟ ಮಾಡುವವರೆಗೆ ಉದ್ಯಮ ಬೆಳೆದಿದೆ. ಇವರ ಹೋಟೆಲ್‌ಗೆ ಶೇ 90ರಷ್ಟು ಗ್ರಾಹಕರು ಪಾರ್ಸೆಲ್ ಒಯ್ಯುವವರು.

'ನಾವು 19 ವರ್ಷ ಬರೀ ಇಡ್ಲಿ ಮತ್ತು ಚಟ್ನಿ ಮಾತ್ರ ಮಾರಾಟ ಮಾಡಿದ್ದೇವೆ. ಇದೀಗ ಮೆನುಗೆ 'ಇಡ್ಲಿ-ವಡೆ, ಕೇಸರಿ ಭಾತ್, ಖಾರಾಬಾತ್' ಸೇರ್ಪಡೆಯಾಗಿದೆ. 'ಗ್ರಾಹಕರು ಆಟೊದಲ್ಲೂ ಬರುತ್ತಾರೆ, ಬೆಂಜ್ ಕಾರಲ್ಲೂ ಬರುತ್ತಾರೆ. ಎಲ್ಲರಿಗೂ ಒಂದೇ ರೀತಿಯ ಉಪಚಾರ' ಎನ್ನುತ್ತಾರೆ ಕೃಷ್ಣನ್ ಅವರು.

ನಾವು ಆಹಾರದ ಗುಣಮಟ್ಟ ಹಾಗೂ ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇವೆ. ಇದುವೇ ಉದ್ಯಮದ ಯಶಸ್ಸಿನ ಗುಟ್ಟು

**ಕೃಷ್ಣನ್ ಮಹಾದೇವನ್**
'ಅಯ್ಯರ್ ಇಡ್ಲಿ' ಮಾಲೀಕ

'ಅಯ್ಯರ್ ಇಡ್ಲಿ' ಹೋಟೆಲ್‌ನಲ್ಲಿ ಇಡ್ಲಿ ಸವಿಯಲು ಸರದಿಯಲ್ಲಿ ನಿಂತಿದ್ದ ಗ್ರಾಹಕರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

**ಹೊಸ ಬೆಳಕು**

## ಮದ್ಯದ ಅಮಲಿನಲ್ಲಿ ಗಲಾಟೆ: ವ್ಯಕ್ತಿ ಕೊಲೆ

**ಬೆಂಗಳೂರು:** ಮದ್ಯದ ಅಮಲಿನಲ್ಲಿ ನಡೆದ ಸ್ನೇಹಿತರ ಗಲಾಟೆಯಲ್ಲಿ ವ್ಯಕ್ತಿಯೊಬ್ಬರು ಕೊಲೆಯಾಗಿರುವ ಘಟನೆ ಬಾಗಲಗುಂಟೆ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಬಾಗಲಗುಂಟೆಯ ನಿವಾಸಿ ಮೋಹನ್ (45) ಕೊಲೆಗೀಡಾದವರು.

'ಮೃತ ಮೋಹನ್ ಮಂಗಳವಾರ ಹೆಸರಘಟ್ಟ ರಸ್ತೆಯ ಬಾಗಲಗುಂಟೆಯಲ್ಲಿರುವ ಬಾರ್‌ಗೆ ಸ್ನೇಹಿತರಾದ ಕಿಶೋರ್, ಪವನ್ ಹಾಗೂ ಇತರ ಇಬ್ಬರ ಜೊತೆಗೆ ತೆರಳಿದ್ದರು'.

'ಬಾರ್‌ನಿಂದ ಹೊರಬರುವಾಗ ಯಾವುದೋ ವಿಚಾರಕ್ಕೆ ಶುರುವಾದ ಗಲಾಟೆ ತಾರಕಕ್ಕೇರಿದ್ದು, ನಾಲ್ವರು ಸ್ನೇಹಿತರು ದೊಣ್ಣೆಯಿಂದ ಹಲ್ಲೆ ನಡೆಸಿದ್ದರು. ತೀವ್ರ ಗಾಯಗೊಂಡಿದ್ದ ಮೋಹನ್ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

## ವರದಿಗಾರ ಸೇರಿ ಐವರ ಬಂಧನ

**ಬೆಂಗಳೂರು:** ಸ್ಪಾ ಮಾಲೀಕರೊಬ್ಬರನ್ನು ಸುಲಿಗೆ ಮಾಡಿರುವ ಆರೋಪದಡಿ ಪತ್ರಿಕೆಯೊಂದರ ವರದಿಗಾರ, ಗೃಹರಕ್ಷಕ ದಳದ ಸಿಬ್ಬಂದಿ ಸೇರಿ ಐದು ಮಂದಿಯನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಸ್ಟಮ್ ಆ್ಯಂಡ್ ಎಕ್ಸ್ಪ್ರೆಸ್' ಪತ್ರಿಕೆಯ ವರದಿಗಾರ ಎನ್ನಲಾಗಿರುವ ಸೈಯದ್ ಖಲೀಂ (28), ಗೃಹರಕ್ಷಕ ದಳದ ಸಿಬ್ಬಂದಿಯಾಗಿರುವ ಸಂಪಂಗಿರಾಮ್ (31), ಆಶೀಫ್ (27), ಆನಂದ್‌ರಾಜ್ (30), ವಿನಾಯಕ್ (28) ಬಂಧಿತರು.

'ಆರೋಪಿಗಳು ರಾಮಮೂರ್ತಿನಗರ ಠಾಣಾ ವ್ಯಾಪ್ತಿಯ ಜಯಂತಿ ನಗರ ಮುಖ್ಯರಸ್ತೆಯಲ್ಲಿರುವ ಸ್ಪಾವೊಂದರ ಮಾಲೀಕರ ಬಳಿ ತೆರಳಿದ್ದರು. ಗುರುತಿನ ಚೀಟಿ ತೋರಿಸಿ 'ವರದಿಗಾರ' ಎಂದು ಪರಿಚಯಿಸಿಕೊಂಡಿದ್ದ ಸೈಯದ್ ಖಲೀಂ, ಅಕ್ರಮವಾಗಿ ಮಸಾಜ್ ಪಾರ್ಲರ್ ನಡೆಸುತ್ತಿರುವ ದೂರು ಬಂದಿದ್ದು, ಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುತ್ತೇವೆ ಎಂದು ಬೆದರಿಕೆ ಹಾಕಿದ್ದ. ಬಳಿಕ ₹60 ಸಾವಿರ ನಗದು ಹಾಗೂ ಆನ್‌ಲೈನ್ ಪಾವತಿ ಮೂಲಕ ₹1 ಲಕ್ಷ ಅನ್ನು ಪಡೆದಿದ್ದರು. ಈ ಬಗ್ಗೆ ಸ್ಪಾ ಮಾಲೀಕ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

## ವಂಚನೆ: ಆರೋಪಿ ಬಂಧನ

**ಬೆಂಗಳೂರು:** 'ಪೇಟಿಎಂ ಕಂಪನಿಯ ಪ್ರತಿನಿಧಿ ಎಂದು ಹೇಳಿಕೊಂಡು, ಕ್ಯಾಶ್‌ಬ್ಯಾಕ್ ಕೊಡಿಸುವುದಾಗಿ ಜನರಿಗೆ ವಂಚಿಸುತ್ತಿದ್ದ ಆರೋಪದಡಿ ಬೆಟ್ಟಹಲಸೂರು ನಿವಾಸಿ ದೀಪನ್ ಚಕ್ರವರ್ತಿ (24) ಎಂಬವನನ್ನು ಈಶಾನ್ಯ ವಿಭಾಗದ ಸೆನ್ (ಸಿಇಎನ್) ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಪ್ರತ್ಯೇಕ ಮೊಬೈಲ್ ಸಂಖ್ಯೆಗಳಿಂದ ಕರೆ ಮಾಡಿ, ಪೇಟಿಎಂ ಪ್ರತಿನಿಧಿ ರಾಜೇಶ್ ಎಂದು ಪರಿಚಯಿಸಿಕೊಳ್ಳುತ್ತಿದ್ದ. ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡರೆ ಕ್ಯಾಶ್‌ಬ್ಯಾಕ್ ಸಿಗಲಿದೆ ಎಂದು ನಂಬಿಸಿ ಮುಂಗಡವಾಗಿ ಹಣ ಪಡೆದು ವಂಚಿಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು..

## 50 ಜನರಿಗೆ ಹುಚ್ಚುನಾಯಿ ಕಡಿತ

**ಹುಣಸೂರು:** ನಗರದಲ್ಲಿ ಹುಚ್ಚುನಾಯಿಯೊಂದು ಬುಧವಾರ 50ಕ್ಕೂ ಹೆಚ್ಚು ಜನರಿಗೆ ಕಚ್ಚಿದೆ. ಇದೇ ವೇಳೆ 100ಕ್ಕೂ ಹೆಚ್ಚು ಬೀದಿ ನಾಯಿಗಳನ್ನು ಕಚ್ಚಿ ಗಾಯಗೊಳಿಸಿದೆ.

ಇಲ್ಲಿನ ಶಬ್ಬೀರ್ ನಗರ, ನ್ಯೂ ರತ್ನಾಪುರಿ ರಸ್ತೆ, ಲಾಲ್ ಬನ್ ಬೀದಿ, ಸರಸ್ವತಿಪುರಂ ಬಡಾವಣೆಯಲ್ಲಿ ಹುಚ್ಚುನಾಯಿ ದಾಳಿಗೆ 15 ಮಕ್ಕಳು ಸೇರಿದಂತೆ 50 ಜನರು ಕಡಿತಕ್ಕೊಳಗಾಗಿದ್ದು, ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

'ನಗರದಲ್ಲಿ ಹುಚ್ಚುನಾಯಿ ಕಡಿತಕ್ಕೆ ಒಳಗಾದ ಬೀದಿನಾಯಿಗಳನ್ನು ಹಿಡಿಯುವ ಕಾರ್ಯಾಚರಣೆಯನ್ನು ಮಾರ್ಚ್ 3ರ ಗುರುವಾರ ಬೆಳಿಗ್ಗೆಯಿಂದಲೇ ಆರಂಭಿಸುತ್ತಿದ್ದು, ಪರಿಣಿತರನ್ನು ಸಂಪರ್ಕಿಸಲಾಗಿದೆ' ಎಂದು ಪರಿಸರ ಎಂಜಿನಿಯರ್ ಮತ್ತು ಪ್ರಭಾರಿ ಪೌರಾಯುಕ್ತೆ ರೂಪಾ ಹೇಳಿದರು.

# 'ಎಸ್‌ಸಿಎಸ್‌ಪಿ– ಟಿಎಸ್‌ಪಿ ಕಾಯ್ದೆ ತಿದ್ದುಪಡಿ ಭರವಸೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಎಸ್‌ಸಿಎಸ್‌ಪಿ–ಟಿಎಸ್‌ಪಿ) ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸದಂತೆ ತಡೆಯಲು ಕಾಯ್ದೆಗೆ ಅಗತ್ಯ ತಿದ್ದುಪಡಿ ತರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ ಎಂದು ವಿಧಾನ ಮಂಡಲದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ತಿಳಿಸಿದರು.

ಎಂ.ಪಿ. ಕುಮಾರಸ್ವಾಮಿ

'ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ಅನ್ಯ ಉದ್ದೇಶಕ್ಕೆ ಬಳಕೆಯಾಗುತ್ತಿದೆ' ಎಂದು ಆರೋಪಿಸಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಕುರಿತು ಬುಧವಾರ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಕಾಯ್ದೆಗೆ ಮತ್ತೆ ತಿದ್ದುಪಡಿ ತರುವ ಅಗತ್ಯ ಕುರಿತು ಬೊಮ್ಮಾಯಿ ಅವರಿಗೆ ಮನವರಿಕೆ ಮಾಡಿದ್ದೇನೆ' ಎಂದರು.

'ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7-ಡಿಗೆ ತಿದ್ದುಪಡಿ ತಂದ ಬಳಿಕ ಅನ್ಯ ಉದ್ದೇಶಕ್ಕೆ ಹಣ ಬಳಸಲು ಅವಕಾಶ ದೊರಕಿದೆ. ಅಧಿಕಾರಿಗಳು ಈ ಅವಕಾಶವನ್ನು ದುಬಳಕೆ ಮಾಡಿಕೊಳ್ಳುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ರಸ್ತೆ, ಸೇತುವೆ ನಿರ್ಮಾಣಕ್ಕೆ ಬಳಸಲಾಗುತ್ತಿದೆ. ಇದರಿಂದ ಈ ಸಮುದಾಯದ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಶೈಕ್ಷಣಿಕ ಚಟುವಟಿಕೆಗೆ ನೆರವು ನೀಡುವುದಕ್ಕೂ ಹಣದ ಕೊರತೆ ಉಂಟಾಗಿದೆ. ಈ ವಿಚಾರವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ' ಎಂದು ಹೇಳಿದರು.


## ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: jscbinfo@jscbl.com, ಶಾಖೆ: ವಿಜಯನಗರ

**ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)**

ಕೆಳಸಹಿದಾರರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ, ದಿನಾಂಕ 09–11–2021 ರಂದು ಇದ್ದಂತೆ ನೋಟೀಸ್‌ನಲ್ಲಿ ತಿಳಿಸಿರುವ ಸಾಲದ ಮೊತ್ತ ರೂ. 1,14,18,802/– (ಒಂದು ಕೋಟಿ ಹದಿನಾಲ್ಕು ಲಕ್ಷದ ಹದಿನೆಂಟು ಸಾವಿರದ ಎಂಟು ನೂರ ಎರಡು ರೂಪಾಯಿಗಳು ಮಾತ್ರ) ಅನ್ನು ಮರುಪಾವತಿ ಮಾಡುವಂತೆ ಸಾಲಗಾರರಾದ **1) ಶ್ರೀ ರಂಗನಾಥ್ ಎನ್.** ಬಿನ್ ಲೇಟ್ ನರಸಿಂಹಯ್ಯ ಜಿ. **2) ಶ್ರೀಮತಿ ರಂಗಮ್ಮ** ಲೇಟ್ ನರಸಿಂಹಯ್ಯ ಜಿ. ಇವರ ಪತ್ನಿ ಇವರಿಬ್ಬರೂ ನಂ. 06, 1ನೇ ಮಹಡಿ, ವೆಂಕಟಮ್ಮ ಕಾಂಪೌಂಡ್, 2ನೇ "ಎ" ಮುಖ್ಯರಸ್ತೆ, ಗೋವಿಂದರಾಜನಗರ, ವಿಜಯಗರ, ಬೆಂಗಳೂರು–560 040, ಇಲ್ಲಿನ ನಿವಾಸಿಗಳು, ಜಾಮೀನುದಾರರು: **ಶ್ರೀ ಸಂದೀಪ್ ಆರ್.** ಬಿನ್ ರಂಗನಾಥ್ ಎನ್. ನಂ. 06, 1ನೇ ಮಹಡಿ, ವೆಂಕಟಮ್ಮ ಕಾಂಪೌಂಡ್, 2ನೇ "ಎ" ಮುಖ್ಯರಸ್ತೆ, ಗೋವಿಂದರಾಜನಗರ, ವಿಜಯಗರ, ಬೆಂಗಳೂರು–560 040, ಇವರಿಗೆ ಕರೆ ನೀಡಿ, ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ 2002 ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 3 ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ದಿನಾಂಕ 16–11–2021 ರಂದು ಡಿಮ್ಯಾಂಡ್ ನೋಟೀಸ್ ನೀಡಿದ್ದರು.

ರಂಗನಾಥ್ ಎನ್.
S/o ಲೇಟ್ ನರಸಿಂಹಯ್ಯ ಜಿ.

ಶ್ರೀಮತಿ ರಂಗಮ್ಮ
W/o ಲೇಟ್ ನರಸಿಂಹಯ್ಯ ಜಿ.

ಶ್ರೀ ಸಂದೀಪ್ ಆರ್.
S/o ರಂಗನಾಥ್ ಎನ್.

ಇದರಂತೆ ಸಾಲಗಾರರು ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13 ರ ಉಪ ಪ್ರಕರಣ (4) ರ ಅನ್ವಯ ಇವರಿಗೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ದಿನಾಂಕ **02ನೇ ಮಾರ್ಚ್ 2022** ರಂದು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ನಿರ್ಧಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಸದರಿ ಸ್ವತ್ತಿನ ಸಂಬಂಧ ಯಾರೂ ಯಾವುದೇ ವ್ಯವಹಾರಿಸಬಾರದು, ಒಂದು ವೇಳೆ ಯಾರಾದರೂ ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹರಿಸಿದ್ದೇ, ಆದರೆ, ಅದು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ ಶಾಖೆ, ಬೆಂಗಳೂರು ಇದಕ್ಕೆ ಎಂಟಿಎಲ್–90 ರ ಸಂಬಂಧ ದಿನಾಂಕ 27–02–2022 ರಂದು ಪಾವತಿ ಮಾಡಬೇಕಾಗಿರುವ ಬಾಕಿ ಮೊತ್ತ ರೂ. 1,09,10,357/– (ಒಂದು ಕೋಟಿ ಒಂಭತ್ತು ಲಕ್ಷದ ಹತ್ತು ಸಾವಿರದ ಮೂರು ನೂರ ಐವತ್ತೇಳು ರೂಪಾಯಿಗಳು ಮಾತ್ರ) ಮತ್ತು ಇದರ ಮೇಲಿನ ಬಡ್ಡಿ ಪಾವತಿ ಮಾಡುವುದುಕ್ಕೆ ಒಳಪಟ್ಟಿರುತ್ತದೆ.

ಭದ್ರತೆಯಾಗಿ ನೀಡಿರುವ ಸ್ವತ್ತನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಕಾಲಾವಕಾಶದ ಬಗ್ಗೆ ಕಾಯ್ದೆಯ ಪ್ರಕರಣ 13 (8)ರ ಉಪಬಂಧಗಳನ್ನು ನೋಡಬೇಕಾಗಿ ಸಾಲಗಾರರಿಗೆ ಸಲಹೆ ನೀಡಲಾಗಿದೆ.

**ಈಡು ಮಾಡಿರುವ ಆಸ್ತಿಯ ವಿವರ ಮತ್ತು ಸಾಲಗಾರರು ಆಧಾರ ಮಾಡಿರುವ ಸ್ವತ್ತುಗಳ ವಿವರ**

1ನೇ ಅಡ್ಡರಸ್ತೆ, ತಿಮ್ಮೇನಹಳ್ಳಿ, ಬಿ.ಬಿ.ಎಂ.ಪಿ. ವಾರ್ಡ್ ನಂ. 36, ಬೆಂಗಳೂರು ಇಲ್ಲಿರುವ, ಪೂರ್ವ–ಪಶ್ಚಿಮ : (80+72)/2 ಅಡಿ ಮತ್ತು ಉತ್ತರ–ದಕ್ಷಿಣ : (41+41)/2 ಅಡಿ ಹೀಗೆ ಒಟ್ಟಾರೆ 3116 ಚದರ ಅಡಿ ವಿಸ್ತೀರ್ಣವುಳ್ಳ ಹೊಸ ನಂ. 4/1–1 ಒಳಗೊಂಡಿರುವ ಸಂಪೂರ್ಣರ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು: ಪೂವಕ್ಕೆ : ರಸ್ತೆ, ಪಶ್ಚಿಮಕ್ಕೆ : ಗೋವಿಂದಪ್ಪನವರ ಮನೆ, ಉತ್ತರಕ್ಕೆ : 2ನೇ ಭಾಗ, 2ನೇ ಷೆಡ್ಯೂಲ್ ಸ್ವತ್ತು 4ನೇ ಐಟಂ ಸ್ವತ್ತಿನ ಕಾರ್ಪೊರೇಷನ್ ನಂ. 4, ದಕ್ಷಿಣಕ್ಕೆ : ರಸ್ತೆ.

ಸಹಿ/–
ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ಸ್ಥಳ : ಬೆಂಗಳೂರು
ದಿನಾಂಕ : 02/03/2022



## ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತ ಭವನ, 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ,
ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104
ದೂರವಾಣಿ: 23300497–41159606 ಫ್ಯಾಕ್ಸ್: 23359600, Email: jscbinfo@jscbl.com

**ಟೆಂಡರ್/ಸ್ಥಿರಾಸ್ತಿಯ ಬಹಿರಂಗ ಹರಾಜು**

ಸೆಕ್ಯೂರಿಟೈಸೇಶನ್ ಮತ್ತು ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರಡಿಯಲ್ಲಿ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ: ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104 ರ ಇವರಿಗೆ ಈ ಸಾಲಗಾರರಿಂದ ಬರಬೇಕಾದ ಸಾಲ ವಸೂಲಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಾಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

**ಸಾಲಗಾರರ ಹೆಸರು ಮತ್ತು ವಿಳಾಸ**

ಅದಾಗಿ, ಸಾಲಗಾರರಾದ **ಶ್ರೀ ವಿಜಯಕುಮಾರ್ ಆರ್.,** ಬಿನ್ ಲೇಟ್ ಎನ್. ರಂಗಪ್ಪ, ನಂ. 13/1, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ಎಸ್.ವಿ.ಜಿ. ನಗರ, ಬೆಂಗಳೂರು –560 072, **ಶ್ರೀಮತಿ ಜಯಮ್ಮ,** ಲೇಟ್ ಎನ್. ರಂಗಪ್ಪನವರ ಪತ್ನಿ, ನಂ. 80/6, 22ನೇ ಅಡ್ಡರಸ್ತೆ, ಗೋವಿಂದರಾಜನಗರ, ವಿಜಯನಗರ, ಬೆಂಗಳೂರು – 560 040, ಇವರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು, ಇದರಿಂದ ಪಡೆದಿರುವ ಸಾಲವನ್ನು ಮರುಪಾವತಿ ಮಾಡಲು ವಿಫಲರಾಗಿದ್ದಾರೆ. ಇವರು ಒಪ್ಪಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಸ್ವತಃ ಪಾವತಿ ಮಾಡಬೇಕಾಗಿರುವ ಒಟ್ಟು ಬಾಕಿ ಮೊತ್ತ ದಿನಾಂಕ 27–02–2022 ರಂದು ಇದ್ದಂತೆ ರೂ. 35,07,705/– (ಮೂವತ್ತು ಐದು ಲಕ್ಷದ ಏಳು ಸಾವಿರದ ಏಳುನೂರ ಐದು ರೂಪಾಯಿಗಳು ಮಾತ್ರ) ಜೊತೆಗೆ ಇದರ ಮೇಲಿನ ಅನ್ವಯವಾಗುವ ದರದಲ್ಲಿನ ಬಡ್ಡಿ ಮತ್ತು ಖರ್ಚು ವೆಚ್ಚಗಳು.

ಶ್ರೀ ವಿಜಯಕುಮಾರ್ ಆರ್.
ಬಿನ್ ಲೇಟ್ ಎನ್. ರಂಗಪ್ಪ

ಶ್ರೀಮತಿ ಜಯಮ್ಮ
W/o. ಲೇಟ್ ಎನ್. ರಂಗಪ್ಪ

| ಹರಾಜಿಗಿರುವ ಸ್ಥಿರಾಸ್ತಿಯ ವಿವರ | ಬಹಿರಂಗ ಹರಾಜು ನಡೆಯುವ ದಿನಾಂಕ ಹಾಗೂ ಸಮಯ ಸ್ಥಳ | ಕನಿಷ್ಠ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇ.ಎಂ.ಡಿ) |
|---|---|---|
| **ಶ್ರೀಮತಿ ಜಯಮ್ಮ, ಲೇಟ್ ಎನ್. ರಂಗಪ್ಪನವರ ಪತ್ನಿ, ಇವರಿಗೆ ಸೇರಿದ ಸ್ವತ್ತು,** 2ನೇ ಮುಖ್ಯರಸ್ತೆ, ತಿಮ್ಮೇನಹಳ್ಳಿ, ಗೋವಿಂದರಾಜನಗರ, ವಾರ್ಡ್ ನಂ. 36, ಹೊಸ ವಾರ್ಡ್ ನಂ. 104, ಪಿ.ಐ.ಡಿ. ನಂ. 36–49–6, ಹೊಸ ಪಿಐಡಿ ನಂ. 127–ಡಬ್ಲ್ಯೂ0107–9, ಬೆಂಗಳೂರು ಇಲ್ಲಿರುವ, ಪೂರ್ವ–ಪಶ್ಚಿಮಕ್ಕೆ : 50 ಅಡಿ ಮತ್ತು ಉತ್ತರ ದಕ್ಷಿಣಕ್ಕೆ : 33 ಅಡಿ ವಿಸ್ತೀರ್ಣವುಳ್ಳ ಮುನಿಸಿಪಲ್ ಖಾತಾ ನಂ. 06 (ಹಳೆ ನಂ. 80) ಒಳಗೊಂಡಿರುವ ಸ್ಥಿರಾಸ್ತಿ ಮನೆ ಸ್ವತ್ತು ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು : ಪೂರ್ವಕ್ಕೆ :ರಸ್ತೆ, ಪಶ್ಚಿಮಕ್ಕೆ : ಸ್ವತ್ತಿನ ಸಂ. 06, ಉತ್ತರಕ್ಕೆ : ಖಾಸಗಿ ಸ್ವತ್ತು, ದಕ್ಷಿಣಕ್ಕೆ : ಸ್ವತ್ತಿನ ಸಂ. 02. | ದಿನಾಂಕ: 07/04/2022, ಗುರುವಾರ, ಮಧ್ಯಾಹ್ನ 12.30 ಘಂಟೆಗೆ<br>ಸ್ಥಳ: ನಿಗದಿತ ಸ್ವತ್ತಿನ ಆವರಣದಲ್ಲಿ | ರೂ.2,10,10,000/– (ರೂ ಎರುಡು ಕೋಟಿ ಹತ್ತು ಲಕ್ಷದ ಹತ್ತು ಸಾವಿರ ಮಾತ್ರ)<br>ರೂ.21,01,000/– (ಮೀಸಲು ಬೆಲೆಯ ಶೇ.10) (ರೂ ಇಪತ್ತೊಂದು ಲಕ್ಷದ ಒಂದು ಸಾವಿರ ಮಾತ್ರ) |

**ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:**

1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಹಿಂತಿರುಗಿಸಲಾಗುವ ಇ.ಎಂ.ಡಿ.ಗಾಗಿ ಕಾಯ್ದಿಟ್ಟ ಬೆಲೆಯ ಶೇಕಡ 10% ರಷ್ಟನ್ನು ಡಿ.ಡಿ/ಪೇ ಆರ್ಡರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ವಿಜಯನಗರ ಶಾಖೆ, ಬೆಂಗಳೂರು.** ಇವರ ಹೆಸರಿಗೆ ಮೇಲೆ ತಿಳಿಸಿರುವ ಸ್ಥಿರಾಸ್ತಿಯ ಹರಾಜಿನ ದಿನ ಅಥವಾ 06/04/2022, ಸಂಜೆ 5:30ರ ಒಳಗೆ ಪಾವತಿಸಿ ರಸೀದಿ ಮತ್ತು ಟೆಂಡರ್ ಪಾರಂನ್ನು ಪಡೆಯುವುದು ಜೊತೆಗೆ ಕೆವೈಸಿ ದಾಖಲೆಗಳು ಮತ್ತು ಇತ್ತಿಚಿನ ಭಾವಚಿತ್ರ ಸಲ್ಲಿಸುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್‌ದಾರರರು ಬ್ಯಾಂಕಿನಿಂದ ನೀಡಲಾಗುವ ಫಾರಂನಲ್ಲಿ ಮುಚ್ಚಿದ ಲಕೋಟೆಯಲ್ಲಿ ಬಿಡ್ಡನ್ನು ಸಲ್ಲಿಸುವುದು. ಎಲ್ಲಾ ಲಕೋಟೆಗಳು ಬಂದ ನಂತರ ಬಿಡ್ಡುದಾರರ ಸಮ್ಮುಖದಲ್ಲಿ ದಿನಾಂಕ:07/04/2022, ಗುರುವಾರ, 12.30 ಘಂಟೆಗೆ ಅಧಿಕೃತ ಅಧಿಕಾರಿಯು ಲಕೋಟೆಯನ್ನು ತೆರೆದು ಅಂತಿಮಗೊಳಿಸುವರು.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ಇ.ಎಂ.ಡಿ. ಹಣವನ್ನು ತಕ್ಷಣವೇ ಮರುಪಾವತಿಸಲಾಗುವುದು. ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್ಡುದಾರರು ಹರಾಜಿನ ಮೊಬಲಿಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು 24 ಗಂಟೆಯೊಳಗೆ ಪಾವತಿಸತಕ್ಕದ್ದು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ ಐಡಿ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಅಧಿಕೃತ ಅಧಿಕಾರಿಯು ಮಾರಾಟ ಧೃಡೀಕರಣ ಪತ್ರವನ್ನು ನೀಡುತ್ತಾರೆ. ಉಳಿದ ಹಣವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು.
5. ವಿಜಯಿಯಾದ ಬಿಡ್ಡುದಾರರು ಈ ಪ್ರಕಟಣೆಯ ನಿಯಮಗಳನ್ನು ಪಾಲಿಸದಿದ್ದರೆ ಮತ್ತು ಯಾವುದೇ ರೀತಿಯಲ್ಲಾದರು ತಪ್ಪುಗಳನ್ನು ಮಾಡಿದರೆ ಅವರು ಪಾವತಿಸಿದ ಹಣವನ್ನು ಬ್ಯಾಂಕ್ ಯಾವುದೇ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಮತ್ತೆ ಹರಾಜು ಮಾಡಲಾಗುತ್ತದೆ.
6. ವಿಜಯಿಯಾದ ಬಿಡ್ಡುದಾರರು ತನ್ನ ಪರವಾಗಿ ನೊಂದಣಿ ಮಾರಾಟ ಪತ್ರವನ್ನು ಪಡೆದುಕೊಳ್ಳಲು ತೆರಿಗೆಗಳು, ನೋಂದಣಿ ಶುಲ್ಕ ಮತ್ತು ಸಾಮಾನ್ಯ ಮುದ್ರಾಂಕ ಟಿ.ಡಿ.ಎಸ್. ಮತ್ತಿತರ ಖರ್ಚುಗಳನ್ನು ಭರಿಸತಕ್ಕದ್ದು.
7. ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಹರಾಜನ್ನು ಯಾವುದೇ ಕಾರಣ ಕೊಡದೆ ಅಂಗೀಕರಿಸುವ, ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ.
8. ಸದರಿ ಸ್ಥಿರಾಸ್ತಿಯ ಬಗ್ಗೆ ಬಾಕಿ ಇರುವ ಸ್ಥಿರಾಸ್ತಿ ತೆರಿಗೆ ಮತ್ತು ಇತರೆ ಖರ್ಚುಗಳಿಗೆ ಹಾಗೂ ಇತರೆ ಯಾವುದೇ ಸಾಲಗಳಿಗೆ ಬ್ಯಾಂಕು ಜವಾಬ್ದಾರಿಯಾಗಿರುವುದಿಲ್ಲ. ಬಿಡ್ಡುದಾರರು ಇಚ್ಚಿಸಿದ ಆಧಾರದ ಮೇಲೆ ಮತ್ತು ಸೆಕ್ಯೂರಿಟೈಸೇಷನ್ ಅಧಿನಿಯಮ–2002 ರಲ್ಲಿ ನಿಗಧಿಪಡಿಸಿರುವ ಷರತ್ತುಗಳಿಗೆ ಒಳಪಟ್ಟು ಮಾರಾಟ ಮಾಡಲಾಗುತ್ತದೆ.
9. ಹರಾಜು ಮಾಡಲಿರುವ ಸ್ಥಿರಾಸ್ತಿಯನ್ನು ಬಿಡ್ಡುದಾರರು ಆಡಳಿತ ಕಛೇರಿಯಲ್ಲಿ ಅಧಿಕೃತ ಅಧಿಕಾರಿಯನ್ನು ದೂ.ಸಂ. 080–23300497, 41159606, ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಬಿಡ್ಡುದಾರರು ಆಸ್ತಿಯ ಬಗ್ಗೆ ವಿಚಾರಿಸುವ ಮತ್ತು ಆಸ್ತಿಯ ಮೇಲಿನ ಸಾಲದ ವಿವರಗಳನ್ನು ಪಡೆಯಲು ಸ್ವತಂತ್ರರಿರುತ್ತಾರೆ.
10. ಅಧಿಕೃತ ಬಿಡ್ಡುದಾರರು ಹೊರತು ಜಿ.ಪಿ.ಎ. ಹೋಲ್ಡರ್, ಏಜೆಂಟರು ಅಥವಾ ಇತರೆ ಯಾವುದೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ .
11. ಸ್ಥಿರ ಸತ್ತು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಮಾರಾಟ ಮಾಡಲಾಗುವುದು.
12. ಡಿ.ಆರ್.ಟಿ/ಡಿ.ಆರ್.ಎ.ಟಿ/ಹೈಕೋರ್ಟ್ ಅಥವಾ ಯಾವುದೇ ನ್ಯಾಯಾಲಯದ ಪ್ರಕ್ರಿಯೆಗಳ ಅನ್ವಯ ಈ ಹರಾಜಿಗೆ ತಡೆಯಾಜ್ಞೆ ನೀಡಿದರೆ ಈ ಹರಾಜನ್ನು ಮುಂದೂಡಲಾಗುವುದು ಅಥವಾ ರದ್ದು ಮಾಡಲಾಗುವುದು, ಹರಾಜಿನ ಮುಂದೂಡಿಕೆ ಅಥವಾ ರದ್ದು ಆದಾಗ ಹರಾಜಿನಲ್ಲಿ ಭಾಗವಹಿಸುವವರು ಯಾವುದೇ ರೀತಿಯ ನಷ್ಟ ಪರಿಹಾರ ಅಥವಾ ಮೊತ್ತವನ್ನು ಪಡೆಯುವ ಹಕ್ಕು ಹೊಂದಿರುವುದಿಲ್ಲ.
13. ಪೂರ್ಣವಾಗಿ ಬಾಕಿ ಹಣವನ್ನು ಪಾವತಿ ಮಾಡದಿದ್ದಲ್ಲಿ ಮೇಲೆ ತಿಳಿಸಿರುವ ದಿನಾಂಕದಂದು ಹರಾಜು ನಡೆಸುವ ಬಗ್ಗೆ ಸದರಿಯವರು (ಸಾಲಗಾರರು, ಜಾಮೀನುದಾರರು ಅಥವಾ ಈಡುದಾರರು) ಇದನ್ನು ನೋಟೀಸೆಂದು ಪರಿಗಣಿಸಬೇಕು.

ಬಿಡ್‌ದಾರರು ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಅಧಿಕಾರಿ, **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ,** ನಂ 14, 'ರಜತ ಭವನ', 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104. ದೂರವಾಣಿ: 080–23300497, 9945276719, Email: jscbinfo@jscbl.com

ಸ್ಥಳ : ಬೆಂಗಳೂರು
ದಿನಾಂಕ : 28–02–2022

ಸಹಿ/– ಅಧಿಕೃತ ಅಧಿಕಾರಿ,
ಜನತಾ ಸೇವಾ ಕೋ ಆಪರೇಟವ್ ಬ್ಯಾಂಕ್ ಲಿ,

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

# ಹರ್ಷನ ಕುಟುಂಬಕ್ಕೆ ₹ 2 ಕೋಟಿ ನೆರವು

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ಕೋಮುದ್ವೇಷದಿಂದಾಗಿ ಹತ್ಯೆಯಾದ ಬಜರಂಗದ ದಳದ ಕಾರ್ಯಕರ್ತ ಹರ್ಷ ಅವರ ಕುಟುಂಬಕ್ಕೆ ದಾನಿಗಳು ನೀಡಿದ ನೆರವು ₹ 2 ಕೋಟಿ ದಾಟಿದೆ. ಹರ್ಷ ಹತ್ಯೆಯ ನಂತರ ಅವರ ಮನೆಗೆ ಭೇಟಿ ನೀಡಿದ್ದ ರಾಜಕಾರಣಿಗಳು, ಮಠಾಧೀಶರು ಸೇರಿ ರಾಜ್ಯದ ಹಲವು ದಾನಿಗಳು ಉದಾರ ನೆರವು ನೀಡಿದ್ದಾರೆ. ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ₹ 10 ಲಕ್ಷ ನೀಡಿದ್ದಾರೆ. ಹಿಂದೂ ಪರ ಸಂಘಟನೆಗಳು ಆರಂಭಿಸಿದ ನೆರವಿನ ಅಭಿಯಾನದಿಂದಲೂ ಮೃತರ ತಾಯಿ ಪದ್ಮಾ ಅವರ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಖಾತೆಗೆ ಸಾಕಷ್ಟು ಹಣ ಜಮೆಯಾಗಿದೆ.

ಮೀನಾಕ್ಷಮ್ಮ ಖಾತೆಗೆ ₹ 3 ಲಕ್ಷಕ್ಕೂ ಹೆಚ್ಚು ನೆರವು: ಏಳು ವರ್ಷಗಳ ಹಿಂದೆ ಹತ್ಯೆಯಾಗಿದ್ದ ವಿಶ್ವನಾಥ್ ಶೆಟ್ಟಿ ಅವರ ತಾಯಿ ಮೀನಾಕ್ಷಿ ಅವರು ಚಿಂದಿ ಆಯ್ದು ಬದುಕು ನಡೆಸುತ್ತಿದ್ದು, 'ಪ್ರಜಾವಾಣಿ' ಮಾರ್ಚ್ 1 ಸಂಚಿಕೆಯ ಮುಖಪುಟದಲ್ಲಿ ಅವರ ಬ್ಯಾಂಕ್ ಖಾತೆಯ ವಿವರ ಪ್ರಕಟಿಸಿದ ಒಂದೇ ದಿನಕ್ಕೆ ₹ 2.70 ಲಕ್ಷ ಜಮೆಯಾಗಿದೆ. ನೆರವಿನ ಒಟ್ಟು ಮೊತ್ತ ₹ 3 ಲಕ್ಷ ದಾಟಿದೆ. ಹಲವರು ಮನೆಗೆ ಭೇಟಿ ನೀಡಿ ನೆರವಿನ ಹಸ್ತ ಚಾಚಿದ್ದಾರೆ.

## ಕೆಪಿಎಸ್‌ಸಿ: ಅಂಕ ಕಡಿತ

# ಸಿದ್ಧಗಂಗಾಶ್ರೀ, ಎಚ್‌ಡಿಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಗೆಜೆಟೆಡ್ ಪ್ರೊಬೇಷನರಿ ಹುದ್ದೆಯ ನೇಮಕಾತಿಯ ವ್ಯಕ್ತಿತ್ವ ಪರೀಕ್ಷೆಯ (ಸಂದರ್ಶನ) ಅಂಕವನ್ನು 50ರಿಂದ 25ಕ್ಕೆ ಇಳಿಸಿದ ರಾಜ್ಯ ಸರ್ಕಾರದ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರತ್ಯೇಕ ಪತ್ರ ಬರೆದಿದ್ದಾರೆ.

'ವ್ಯಕ್ತಿತ್ವ ಪರೀಕ್ಷೆಯ ಅಂಕವನ್ನು ಕಡಿತ ಮಾಡಿರುವುದರಿಂದ ರಾಜ್ಯದ ಗ್ರಾಮೀಣ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಅನ್ಯಾಯ ಆಗಲಿದೆ. ಹೀಗಾಗಿ, ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಮತ್ತು ಇತರ ರಾಜ್ಯಗಳ ಲೋಕಸೇವಾ ಆಯೋಗದ ರೀತಿಯಲ್ಲಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಯ ವ್ಯಕ್ತಿತ್ವ ಪರೀಕ್ಷೆಯ ಅಂಕವನ್ನು ನಿಗದಿಪಡಿಸಬೇಕು. ನಾನ್ ಗೆಜೆಟೆಡ್ ಪ್ರೊಬೇಷನರಿ ವೃಂದದ ಹುದ್ದೆಗಳ ಸಂದರ್ಶನಕ್ಕೂ ಒಟ್ಟು ಸ್ಪರ್ಧಾತ್ಮಕ ಪರೀಕ್ಷೆಯ ಅಂಕಗಳಲ್ಲಿ ಶೇ 12.5ರಷ್ಟು ನಿಗದಿಪಡಿಸಬೇಕು' ಎಂದು ಸಿದ್ಧಲಿಂಗ ಸ್ವಾಮೀಜಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

'ಗೆಜೆಟೆಡ್ ಹುದ್ದೆಯ ಮುಖ್ಯಪರೀಕ್ಷೆಯ ಅಂಕವನ್ನು ಮತ್ತೆ 1,750ಕ್ಕೆ ಹೆಚ್ಚಿಸಲು ಮತ್ತು ವ್ಯಕ್ತಿತ್ವ ಪರೀಕ್ಷೆಯ ಅಂಕ 25ಕ್ಕೆ ಕಡಿಮೆ ಮಾಡಲು ಹೊರಟಿರುವುದು ಸಂಶಯಕ್ಕೆ ಕಾರಣವಾಗುತ್ತದೆ. ಅಲ್ಲದೆ, ವ್ಯಕ್ತಿತ್ವ ಪರೀಕ್ಷೆ ಕೇವಲ ಅಂಕ ನೀಡಲು ಸೀಮಿತವಾಗಿರದೆ ಅಭ್ಯರ್ಥಿಯ ಎಲ್ಲ ಗುಣಮಟ್ಟವನ್ನು ಪರಿಶೀಲಿಸಲೆಂದೇ ನಿಗದಿಪಡಿಸಲಾಗಿದೆ. ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು- 2020ಕ್ಕೆ ತಿದ್ದುಪಡಿ ಮಾಡಿ ನಾನ್ ಗೆಜೆಟೆಡ್ ವೃಂದದ ಹುದ್ದೆಗಳ ವ್ಯಕ್ತಿತ್ವ ಪರೀಕ್ಷೆಯ ಅಂಕವನ್ನು ಕಡಿಮೆ ಮಾಡಿರುವುದು ಸರಿಯಲ್ಲ' ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

'ಗೆಜೆಟೆಡ್ ಹುದ್ದೆಗಳ ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆಯ ಅಂಕವನ್ನು 50ರಿಂದ 25ಕ್ಕೆ ಇಳಿಸಿರುವುದು ಅವೈಜ್ಞಾನಿಕ. ಕೇಂದ್ರ ಲೋಕಸೇವಾ ಆಯೋಗ 275, ಇತರ ರಾಜ್ಯಗಳು ಮುಖ್ಯ ಪರೀಕ್ಷೆಯ ಅಂಕದ ಶೇ 12ರಿಂದ 17ರಷ್ಟು ಅಂಕವನ್ನು ನಿಗದಿಪಡಿಸಿವೆ. ರಾಜ್ಯ ಸರ್ಕಾರ 1,750 ಅಂಕಕ್ಕೆ ನಡೆಯುವ ಮುಖ್ಯಪರೀಕ್ಷೆಗೆ ವ್ಯಕ್ತಿತ್ವ ಪರೀಕ್ಷೆಯ ಅಂಕ 25 (ಶೇ 1.4) ರಷ್ಟು ಮಾತ್ರ ಆಗುತ್ತಿದೆ. ಅಲ್ಲದೆ, ಗ್ರೂಪ್ ಬಿ ವೃಂದ ನೇಮಕಾತಿಗೆ ಶೇ 12.5ರಷ್ಟು ಸಂದರ್ಶನ ಅಂಕವನ್ನು ತೆಗೆದುಹಾಕಿರುವುದಕ್ಕೆ ಬಲವಾದ ವೈಜ್ಞಾನಿಕ ಕಾರಣಗಳು ಇಲ್ಲ' ಎಂದು ಎಚ್.ಡಿ. ಕುಮಾರಸ್ವಾಮಿ ಪತ್ರದಲ್ಲಿ ಹೇಳಿದ್ದಾರೆ.

'ಕರ್ನಾಟಕ ನಾಗರಿಕ ಸೇವೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಕೇವಲ ಶೈಕ್ಷಣಿಕ ಅಥವಾ ಅಂಕ ಗಳಿಸಿದ ಜ್ಞಾನ ಇದ್ದರೆ ಸಾಲದು. ರಾಜ್ಯದ ವಾಸ್ತವಿಕ ಸ್ಥಿತಿಗತಿಯ ಜೊತೆ, ಜನರ ನಾಡಿಮಿಡಿತ ಗೊತ್ತಿರಬೇಕು. ಅದನ್ನು ಪರೀಕ್ಷಿಸಲು ವ್ಯಕ್ತಿತ್ವ ಪರೀಕ್ಷೆ ಅಗತ್ಯ. ಶೈಕ್ಷಣಿಕ ಅಂಕವನ್ನಷ್ಟೆ ಪರಿಗಣಿಸಿದರೆ, ದೆಹಲಿ, ಹೈದರಾಬಾದ್, ಬೆಂಗಳೂರಿನಂಥ ನಗರಗಳಲ್ಲಿ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಲಿತು ಹೆಚ್ಚು ಅಂಕ ಪಡೆದವರು ಆಯ್ಕೆಯಾಗುವ ಸಾಧ್ಯತೆಯೇ ಹೆಚ್ಚು. ಗ್ರಾಮೀಣ, ಹಿಂದುಳಿದ ವರ್ಗದ ಪ್ರತಿಭಾವಂತ, ಕೌಶಲ ಹೊಂದಿದ ಅಭ್ಯರ್ಥಿಗಳು ಅವಕಾಶ ವಂಚಿತರಾಗುವ ಅಪಾಯವಿದೆ' ಎಂದೂ ಅವರು ಹೇಳಿದ್ದಾರೆ.

# ಆಳಂದ: ಕಲ್ಲು ತೂರಾಟ 167 ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

**ಆಳಂದ (ಕಲಬುರಗಿ ಜಿಲ್ಲೆ):** ಪಟ್ಟಣದ ಲಾಡ್ಲೆ ಮಶಾಕ ದರ್ಗಾ ಆವರಣದಲ್ಲಿ ಮಂಗಳವಾರ ಶ್ರೀರಾಮ ಸೇನೆ ಸಂಘಟನೆ ನೇತೃತ್ವದಲ್ಲಿ ಸಚಿವರು, ಶಾಸಕರು ರಾಘವ ಚೈತನ್ಯ ಶಿವಲಿಂಗಕ್ಕೆ ವಿಶೇಷ ಪೂಜೆಗೆ ತೆರಳಿದಾಗ, ಆವರಣದಲ್ಲಿ ನಿಲ್ಲಿಸಿದ ವಾಹನಗಳ ಮೇಲೆ ಕಲ್ಲು ತೂರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 167 ಜನರನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ಆರಂಭಿಸಿದ್ದಾರೆ.

ಜಿಲ್ಲಾಡಳಿತವು ಪಟ್ಟಣದಲ್ಲಿ ಈಗಾಗಲೇ ನಿಷೇಧಾಜ್ಞೆ ಜಾರಿಗೊಳಿಸಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ದಿನವಿಡೀ ಪಟ್ಟಣದಲ್ಲೇ ಉಳಿದು ನಿಗಾ ವಹಿಸಿದರು.

**ಪಟ್ಟಣದ ಬಂದ್:** ಅಂಗಡಿಗಳು ಬಂದ್ ಆಗಿದ್ದು ವ್ಯಾಪಾರ ಸಂಪೂರ್ಣ ಸ್ಥಗಿತವಾಗಿದೆ. ಬ್ಯಾಂಕ್, ಸರ್ಕಾರ ಕಚೇರಿಗಳಲ್ಲಿ ಜನರ ಓಡಾಟ ಇರಲಿಲ್ಲ. ಬಹುತೇಕ ಖಾಸಗಿ ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದ್ದು, ಹಲವು ಯುವಕರು ಪಟ್ಟಣ ತೊರೆದಿದ್ದಾರೆ.

# ಹರ್ಷ ಹತ್ಯೆ ಆರೋಪಿಗಳ ವಿರುದ್ಧ ಯುಎಪಿಎ ಅಸ್ತ್ರ

**ಶಿವಮೊಗ್ಗ:** ಬಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆಯ ಎಲ್ಲ 10 ಆರೋಪಿಗಳ ವಿರುದ್ಧ ಅಕ್ರಮ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿ ಪೊಲೀಸರು ಹೊಸದಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸೀಗೆಹಟ್ಟಿ ಭಾರತಿ ಕಾಲೊನಿ ಬಳಿ ಫೆ.20ರ ರಾತ್ರಿ ಹರ್ಷ ಹತ್ಯೆಯಾದ ನಂತರ ಅವರ ತಾಯಿ ನೀಡಿದ ದೂರಿನ ಅನ್ವಯ ಆರೋಪಿಗಳ ವಿರುದ್ಧ ಸಂಚು ರೂಪಿಸಿ, ಕೊಲೆ ಮಾಡಿರುವ ಪ್ರಕರಣ ದಾಖಲಿಸಲಾಗಿತ್ತು. ನಂತರ 10 ಆರೋಪಿಗಳನ್ನು ಬಂಧಿಸಿದ್ದರು. 11 ದಿನಗಳು ಪೊಲೀಸ್ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು.

'ವಿಚಾರಣೆ ವೇಳೆ ಹತ್ಯೆಯ ಹಿಂದೆ ಬೇರೆ ಸಂಘಟನೆಗಳ ಕೈವಾಡ ಇರುವ ಕುರಿತು ಸುಳಿವು ದೊರೆತಿದೆ. ಹೆಚ್ಚಿನ ತನಿಖೆಗೆ ರಾಷ್ಟ್ರೀಯ ತನಿಖಾ ದಳ ಸೇರಿದಂತೆ ಇತರೆ ಉನ್ನತ ಸಂಸ್ಥೆಗಳಿಗೆ ವಹಿಸಿಕೊಡಲು ಅನುಕೂಲವಾಗುವಂತೆ ಹೊಸದಾಗಿ ಯುಎಪಿಎ ಅಡಿ ಪ್ರಕರಣ ದಾಖಲಿಸಲಾಗಿದೆ' ಎಂದು ಗೃಹ ಇಲಾಖೆಯ ಉನ್ನತ ಮೂಲಗಳು ಖಚಿತಪಡಿಸಿವೆ.

# ಮಂತ್ರಾಲಯದಲ್ಲಿ ಗುರು ವೈಭವೋತ್ಸವ ನಾಳೆಯಿಂದ

ಪ್ರಜಾವಾಣಿ ವಾರ್ತೆ

**ರಾಯಚೂರು:** 'ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ 'ಗುರು ವೈಭವೋತ್ಸವ' ಮಾರ್ಚ್ 4 ರಿಂದ 9ರವರೆಗೂ ನಡೆಯಲಿದೆ' ಎಂದು ಮಠದ ವ್ಯವಸ್ಥಾಪಕ ವೆಂಕಟೇಶ ಜೋಶಿ ತಿಳಿಸಿದ್ದಾರೆ.

ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ಮಾರ್ಚ್ 4 ರಂದು 401ನೇ ಪಟ್ಟಾಭಿಷೇಕ ಮಹೋತ್ಸವ ಹಾಗೂ ಮಾರ್ಚ್ 9 ರಂದು 427ನೇ ವರ್ಧಂತಿ ಉತ್ಸವ ನಡೆಯುವುದು. ವರ್ಧಂತಿ ದಿನದಂದು ಬೆಳಿಗ್ಗೆ 8ಕ್ಕೆ ತಿರುಪತಿ ಶ್ರೀನಿವಾಸ ದೇವರ ಶೇಷವಸ್ತ್ರ ಸಮರ್ಪಣೆ ನೆರವೇರಿಸಲಾಗುವುದು.

ಪ್ರತಿದಿನ ಬೆಳಿಗ್ಗೆ 10ಕ್ಕೆ ಮಠದ ಪ್ರಾಕಾರದಲ್ಲಿ ವಿಶೇಷ ಉಪನ್ಯಾಸ, ಸಂಜೆ 5.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ರಾತ್ರಿ 7.30ಕ್ಕೆ ಯೋಗೇಂದ್ರ ಮಂಟಪದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಧರ್ಮಸ್ಥಳ ಶ್ರೀ ಮಂಜುನಾಥಸ್ವಾಮಿ ದೇವಸ್ಥಾನದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ ಸೇರಿ ಹಲವು ಗಣ್ಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು.


**ಕೇಂದ್ರೀಯ ವಿದ್ಯಾಲಯ, ದೋಣಿಮಲೈ**
केन्द्रीय विद्यालय दोणिमलै बल्लारी जिला, कर्नाटक –५८३ ११८
KENDRIYA VIDYALAYA DONIMALAI BALLARI DIST. KARNATAKA– 583 118
Tele : 08395 274604 | E-mail : kvdonimalai0@gmail.com
Website : https://ndmcdonimalai.kvs.ac.in

**WALK-IN INTERVIEW FOR THE FOLLOWING POSTS ON PART-TIME CONTRACTUAL BASIS FOR THE YEAR 2022-23 ON 15-03-2022 IN THE VIDYALAYA PREMISES FROM 09.00 AM**

1. POST GRADUATE TEACHERS (in English, Hindi, Maths, Physics, Chemistry, Biology, Commerce, Economics and Computer Science)
2. TRAINED GRADUATE TEACHERS (in English, Hindi, Sanskrit, Maths, Science and Social Science)
3. PRIMARY TEACHERS
4. COMPUTER INSTRUCTORS
5. SPORTS COACH
6. EDUCATIONAL COUNSELOR
7. MUSIC INSTRUCTOR
8. YOGA INSTRUCTOR
9. KANNADA LANGUAGE INSTRUCTOR

- Reporting time for all candidates is 08.30 AM on 15-03-2022 (Tuesday).
- Candidates appearing for interview must bring a passport size photograph, original certificates and marks sheets for verification along with one set of self-attested copies of all the certificates.

For further details about eligibility, educational qualifications and remuneration, please visit the Vidyalaya website.
Date: 03.03.2022 Sd/- PRINCIPAL

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ**
ಸಂ:ಕಾ.ಇಂ:ಲೋ.ಇ :ಹಾವಿ :ಹಾಸನ:ಜೆಇಂ–1 /2021–22 ದಿನಾಂಕ.28.02.2022
**ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ**
ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 35/2021–22 ದಿನಾಂಕ 20.01.2022 ರಲ್ಲಿ ಕರೆಯಲಾಗಿದ್ದ ಕ್ರ.ಸಂ. 7 ರ ಹಾಸನ ತಾಲ್ಲೂಕು ಹಳೇಬೀಡು (ರಾಜ್ಯ ಹೆದ್ದಾರಿ) ರಸ್ತೆಯಿಂದ ದೊಡ್ಡಕೊಂಡಗೊಳ ಮಾರ್ಗವಾಗಿ ಕಂಚಮಾರನಹಳ್ಳಿ ಮೂಲಕ ನಿಟ್ಟೂರು ರಸ್ತೆಗೆ ಸಂಪರ್ಕಿಸುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಯ. ಬಿಡ್ಡನ್ನು ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 11.03.2022–16.00 ಗಂಟೆ. ಟೆಂಡರ್‌ನ ನಿಗಧಿತ ನಮೂನೆಗಳನ್ನು http://www.eproc.karnataka.gov.in ನಲ್ಲಿ ಡೌನಲೋಡ್ ಮಾಡಿ ಅವಶ್ಯ ದಾಖಲಾತಿಗಳೊಂದಿಗೆ ಹಾಗೂ ನಿಗಧಿತ ಇಎಂಡಿಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
**ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ**
ದೂರವಾಣಿ ಸಂ:08338/ 273859 ಇ–ಮೇಲ್:eepwdckd@gmail.com
ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/6763 ದಿನಾಂಕ:28/02/2022
**ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1**
ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/6663 ದಿನಾಂಕ:22/02/2022 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕ್ರ.ಸಂ. 3 ರಲ್ಲಿನ ಕಾಮಗಾರಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 05–03–2022 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:08–03–2022 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 10–03–2022 (ಸಾಯಂಕಾಲ 4.30 ಗಂಟೆಗೆ)
4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1677/MCA/2021-22

**ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ**
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ–2/ಟೆಂಡರ್/2021–22 ದಿ: 28.02.2022
**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:33/2021–22 (ಇ ಪ್ರಕ್ಯೂರ್‌ಮೆಂಟ್) ದ್ವಿ ಲಕೋಟೆ ಟೆಂಡರ್**
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000ರಲ್ಲಿ ಅರ್ಹ (ಸಿವಿಲ್)ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಕೊರಟಗೆರೆ ಉಪ–ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ www.eproc.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137–283336. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.75.90ಲಕ್ಷಗಳವರೆಗೆ. ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 04.03.2022 ರಿಂದ 11.03.2022 ಸಂಜೆ 4.00ಗಂಟೆ ಯವರೆಗೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ(ಆನ್‌ಲೈನ್ ಮೂಲಕ) : 11.03.2022ರ ಸಂಜೆ 4.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 14.03.2022ರ ಸಂಜೆ 4.00ಗಂಟೆ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 17.03.2022ರ ಸಂಜೆ 4.00 ಗಂಟೆ ನಂತರ, ವಿಚಾರಣೆ: ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 09.03.2022ರ ಸಂಜೆ 4.00 ಗಂಟೆಗೆವರೆಗೆ
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/694/MCA/2021-22

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ರಸ್ತೆ ಮೂಲಸೌಕರ್ಯ– ಮಹದೇವಪುರ ವಿಭಾಗ, ಎನ್.ಆರ್. ಚೌಕ, ಬೆಂಗಳೂರು–560002.
ಸಂ: ಕಾನಿಅ/ರಮೂಸೌ–ಮಪುರ/ಟೆಂಡರ್/04/2021–22 ದಿನಾಂಕ: 03.03.2022
**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯನಿರ್ವಾಹಕ ಅಭಿಯಂತರರು, ರಸ್ತೆ ಮೂಲಸೌಕರ್ಯ– ಮಹದೇವಪುರ ವಿಭಾಗ, ಬೆಂಗಳೂರು ಇವರು ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿಗಳ ವಿವರ | ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ (ರೂ.ಗಳಲ್ಲಿ) |
|---|---|---|---|
| 1 | ರಸ್ತೆ ಮೂಲಸೌಕರ್ಯ–ಮಹದೇವಪುರ ವಿಭಾಗದಲ್ಲಿ ವಿಐಎಸ್‌ಆರ್ ಬಡಾವಣೆ ಮುಖಾಂತರ ಹೋಪ್ ಫಾರ್ಮ್‌ನಿಂದ ಕಾಡುಗೋಡಿ ರೈಲ್ವೇ ಸ್ಟೇಷನ್‌ವರೆಗೆ ರಸ್ತೆಯ ಡಾಂಬರೀಕರಣ ಮತ್ತು ಸುಧಾರಣಾ ಕಾಮಗಾರಿ. | 159.05 | 2,39,000/- |
| 2 | ರಸ್ತೆ ಮೂಲಸೌಕರ್ಯ–ಮಹದೇವಪುರ ವಿಭಾಗದಲ್ಲಿ ಪಣತ್ತೂರು ಮುಖ್ಯರಸ್ತೆಯಿಂದ ವರ್ತೂರು ಮುಖ್ಯರಸ್ತೆಯವರೆಗೆ ಗುಂಜೂರು ಪಾಳ್ಯ ಮುಖ್ಯರಸ್ತೆಯ ಪುನರ್ನಿರ್ಮಾಣ ಕಾಮಗಾರಿ. | 133.19 | 2,00,000/- |

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ 05.03.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : 18.03.2022ರ ಮಧ್ಯಾಹ್ನ 3.00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 21.03.2022ರ ಸಂಜೆ 4.00 ಗಂಟೆಯವರೆಗೆ 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 22.03.2022ರ ಸಂಜೆ 4.30 ಗಂಟೆಗೆ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಅಥವಾ ಹೆಚ್‌ಪಿ ಸಹಾಯವಾಣಿ : 080–22371090, 22340060, 22340948 ಹಾಗೂ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಶಿವಾಜಿನಗರ ವಿಭಾಗ.
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ, ಎಂಇಐ ಬಡಾವಣೆ, ಬಾಗಲಗುಂಟೆ, ಹೆಸರುಘಟ್ಟ ಮುಖ್ಯರಸ್ತೆ, ಬೆಂಗಳೂರು–560 073.
ಸಂಖ್ಯೆ: ಬೃ.ಬೆಂ.ಮ.ಪಾ/ಕಾ.ಅ/ದಾ.ವಿ/ಟೆಂಪ್ರ/23/2021–22 ದಿನಾಂಕ: 25.02.2022
**ಟೆಂಡರ್ ಮುಂದೂಡಿಕೆ ಪ್ರಕಟಣೆ**
ವಿಷಯ: ಟೆಂಡರ್ ಪ್ರಕಟಣೆಯನ್ನು ಮುಂದೂಡುವ ಬಗ್ಗೆ
ಉಲ್ಲೇಖ: 1. ಈ ಕಚೇರಿಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: ಬೃಬೆಂಮಪಾ/ಕಾ.ಅ/ದಾ.ವಿ/ಟೆಂ.ಪ್ರೊ/23/2021–22, ದಿನಾಂಕ: 03.02.2022
ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ ರೀತ್ಯಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಪ್ರೀಬಿಡ್, ಟೆಂಡರನ್ನು ಸಲ್ಲಿಸುವ ಅಂತಿಮ ದಿನಾಂಕ, ತಾಂತ್ರಿಕ ಮತ್ತು ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಮುಂದೂಡಿದ್ದು, ಪರಿಷ್ಕರಿಸಲಾದ ವೇಳಾಪಟ್ಟಿ ಈ ಕೆಳಕಂಡಂತಿದೆ.
ಮಾರ್ಪಾಡಾದ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: 03.03.2022 ರ ಬೆಳಿಗ್ಗೆ 11:30 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ದಾಸರಹಳ್ಳಿ ವಲಯ, ಇಲ್ಲಿ ನಡೆಸಲಾಗುವುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 14.03.2022ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ ಬೃ.ಬೆಂ.ಮ.ಪಾಲಿಕೆ ಇಲ್ಲಿ ದಿನಾಂಕ 15.03.2022ರ ಸಂಜೆ 4:30 ಗಂಟೆಗೆ ಅಥವಾ ನಂತರ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ: 16.03.2022ರ ಸಂಜೆ 4:30 ಗಂಟೆಗೆ ಅಥವಾ ನಂತರ ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, ಬೃ.ಬೆಂ.ಮ.ಪಾಲಿಕೆ ಇಲ್ಲಿ ತೆರೆಯಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುವರ್ಣ ಕರ್ನಾಟಕ
ಕರ್ನಾಟಕ ಸರಕಾರ
**ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ, ಧಾರವಾಡ**
ದೂರವಾಣಿ ಸಂಖ್ಯೆ : 0836–2741277, 0836–2748374
E-Mail I.D.: dsdharwad@gmail.com, dsdharwad@karnataka.gov.in
ಸಂಖ್ಯೆ: ಜಿಆಧಾ/ಸಿಬ್ಬಂದಿ–2/ವಿವ/166/2021–22 ದಿನಾಂಕ : 28–02–2022
**ಟೆಂಡರ್ ಪ್ರಕಟಣೆ**
ವಿಷಯ : ಜಿಲ್ಲಾ ಆಸ್ಪತ್ರೆ ಧಾರವಾಡ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ 'ಡ' ವರ್ಗನೌಕರರ ಸೇವೆಗಾಗಿ ಇ–ಪ್ರೋಕ್ಯುರಮೆಂಟ್ ಮೂಲಕ ಟೆಂಡರ ಆಹ್ವಾನಿಸುವ ಕುರಿತು.
ಜಿಲ್ಲಾ ಆಸ್ಪತ್ರೆ ಧಾರವಾಡ ಇಲ್ಲಿಗೆ 2022–23 ನೇ ಸಾಲಿಗಾಗಿ ಹೊರಗುತ್ತಿಗೆ ಒಪ್ಪಂದದ ಮೇಲೆ 'ಡ' ವರ್ಗ ನೌಕರರ ಸೇವೆಯನ್ನು ಒದಗಿಸಲು ನೊಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಇ–ಪ್ರೋಕ್ಯುರಮೆಂಟ್ ಮೂಲಕ ದ್ವಿ–ಲಕೋಟೆ ಪದ್ದತಿಯಲ್ಲಿ ಟೆಂಡರ ಆಹ್ವಾನಿಸಲಾಗಿದೆ. ದಿನಾಂಕ : 28–02–2022 ರಿಂದ ಇ–ಪ್ರೋಕ್ಯುರಮೆಂಟ್ ವೆಬ್‌ಸೈಟ್ www.eproc.karnataka.gov.in ದಲ್ಲಿ ಪಡೆಯಬಹುದು. ಟೆಂಡರ ಫಾರ್ಮಗಳನ್ನು ದಿನಾಂಕ : 28–02–2022 ರಿಂದ ದಿ : 30–03–2022 ರವರೆಗೆ ಸಾಯಂಕಾಲ 5.00 ಗಂಟೆಯವರೆಗೆ ಇ–ಪೋರ್ಟಲ್‌ದಲ್ಲಿ ಅಪ್‌ಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರಗಳನ್ನು ದಿನಾಂಕ : 01–04–2022 ರಂದು ಬೆಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು.
ಹೆಚ್ಚಿನ ಮಾಹಿತಿಯನ್ನು ಇ–ಪ್ರೋಕ್ಯುರಮೆಂಟ್ ವೆಬ್‌ಸೈಟ್ www.eproc.karnataka.gov.in ದಲ್ಲಿ ಹಾಗೂ ಧಾರವಾಡ ಜಿಲ್ಲಾ ಆಸ್ಪತ್ರೆಯ ಕಾರ್ಯಾಲಯದಿಂದ ಕೆಲಸದ ದಿನಗಳಂದು ಪಡೆಯಬಹುದು.
ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ
ವಾಸಾಸಂಇ/ಧಾ/ಎಂಸಿಎ/1081/2021–22

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
**ಸಂಕ್ಷಿಪ್ತ ಟೆಂಡರ್ ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಬೆವಿಕಂ, ದಾವಣಗೆರೆ ವೃತ್ತದ ಕಾರ್ಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರುಗಳನ್ನು (ದ್ವಿ–ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಿದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಪಟ್ಟಿ ಮೊತ್ತ (ರೂ. ಲಕ್ಷಗಳಲ್ಲಿ) / ವರ್ಗ |
|---|---|---|
| 1 | ಹೊನ್ನಾಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ **ಸಾಸ್ವೆಹಳ್ಳಿ** ಬೆವಿಕಂ ಕಾಲೋನಿಯಲ್ಲಿ ವಾಹನ ನಿಲ್ದಾಣ ಮತ್ತು ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿ. | 12.00 / ಎಸ್.ಸಿ. |
| 2 | **ದಾವಣಗೆರೆ** ಬೆವಿಕಂ ಕಾಲೋನಿಯಲ್ಲಿ ಬ್ಲಾಕ್-III & IV ಲೈನ್ ಮೆನ್ ವಸತಿಗೃಹಗಳ (2 ಟೆನಮೆಂಟ್ಸ್) ಮತ್ತು ನಂ 06 ವಸತಿ ಗೃಹಗಳ ವಿಶೇಷ ದುರಸ್ಥಿ ಕಾಮಗಾರಿ. | 9.31 / ಎಸ್.ಟಿ. |
| 3 | ಜಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ **ಬಿಳಿಚೋಡು** ಬೆವಿಕಂ ಕಾಲೋನಿಯಲ್ಲಿ 5 ಟೈಪ್‌ನ 1/2 ಬ್ಲಾಕ್ ವಸತಿಗೃಹಗಳ (2 ಟೆನಮೆಂಟ್ಸ್) ವಿಶೇಷ ದುರಸ್ಥಿ ಕಾಮಗಾರಿ. | 7.35 / ಇತರೆ |
| 4 | ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ **ಆನಗೋಡು** ಬೆವಿಕಂ ಕಾಲೋನಿಯಲ್ಲಿ 1ಬ್ಲಾಕ್ ವಸತಿಗೃಹಗಳ(6 ಟೆನಮೆಂಟ್ಸ್) ಮತ್ತು ಟೈಪ್–07ರ ವಸತಿಗೃಹದ (2 ಟೆನಮೆಂಟ್ಸ್) ವಿಶೇಷ ದುರಸ್ಥಿ ಕಾಮಗಾರಿ. | 6.90 / ಇತರೆ |
| 5 | ನ್ಯಾಮತಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ **ಸವಳಂಗ** ಬೆವಿಕಂ ಕಾಲೋನಿಯಲ್ಲಿ 3 ಬ್ಲಾಕ್ ವಸತಿಗೃಹ(2 ಟೆನಮೆಂಟ್ಸ್) ಮತ್ತು 1 ಬ್ಲಾಕ್ (1 ಟೆನಮೆಂಟ್ಸ್) ವಸತಿ ಗೃಹದ ವಿಶೇಷ ದುರಸ್ಥಿ ಕಾಮಗಾರಿ. | 10.65 / ಇತರೆ |

ಇಚ್ಛೆಯುಳ್ಳ ಗುತ್ತಿಗೆದಾರರು ಹಾಗೂ ಕಂಪನಿಗಳು ಕರ್ನಾಟಕ ಸರ್ಕಾರದ ಇ–ಪ್ರೊಕೂರ್‌ಮೆಂಟ್ ವೆಬ್‌ಸೈಟ್: https://www.eproc.karnataka.gov.in ಅಡಿಯಲ್ಲಿ ದಿನಾಂಕ: 04.03.2022ರ ನಂತರ ತಮ್ಮ ಯೂಸರ್ ಐ.ಡಿ. ಹಾಗೂ ಪಾಸ್‌ವರ್ಡ್ ರಿಜಿಸ್ಟರ್ ಮಾಡಿ ಲಾಗಿನ್ ಆಗುವ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಸೂಚಿಸಿದೆ. ದೂರವಾಣಿ ಸಂಖ್ಯೆ: 08192–263616, ಫ್ಯಾಕ್ಸ್ ಸಂಖ್ಯೆ: 08192–263615. ಮೊಬೈಲ್: 94482 79094, ಇ–ಮೇಲ್: sedvgcircle.work@gmail.com.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿದ್ಯುತ್), & ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಕಾ&ಪಾ ವೃತ್ತ, ಬೆವಿಕಂ, ದಾವಣಗೆರೆ.
ವಿದ್ಯುತ್ ಸಂಬಂಧಿತ ದೂರಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು**
ಸಂ: ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/JJM-2021-22/ಇ–ಟೆಂಡರ್/2021–22/2110 ದಿ: 28.02.2022
**ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ**
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1,2,3 & 4 (Standard Bid Document) ನಿಬಂಧನೆಗಳಿಗೊಳಪಟ್ಟಂತೆ ಪಂಚಾಯತ ರಾಜ ಇಂಜಿನೀಯರಿಂಗ ಇಲಾಖೆಯಲ್ಲಿ ಸಿವಿಲ್ ನೋಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಇವರಿಂದ ನೋಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2021–22ನೇ ಸಾಲಿನ Jal Jeevan Mission (JJM) ಯೋಜನೆ ಅಡಿಯ ಕೇಂದ್ರ & ರಾಜ್ಯ (85%), ಗ್ರಾಮ ಪಂಚಾಯಿತಿ (5%) ಮತ್ತು ಸಮುದಾಯ ವಂತಿಕೆ (10%) ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಐಟಂವಾರು ಟರ್ನ್‌ಕೀ ಆಧಾರದ ಮೇಲೆ ಇ–ಟೆಂಡರ್ ಆಹ್ವಾನಿಸಲಾಗಿದೆ.
(1) E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ: 02.03.2022. (2) ಶೆಡ್ಯೂಲ್‌ಗಳನ್ನು Online ನಲ್ಲಿ ಬಿಡುವ ದಿನಾಂಕ: 02.03.2022. (3) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 11.03.2022 ಸಂಜೆ 5.30 ಗಂಟೆವರೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13.03.2022 ಮುಂಜಾನೆ 11.00 ಗಂಟೆ ಸಾಧ್ಯವಿದ್ದಲ್ಲಿ. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 15.03.2022 ಮುಂಜಾನೆ 11.00 ಗಂಟೆ ಸಾಧ್ಯವಿದ್ದಲ್ಲಿ.
**Indent Nos.: Raichur: 36866/CALL-2, 36874/CALL-2 & 37759/CALL-2. Sindhanur: 36697/CALL-2.**
ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್‌ಸೈಟ್ http://eproc.karnataka.gov.in ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು., ಗ್ರಾ.ನೀ.ಸ & ನೈ.ವಿಭಾಗ, ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/660/ಎಂ.ಸಿ.&ಎ/2021–22

ಕರ್ನಾಟಕ ಸರಕಾರ
**ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು**
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(67ಇ)/(63ಇ):2021–22:ಜೆಇ–2 ದಿನಾಂಕ: 02.03.2022
**ಅಲ್ಪಾವಧಿ ಟೆಂಡರ್ ಪ್ರಕಟಣೆ / ಸಮಯಾವಧಿ ವಿಸ್ತರಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)**
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ (1) ಇಂಡೆಂಟ್ ನಂ. 148802, 148698, 150060, 149998 ಲೆಕ್ಕಶೀರ್ಷಿಕೆ: 5054 ಎಸ್.ಸಿ.ಪಿ & ಟಿ.ಎಸ್.ಪಿ ಉಪಯೋಜನೆಯ ಕಾಮಗಾರಿಗಳು ಮತ್ತು (2) ಇಂಡೆಂಟ್ ನಂ. 149775 ಲೆಕ್ಕಶೀರ್ಷಿಕೆ: 3054 ರಾಜ್ಯ ಹೆದ್ದಾರಿ ನಿರ್ವಹಣಾ ಕಾಮಗಾರಿ (ಮಳೆಹಾನಿ) ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
(3) ಇಂಡೆಂಟ್ ನಂ. 149476 ಲೆಕ್ಕಶೀರ್ಷಿಕೆ: 5054 ಎಸ್.ಸಿ.ಪಿ ಯೋಜನೆ ಈ ಕಾಮಗಾರಿಗೆ ಸಮಯಾವಧಿ ವಿಸ್ತರಣೆ ಮಾಡಲಾಗಿದೆ. ಈ ಮೇಲಿನ ಎಲ್ಲಾ ಕಾಮಗಾರಿಗಳಿಗೆ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 11.03.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. (ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.88.00 ಲಕ್ಷ, ಗರಿಷ್ಠ ಅಂದಾಜು ಮೊತ್ತ ರೂ.600.00 ಲಕ್ಷ) ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
DIPR/MNG/MCA/1085/21-22 dt.02.03.2022

**ಕೃಷಿ ವಿಶ್ವವಿದ್ಯಾಲಯ, ಧಾರವಾಡ**
ಕುಲಸಚಿವರ ಕಾರ್ಯಾಲಯ
ಸಂಖ್ಯೆ:ಕುಸ:ನೇವಿ:ಜಾಹಿ–53(ಎ):2021–22 ದಿನಾಂಕ: 02.03.2022
**ಅಧಿಸೂಚನೆ**
ವಿಷಯ: ಧಾರವಾಡ ಕೃವಿವಿಯಲ್ಲಿ ಸಹಾಯಕ / ಸಹಾಯಕ–ಕಂ–ಕಂಪ್ಯೂಟರ್ ಅಪರೇಟರ್ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಕುರಿತು.
ಉಲ್ಲೇಖ : 1. ಅಧಿಸೂಚನೆ ಸಂಖ್ಯೆ:ಕುಸ:ನೇವಿ:ಜಾಹಿ–53:2015 ದಿನಾಂಕ 11.9.2015
2. ಅಧಿಸೂಚನೆ ಸಂಖ್ಯೆ:ಕುಸ:ನೇವಿ:ಜಾಹಿ–53(ಎ):2018 ದಿನಾಂಕ 15.10.2018
ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಉಲ್ಲೇಖಿತ ಅಧಿಸೂಚನೆಗಳ ಮೂಲಕ ಜಾಹೀರುಪಡಿಸಲಾದ ಸಹಾಯಕ / ಸಹಾಯಕ–ಕಂ–ಕಂಪ್ಯೂಟರ್ ಅಪರೇಟರ್ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ 20.03.2022 (ಭಾನುವಾರ) ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣವನ್ನು (www.uasd.edu) ವೀಕ್ಷಿಸಬಹುದು.
ಸಹಿ/– ಕುಲಸಚಿವರು

**ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ**
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು–560 001. ದೂರವಾಣಿ ಸಂಖ್ಯೆ: +91–80–29619801
ಮಿಂಚ್ ಅಂಚೆ: latha.mdksmscl@gmail.com
No: HFW/KSMSCL/EQPT(2)/ F.B Mannequin/41/2021-2022 (IND-822) Dated: 02/03/2022
**ಟೆಂಡರ್ ಪ್ರಕಟಣೆ**
ಉಲ್ಲೇಖ : 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT(2)/ F.B Mannequin/41/2021-2022 Date: 02/03/2022. (IND-822)
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್‌ಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
1. Re-Tender For Supply Of Full Body Mannequins + CPR With AED Mannequins Under State Health Programme. (IND-822 CALL-3)
ತಾಂತ್ರಿಕ ವಿವರಣೆ, ಇ.ಎಮ್.ಡಿ ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ https://eproc.karnataka.gov.in ನಲ್ಲಿ ದಿನಾಂಕ: 02/03/2022 ರಿಂದ ಟೆಂಡರ್‌ಗಳ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.
DIPR/DDU/AAPL/RO3579/21-22
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಪ್ರವಾಸೋದ್ಯಮ ಇಲಾಖೆ**
ಪ್ರವಾಸೋದ್ಯಮ ನಿರ್ದೇಶಕರ ಕಛೇರಿ, 4ನೇ ಮಹಡಿ, ಎಂಬಸ್ಸಿ ಐಕಾನ್, ಇನ್ಫ್ಯಾಂಟ್ರಿ ರಸ್ತೆ, ವಸಂತನಗರ, ಬೆಂಗಳೂರು–560001
ಇ–ಮೇಲ್ : director@karnatakatourism.org ದೂರವಾಣಿ – 080–22352525
ಸಂ. ಪ್ರಇ/ಯೋ–04/30/2015–16 ದಿನಾಂಕ : 02–03–2022
**ಟೆಂಡರ್ ಪ್ರಕಟಣೆ**
ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರುರವರ ಕಛೇರಿ ಜಂಟಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರಿಂದ ಪ್ರವಾಸೋದ್ಯಮವನ್ನು ಉತ್ತೇಜಿಸುವ/ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಿದ್ದು, ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಟೆಂಡರ್ ಸಂಗ್ರಹಣೆ ವೇದಿಕೆಯಲ್ಲಿ ಲಭ್ಯವಿರುತ್ತದೆ.

| ಕ್ರ | ಕಾಮಗಾರಿಯ ಹೆಸರು | ಟೆಂಡರ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಟೆಂಡರ್ ವೇಳಾಪಟ್ಟಿ |
|---|---|---|---|
| 1 | ಸಾರ್ವಜನಿಕ ಸಹಭಾಗಿತ್ವದಲ್ಲಿ ರೋಪ್–ವೇಅನ್ನು ಅಳವಡಿಸುವ ಯೋಜನೆಯ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (DBFOT) ಆಧಾರದ ಮೇಲೆ ನಂದಿ ಬೆಟ್ಟದಲ್ಲಿ ಪ್ರಯಾಣಿಕರ ರೋಪ್‌ವೇಗಳ ಅಭಿವೃದ್ಧಿ ಮತ್ತು ಕಾರ್ಯಾಚರಣೆಗಾಗಿ ಖಾಸಗಿ ಪಾಲುದಾರರ ಆಯ್ಕೆಗೆ ಟೆಂಡರ್ ಆಹ್ವಾನಿಸಲು | RFP/RFQ/TENDER/01/NANDI HILLS/2021-22 ದಿನಾಂಕ : 28–02–2022 | ಬಿಡ್‌ಅನ್ನು ಸಲ್ಲಿಸಲು ಅಂತಿಮ ದಿನಾಂಕ: 13.04.2022 15.00 ಗಂಟೆಯವರೆಗೆ ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ: 14.04.2022 16.00 ಗಂಟೆಯವರೆಗೆ |
| 2 | ಪ್ರಸಾದ್ ಯೋಜನೆಯಡಿ ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಿ ದೇವಸ್ಥಾನದ ಅಭಿವೃದ್ಧಿಗಾಗಿ ವಿವರವಾದ ಯೋಜನಾ ವರದಿ, ಬಿಡ್ ಪ್ರಕ್ರಿಯೆ ನಿರ್ವಹಣೆ ಮತ್ತು ಯೋಜನಾ ನಿರ್ವಹಣೆಯ ಸಲಹೆಗಾರರನ್ನು ಆಯ್ಕೆಮಾಡಲು | RFP/TENDER/01/MYSURU/PRASHAD/2021-22 ದಿನಾಂಕ : 25–02–2022 | ಬಿಡ್‌ಅನ್ನು ಸಲ್ಲಿಸಲು ಅಂತಿಮ ದಿನಾಂಕ: 10.03.2022 15.30 ಗಂಟೆಯವರೆಗೆ ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ: 11.03.2022 16.30 ಗಂಟೆಯವರೆಗೆ |

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-procurement platform) https://www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು, ಇ.ಎಂ.ಡಿ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು https://www.eproc.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಬಿಡ್ಡುದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವುದು ಅಗತ್ಯವಿರುತ್ತದೆ.
ಟಿಪ್ಪಣಿ: 1. ಈ ಕೆಳಗೆ ಸಹಿಮಾಡಿದವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣ ರದ್ದುಗೊಳಿಸುವ / ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗುವುದು.
ಸಹಿ/– ಜಂಟಿ ನಿರ್ದೇಶಕರು, ಟೆಂಡರ್ ಆಹ್ವಾನ ಪ್ರಾಧಿಕಾರಿ ಪ್ರವಾಸೋದ್ಯಮ ಇಲಾಖೆ.
ವಾ.ಸಂ.ಇ/ಬೆಂ.ನಗರ/ಶ್ರೇಷ್ಠ/3580/2021–22
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಕರ್ನಾಟಕ ಗೃಹ ಮಂಡಳಿ**
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
ಸಂಖ್ಯೆ:ಕಗೃಮಂ/ಇ–ಹರಾಜು ಕೋಶ/ಇ–ಹರಾಜು ಪ್ರಕಟಣೆ–8/2021–22 ದಿನಾಂಕ:02.03.2022
**ಬಿಡ್ ಮಾಡಿ!!**
ಕರ್ನಾಟಕ ಗೃಹ ಮಂಡಳಿಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ ಮೂಲೆ ನಿವೇಶನ/ಮನೆ/ಫ್ಲಾಟ್/ವಾಣಿಜ್ಯ ನಿವೇಶನಗಳ
ಇ–ಹರಾಜು ಪ್ರಕಟಣೆ – 8 ದಿನಾಂಕ: 02.03.2022
ಕರ್ನಾಟಕ ಗೃಹ ಮಂಡಳಿಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ವಿವಿಧ ಬಡಾವಣೆಗಳಲ್ಲಿ ಖಾಲಿ ಇರುವ ವಿವಿಧ ವರ್ಗದ ಮೂಲೆ ನಿವೇಶನ/ಮನೆ/ಫ್ಲಾಟ್‌ಗಳು/ವಾಣಿಜ್ಯ ನಿವೇಶನಗಳನ್ನು ಇ–ಹರಾಜು ಮೂಲಕ ವಿಲೇವಾರಿ ಮಾಡಲು ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಿಸಿದೆ. ಸದರಿ ಸ್ವತ್ತುಗಳನ್ನು "ಎಲ್ಲಿ ಹೇಗಿವೆಯೋ ಹಾಗೆ ಇರುವ ಸ್ಥಿತಿಯಲ್ಲಿ" ಹರಾಜು ಮಾಡಲಾಗುವುದು.
ಈ ಹರಾಜನ್ನು ತೆರೆಯುವ ದಿನಾಂಕ ಮತ್ತು ಸಮಯ: 03.03.2022, ಬೆಳಿಗ್ಗೆ 10:00 ಗಂಟೆಯಿಂದ
ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 10.03.2022 ಬೆಳಿಗ್ಗೆ 9:00 ಗಂಟೆಯವರೆಗೆ
ಈ ಕೆಳಕಂಡ ಬಡಾವಣೆಗಳಲ್ಲಿನ ನಿವೇಶನಗಳು ಇ–ಹರಾಜಿಗೆ ಲಭ್ಯವಿರುತ್ತವೆ:
1. ಬೆಳಗಾವಿ ಜಿಲ್ಲೆ, ಬಸವನಕುಡಚಿ ಬಡಾವಣೆ, 2. ಬಾಗಲಕೋಟೆ ಜಿಲ್ಲೆ, ಸಿಕ್ಕೇರಿ ಬಡಾವಣೆ,
3. ಬೆಂಗಳೂರು ಜಿಲ್ಲೆ, ಹುಸ್ಕೂರು ಬಡಾವಣೆ. 4. ಹಾಸನ ಜಿಲ್ಲೆ, ಚನ್ನಪಟ್ಟಣ ಬಡಾವಣೆ.
ಇ–ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳು ಹಾಗೂ ಸ್ವತ್ತುಗಳ GEO-TAGGING ವೀಕ್ಷಿಸಲು https://www.khb.karnataka.gov.in ಗೆ ಭೇಟಿ ನೀಡಿ
ಇ–ಹರಾಜಿನಲ್ಲಿ ನೋಂದಣಿಯಾಗಿ ಬಿಡ್ ಮಾಡಲು https://www.eproc.karnataka.gov.in ಗೆ ಭೇಟಿ ನೀಡಿ ಮತ್ತು E-PROCUREMENT PORTAL ನ ಯಾವುದೇ ಮಾಹಿತಿಗಾಗಿ E-PROCUREMENT ನ ಸಹಾಯವಾಣಿಗೆ ಕರೆ ಮಾಡಿ
"ಇ–ಹರಾಜಿನಲ್ಲಿ ನೊಂದಣಿಗಾಗಿ ಕೊನೆಯ ದಿನಾಂಕದವರೆಗೆ ಕಾಯಬೇಡಿ"
ಕರ್ನಾಟಕ ಗೃಹ ಮಂಡಳಿಯಿಂದ ಪ್ರತಿ ತಿಂಗಳು ಇ–ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುತ್ತಿದ್ದು, ಹರಾಜು ಪ್ರಕಟಣೆಗಾಗಿ ಮಂಡಳಿಯ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/BAN.U/KC/3582/2021-22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹುಬ್ಬಳ್ಳಿಯಲ್ಲಿ ಬುಧವಾರ ನಡೆದ ಸಿದ್ಧಾರೂಢ ಸ್ವಾಮಿ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತ ಸಾಗರ —ಪ್ರಜಾವಾಣಿ ಚಿತ್ರ/ ಗೋವಿಂದರಾಜ್ ಜವಳಿ

ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಬುಧವಾರ ಸಿದ್ಧಲಿಂಗೇಶ್ವರ ಸ್ವಾಮಿ ರಥೋತ್ಸವ ನೆರವೇರಿತು —ಪ್ರಜಾವಾಣಿ ಚಿತ್ರ/ ಚಂದನ್

# ಕುವೆಂಪು ವಿವಿ ಪರೀಕ್ಷಾಂಗ ಕುಲಸಚಿವ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

**ಶಿವಮೊಗ್ಗ:** ದೂರ ಶಿಕ್ಷಣ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸಿದ್ದ ಕುವೆಂಪು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಸಿ.ಎಂ. ತ್ಯಾಗರಾಜ ಅವರನ್ನು ಸರ್ಕಾರ ವರ್ಗಾವಣೆ ಮಾಡಿದೆ.

ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ವ್ಯವಹಾರ ನಿರ್ವಹಣಾ ಶಾಸ್ತ್ರ ವಿಭಾಗದಲ್ಲಿ ಕಾರ್ಯ ನಿರ್ವಹಿಸುವಂತೆ ಸೂಚಿಸಲಾಗಿದೆ. ಅವರ ಜಾಗಕ್ಕೆ ಮಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರೊ.ಎಸ್.ಕೆ. ನವೀನ್‌ಕುಮಾರ್ ಅವರನ್ನು ನೇಮಿಸಲಾಗಿದೆ.

ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣ ನಿರ್ದೇಶನಾಲಯ 2019–20ನೇ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೇ ದಿಢೀರ್ ಫಲಿತಾಂಶ ಪ್ರಕಟಿಸಿರುವುದು, ತನ್ನ ವ್ಯಾಪ್ತಿಯ ಆಯ್ದ ಅಧ್ಯಯನ ಕೇಂದ್ರಗಳಿಗಷ್ಟೇ ಫಲಿತಾಂಶದ ಪಟ್ಟಿ ರವಾನಿಸಿರುವುದು ಹಣಕಾಸಿನ ಅವ್ಯವಹಾರ ಶಂಕೆಗೆ ಪುಷ್ಟಿ ನೀಡಿದೆ ಎಂದು ‘ಪ್ರಜಾವಾಣಿ’ ಫೆ.12ರ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು.

# ಸಿಟಿಒ ಜೈಲು ಶಿಕ್ಷೆ ಕಾಯಂಗೊಳಿಸಿದ ಹೈಕೋರ್ಟ್

**ಬೆಂಗಳೂರು:** ಚೆಕ್ ಪೋಸ್ಟ್‌ನಲ್ಲಿ ತಡೆ ಹಿಡಿಯಲಾಗಿದ್ದ ಲಾರಿ ಬಿಡುಗಡೆ ಮಾಡಲು ₹ 5 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ (ಸಿಟಿಒ) ಪದ್ಮನಾಭ ಅವರಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ಹೈಕೋರ್ಟ್ ಕಾಯಂಗೊಳಿಸಿದೆ.

ಶಿಕ್ಷೆ ರದ್ದುಪಡಿಸುವಂತೆ ಕೋರಿ ಪದ್ಮನಾಭ ಸಲ್ಲಿಸಿದ್ದ ಮೇಲ್ಮನವಿಯನ್ನು ಕಲಬುರಗಿ ಪೀಠದಲ್ಲಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ, ವಿಶೇಷ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ಕಾಯಂಗೊಳಿಸಿದೆ. ‘ಅಪರಾಧಿಯು ಶಿಕ್ಷೆ ಅನುಭವಿಸಲು ಮಾರ್ಚ್ 15 ಅಥವಾ ಅದಕ್ಕೂ ಮೊದಲು ವಿಚಾರಣಾ ನ್ಯಾಯಾಲಯದ ಮುಂದೆ ಶರಣಾಗಬೇಕು’ ಎಂದು ಪದ್ಮನಾಭ ಅವರಿಗೆ ತಾಕೀತು ಮಾಡಿದೆ.

**ಪ್ರಕರಣವೇನು?:** ರಾಯಪುರದಿಂದ ಕೊಪ್ಪಳಕ್ಕೆ ₹ 40 ಲಕ್ಷ ಮೌಲ್ಯದ ಸಾಮಗ್ರಿ ಸಾಗಿಸುತ್ತಿದ್ದ ಲಾರಿಯೊಂದನ್ನು ವಿಜಯಪುರ ಜಿಲ್ಲೆಯ ಧೂಳಖೇಡ್ ಚೆಕ್ ಪೋಸ್ಟ್ ಬಳಿ ವಾಣಿಜ್ಯ ಇಲಾಖೆ ಅಧಿಕಾರಿಗಳು 2008ರ ಡಿಸೆಂಬರ್‌ನಲ್ಲಿ ವಶಕ್ಕೆ ಪಡೆದಿದ್ದರು. ಲಾರಿ ಬಿಡುಗಡೆಗಾಗಿ ಸಿಟಿಒ ಪದ್ಮನಾಭ ₹ 15 ಲಕ್ಷದ ಲಂಚದ ಬೇಡಿಕೆ ಇರಿಸಿದ್ದರು. ನಂತರ ₹ 5 ಲಕ್ಷ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರು ಅವರನ್ನು ಬಂಧಿಸಿದ್ದರು.

ವಿಜಯಪುರದ ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ 2015ರ ಏಪ್ರಿಲ್ 6ರಂದು ಪದ್ಮನಾಭ ಅವರನ್ನು ದೋಷಿ ಎಂದು ತೀರ್ಮಾನಿಸಿತ್ತು. ಭ್ರಷ್ಟಾಚಾರ ತಡೆ ಕಾಯ್ದೆಯ ಕಲಂ 7ರ ಅಡಿಯಲ್ಲಿ ಎರಡೂವರೆ ವರ್ಷ ಜೈಲು ಶಿಕ್ಷೆ ಮತ್ತು ₹ 1 ಲಕ್ಷ ದಂಡ ವಿಧಿಸಿತ್ತು. ಕಲಂ 13 (1)(ಡಿ) ಅಡಿಯಲ್ಲಿ ₹1.5 ಲಕ್ಷ ದಂಡ ಹಾಗೂ 4 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.

### ಹಿಂದಿನಂತೆ ಸಿಇಟಿ ವ್ಯವಸ್ಥೆಗೆ ಆಗ್ರಹ

# ‘ನೀಟ್’ ರದ್ದು ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉಕ್ರೇನ್‌ನಲ್ಲಿ ರಷ್ಯಾ ನಡೆಸಿದ ಶೆಲ್ ದಾಳಿಯಲ್ಲಿ ಹಾವೇರಿಯ ನವೀನ್ ಸಾವಿಗೀಡಾದ ಬಳಿಕ, ವೈದ್ಯಕೀಯ ಕಾಲೇಜುಗಳ ಪ್ರವೇಶ ಪ್ರಕ್ರಿಯೆಯ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ‘ನವೀನ್ ಸಾವಿಗೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಕಾರಣವಾಗಿದೆ. ನೀಟ್ ರದ್ದುಪಡಿಸಬೇಕು’ ಎಂದು ಒತ್ತಾಯಿಸಿ ಟ್ವಿಟರ್‌ನಲ್ಲಿ ಬುಧವಾರ ಬೃಹತ್ ಅಭಿಯಾನ ನಡೆಯಿತು.

ಕರ್ನಾಟಕ ರಕ್ಷಣಾ ವೇದಿಕೆ ಆರಂಭಿಸಿದ ಅಭಿಯಾನಕ್ಕೆ 20 ಸಾವಿರಕ್ಕೂ ಹೆಚ್ಚು ಮಂದಿ ಪ್ರತಿಕ್ರಿಯಿಸಿ ದರು. ಕೆಲವರು ವ್ಯಂಗ್ಯಚಿತ್ರಗಳನ್ನು ಲಗತ್ತಿಸುವ ಮೂಲಕ ಅಭಿಯಾನವನ್ನು ಬೆಂಬಲಿಸಿದರು.

‘ಕನ್ನಡದ ಹುಡುಗ ನವೀನ್ ಸಾವಿನ ಹೊಣೆ ಹೊರುವವರು ಯಾರು? ಒಂದೆಡೆ ವೈದ್ಯಕೀಯ ಸೀಟಿಗೆ ಕೋಟ್ಯಂತರ ರೂಪಾಯಿ ಬಾಚುವ ಕ್ಯಾಪಿಟೇಷನ್ ಲಾಬಿ, ಇನ್ನೊಂದೆಡೆ ಕನ್ನಡಿಗರ ಹಕ್ಕುಗಳನ್ನು ಕಸಿಯುತ್ತಿರುವ ನೀಟ್ ಎಂಬ ಷಡ್ಯಂತ್ರ. ಬಲಿಯಾಗುತ್ತಿರುವುದು ಕನ್ನಡಿಗರು’ ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ಟ್ವೀಟ್ ಮಾಡಿದ್ದಾರೆ.

‘ಉತ್ತರ ಪ್ರದೇಶ 21 ಕೋಟಿ ಜನಸಂಖ್ಯೆ ಹೊಂದಿದೆ. ಆದರೆ, 6.5 ಕೋಟಿ ಜನಸಂಖ್ಯೆಯ ಕರ್ನಾಟಕದಲ್ಲಿ ಇರುವಷ್ಟು ವೈದ್ಯಕೀಯ ಕಾಲೇಜುಗಳು ಆ ರಾಜ್ಯದಲ್ಲಿ ಇಲ್ಲ! ನೀಟ್ ಜಾರಿಗೆ ಬಂದಿದ್ದು ಈ ಕಾರಣಕ್ಕೆ. ಒಟ್ಟು 69 ವೈದ್ಯಕೀಯ ಕಾಲೇಜುಗಳೊಂದಿಗೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಆದರೆ, ಕನ್ನಡದ ಮಕ್ಕಳಿಗೇ ವೈದ್ಯಕೀಯ ಸೀಟು ಇಲ್ಲ. ನೀಟ್ ಹೆಸರಲ್ಲಿ ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ. ಕರ್ನಾಟಕದ ಕಾಲೇಜುಗಳಲ್ಲಿ ಉತ್ತರ ಭಾರತೀಯರನ್ನು ತುಂಬುವ ಯೋಜನೆಯೇ ನೀಟ್. ಮತ್ತೇನೂ ಅಲ್ಲ’ ಎಂದು ವಿವರಿಸಿದ್ದಾರೆ.

ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ಜಿ.ಸಿ. ಚಂದ್ರಶೇಖರ್, ‘ಕರ್ನಾಟಕದ ಜನಸಂಖ್ಯೆಗಿಂತಲೂ ಮೂರು ಪಟ್ಟು ಹೆಚ್ಚು ಇರುವ ಉತ್ತರ ಪ್ರದೇಶದಲ್ಲಿ ಕೇವಲ 55 ವೈದ್ಯಕೀಯ ಕಾಲೇಜುಗಳಿವೆ. ನಾವು ಕಷ್ಟಪಟ್ಟು ಕಟ್ಟಿಕೊಂಡ ಸೌಕರ್ಯಗಳನ್ನು ಬೇರೆಯವರಿಗೆ ಬಿಟ್ಟುಕೊಡುವಂತಾಯಿತು! ಕನ್ನಡಿಗರದ್ದು ಜಾಗ ಮತ್ತು ಮೂಲಸೌಕರ್ಯಗಳು. ಆದರೆ, ಫಲಾನುಭವಿಗಳು ಮಾತ್ರ ಕನ್ನಡಿಗರಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.

ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ಜಿ.ಸಿ. ಚಂದ್ರಶೇಖರ್, ‘ಕರ್ನಾಟಕದ ಜನಸಂಖ್ಯೆಗಿಂತಲೂ ಮೂರು ಪಟ್ಟು ಹೆಚ್ಚು ಇರುವ ಉತ್ತರ ಪ್ರದೇಶದಲ್ಲಿ ಕೇವಲ 55 ವೈದ್ಯಕೀಯ ಕಾಲೇಜುಗಳಿವೆ. ನಾವು ಕಷ್ಟಪಟ್ಟು ಕಟ್ಟಿಕೊಂಡ ಸೌಕರ್ಯಗಳನ್ನು ಬೇರೆಯವರಿಗೆ ಬಿಟ್ಟುಕೊಡುವಂತಾಯಿತು! ಕನ್ನಡಿಗರದ್ದು ಜಾಗ ಮತ್ತು ಮೂಲಸೌಕರ್ಯಗಳು. ಆದರೆ, ಫಲಾನುಭವಿಗಳು ಮಾತ್ರ ಕನ್ನಡಿಗರಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.

‘ತಮಿಳುನಾಡು ನೀಟ್ ತೆಗೆದು ಹಾಕಲು ಹೋರಾಟ ಮಾಡುತ್ತಿದ್ದರೆ, ನಾವಿಲ್ಲಿ ಕಿತ್ತಾಡುತ್ತಿದ್ದೇವೆ. ದ್ವಿತೀಯ ಪಿಯುಸಿಯಲ್ಲಿ ಶೇ 97ರಷ್ಟು ಅಂಕಗಳನ್ನು ತೆಗೆದರೂ ನಮ್ಮಲ್ಲಿ ನವೀನ್‌ಗೆ ವೈದ್ಯಕೀಯ ಸೀಟ್ ಸಿಗಲಿಲ್ಲ. ಅದಕ್ಕೆ ಕಾರಣ ನೀಟ್. ಈ ಪರೀಕ್ಷೆಯನ್ನು ಮೊದಲು ರದ್ದುಮಾಡಿ. ಸಿಇಟಿ ಮರುಸ್ಥಾಪಿಸಿ’ ಎಂದು ರೂಪೇಶ್ ರಾಜಣ್ಣ ಎನ್ನುವವರು ಟ್ವೀಟ್ ಮಾಡಿದ್ದಾರೆ.

‘ವೈದ್ಯಕೀಯ ಕಾಲೇಜುಗಳಿಗೆ ಭೂಮಿ ಮತ್ತು ಮೂಲಸೌಕರ್ಯ ಕಲ್ಪಿಸಲು ರಾಜ್ಯ ಸರ್ಕಾರ ನೆರವು ನೀಡುತ್ತದೆ. ಆದರೆ, ನಮ್ಮ ಮಕ್ಕಳ ಅವಕಾಶಗಳನ್ನು ಕೇಂದ್ರ ಸರ್ಕಾರ ಕಬಳಿಸುತ್ತಿದೆ’ ಎಂದು ಶ್ರುತಿ ಮರುಳಪ್ಪ ಟ್ವೀಟ್ ಮಾಡಿದ್ದಾರೆ.

‘ಇದು ಸರಿಯಾದ ಸಮಯ. ಎಲ್ಲ ಖಾಸಗಿ ವೈದ್ಯಕೀಯ, ಎಂಜಿನಿಯರಿಂಗ್ ಕಾಲೇಜುಗಳ ರಾಷ್ಟ್ರೀಕರಣವಾಗಬೇಕು. ಸರ್ಕಾರ ಉನ್ನತ ಹಂತದ ಶಿಕ್ಷಣಕ್ಕೆ ಕಡಿಮೆ ಶುಲ್ಕ ನಿಗದಿಪಡಿಸಬೇಕು’ ಎಂದು ಪತ್ರಕರ್ತ ದಿನೇಶ್ ಕುಮಾರ್ ಒತ್ತಾಯಿಸಿದ್ದಾರೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

## ‘ಪ್ರತಿಮೆ ನಿರ್ಮಾಣ ಕೈಬಿಡಿ’

‘ನೀಟ್ ಮಾರಕ. ಹೆಚ್ಚು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿ. ಪ್ರತಿಮೆಗಳನ್ನು ನಿರ್ಮಿಸಿ ಹಣ ವ್ಯರ್ಥ ಮಾಡುವ ಬದಲು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿ. ಶೇ 95ಕ್ಕೂ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ವಿದ್ಯಾರ್ಥಿಗಳಿಗೂ ವೈದ್ಯಕೀಯ ಸೀಟುಗಳು ದೊರೆಯುತ್ತಿಲ್ಲ. ಆದ್ದರಿಂದ, ಮೀಸಲಾತಿಯ ಬಗ್ಗೆ ದೂರುವುದನ್ನು ನಿಲ್ಲಿಸಿ, ನೀಟ್ ವ್ಯವಸ್ಥೆ ವಿರುದ್ಧ ಮಾತನಾಡಿ’ ಎಂದು ಚೇತನ್ ಕೃಷ್ಣ ಎನ್ನುವವರು ಟ್ವೀಟ್ ಮಾಡಿದ್ದಾರೆ.

# ‘ನೀಟ್’ನಿಂದ ಬಡ, ಮಧ್ಯಮ ವರ್ಗಕ್ಕೆ ಅನ್ಯಾಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಿಂದ (ನೀಟ್) ಬಡವರು, ಮಧ್ಯಮ ವರ್ಗದವರು ಮತ್ತು ಗ್ರಾಮೀಣ ಪ್ರದೇಶದ ಮಕ್ಕಳ ವೈದ್ಯಕೀಯ ಶಿಕ್ಷಣ ಪಡೆಯುವ ಕನಸು ನುಚ್ಚು ನೂರಾಗಿದೆ. ಈ ವರ್ಗಗಳಿಗೆ ಅನ್ಯಾಯವಾಗುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ವೈದ್ಯಕೀಯ ಶಿಕ್ಷಣಕ್ಕೆ ತಗಲುವ ವೆಚ್ಚದ ಕುರಿತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೀಡಿರುವ ಹೇಳಿಕೆಗೆ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, ‘ನೀಟ್ ಬಂದ ಬಳಿಕ ಟ್ಯೂಷನ್ ದಂಧೆ ಮಿತಿ ಮೀರಿದೆ. ಕೇಂದ್ರ ಸರ್ಕಾರವೇ ಅದಕ್ಕೆ ಪ್ರೋತ್ಸಾಹ ನೀಡುತ್ತಿರುವಂತಿದೆ. ಕೇಂದ್ರ ಸಚಿವರ ಹೇಳಿಕೆಯು ಅನೇಕ ಗುಮಾನಿಗಳಿಗೆ ಕಾರಣವಾಗಿದೆ’ ಎಂದು ಹೇಳಿದ್ದಾರೆ.



ಕುಮಾರಸ್ವಾಮಿ

ನೀಟ್ ಮೂಲಕ ಉನ್ನತ ಶಿಕ್ಷಣವನ್ನು ಉಳ್ಳವರಿಗೆ ಮೀಸಲಿಡಲಾಗಿದೆ. ಬಡವರು, ಮಧ್ಯಮ ವರ್ಗದವರು ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಅವಕಾಶ ನಿರಾಕರಿಸಲಾಗುತ್ತಿದೆ. ಉಕ್ರೇನ್‌ನಲ್ಲಿ ಮೃತಪಟ್ಟ ನವೀನ್ ಅವರಂತಹ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಶೇಕಡ 97ರಷ್ಟು ಅಂಕ ಗಳಿಸಿದ್ದರೂ ನೀಟ್‌ನಲ್ಲಿ ಅವರಿಗೆ ಸೀಟು ಸಿಗುತ್ತಿಲ್ಲ. ಈ ಅನ್ಯಾಯಕ್ಕೆ ಅಂತ್ಯ ಹಾಡಬೇಕಿದೆ ಎಂದಿದ್ದಾರೆ.

‘ನೀಟ್‌ನಿಂದಾಗಿಯೇ ನವೀನ್ ಸಾವು ಸಂಭವಿಸಿದೆ. ಅಲ್ಲಿ ಕಲಿತು ಇನ್ನೊಬ್ಬರ ಜೀವ ಉಳಿಸುವ ಹಂಬಲದೊಂದಿಗೆ ತೆರಳಿದ್ದ ನವೀನ್ ಜೀವ ಕಳೆದುಕೊಂಡಿರುವುದು ‘ವಿಶ್ವಗುರು’ ಆಗಬೇಕೆಂಬ ಭಾರತದ ‘ಆತ್ಮಸಾಕ್ಷಿ’ಗೆ ಪ್ರಶ್ನೆಯಾಗಿದೆ. ಇದು ಭಾರತದ ಶೈಕ್ಷಣಿಕ ಅರಾಜಕತೆಗೆ ಸಾಕ್ಷಿ’ ಎಂದು ಟೀಕಿಸಿದ್ದಾರೆ.

## ‘ನೀಟ್ ವಿರೋಧಿಸುವವರು ಧನದಾಹಿಗಳು’

ಅಶ್ವತ್ಥ ನಾರಾಯಣ

**ಬೆಂಗಳೂರು:** ‘ನೀಟ್ ಪರೀಕ್ಷೆಯ ಮೂಲಕ ವೈದ್ಯಕೀಯ ಶಿಕ್ಷಣ ವ್ಯವಸ್ಥೆ ಸರಿಪಡಿಸುವ ಕೆಲಸ ನಡೆಯುತ್ತಿದೆ. ಇದರಿಂದ ಬಡ ಕುಟುಂಬಗಳ ಮಕ್ಕಳೂ ವೈದ್ಯರಾಗಬಹುದು. ಇದನ್ನು ವಿರೋಧಿಸುವವರು ಬಡವರ ವಿರೋಧಿಗಳು, ಧನದಾಹಿಗಳು ಮತ್ತು ದ್ರೋಹಿಗಳು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ಸುದ್ದಿಗಾರರ ಜತೆಗೆ ಬುಧವಾರ ಮಾತನಾಡಿದ ಅವರು, ಉಕ್ರೇನ್‌ನಲ್ಲಿ ನವೀನ್ ಅವರ ಸಾವು ನೋವಿನ ಸಂಗತಿಯಾಗಿದೆ. ಆದರೆ, ಇದನ್ನೇ ನೆಪವಾಗಿಟ್ಟುಕೊಂಡು ಜಾತಿ ವ್ಯವಸ್ಥೆ ಮತ್ತು ಮೀಸಲಾತಿ ಬಗ್ಗೆ ಮಾತನಾಡುವುದು ಅನುಚಿತವಾಗುತ್ತದೆ ಎಂದು ಅವರು ಹೇಳಿದರು.

ಸರ್ಕಾರವು ಕಡು ಬಡವರು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವವರ ಬಗ್ಗೆಯೂ ಚಿಂತಿಸಬೇಕಾಗುತ್ತದೆ. ಒಂದು ಪ್ರಕರಣವನ್ನು ಇಟ್ಟುಕೊಂಡು ವ್ಯವಸ್ಥೆಯ ಬಗ್ಗೆ ಷರಾ ಬರೆಯುವುದು ಸರಿಯಲ್ಲ ಎಂದು ಅವರು ತಿಳಿಸಿದರು.

‘ಇಡೀ ದೇಶದಲ್ಲೇ ನಮ್ಮ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವೈದ್ಯಕೀಯ ಕಾಲೇಜುಗಳಲ್ಲಿ ಪರಿಶಿಷ್ಟರಿಗೆ ಉಚಿತವಾಗಿ ನೀಡಲಾಗುತ್ತಿದೆ’ ಎಂದರು.

# ದ್ವಿತೀಯ ಪಿಯುಸಿ: ಪರಿಷ್ಕೃತ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದ್ವಿತೀಯ ಪಿಯುಸಿ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ದ್ವಿತೀಯ ಪಿಯು ಪರೀಕ್ಷೆ ಮತ್ತು ಎನ್‌ಟಿಎ ನಡೆಸುವ ಜೆಇಇ ಪರೀಕ್ಷೆಯ ಕೆಲ ವಿಷಯಗಳು ಒಂದೇ ದಿನಾಂಕದಂದು ಬಂದಿರುವ ಕಾರಣ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ದ್ವಿತೀಯ ಪಿಯು ಪರೀಕ್ಷೆ ವೇಳಾಪಟ್ಟಿ (ತಾತ್ಕಾಲಿಕ) ಪರಿಷ್ಕರಿಸಲಾಗಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಟ್ವೀಟ್ ಮಾಡಿದ್ದಾರೆ.

ಏ.22ರಿಂದ ಮೇ 11ರವರೆಗೆ ಪರೀಕ್ಷೆ ನಡೆಯಲಿದೆ. ವೇಳಾಪಟ್ಟಿಯ ಪ್ರಕಾರ, ಏ.22ರಂದು ವ್ಯವಹಾರ ಅಧ್ಯಯನ, 23ರಂದು ಹಿಂದಿ, 25ರಂದು ಅರ್ಥಶಾಸ್ತ್ರ, 26ರಂದು ರಸಾಯನವಿಜ್ಞಾನ, 27ರಂದು ಸಂಸ್ಕೃತ, 28ರಂದು ಕನ್ನಡ, 30ರಂದು ಸಮಾಜಶಾಸ್ತ್ರ, ಮೇ 2ರಂದು ಭೂಗೋಳಶಾಸ್ತ್ರ, ಮೇ 4ರಂದು ಇಂಗ್ಲಿಷ್, 6ರಂದು ಗಣಿತ, 7ರಂದು ಭೂವಿಜ್ಞಾನ ಮತ್ತು ಐಚ್ಛಿಕ ಕನ್ನಡ ಹಾಗೂ ಲೆಕ್ಕಶಾಸ್ತ್ರ, 9ರಂದು ಇತಿಹಾಸ ಮತ್ತು ಭೌತವಿಜ್ಞಾನ, ಮೇ 11ರಂದು ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ ಪರೀಕ್ಷೆಗಳು ನಡೆಯಲಿವೆ.

ಈ ವೇಳಾಪಟ್ಟಿಗೆ ಆಕ್ಷೇಪಗಳನ್ನು ಸಲ್ಲಿಸಲು ಮಾರ್ಚ್ 5ರ ಸಂಜೆ 5ರವರೆಗೆ ಕಾಲಾವಕಾಶ ನೀಡಲಾಗಿದೆ.

ಆಕ್ಷೇಪಗಳನ್ನು jdexam.dpue@gmail.com ಇ–ಮೇಲ್‌ಗೆ ಮಾತ್ರ ಕಳುಹಿಸಬೇಕು. ಅಂಚೆ ಮೂಲಕ ಹಾಗೂ ನಿಗದಿಪಡಿಸಿದ ದಿನಾಂಕದ ನಂತರ ಬರುವ ಆಕ್ಷೇಪಗಳನ್ನು ಪರಿಗಣಿಸುವುದಿಲ್ಲ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

# ಉಡುಪಿ ಜಿಲ್ಲೆಗೆ ರಾಷ್ಟ್ರೀಯ ಪ್ರಶಸ್ತಿ

**ಉಡುಪಿ:** ಮಾದಕ ವಸ್ತುಗಳ ನಿಯಂತ್ರಣ ಹಾಗೂ ಮಕ್ಕಳ ಅಕ್ರಮ ಸಾಗಾಟ ತಡೆ ಕಾಯ್ದೆಯ ಪರಿಣಾಮಕಾರಿ ಜಾರಿ ಹಾಗೂ ಜಾಗೃತಿಗೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ನೀಡುವ ರಾಷ್ಟ್ರೀಯ ಪ್ರಶಸ್ತಿ ಉಡುಪಿ ಜಿಲ್ಲೆಗೆ ಲಭಿಸಿದೆ.

ಬುಧವಾರ ದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲಾ ನೆಹರೂ ಯುವ ಕೇಂದ್ರ ನಿರ್ದೇಶಕ ವಿಲ್ಫ್ರೆಡ್ ಡಿಸೋಜ ಪ್ರಶಸ್ತಿ ಸ್ವೀಕರಿಸಿದರು. ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗೆ ಆಯ್ಕೆಯಾದ 20 ಜಿಲ್ಲೆಗಳಲ್ಲಿ ಉಡುಪಿ ಸೇರಿದ್ದು, ಕರ್ನಾಟಕದ ಏಕೈಕ ಜಿಲ್ಲೆಯಾಗಿದೆ.


ಕಾರ್ಮಿಕ ಇಲಾಖೆ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರೊಂದಿಗೆ ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳ ಅಧ್ಯಕ್ಷರಾದ ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್‌ರವರು ಸಂಚಾರಿ ಚಿಕಿತ್ಸಾ ಘಟಕ (ಶ್ರಮಿಕ್ ಸಂಜೀವಿನಿ)ಕ್ಕೆ ಚಾಲನೆ ನೀಡಿ ಕೀ ಹಸ್ತಾಂತರಿಸುತ್ತಿರುವುದು.

## ಶ್ರಮಿಕರ ಮಕ್ಕಳ ಬಾಳಲ್ಲಿ ಹೊಸ ಆಶಾಕಿರಣ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನುರಿತ ತರಬೇತಿ ಸಂಸ್ಥೆಗಳ ಮೂಲಕ 2021-22ನೇ ಸಾಲಿಗೆ ಯುಪಿಎಸ್‌ಸಿ/ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಆಯ್ಕೆಯಾಗಿರುವ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಪ್ರವೇಶ ಪತ್ರ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ.

ದಿನಾಂಕ: 03.03.2022 ಸಮಯ: ಮಧ್ಯಾಹ್ನ 3:00 ಗಂಟೆಗೆ ಸ್ಥಳ: ಡಾ|| ಪಾಟೀಲ್ ಪುಟ್ಟಪ್ಪ ಸಭಾ ಭವನ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಘನ ಉಪಸ್ಥಿತಿ
ಶ್ರೀ ಪ್ರಲ್ಹಾದ ಜೋಶಿ — ಸನ್ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳ, ಕಲ್ಲಿದ್ದಲು ಮತ್ತು ಗಣಿ ಸಚಿವರು, ಭಾರತ ಸರ್ಕಾರ
ಶ್ರೀ ಬಸವರಾಜ ಹೊರಟ್ಟಿ — ಮಾನ್ಯ ಸಭಾಪತಿಗಳು ಕರ್ನಾಟಕ ವಿಧಾನ ಪರಿಷತ್

ಕಾರ್ಯಕ್ರಮ ಉದ್ಘಾಟನೆ
ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಪ್ರವೇಶ ಪತ್ರ ವಿತರಿಸುವವರು
ಶ್ರೀ ಆಚಾರ ಹಾಲಪ್ಪ ಬಸಪ್ಪ — ಮಾನ್ಯ ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಸಚಿವರು ಮತ್ತು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು
ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಪ್ರವೇಶ ಪತ್ರ ವಿತರಿಸುವವರು
ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್ — ಮಾನ್ಯ ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು, ಕ.ಕ.&ಇ.ನಿ.ಕಾ.ಕ.ಮಂಡಳಿ

ಗೌರವಾನ್ವಿತ ಅತಿಥಿಗಳು
ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ — ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರು

ಅಧ್ಯಕ್ಷತೆ
ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ — ಮಾನ್ಯ ಶಾಸಕರು ಹುಬ್ಬಳ್ಳಿ–ಧಾರವಾಡ

ಮುಖ್ಯ ಅತಿಥಿಗಳು
ಶ್ರೀ ಸಿದ್ದು ಕೆ. ಸವದಿ — ಮಾನ್ಯ ಅಧ್ಯಕ್ಷರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಹುಬ್ಬಳ್ಳಿ ಹಾಗೂ ಶಾಸಕರು, ತೇರದಾಳ
ಶ್ರೀ ಜಗದೀಶ ಶೆಟ್ಟರ — ಮಾನ್ಯ ಶಾಸಕರು, ಹುಬ್ಬಳ್ಳಿ–ಧಾರವಾಡ (ಕೇಂದ್ರ) ಹಾಗೂ ಮಾಜಿ ಮುಖ್ಯಮಂತ್ರಿಗಳು
ಶ್ರೀ ಈರಣ್ಣ ಜಡಿ — ಮಾನ್ಯ ಅಧ್ಯಕ್ಷರು ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಧಾರವಾಡ
ಶ್ರೀ ವಿ.ಎಸ್. ಪಾಟೀಲ — ಮಾನ್ಯ ಅಧ್ಯಕ್ಷರು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ
ಶ್ರೀಮತಿ ಸವಿತಾ ವಿಶ್ವನಾಥ ಅಮರ ಶೆಟ್ಟಿ — ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ರೇಷ್ಮೆ ಮಾರಾಟ ಮಂಡಳಿ
ಶ್ರೀ ಸಿದ್ದನಗೌಡ ಈಶ್ವರಗೌಡ ಚಿಕ್ಕನಗೌಡ್ರ — ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ
ಶ್ರೀ ಅಬ್ಬಯ್ಯ ಪ್ರಸಾದ — ಮಾನ್ಯ ಶಾಸಕರು, ಹುಬ್ಬಳ್ಳಿ–ಧಾರವಾಡ (ಪೂರ್ವ)
ಶ್ರೀ ಎ.ಎಸ್. ಜಯರಾಮ್ (ಮಸಾಲ ಜಯರಾಮ್) — ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹಾಗೂ ಶಾಸಕರು, ತುರುವೇಕೆರೆ
ಶ್ರೀ ಪ್ರದೀಪ ಶೆಟ್ಟರ — ಮಾನ್ಯ ಶಾಸಕರು ವಿಧಾನ ಪರಿಷತ್
ಶ್ರೀ ಎಸ್.ವ್ಹಿ. ಸಂಕನೂರ — ಮಾನ್ಯ ಶಾಸಕರು ವಿಧಾನ ಪರಿಷತ್
ಶ್ರೀ ಸಿ.ಎಂ. ನಿಂಬಣ್ಣನವರ — ಮಾನ್ಯ ಶಾಸಕರು ಕಲಘಟಗಿ
ಶ್ರೀ ಅಮೃತ ಅಯ್ಯಪ್ಪ ದೇಸಾಯಿ — ಮಾನ್ಯ ಶಾಸಕರು ಹುಬ್ಬಳ್ಳಿ–ಧಾರವಾಡ ಗ್ರಾಮೀಣ
ಶ್ರೀ ಸಲೀಂ ಅಹಮ್ಮದ — ಮಾನ್ಯ ಶಾಸಕರು ವಿಧಾನ ಪರಿಷತ್
ಶ್ರೀಮತಿ ಕುಸುಮಾವತಿ ಶಿವಳ್ಳಿ — ಮಾನ್ಯ ಶಾಸಕರು ಕುಂದಗೋಳ
ಶ್ರೀ ನಾಗೇಶ ಮುಂಡಲೀಕಸಾ ಕಲಬುರ್ಗಿ — ಮಾನ್ಯ ಅಧ್ಯಕ್ಷರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ

ಸರ್ವರಿಗೂ ಆದರದ ಸುಸ್ವಾಗತ
ಡಾ|| ಜಿ. ಕಲ್ಪನ, ಭಾ.ಆ.ಸೇ. — ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
ಅಕ್ರಂ ಪಾಷ, ಭಾ.ಆ.ಸೇ. — ಆಯುಕ್ತರು, ಕಾರ್ಮಿಕ ಇಲಾಖೆ
ಗುರುಪ್ರಸಾದ ಎಮ್.ಪಿ., ಭಾ.ಕಂ.ಸೇ. — ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕ.ಕ.&ಇ.ನಿ.ಕಾ.ಕ.ಮಂ.
ನಿತೇಶ್ ಪಾಟೀಲ್, ಭಾ.ಆ.ಸೇ. — ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ
ಪಿ. ಕೃಷ್ಣಕಾಂತ್, ಭಾ.ಪೊ.ಸೇ. — ಪೊಲೀಸ್ ವರಿಷ್ಠಾಧಿಕಾರಿಗಳು, ಧಾರವಾಡ (ಗ್ರಾಮೀಣ)
ಲಾಭು ರಾಮ್, ಭಾ.ಪೊ.ಸೇ. — ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರ
ಲಲಿತಾ ಸಾತೇನಹಳ್ಳಿ — ಕಾರ್ಮಿಕ ಅಧಿಕಾರಿ, ಉಪವಿಭಾಗ–1, ಹುಬ್ಬಳ್ಳಿ
ಮಲ್ಲಿಕಾರ್ಜುನ್ ಎಸ್. ಜೋಗುರ್, — ಕಾರ್ಮಿಕ ಅಧಿಕಾರಿ, ಉಪವಿಭಾಗ–2, ಹುಬ್ಬಳ್ಳಿ
ಕುಮಾರಿ ಶ್ವೇತಾ ಎಸ್., ಕೆ.ಎಲ್.ಎಸ್. — ಸಹಾಯಕ ಕಾರ್ಮಿಕ ಆಯುಕ್ತರು, ಧಾರವಾಡ ವಿಭಾಗ, ಹುಬ್ಬಳ್ಳಿ
ವೆಂಕಟೇಶ ಶಿಂದಿಹಟ್ಟಿ, ಕೆ.ಎಲ್.ಎಸ್. — ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ
ಸುರೇಶ ಇಟ್ನಾಳ್, ಭಾ.ಆ.ಸೇ. — ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ

ಸಾರ್ವಜನಿಕ ಆಸ್ತಿ–ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕೋವಿಡ್–19ರ ಮಾರ್ಗಸೂಚಿಗಳನ್ನು ಪಾಲಿಸೋಣ ಕೊರೋನಾ ವಿರುದ್ಧ ಜಯಗಳಿಸೋಣ

ಕಡ್ಡಾಯವಾಗಿ ಮಾಸ್ಕ್ ಧರಿಸಿ | ಕೈಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ | ದೈಹಿಕ ಅಂತರವನ್ನು ಪಾಲಿಸಿ

ಉಕ್ರೇನ್‌ನ ಹಾರ್ಕಿವ್‌ನಲ್ಲಿರುವ ಕೀವ್ ಟಿ.ವಿ ಟವರ್‌ನ ಪ್ರಧಾನ ಕೇಂದ್ರವನ್ನು ಗುರಿಯಾಗಿಸಿ ಬುಧವಾರ ರಷ್ಯಾ ಪಡೆ ಬಾಂಬ್ ದಾಳಿ ನಡೆಸಿತು – ಪಿಟಿಐ ಚಿತ್ರ

ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಬೆದರಿಕೆ

# ‘3ನೇ ಮಹಾಯುದ್ಧ ಅಣ್ವಸ್ತ್ರದ್ದಾಗಿರಲಿದೆ’

**ಮಾಸ್ಕೊ (ರಾಯಿಟರ್ಸ್):** ಉಕ್ರೇನ್‌ಗೆ ಯಾವುದೇ ರಾಷ್ಟ್ರ ಅಣ್ವಸ್ತ್ರ ನೀಡಿದರೆ ಅದು ನಿಜವಾದ ಅಪಾಯ. ಅದು ಮೂರನೇ ಮಹಾಯುದ್ಧ ಸಂಭವಿಸಲು ದಾರಿಯಾಗಲಿದ್ದು, ಅಣ್ವಸ್ತ್ರ ಬಳಕೆಗೆ ನಾಂದಿ ಹಾಡಲಿದೆ. ಅದು ವಿನಾಶಕಾರಿಯಾಗಿರಲಿದೆ ಎಂದು ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಬೆದರಿಕೆ ಒಡ್ಡಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಸ್ಟೇಟ್ ಆಫ್ ಯುನೈಟೆಡ್‌ನ ಕಾಂಗ್ರೆಸ್ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವಾಗ, ‘ಯುದ್ಧಭೂಮಿಯಲ್ಲಿ ಆತ (ಪುಟಿನ್) ಲಾಭ ಗಳಿಸಬಹುದಾದರೂ, ಆತ ದೀರ್ಘಾವಧಿಯಲ್ಲಿ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದ್ದರು.

ಇದರ ಬೆನ್ನಲೇ ಸರ್ಗೆಯ್ ಬುಧವಾರ ಈ ಹೇಳಿಕೆ ನೀಡಿರುವುದಾಗಿ ‘ಆರ್‌ಐಎ’ ಸುದ್ದಿ ಸಂಸ್ಥೆ ವರದಿಮಾಡಿದೆ.

‘ಬೈಡನ್ ಸಿದ್ಧಪಾಠದ ಭಾಷಣ ಮಾಡಿದ್ದಾರೆ. ಅವರಿಗೆ ಮುಂಬರುವುದು ಏನೆಂಬುದು ತಿಳಿದಿಲ್ಲ’ ಎಂದು ಲಾವ್ರೊವ್ ಕುಟುಕಿದ್ದಾರೆ.

ಉಕ್ರೇನ್‌ನ ಮೇಲೆ ಪೂರ್ಣ ಪ್ರಮಾಣದ ಆಕ್ರಮಣ ಪ್ರಾರಂಭಿಸಿದ ಒಂದು ವಾರದ ನಂತರ, ರಷ್ಯಾ ಪಡೆಗಳು ಬುಧವಾರ ಉಕ್ರೇನ್‌ನ ದಕ್ಷಿಣದಲ್ಲಿನ ಪ್ರಮುಖ ನಗರ ಖೆರ್ಸನ್ ಅನ್ನು ವಶಪಡಿಸಿಕೊಂಡಿವೆ. ಆದರೆ, ಇದನ್ನು ಉಕ್ರೇನ್ ಅಧ್ಯಕ್ಷ ಅಲ್ಲಗಳೆದಿದ್ದು, ‘ನಗರ ನಮ್ಮ ಹಿಡಿತದಲ್ಲೇ ಇದೆ. ರಸ್ತೆಯಲ್ಲಿ ರಷ್ಯಾ ಸೈನಿಕರ ಎದುರು ನಮ್ಮ ಸೈನಿಕರು ಹೋರಾಟ ನಡೆಸುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

## ಜನನಿಬಿಡ ಪ್ರದೇಶ ಗುರಿಯಾಗಿಸಿ ದಾಳಿ

**ಕೀವ್ (ಎಪಿ):** ಉಕ್ರೇನ್ ಮೇಲೆ ಪೂರ್ಣ ಪ್ರಮಾಣದ ಆಕ್ರಮಣಕ್ಕಿಳಿದಿರುವ ರಷ್ಯಾದ ಪಡೆಗಳು ಮಂಗಳವಾರ ಜನನಿಬಿಡ ನಗರ ಪ್ರದೇಶಗಳನ್ನು ಗುರಿಯಾಗಿಸಿ ದಾಳಿ ತೀವ್ರಗೊಳಿಸಿವೆ.

ಹಾರ್ಕಿವ್, ಖೆರ್ಸನ್ ಮತ್ತು ಮರಿಯುಪೋಲ್ ನಗರಗಳನ್ನು ರಷ್ಯಾದ ಪಡೆಗಳು ಸುತ್ತುವರೆದಿವೆ. ಹಾರ್ಕಿವ್‌ನಲ್ಲಿನ ಕೀವ್ ಟಿ.ವಿ ಟವರ್‌ನ ಪ್ರಧಾನ ಕೇಂದ್ರದ ಚೌಕ ಗುರಿಯಾಗಿಸಿ ರಷ್ಯಾ ಬಾಂಬ್ ದಾಳಿ ನಡೆಸಿತು. ದಾಳಿಯಲ್ಲಿ ರಕ್ತಪಾತ, ನರಮೇಧವೇ ನಡೆದುಹೋಗಿದೆ.

ಇದನ್ನು ಘೋರ ಭಯೋತ್ಪಾದನೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ, ‘ಇದನ್ನು ಯಾರೂ ಕ್ಷಮಿಸುವುದಿಲ್ಲ. ಯಾರೂ ಮರೆಯುವುದಿಲ್ಲ’ ಎಂದು ಪ್ರತಿಜ್ಞೆ ಮಾಡಿದರು.

ಮರಿಯುಪೋಲ್‌ನಲ್ಲಿ ಹೆರಿಗೆ ಆಸ್ಪತ್ರೆಯೊಂದರ ಮೇಲೆಯೇ ಬಾಂಬ್ ದಾಳಿ ನಡೆದಿದೆ.

## ದಿನದ ಬೆಳವಣಿಗೆಗಳು

- ಉಕ್ರೇನ್‌ನಲ್ಲಿ ಏಳನೇ ದಿನವೂ ಮುಂದುವರಿದ ರಷ್ಯಾ ಕ್ಷಿಪಣಿ, ಶೆಲ್, ಬಾಂಬ್ ದಾಳಿಗೆ ರಾಜಧಾನಿ ಕೀವ್, ಹಾರ್ಕಿವ್ ನಗರಗಳು ತತ್ತರ. ಜೀವಂತ ಸುಟ್ಟು ಕರಕಲಾದ ಲೆಕ್ಕವಿಲ್ಲದಷ್ಟು ನಾಗರಿಕರು.
- ರಷ್ಯಾ ಅಧ್ಯಕ್ಷ ಪುಟಿನ್, ಉಕ್ರೇನ್ ಇತಿಹಾಸ ಅಳಿಸಲು ಹೊರಟಿದ್ದಾರೆ– ವೊಲೊಡಿಮೀರ್ ಝೆಲೆನ್‌ಸ್ಕಿ ಆಕ್ರೋಶ
- ಸಂಕಷ್ಟದಲ್ಲಿ ಸಿಲುಕಿರುವ ಭಾರತೀಯರ ಕರೆತರಲು ಉಕ್ರೇನ್ ಗಡಿಯತ್ತ ಹೊರಟ ವಾಯುಪಡೆಯ ಸಿ–17 ವಿಮಾನ, ‘ಆಪರೇಷನ್ ಗಂಗಾ’ ಯೋಜನೆಗೆ 31 ವಿಮಾನಗಳ ನಿಯೋಜನೆ, 6,200 ಭಾರತೀಯರನ್ನು ಕರೆತರುವ ಯೋಜನೆ
- ಯುದ್ಧಪೀಡಿತ ಉಕ್ರೇನ್‌ನಲ್ಲಿ ರಷ್ಯಾ ವಿರುದ್ಧ ಅಮೆರಿಕ ಸೇನೆ ಸಂಘರ್ಷಕ್ಕೆ ಇಳಿಯುವುದಿಲ್ಲ– ಅಮೆರಿಕ ಅಧ್ಯಕ್ಷ ಜೋ ಬೈಡನ್ ಸ್ಪಷ್ಟನೆ
- ಯುದ್ಧದಲ್ಲಿ ಈವರೆಗೆ 6 ಸಾವಿರ ರಷ್ಯನ್ ಸೈನಿಕರನ್ನು ಕೊಂದಿದ್ದೇವೆ– ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ
- ಹಾವೇರಿಯ ವಿದ್ಯಾರ್ಥಿ ಸಾವು–ತನಿಖೆ ನಡೆಸುವುದಾಗಿ ರಷ್ಯಾ ಭರವಸೆ
- ಅಮೆರಿಕದಿಂದಲೂ ರಷ್ಯಾ ವಿಮಾನಗಳಿಗೆ ವಾಯು ಮಾರ್ಗ ನಿರ್ಬಂಧ, ರಷ್ಯಾ ವಾಯು ಮಾರ್ಗ ಬಳಸದಿರಲು ತೀರ್ಮಾನ
- ರಷ್ಯಾದ ಜತೆಗೆ ಸಂಪರ್ಕವಿರುವ ಹಡಗುಗಳಿಗೂ ತಮ್ಮ ದೇಶದ ಬಂದರು ಪ್ರವೇಶಿಸದಂತೆ ಬ್ರಿಟನ್ ನಿರ್ಬಂಧ
- ರಷ್ಯಾದ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರುವಲ್ಲಿ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳ ಜತೆಗೆ ಕೈಜೋಡಿಸದಿರಲು ಚೀನಾ ನಿರ್ಧಾರ
- ಭಾರತೀಯರ ಸ್ಥಳಾಂತರಕ್ಕೆ ನಿಯೋಜಿಸಿರುವ ನಾಲ್ವರು ಕೇಂದ್ರ ಸಚಿವರಲ್ಲಿ ಒಬ್ಬರಾದ ಕಾನೂನು ಸಚಿವ ಕಿರಣ್ ರಿಜಿಜು ಸ್ಲೊವಾಕಿಯಾದ ಕೋಶಿಷೆ ನಗರ ತಲುಪಿದರು
- ಉಕ್ರೇನ್ ತೊರೆದು ನೆರೆಯ ರಾಷ್ಟ್ರಗಳಿಗೆ ವಲಸೆ ಹೋಗಿರುವ ನಿರಾಶ್ರಿತರ ಸಂಖ್ಯೆ 8.36 ಲಕ್ಷಕ್ಕೆ ಏರಿಕೆ– ವಿಶ್ವಸಂಸ್ಥೆ
- ಉಕ್ರೇನ್ ಮೇಲಿನ ಆಕ್ರಮಣಕ್ಕೆ ರಷ್ಯಾ ವಿರುದ್ಧ ಆರ್ಥಿಕ ನಿರ್ಬಂಧ ವಿಧಿಸಲು ಮೆಕ್ಸಿಕೊ ನಿರಾಕರಣೆ
- ಉಕ್ರೇನ್‌ನ ನಿರಾಶ್ರಿತರಿಗೆ ಆಶ್ರಯ ನೀಡಲು ಮುಂದಾದ ಜಪಾನ್
- ರಾಜತಾಂತ್ರಿಕತೆ ಮೂಲಕವೇ ಬಿಕ್ಕಟ್ಟು ನಿವಾರಣೆಗೆ ಇಸ್ರೇಲ್ ಒತ್ತಾಯ
- ರಷ್ಯಾ ಮೇಲಿನ ಅಮೆರಿಕ ನಿರ್ಬಂಧದಿಂದ ಭಾರತದ ವಾಯುಪಡೆಗೆ ಯಾವುದೇ ಧಕ್ಕೆ ಇಲ್ಲ

ಹಾರ್ಕಿವ್ ನಗರದಲ್ಲಿಯೇ ಉಳಿದ ಭಾರತೀಯ ವಿದ್ಯಾರ್ಥಿಗಳು

# ರೈಲು ಪ್ರಯಾಣಕ್ಕೆ ಸಿಗದ ಅವಕಾಶ: ನಿರಾಸೆ

• ಸಿದ್ದಯ್ಯ ಹಿರೇಮಠ

**ನವದೆಹಲಿ:** ಯುದ್ಧಪೀಡಿತ ಉಕ್ರೇನ್‌ನ ಪೂರ್ವ ಭಾಗದಲ್ಲಿರುವ ಹಾರ್ಕಿವ್ ನಗರದಲ್ಲಿ ಸಿಲುಕಿಕೊಂಡಿರುವ ಭಾರತೀಯರ ಪರದಾಟ ಬುಧವಾರವೂ ಮುಂದುವರಿದಿದೆ.

ಭಾರತ ಸರ್ಕಾರದ ಸೂಚನೆಯ ಮೇರೆಗೆ ಬೆಳಿಗ್ಗೆಯೇ ರೈಲು ನಿಲ್ದಾಣಕ್ಕೆ ತೆರಳಿದ್ದ 1,200ಕ್ಕೂ ಅಧಿಕ ವಿದ್ಯಾರ್ಥಿಗಳ ಪೈಕಿ ಕೆಲವೇ ವಿದ್ಯಾರ್ಥಿಗಳಿಗೆ ಪಶ್ಚಿಮದಲ್ಲಿರುವ ರೊಮೇನಿಯಾ ಗಡಿಯ ಕಡೆಗಿನ ಪ್ರಯಾಣಕ್ಕೆ ಅವಕಾಶ ದೊರೆತಿದ್ದು, ಮಿಕ್ಕವರು ನಿರಾಸೆ ಅನುಭವಿಸಬೇಕಾಯಿತು.

ಹಾಸ್ಟೆಲ್‌ಗಳು ಮತ್ತು ಬಂಕರ್‌ಗಳಿಂದ ರೈಲು ನಿಲ್ದಾಣಕ್ಕೆ ತೆರಳಿದ್ದ ಭಾರತೀಯರ ಪೈಕಿ 250ಕ್ಕೂ ಅಧಿಕ ಕನ್ನಡಿಗರು ಇದ್ದರು. ಮೊದಲು ಹೊರಟ ರೈಲಿನಲ್ಲಿ ಕೆಲವೇ ಕೆಲವು ವಿದ್ಯಾರ್ಥಿನಿಯರ ಪ್ರಯಾಣಕ್ಕೆ ಮಾತ್ರ ಅವಕಾಶ ನೀಡಿದ ಉಕ್ರೇನ್ ಭದ್ರತಾಪಡೆ ಸಿಬ್ಬಂದಿ, ವಿದ್ಯಾರ್ಥಿಗಳನ್ನು ತಡೆದರು.

‘ನಮ್ಮನ್ನು ಮುಂದಿನ ರೈಲಿನಲ್ಲಿ ಕಳುಹಿಸುವುದಾಗಿ ಭದ್ರತಾಪಡೆ ಸಿಬ್ಬಂದಿ ತಿಳಿಸಿದ್ದರಾದರೂ, ನಂತರ ಬಂದ ರೈಲಿನಲ್ಲಿ ಉಕ್ರೇನ್ ನಾಗರಿಕರಿಗೆ ಮಾತ್ರ ಅವಕಾಶ ಕಲ್ಪಿಸಿ ನಮ್ಮನ್ನು ವಾಪಸ್ ಕಳಿಸಿದರು’ ಎಂದು ಕರ್ನಾಟಕ ಮೂಲದ ವಿದ್ಯಾರ್ಥಿಗಳು ‘ಪ್ರಜಾವಾಣಿ’ಗೆ ದೂರವಾಣಿ ಮೂಲಕ ತಿಳಿಸಿದ್ದಾರೆ.

‘ಬುಧವಾರ ಹಾರ್ಕಿವ್‌ನಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದು, ಅಲ್ಲಿಂದ ಪಲಾಯನ ಮಾಡುವುದೇ ಸೂಕ್ತ ಎಂಬ ನಿರ್ಧಾರ ಕೈಗೊಂಡಿದ್ದೆವು. ಮೇಲ್ವಿಚಾರಕರ ಸೂಚನೆಯ ಮೇರೆಗೆ ಎಲ್ಲ ವಿದ್ಯಾರ್ಥಿಗಳೂ ಬಂಕರ್‌ಗಳಿಂದ ರೈಲು ನಿಲ್ದಾಣಕ್ಕೆ ತೆರಳಿದಾಗ, ಯುದ್ಧಭೂಮಿಯಿಂದ ಸುರಕ್ಷಿತವಾಗಿ ಹೊರಹೋಗುವ ಅವಕಾಶ ಸಿಗಬಹುದು ಎಂಬ ವಿಶ್ವಾಸ ಇತ್ತು. ಒಂದೆರಡು ರೈಲುಗಳನ್ನು ಭರ್ತಿ ಮಾಡಿದ ಭದ್ರತಾಪಡೆ ಸಿಬ್ಬಂದಿ, ಉಕ್ರೇನ್ ನಾಗರಿಕರಿಗೇ ಆದ್ಯತೆ ನೀಡಿದ್ದರಿಂದ ನಮಗೆ ಜಾಗ ಸಿಗಲಿಲ್ಲ’ ಎಂದು ಅವರು ಹೇಳಿದ್ದಾರೆ.

‘250ಕ್ಕೂ ಅಧಿಕ ವಿದ್ಯಾರ್ಥಿನಿಯರು ಎರಡೂ ರೈಲುಗಳಲ್ಲಿ ಪ್ರಯಾಣ ಬೆಳೆಸಿದರು. ಅವರ ಪೈಕಿ ಕರ್ನಾಟಕದ 75ಕ್ಕೂ ಅಧಿಕ ವಿದ್ಯಾರ್ಥಿನಿಯರು ತೆರಳಿದ್ದಾರೆ. ರಾತ್ರಿ ಅಥವಾ ಗುರುವಾರ ಬೆಳಿಗ್ಗೆ ಮತ್ತೆ ಹೊರಡುವ ರೈಲುಗಳಲ್ಲಿ ನಮಗೂ ಸ್ಥಳಾವಕಾಶ ದೊರೆಯಲಿದೆ ಎಂಬ ಭರವಸೆ ಇದೆ’ ಎಂದು ಅವರು ವಿವರಿಸಿದ್ದಾರೆ.

‘ದಿನೇದಿನೇ ಇಲ್ಲಿನ ಸ್ಥಿತಿ ಹದಗೆಡುತ್ತಿದೆ. ರಷ್ಯಾ ಪಡೆಗಳು ಮುನ್ಸೂಚನೆ ಇಲ್ಲದೆಯೇ ದಾಳಿ ನಡೆಸುತ್ತಿವೆ. ಸರ್ಕಾರಿ ಕಟ್ಟಡಗಳತ್ತ ತೆರಳದಂತೆ ನಮಗೆ ಸೂಚಿಸಲಾಗಿದೆ. ನಾಗರಿಕರ ವಸತಿ ಪ್ರದೇಶಗಳ ಮೇಲೂ ಶೆಲ್ ದಾಳಿ ನಡೆಯುವ ಅಪಾಯ ಇದೆ. ಆದಷ್ಟು ಬೇಗ ಇಲ್ಲಿಂದ ಹೊರಹೋದರೆ ಜೀವ ಉಳಿಯಲಿದೆ’ ಎಂದೂ ಹೆಸರು ಬಹಿರಂಗಪಡಿಸಲು ಇಚ್ಛಿಸದ ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.

ರಾಣೆಬೆನ್ನೂರು ತಾಲ್ಲೂಕು ಚಳಗೇರಿಯಲ್ಲಿರುವ ನವೀನ್ ಗ್ಯಾನಗೌಡರ ಮನೆಗೆ ಬುಧವಾರ ಭೇಟಿ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಶೇಖರಪ್ಪ ಮತ್ತು ವಿಜಯಲಕ್ಷ್ಮಿ ಅವರಿಗೆ ಸಾಂತ್ವನ ಹೇಳಿದರು –ಪ್ರಜಾವಾಣಿ ಚಿತ್ರ

## ಜೀವ ಪಣಕ್ಕಿಟ್ಟು ರಾಷ್ಟ್ರಧ್ವಜ ಹಿಡಿದು ಓಡಿದ ಭಾರತೀಯರು

**ಹಾವೇರಿ (ಪಿಟಿಐ):** ಉಕ್ರೇನ್‌ನಲ್ಲಿ ಭಾರತೀಯರು ಸೇರಿ ವಿವಿಧ ರಾಷ್ಟ್ರದ ಜನತೆ ಜೀವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ.

ಉಕ್ರೇನ್‌ನಲ್ಲಿಯ ಹಾರ್ಕಿವ್‌ನಲ್ಲಿ ಅಪಾರ ಸಂಖ್ಯೆಯ ಜನರೊಂದಿಗೆ ಭಾರತೀಯ ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ತಮ್ಮ ಜೀವ ಪಣಕ್ಕಿಟ್ಟು ರಾಷ್ಟ್ರದ ಗುರುತು ತೋರಲು ತ್ರಿವರ್ಣ ಧ್ವಜವನ್ನು ಕೈಯಲ್ಲಿ ಹಿಡಿದು ಬುಧವಾರ ಸನಿಹದ ರೈಲ್ವೆ ನಿಲ್ದಾಣದತ್ತ ದೌಡಾಯಿಸಿದರು ಎಂದು ವಿದ್ಯಾರ್ಥಿಯೊಬ್ಬರ ತಂದೆ ಹೇಳಿದರು.

‘ನಿಲ್ದಾಣವು ಅವರಿದ್ದ ಬಂಕರ್‌ನಿಂದ ಸುಮಾರು 7 ಕಿ.ಮೀ. ದೂರದಲ್ಲಿತ್ತು. ಅಲ್ಲಿಗೆ ತೆರಳಲು ಯಾವುದೇ ವಾಹನ ಲಭ್ಯವಿರಲಿಲ್ಲ’ ಎಂದು ವೆಂಕಟೇಶ್ ವೈಶ್ಯರ್ ಅಳಲು ತೋಡಿಕೊಂಡರು. ವೆಂಕಟೇಶ್ ಅವರ ಪುತ್ರ ಅಮಿತ್ ವಿ.ವೈಶ್ಯರ್ (23) ಹಾರ್ಕಿವ್‌ನ ವೈದ್ಯಕೀಯ ಕಾಲೇಜಿನಲ್ಲಿ ಐದನೇ ವರ್ಷದ ವಿದ್ಯಾರ್ಥಿ.

ಕಾಂಗ್ರೆಸ್ ಜಂಟಿ ಅಧಿವೇಶನದಲ್ಲಿ ಅಮೆರಿಕ ಅಧ್ಯಕ್ಷ ಬೈಡೆನ್

# ರಷ್ಯಾ ವಿರುದ್ಧ ಸಂಘರ್ಷಕ್ಕೆ ಇಳಿಯಲ್ಲ

**ವಾಷಿಂಗ್ಟನ್ (ಎಎಫ್‌ಪಿ/ ಪಿಟಿಐ):** ಯುದ್ಧಪೀಡಿತ ಉಕ್ರೇನ್‌ನಲ್ಲಿ ರಷ್ಯಾದ ವಿರುದ್ಧ ಸಂಘರ್ಷಕ್ಕೆ ಇಳಿಯುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಬುಧವಾರ ಸ್ಪಷ್ಟಪಡಿಸಿದ್ದಾರೆ.

‘ಸ್ಟೇಟ್ ಆಫ್ ಯೂನಿಯನ್’ ಕಾಂಗ್ರೆಸ್ ಜಂಟಿ ಅಧಿವೇಶನವನ್ನು ಮೊದಲ ಬಾರಿಗೆ ಉದ್ದೇಶಿಸಿ ಮಾತನಾಡಿದ ಅವರು, ‘ಉಕ್ರೇನ್‌ನಲ್ಲಿ ರಷ್ಯಾ ಸೇನೆ ವಿರುದ್ಧ ನಮ್ಮ ಪಡೆಗಳು ಸಂಘರ್ಷದಲ್ಲಿ ತೊಡಗಿಸಿಕೊಂಡಿಲ್ಲ ಮತ್ತು ತೊಡಗಿಸಿಕೊಳ್ಳುವುದೂ ಇಲ್ಲ’ ಎಂದು ಹೇಳಿದ್ದಾರೆ.

‘ಎರಡನೇ ಮಹಾಯುದ್ಧದ ಬಳಿಕ ಯುರೋಪಿನಲ್ಲಿ ಶಾಂತಿ ಕಾಪಾಡಲು ನ್ಯಾಟೊ ರಚಿಸಲಾಗಿದೆ. ಈ ಸಂಘರ್ಷದಲ್ಲಿ ಉಕ್ರೇನ್‌ಗೆ ನಮ್ಮ ಸಂಪೂರ್ಣ ಬೆಂಬಲವಿರುತ್ತದೆ’ ಎಂದು ತಿಳಿಸಿದರು.

‘ಯುರೋಪಿನಲ್ಲಿ ಅಮೆರಿಕ ಪಡೆಗಳನ್ನು ನಿಯೋಜಿಸಿರುವುದು ಉಕ್ರೇನ್‌ನಲ್ಲಿ ಹೋರಾಡಲು ಅಲ್ಲ. ಆದರೆ, ಪುಟಿನ್ ಪಶ್ಚಿಮದತ್ತ ನುಗ್ಗಲು ನಿರ್ಧರಿಸಿದರೆ, ನ್ಯಾಟೊ ಮಿತ್ರ ರಾಷ್ಟ್ರಗಳನ್ನು ರಕ್ಷಿಸಲು ಸೇನೆ ನಿಯೋಜಿಸಲಾಗಿದೆ’ ಎಂದರು.

**ರಷ್ಯಾ ಬೆಲೆ ತೆರಲಿದೆ:** ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ನಿರಂಕುಶಾಧಿಕಾರಿ ಎಂದು ಟೀಕಿಸಿರುವ ಬೈಡನ್, ‘ಈ ಯುದ್ಧ ಪೂರ್ವ ಯೋಜಿತ ಮತ್ತು ಅಪ್ರಚೋದಿತ. ಇದಕ್ಕಾಗಿ ರಷ್ಯಾ ಭಾರಿ ಬೆಲೆ ತೆರಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಸರ್ವಾಧಿಕಾರಿಗಳು ತಮ್ಮ ಆಕ್ರಮಣಶೀಲತೆಗೆ ಬೆಲೆ ಸಿಗದಿದ್ದಾಗ ಅವರು ಮತ್ತಷ್ಟು ಅವ್ಯವಸ್ಥೆ ಸೃಷ್ಟಿಸುತ್ತಾರೆ. ಅವರು ಮುನ್ನುಗ್ಗುತ್ತಲೇ ಇರುತ್ತಾರೆ. ಅಮೆರಿಕ ಮತ್ತು ಜಗತ್ತಿಗೆ ವೆಚ್ಚ ಮತ್ತು ಬೆದರಿಕೆಗಳು ಹೆಚ್ಚುತ್ತಲೇ ಇರುತ್ತವೆ. ನಮ್ಮ ಇತಿಹಾಸದುದ್ದಕ್ಕೂ ನಾವು ಈ ಪಾಠ ಕಲಿತಿದ್ದೇವೆ. ಪುಟಿನ್ ಒಡ್ಡಿರುವ ಸವಾಲನ್ನು ಎದುರಿಸಲು ನಾವು ಸಿದ್ಧ’ ಎಂದರು.

ಪುಟಿನ್ ಅವರನ್ನು ಭ್ರಷ್ಟ ಎಂದು ಆಪಾದಿಸಿದ ಬೈಡೆನ್, ‘ಭ್ರಷ್ಟ ನಾಯಕರು ತಮ್ಮ ಹಿಂಸಾತ್ಮಕ ಆಡಳಿತದಿಂದ ಶತಕೋಟಿಗಟ್ಟಲೇ ಡಾಲರ್ ಹಣ ಸಂಪಾದಿಸಿದ್ದಾರೆ’ ಎಂದು ಜರಿದರು.

‘ಪ್ರಜಾಪ್ರಭುತ್ವ ಮತ್ತು ನಿರಂಕುಶಾಧಿಕಾರದ ನಡುವಣ ಯುದ್ಧದಲ್ಲಿ ಇಡೀ ಜಗತ್ತೇ ಶಾಂತಿ ಮತ್ತು ಭದ್ರತೆಯ ಪರವಾಗಿ ನಿಂತಿದೆ. ರಷ್ಯಾ ರಾಜತಾಂತ್ರಿಕತೆಯ ಮಾತುಕತೆಯನ್ನು ತಿರಸ್ಕರಿಸಿದೆ. ಪಶ್ಚಿಮ ಹಾಗೂ ನ್ಯಾಟೊ ರಾಷ್ಟ್ರಗಳು ಪ್ರತಿರೋಧಿಸುವುದಿಲ್ಲವೆಂದು ಪುಟಿನ್ ಭಾವಿಸಿದ್ದರು. ನಮ್ಮನ್ನು ಸುಲಭವಾಗಿ ವಿಭಜಿಸಬಹುದೆಂದುಕೊಂಡಿದ್ದರು. ಆದರೆ, ಪುಟಿನ್ ಗ್ರಹಿಕೆ ತಪ್ಪಾಗಿದೆ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ’ ಎಂದು ಗುಡುಗಿದರು.

ರಷ್ಯಾದ ಮೇಲೆ ಮತ್ತಷ್ಟು ಕಠಿಣ ಆರ್ಥಿಕ ನಿರ್ಬಂಧ ಹೇರುವುದಾಗಿ ಪ್ರಕಟಿಸಿದ ಅವರು, ಅಮೆರಿಕ ವಾಯುಪ್ರದೇಶದಲ್ಲಿ ರಷ್ಯಾದ ವಿಮಾನಗಳಿಗೆ ನಿರ್ಬಂಧ ವಿಧಿಸುವುದಾಗಿ ಘೋಷಿಸಿದರು. ರಷ್ಯಾಕ್ಕೆ ಸಂಬಂಧಿಸಿದ ಐಷಾರಾಮಿ ವಿಹಾರ ನೌಕೆ, ಅಪಾರ್ಟ್‌ಮೆಂಟ್, ಖಾಸಗಿ ಜೆಟ್‌ಗಳನ್ನು ಮುಟ್ಟಗೋಲು ಹಾಕಿಕೊಳ್ಳುವುದಾಗಿಯೂ ಅವರು ಹೇಳಿದರು.



ಅಮೆರಿಕದ ವಾಷಿಂಗ್ಟನ್‌ನಲ್ಲಿ ಬುಧವಾರ ಸ್ಟೇಟ್ ಆಫ್ ದಿ ಯೂನಿಯನ್ ಕಾಂಗ್ರೆಸ್‌ನ ಜಂಟಿ ಅಧಿವೇಶನದಲ್ಲಿ ಅಧ್ಯಕ್ಷ ಜೋ ಬೈಡೆನ್ ಮಾತನಾಡಿದರು. ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಸ್ಪೀಕರ್ ನ್ಯಾನ್ಸಿ ಪೆಲೋಸಿ ಇದ್ದಾರೆ – ಎಎಫ್‌ಪಿ ಚಿತ್ರ

## ‘ಉಕ್ರೇನ್: ಮತ್ತೊಬ್ಬ ವಿದ್ಯಾರ್ಥಿ ಸಾವು’

**ನವದೆಹಲಿ:** ಉಕ್ರೇನ್‌ನಲ್ಲಿ ಭಾರತದ ಮತ್ತೊಬ್ಬ ವಿದ್ಯಾರ್ಥಿ ಬುಧವಾರ ಮೃತಪಟ್ಟಿದ್ದಾರೆ. ಮೃತ ವಿದ್ಯಾರ್ಥಿ ಪಂಜಾಬ್‌ನ ಬರನಾಲಾದ ಚಂದನ್ ಜಿಂದಾಲ್ (22) ಎಂದು ತಿಳಿದು ಬಂದಿದೆ.

ವಿನಿಟ್ಸಯಾ ನಗರದಲ್ಲಿರುವ ವಿನಿಟ್ಸಯಾ ನ್ಯಾಷನಲ್ ಪೈರೊಗೊವ್ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಚಂದನ್ ವ್ಯಾಸಂಗ ಮಾಡುತ್ತಿದ್ದರು. ಮಿದುಳಿಗೆ ರಕ್ತದ ಸಂಚಾರ ನಿಂತು ಉಂಟಾದ ಪಾರ್ಶ್ವವಾಯುವಿನ ಹೊಡೆತಕ್ಕೆ ಒಳಗಾಗಿದ್ದ ಅವರನ್ನು ವಿನಿಟ್ಸಯಾದ ಎಮರ್ಜೆನ್ಸಿ ಹಾಸ್ಪಿಟಲ್‌ಗೆ ದಾಖಲಿಸಲಾಗಿತ್ತು.

ಚಂದನ್ ಪಾರ್ಥಿವ ಶರೀರವನ್ನು ದೇಶಕ್ಕೆ ತರಲು ವ್ಯವಸ್ಥೆ ಮಾಡುವಂತೆ ಅವರ ತಂದೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

## ‘ವಿದೇಶಾಂಗ ಸಚಿವರಿಗೆ ಪತ್ರ’



ದೇವೇಗೌಡ

**ಹಾಸನ:** ‘ಉಕ್ರೇನ್‌ನಲ್ಲಿ ಸಿಲುಕಿರುವ ಕರ್ನಾಟಕದ ವಿದ್ಯಾರ್ಥಿಗಳು ಸೇರಿದಂತೆ ಎಲ್ಲರನ್ನೂ ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಕ್ರಮ ಕೈಗೊಳ್ಳಬೇಕು ಎಂದು ಕೋರಿ ವಿದೇಶಾಂಗ ಸಚಿವರಿಗೆ ಪತ್ರ ಬರೆದಿರುವೆ. ಟ್ವೀಟ್ ಕೂಡಾ ಮಾಡಿರುವೆ’ ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಹೇಳಿದರು.

ಮಹಾಶಿವರಾತ್ರಿ ಅಂಗವಾಗಿ ಹುಟ್ಟೂರು ಹರದನಹಳ್ಳಿಯ ದೇವೇಶ್ವರ ಗುಡಿಗೆ ಕುಟುಂಬ ಸಮೇತರಾಗಿ ಭೇಟಿ ನೀಡಿದ ಬಳಿಕ ಅವರು ಮಾತನಾಡಿ, ‘ಹಾಸನದ ಗಗನ್‌ಗೌಡ ಸೇರಿದಂತೆ ಉಳಿದವರ ಬಗ್ಗೆಯೂ ಸಚಿವರು, ನೋಡಲ್ ಅಧಿಕಾರಿಗಳು, ವಿದೇಶಾಂಗ ಕಾರ್ಯದರ್ಶಿಯ ಗಮನ ಸೆಳೆದಿರುವೆ’ ಎಂದರು.

**ಐವರು ಸುರಕ್ಷಿತ, ಒಬ್ಬರ ಮಾಹಿತಿ ಇಲ್ಲ:** ‘ಉಕ್ರೇನ್‌ಗೆ ತೆರಳಿದ್ದ ಜಿಲ್ಲೆಯ 13 ವಿದ್ಯಾರ್ಥಿಗಳ ಪೈಕಿ ಏಳು ಮಂದಿ ತಾಯ್ನಾಡಿಗೆ ಹಿಂದಿರುಗಿದ್ದಾರೆ. ಐವರು ಸುರಕ್ಷಿತವಾಗಿದ್ದು, ಇನ್ನೊಬ್ಬರ ಮಾಹಿತಿ ಸಿಕ್ಕಿಲ್ಲ’ ಎಂದು ಜಿಲ್ಲಾಧಿಕಾರಿ ಆರ್.ಗಿರೀಶ್ ಸುದ್ದಿಗಾರರಿಗೆ ತಿಳಿಸಿದರು.

# ‘ನಮ್ಮ ಮಕ್ಕಳನ್ನು ಜೀವಂತವಾಗಿ ಕರೆತನ್ನಿ’

ಪ್ರಜಾವಾಣಿ ವಾರ್ತೆ

**ಚಳಗೇರಿ (ಹಾವೇರಿ):** ‘ಉಕ್ರೇನ್‌ನಲ್ಲಿರುವ ನಮ್ಮ ಮಕ್ಕಳ (ಅಮಿತ್ ವೈಶ್ಯರ ಮತ್ತು ಸುಮನ್ ವೈಶ್ಯರ) ಜೀವಕ್ಕೆ ಅಪಾಯವಿದೆ. ಕೂಡಲೇ ಅವರನ್ನು ತಾಯ್ನಾಡಿಗೆ ಜೀವಂತವಾಗಿ ಕರೆತನ್ನಿ’ ಎಂದು ಅಮಿತ್ ವೈಶ್ಯರ ತಂದೆ ವೆಂಕಟೇಶ ವೈಶ್ಯರ ಅವರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಕೈ ಮುಗಿದು ಬೇಡಿಕೊಂಡರು.

ರಾಣೆಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದಲ್ಲಿರುವ ಮೃತ ನವೀನ ಗ್ಯಾನಗೌಡರ್ ಮನೆಗೆ ಬುಧವಾರ ಭೇಟಿ ನೀಡಿದ್ದ ಪ್ರಲ್ಹಾದ ಜೋಶಿ ಅವರಿಗೆ ಮನವಿ ಮಾಡಿ, ‘ನನ್ನ ಮಗ ಪ್ರತಿಭಾವಂತ ವಿದ್ಯಾರ್ಥಿ. ನಮ್ಮಲ್ಲಿ ಎಂಬಿಬಿಎಸ್ ಸೀಟಿಗೆ ದುಬಾರಿ ಹಣ ಕೇಳಿದರು. ಆ ಹಣ ಕಟ್ಟಲು ಸಾಧ್ಯವಾಗದೆ ಮಗನನ್ನು (ಅಮಿತ್ ವೈಶ್ಯರ) ಉಕ್ರೇನ್‌ಗೆ ಕಳುಹಿಸಬೇಕಾಯಿತು. ಇಲ್ಲಿ ಒಬ್ಬೊಬ್ಬ ಸಚಿವನಿಗೆ ಒಂದೊಂದು ಕಾಲೇಜು ಇದೆ. ಅವರು ಹಣವನ್ನು ಸುಲಿಗೆ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಿ’ ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜೋಶಿ, ‘ನಿಮ್ಮ ನೋವು ನನಗೆ ಅರ್ಥವಾಗುತ್ತದೆ. ಎಲ್ಲ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವ ಪ್ರಯತ್ನ ಮಾಡಲಾಗುತ್ತಿದೆ. ನಂತರ ಅವರ ಶಿಕ್ಷಣ ಮುಂದುವರಿಕೆ ಕುರಿತಂತೆ ಸಕಾರಾತ್ಮಕ ಚಿಂತನೆ ಮಾಡಲಾಗುವುದು. ಇದು ಪಾಲಿಸಿ ವಿಷಯವಾಗಿರುವುದರಿಂದ ಈ ಕುರಿತು ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದು ಭರವಸೆ ನೀಡಿದರು.

**ಭಾರತೀಯರ ರಕ್ಷಣೆಗೆ ತೀವ್ರ ಪ್ರಯತ್ನ:** (ನವದೆಹಲಿ ವರದಿ): ಹಾರ್ಕಿವ್, ಸುಮಿ ಸೇರಿ ಪೂರ್ವ ಉಕ್ರೇನ್‌ನ ವಿವಿಧೆಡೆ ಸಿಲುಕಿರುವ ಭಾರತೀಯರ ರಕ್ಷಣಾ ಕಾರ್ಯಾಚರಣೆ ಕುರಿತಂತೆ ಭಾರತೀಯ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದೇವೆ ಎಂದು ರಷ್ಯಾ ತಿಳಿಸಿದೆ.

ರಷ್ಯಾದ ಮೂಲಕ ‘ಮಾನವೀಯ ಕಾರಿಡಾರ್’ ನಿರ್ಮಾಣಕ್ಕೆ ಗಂಭೀರ ಯತ್ನ ನಡೆಸುತ್ತಿರುವುದಾಗಿ ರಷ್ಯಾದ ನಿಯೋಜಿತ ರಾಯಭಾರಿ ಡೆನಿಸ್ ಅಲಿಪೊವ್ ಅವರು ಹೇಳಿದ್ದಾರೆ.

# ಕೊನೆಯವರೆಗೂ ಹೋರಾಟ: ಝೆಲೆನ್‌ಸ್ಕಿ

**ಕೀವ್ (ರಾಯಿಟರ್ಸ್):** ‘ನಾವು ಸಹಿಸಿಕೊಳ್ಳುವುದಿಲ್ಲ. ನಮ್ಮ ರಾಷ್ಟ್ರ ಕೊನೆಯವರೆಗೂ ಹೋರಾಟ ನಡೆಸಲಿದೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮೀರ್ ಝೆಲೆನ್‌ಸ್ಕಿ ರಷ್ಯಾ ವಿರುದ್ಧ ಗುಡುಗಿದ್ದಾರೆ.

ಉಕ್ರೇನ್ ನಗರಗಳ ಮೇಲೆ ರಷ್ಯಾದಿಂದ ಭೀಕರ ದಾಳಿ ನಡೆಯುತ್ತಿದ್ದರೂ ಎದೆಗುಂದದ 44 ವರ್ಷದ ಝೆಲೆನ್‌ಸ್ಕಿ, ರಾಜಧಾನಿ ಕೀವ್ ನಗರ ತೊರೆಯದೆ ತಮ್ಮ ಸೈನಿಕರಿಗೆ ಆತ್ಮವಿಶ್ವಾಸ ತುಂಬುತ್ತಾ ಯುದ್ಧಾಂಗಣದಲ್ಲಿ ಮುಂಚೂಣಿಯಲ್ಲಿ ಉಳಿದಿದ್ದಾರೆ. ಮಂಗಳವಾರ ಮಧ್ಯಾಹ್ನ ‘ರಾಯಿಟರ್ಸ್’ ಸುದ್ದಿ ಸಂಸ್ಥೆಗೆ ಅವರು ಸಂದರ್ಶನ ನೀಡಿದ್ದಾರೆ.

ಈ ಯುದ್ಧದಲ್ಲಿ ಉಕ್ರೇನ್ ಎಷ್ಟು ದಿನ ಎದುರಿಸಿ ನಿಲ್ಲಲಿದೆ ಎಂದು ಕೇಳಿದ ಪ್ರಶ್ನೆಗೆ, ‘ನಾವು ತಡೆದುಕೊಳ್ಳುವುದಿಲ್ಲ. ನಾವು ಹೋರಾಡುತ್ತೇವೆ. ನಮ್ಮ ರಾಷ್ಟ್ರ ಕೊನೆಯವರೆಗೂ ಹೋರಾಡಲಿದೆ. ಇದು ನಮ್ಮ ಮನೆ. ನಮ್ಮ ಮತ್ತು ನಮ್ಮ ಮಕ್ಕಳ ಭವಿಷ್ಯದ ಸಲುವಾಗಿ ನಾವು ನಮ್ಮ ನೆಲ ಮತ್ತು ನಮ್ಮ ಮನೆಗಳನ್ನು ರಕ್ಷಿಸುತ್ತಿದ್ದೇವೆ’ ಎಂದು ಹೇಳಿದರು.

‘ನಾನು ಎರಡು ದಿನಗಳಿಂದ ನನ್ನ ಮಕ್ಕಳ ಮುಖವನ್ನೇ ನೋಡಿಲ್ಲ’ ಎನ್ನುವ ಸಂಗತಿಯನ್ನು ಝೆಲೆನ್‌ಸ್ಕಿ ಹೇಳುವಾಗ, ಉಕ್ರೇನ್ ಮತ್ತು ಉಕ್ರೇನಿನ ಯುವಪೀಳಿಗೆಯ ಭವಿಷ್ಯದ ದುರವಸ್ಥೆಯ ಚಿಂತೆಯನ್ನು ಮರೆಮಾಚುವ ಪ್ರಯತ್ನ ಮಾಡಿದರು.

‘ಉಕ್ರೇನ್ ಮೇಲೆ ಆಕ್ರಮಣ ಆರಂಭಿಸಿ, ರಾಜಧಾನಿ ಕೀವ್ ನಗರ ವಶಪಡಿಸಿಕೊಳ್ಳಲು ಬಂದಿರುವ ರಷ್ಯಾ ಪಡೆಗಳಿಗೆ ನಾನೇ ಮೊದಲ ಗುರಿ ಎನ್ನುವುದು ನನಗೆ ಮನದಟ್ಟಾಗಿದೆ’ ಎನ್ನುವ ಮಾತನ್ನೂ ಅವರು ಹೇಳಿದರು.

ರಾಜಧಾನಿಯಲ್ಲೇ ಇರುವ, ಬಹುಶಃ ಸೋವಿಯತ್ ಆಡಳಿತ ಕಾಲದಲ್ಲಿ ನಿರ್ಮಾಣವಾಗಿರುವ ಕಟ್ಟಡದೊಳಗೆ ಸುರಕ್ಷಿತವಾಗಿರುವ ಝೆಲೆನ್‌ಸ್ಕಿ ಅವರಿಗೆ ಶಸ್ತ್ರಸಜ್ಜಿತ ಸೈನಿಕರ ಬೆಂಗಾವಲಿದೆ. ಏಳು ದಿನಗಳ ಹಿಂದೆ ರಷ್ಯಾದ ಆಕ್ರಮಣವು ಪ್ರಾರಂಭವಾದಾಗಿನಿಂದ ಅವರು ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಂಡಂತೆಯೇ ಆಲಿವ್-ಬಣ್ಣದ ಟಿ-ಶರ್ಟ್, ಪ್ಯಾಂಟ್ ಮತ್ತು ಸೈನಿಕರು ಧರಿಸುವ ಬೂಟುಗಳನ್ನು ಧರಿಸಿ ಕಾಣಿಸಿಕೊಂಡರು.

ಮೃತ ನವೀನ್ ಗ್ಯಾನಗೌಡರ್ ಅವರ ತಾಯಿ ವಿಜಯಲಕ್ಷ್ಮಿ ಕಣ್ಣೀರು

# ‘ಡಾಕ್ಟರ್ರೂ ಆಗಲಿಲ್ಲ, ಮನೆಯನ್ನೂ ಕಟ್ಟಿಸಲಿಲ್ಲ’

• ಸಿದ್ದು ಆರ್.ಜಿ.ಹಳ್ಳಿ

**ಚಳಗೇರಿ (ಹಾವೇರಿ):** ‘ಇನ್ನೆರಡು ವರ್ಷಗಳಲ್ಲಿ ಡಾಕ್ಟರ್ ಆಗಿ ಬರುತ್ತೇನೆ. ನಿಮಗೊಂದು ಚೆಂದದ ಮನೆ ಕಟ್ಟಿಸಿಕೊಡುತ್ತೇನೆ ಎಂದು ಹೇಳಿದ್ದ ಮಗ ನಮ್ಮನ್ನೆಲ್ಲ ಅನಾಥರನ್ನಾಗಿ ಮಾಡಿ ಬಾರದ ಲೋಕಕ್ಕೆ ಹೋಗಿದ್ದಾನೆ’ ಎಂದು ಮೃತ ನವೀನ್ ಗ್ಯಾನಗೌಡರ್ ಅವರ ತಾಯಿ ವಿಜಯಲಕ್ಷ್ಮಿ ಕಣ್ಣೀರಿಟ್ಟರು.

ರಾಣೆಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದ ತಮ್ಮ ಪುಟ್ಟ ಮನೆಯಲ್ಲಿ ಸಂಬಂಧಿಕರೊಂದಿಗೆ ಕುಳಿತು ಮಗನ ಒಂದೊಂದೇ ನೆನಪುಗಳನ್ನು ಹೇಳುತ್ತಾ ಬಿಕ್ಕಿ ಬಿಕ್ಕಿ ಅತ್ತರು.

‘ಪತಿ ಶೇಖರಪ್ಪ ಅವರು ನಿವೃತ್ತಿಯಾದ ನಂತರ ಬಂದ ಹಣದಲ್ಲಿ 2 ಎಕರೆ ಜಮೀನು ಖರೀದಿಸಿದರು. 7 ತಿಂಗಳ ಹಿಂದೆ ಅಡಿಕೆ ಸಸಿ ನೆಟ್ಟಿದ್ದೇವೆ. ನಮಗೆ ಯಾವ ದೊಡ್ಡ ಆಸ್ತಿಯೂ ಇಲ್ಲ. ಇರುವುದು ಈ ಪುಟ್ಟ ಮನೆಯಷ್ಟೇ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಅವರನ್ನೇ ಆಸ್ತಿಯನ್ನಾಗಿ ಮಾಡಿದ್ದೆವು’ ಎಂದು ಹೇಳಿದರು.

‘ಡಾಕ್ಟರ್ ಆಗಿ ಬಡವರ ಸೇವೆ ಮಾಡಬೇಕು ಎಂಬ ಆಸೆ ನವೀನನಿಗಿತ್ತು. ನಾವಿರುವ ಪುಟ್ಟ ಮನೆಯನ್ನೇ ಆಸ್ಪತ್ರೆ ಮಾಡೋಣ. ನಿಮಗೆ ಬೇರೆ ಮನೆ ಕಟ್ಟಿಸಿಕೊಡುತ್ತೇನೆ ಎಂದು ಹೇಳಿದ್ದ. ನಮಗೆ ವಿಡಿಯೊ ಕಾಲ್ ಮಾಡಿದಾಗ, ನೀವು ಟಿ.ವಿ ನೋಡಿ ಆತಂಕ ಪಡಬೇಡಿ. ನಾವು ಸುರಕ್ಷಿತವಾಗಿದ್ದೇವೆ ಎಂದು ನಮಗೇ ಧೈರ್ಯ ಹೇಳುತ್ತಿದ್ದ’ ಎಂದರು.

**ಸ್ವೀಟ್ ಅಂದ್ರೆ ಪ್ರಾಣ:** ‘ನವೀನ್‌ಗೆ ‘ಸೆವೆನ್ ಕಪ್ ಸ್ವೀಟ್’ ಅಂದ್ರೆ ಪ್ರಾಣ. ಆತ ಉಕ್ರೇನ್‌ಗೆ ಹೋಗುವಾಗ ಸ್ವೀಟು, ಖಾರ ಅವಲಕ್ಕಿ ಕರಿದು ಕೊಡುತ್ತಿದ್ದೆ. ಮನೆಗೆ ಬಂದಾಗ ಪಾನಿಪುರಿ, ಗೋಬಿಯನ್ನು ಮಾಡಿಕೊಡುತ್ತಿದ್ದೆ. ಆತ ಕೂಡ ಅಡುಗೆಯನ್ನು ಚೆನ್ನಾಗಿ ಮಾಡುತ್ತಿದ್ದ. ಪ್ರಾಣಿಗಳೆಂದರೆ ಆತನಿಗೆ ತುಂಬಾ ಇಷ್ಟ. ರಜೆಗೆ ಬಂದಾಗ ಹೊಲದಲ್ಲಿ ನಮ್ಮ ಜತೆ ಕೆಲಸ ಮಾಡುತ್ತಿದ್ದ. ಸ್ನೇಹಿತರ ಬಗ್ಗೆ ಹೆಚ್ಚು ಕಾಳಜಿ ತೋರುತ್ತಿದ್ದ’ ಎಂದು ನವೀನ್‌ನ ನೆನಪುಗಳನ್ನು ಬಿಚ್ಚಿಟ್ಟರು.

‘ನನಗೆ ತಾಯಿ ರೀತಿ ಸಮಾಧಾನ ಮಾಡುತ್ತಿದ್ದ. ನವೀನ್ ಅಂದ್ರೆ ಸದಾ ಅವನ ನಗುಮುಖವೇ ನೆನಪಿಗೆ ಬರುತ್ತದೆ. ಮಗ ಜೀವಂತವಾಗಿಯಂತೂ ಬರಲಿಲ್ಲ. ಕೊನೆಯ ಬಾರಿ ಅವನ ಮುಖವನ್ನಾದರೂ ನೋಡುವ ಅವಕಾಶ ಮಾಡಿಕೊಡಿ ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಉಳಿದ ಮಕ್ಕಳನ್ನು ಜೀವಂತವಾಗಿ ತಾಯ್ನಾಡಿಗೆ ಕರೆತನ್ನಿ’ ಎಂದು ಅವರು ಕೈ ಮುಗಿದು ಬೇಡಿಕೊಂಡರು.

ರಾಣೆಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದ ತಮ್ಮ ಮನೆಯಲ್ಲಿ ಸಂಬಂಧಿಕರೊಂದಿಗೆ ಕುಳಿತಿರುವ, ಮೃತ ನವೀನ್ ಗ್ಯಾನಗೌಡರ್ ಅವರ ತಾಯಿ ವಿಜಯಲಕ್ಷ್ಮಿ (ಎಡತುದಿ) –ಪ್ರಜಾವಾಣಿ ಚಿತ್ರ

## ‘ಜಾತಿಗಿಂತ ಪ್ರತಿಭೆಗೆ ಮನ್ನಣೆ ಕೊಡಿ’

**ಹಾವೇರಿ:** ‘ನಮ್ಮ ದೇಶದಲ್ಲಿ ಪ್ರತಿಯೊಂದು ಸೌಲಭ್ಯವನ್ನು ಜಾತಿ ಆಧಾರದ ಮೇಲೆ ಕೊಡುತ್ತಿದ್ದಾರೆ. ಈ ಜಾತಿ ಎಂಬ ಪದವನ್ನು ತೆಗೆದು ಹಾಕಿ, ಪ್ರತಿಭಾವಂತರಿಗೆ ಅವಕಾಶ ನೀಡಿ’ ಎಂದು ಮೃತ ನವೀನ್ ಗ್ಯಾನಗೌಡರ್ ಅವರ ತಾಯಿ ವಿಜಯಲಕ್ಷ್ಮಿ ಮನವಿ ಮಾಡಿದರು.

‘ನಮ್ಮ ದೇಶದಲ್ಲಿ ಮೆಡಿಕಲ್ ಓದಿಸಲು ಕೋಟಿ– ಕೋಟಿ ಹಣ ಕೊಡಬೇಕು. ನಮ್ಮಂಥ ಬಡವರು ಎಲ್ಲಿಂದ ಕೊಡಬೇಕು. ಸಾಲ ಮಾಡಿ ಮಗನನ್ನು ವ್ಯಾಸಂಗಕ್ಕಾಗಿ ಉಕ್ರೇನ್‌ಗೆ ಕಳುಹಿಸಿದ್ದೆವು. ಪ್ರತಿ ವರ್ಷ ₹5ರಿಂದ 6 ಲಕ್ಷ ಖರ್ಚು ಬರುತ್ತಿತ್ತು. ನಮ್ಮ ದೇಶದಲ್ಲೇ ಕೈಗೆಟಕುವ ದರದಲ್ಲಿ ಸಿಕ್ಕಿದ್ದರೆ ಮಗ ವಿದೇಶಕ್ಕೆ ಹೋಗುತ್ತಿರಲಿಲ್ಲ. ಹೀಗೆ ಹೆಣವಾಗುತ್ತಿರಲಿಲ್ಲ’ ಎಂದು ಕಣ್ಣೀರಿಟ್ಟರು.

## ‘ಮರುಜನ್ಮ ಸಿಕ್ಕಿದೆ’

ಮದೀಹ

**ಮಡಿಕೇರಿ:** ‘ಉಕ್ರೇನ್‌ನಲ್ಲಿ ಪ್ರತಿ ಕ್ಷಣವನ್ನೂ ಭಯ, ಆತಂಕದಿಂದ, ಪರಸ್ಪರ ಧೈರ್ಯ ಹೇಳಿಕೊಂಡು ಕಳೆಯುತ್ತಿದ್ದೆವು. ಶೆಲ್ ದಾಳಿ, ಯುದ್ಧ ವಿಮಾನಗಳ ಹಾರಾಟ ಮೈನಡುಗಿಸುತ್ತಿತ್ತು. ತಾಯ್ನಾಡಿಗೆ ಮರಳಿರುವುದರಿಂದ ಮರುಜನ್ಮ ಸಿಕ್ಕಿದೆ’ ಎಂದು ಮದೀಹ ಭಾವುಕರಾದರು.

ವಿರಾಜಪೇಟೆ ತಾಲ್ಲೂಕಿನ ಗೋಣಿಕೊಪ್ಪಲಿನ ಮನೆಗೆ ಬುಧವಾರ ಅವರು ಬಂದಾಗ ಪೋಷಕರು ನೆಮ್ಮದಿ ಕಂಡರು.

‘ಎರಡು ತಿಂಗಳ ಹಿಂದೆಯಷ್ಟೇ ತೆರಳಿದ್ದೆ. ಯುದ್ಧ ನಡೆಯುತ್ತದೆಂದು ಗೊತ್ತಿರಲಿಲ್ಲ. ಭಾರತೀಯ ರಾಯಭಾರ ಕಚೇರಿಗೆ ಧನ್ಯವಾದ ಅರ್ಪಿಸುತ್ತೇನೆ. ಇನ್ನಷ್ಟು ಭಾರತೀಯ ವಿದ್ಯಾರ್ಥಿಗಳನ್ನು ರಕ್ಷಿಸಬೇಕು’ ಎಂದು ಮದೀಹ ಕೋರಿದರು. ‘ಶೆಲ್ ದಾಳಿಗೆ ನವೀನ್ ಮೃತಪಟ್ಟಿರುವುದು ತುಂಬಾ ಬೇಸರ ತಂದಿದೆ’ ಎಂದು ಕಣ್ಣೀರು ಹಾಕಿದರು.

# ಹಾರ್ಕಿವ್ ತೊರೆಯಲು ವಿದ್ಯಾರ್ಥಿಗಳಿಗೆ ಸೂಚನೆ

ಒಂದನೇ ಪುಟದಿಂದ...

ಹಾರ್ಕಿವ್ ಸಮೀಪವಿರುವ ಪೀಶನ್ (11 ಕಿ.ಮೀ.), ಬಬಾಯಿ (12 ಕಿ.ಮೀ.) ಮತ್ತು ಬೆಸ್ಲಿಯುಡಿವ್ಕಾ (16 ಕಿ.ಮೀ) ನಗರಗಳಿಗೆ ತೆರಳಿ. ರೈಲು, ಬಸ್ ಅಥವಾ ಖಾಸಗಿ ವಾಹನ ಬಳಸಿ ಹೊರಡಿ. ವಾಹನದ ವ್ಯವಸ್ಥೆ ಆಗದಿದ್ದರೆ, ಕಾಲ್ನಡಿಗೆಯಲ್ಲಿಯೇ ಹೊರಡಿ. ಸಂಜೆ 6 ಗಂಟೆಯ (ಭಾರತೀಯ ಕಾಲಮಾನ ರಾತ್ರಿ 9.30) ಒಳಗೆ ಈ ನಗರಗಳನ್ನು ತಲುಪಿ’ ಎಂದು ಸೂಚಿಸಿತು.

‘ರಷ್ಯಾ ನೀಡಿರುವ ಮಾಹಿತಿ ಅನ್ವಯ, ಈ ನಗರಗಳಿಗೆ ತೆರಳಲು ವಿದ್ಯಾರ್ಥಿಗಳಿಗೆ ಮತ್ತು ನಾಗರಿಕರಿಗೆ ಸೂಚಿಸಲಾಗಿದೆ’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಮಾಹಿತಿ ನೀಡಿದ್ದಾರೆ. ರಷ್ಯಾ ತನ್ನ ದಾಳಿಯನ್ನು ತೀವ್ರಗೊಳಿಸುವುದಾಗಿ ತಿಳಿಸಿದೆ ಎಂದು ಮೂಲಗಳು ಹೇಳಿವೆ.

**‘ಕೀವ್‌ನಿಂದ ಎಲ್ಲರ ತೆರವು’:** ‘ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ಸಿಲುಕಿದ್ದ ಎಲ್ಲಾ ಭಾರತೀಯ ವಿದ್ಯಾರ್ಥಿಗಳು ಮತ್ತು ನಾಗರಿಕರನ್ನು ಆ ನಗರದಿಂದ ತೆರವು ಮಾಡಲಾಗಿದೆ. ಅಲ್ಲಿ ಈಗ ಒಬ್ಬ ಭಾರತೀಯರೂ ಇಲ್ಲ’ ಎಂದು ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಹೇಳಿದ್ದಾರೆ.

‘ಹಲವು ಗಂಟೆಗಳಿಂದ್ ಕೀವ್ ನಗರದಿಂದ ನಮಗೆ ಯಾವ ಕರೆಯೂ ಬಂದಿಲ್ಲ. ಅಲ್ಲಿದ್ದ ಎಲ್ಲಾ ಭಾರತೀಯರು ನಗರ ತೊರೆದಿದ್ದಾರೆ ಎಂದು ಪರಿಗಣಿಸಲಾಗಿದೆ. ಎಲ್ಲರೂ ಉಕ್ರೇನ್‌ನ ಪಶ್ಚಿಮ ಗಡಿಗಳತ್ತ ತೆರಳುತ್ತಿದ್ದಾರೆ. ಉಕ್ರೇನ್‌ನಲ್ಲಿ ಸಿಲುಕಿದ್ದ 20 ಸಾವಿರ ಭಾರತೀಯರಲ್ಲಿ 12 ಸಾವಿರ ಜನರನ್ನು ತೆರವು ಮಾಡಲಾಗಿದೆ. ಎರಡು ಸಾವಿರ ಜನರು ಭಾರತಕ್ಕೆ ಮರಳಿದ್ದಾರೆ. ಉಳಿದವರು ಗಡಿಗಳಲ್ಲಿ, ನೆರೆ ದೇಶಗಳ ಶಿಬಿರಗಳಲ್ಲಿ ಸುರಕ್ಷಿತವಾಗಿದ್ದಾರೆ’ ಎಂದು ತಿಳಿಸಿದರು.

## ಭಾರತದ ಶಕ್ತಿ ಹೆಚ್ಚಳ: ಮೋದಿ

‘ಉಕ್ರೇನ್‌ನಿಂದ ಭಾರತೀಯ ವಿದ್ಯಾರ್ಥಿಗಳ ತೆರವು ಕಾರ್ಯಾಚರಣೆಯು ಜಾಗತಿಕ ಮಟ್ಟದಲ್ಲಿ ಭಾರತದ ಶಕ್ತಿ ಹೆಚ್ಚುತ್ತಿರುವುದನ್ನು ತೋರಿಸುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಉತ್ತರ ಪ್ರದೇಶದ ಸೋನಭದ್ರದಲ್ಲಿ ಬುಧವಾರ ಬಿಜೆಪಿ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಮೋದಿ ಅವರು ಉಕ್ರೇನ್ ಸಂಘರ್ಷ ಮತ್ತು ವಿದ್ಯಾರ್ಥಿಗಳ ತೆರವು ಕಾರ್ಯಾಚರಣೆಯನ್ನು ಪ್ರಸ್ತಾಪಿಸಿದ್ದಾರೆ.

## ನವೀನ್ ಸಾವಿನ ತನಿಖೆ: ರಷ್ಯಾ

ಹಾರ್ಕಿವ್‌ನಲ್ಲಿ ರಷ್ಯಾ ದಾಳಿಯಲ್ಲಿ ಭಾರತೀಯ ವಿದ್ಯಾರ್ಥಿ ಮೃತಪಟ್ಟ ಘಟನೆಯನ್ನು ತನಿಖೆಗೆ ಒಳಪಡಿಸುತ್ತೇವೆ ಎಂದು ದೆಹಲಿಯಲ್ಲಿನ ರಷ್ಯಾ ರಾಯಭಾರ ಕಚೇರಿ ಹೇಳಿದೆ. ‘ಮೃತ ನವೀನ್ ಶೇಖರಪ್ಪ ಗ್ಯಾನಗೌಡರ್ ಅವರ ಕುಟುಂಬದವರಿಗೆ ಮತ್ತು ಈ ದುರಂತದಿಂದ ದುಃಖಿತವಾಗಿರುವ ಇಡೀ ಭಾರತಕ್ಕೆ ನಮ್ಮ ಸಾಂತ್ವನಗಳು. ಸಂಘರ್ಷಪೀಡಿತ ಪ್ರದೇಶದಲ್ಲಿ ಸಿಲುಕಿರುವ ಭಾರತೀಯ ನಾಗರಿಕರು ಸುರಕ್ಷಿತವಾಗಿ ವಾಪಸಾಗಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ರಷ್ಯಾ ತೆಗೆದುಕೊಳ್ಳಲಿದೆ’ ಎಂದು ಹೇಳಿದೆ.

## ಸ್ಪರ್ಧಾತ್ಮಕ ಪರೀಕ್ಷೆ ಸಿದ್ಧತೆಗೆ

# ಸರಳ ಸೂತ್ರಗಳು

ಎಂ.ಎಚ್. ನಾಯಕ್

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕೇವಲ ಪರಿಶ್ರಮವೊಂದೇ ಅಲ್ಲ. ಚತುರತೆಯೂ ಮುಖ್ಯ. ಉತ್ತಮ ಗ್ರಹಣ ಸಾಮರ್ಥ್ಯ, ಸಮಯ ನಿರ್ವಹಣಾ ಕೌಶಲ, ವಿಷಯವನ್ನು ವಸ್ತುನಿಷ್ಠ ರೂಪದಲ್ಲಿ ಸಂಗ್ರಹಿಸಿ, ಸ್ಪಷ್ಟ ಯೋಜನೆಯೊಂದಿಗೆ ಪ್ರಸ್ತುತಪಡಿಸುವ ಸ್ಮಾರ್ಟ್‌ವರ್ಕರ್‌ಗಳು ಹೆಚ್ಚು ಯಶಸ್ವಿಯಾಗುತ್ತಾರೆ. ಈ ಹಿನ್ನೆಲೆಯಲ್ಲಿ 'ಸ್ಮಾರ್ಟ್' ಕೆಲಸದೊಂದಿಗೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬಹುದು. ಅದು ಹೇಗೆ? ಇಲ್ಲಿದೆ ಮಾಹಿತಿ.

**ಆತ್ಮವಿಶ್ವಾಸ:** ಆತ್ಮವಿಶ್ವಾಸ ಎಂಬುದು ತನ್ನ ಸಾಮರ್ಥ್ಯದ ಬಗ್ಗೆ ತನಗಿರುವ ನಂಬಿಕೆ. ಇದನ್ನು ಬೆಳೆಸಿಕೊಳ್ಳಲು ಪರಿಶುದ್ಧ ಆಲೋಚನೆ ಮತ್ತು ಶುದ್ಧವಾದ ಮನಸ್ಸಿರಬೇಕು. ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವರು ಸ್ವ-ಸಾಮರ್ಥ್ಯದ ಮೇಲೆ ನಂಬಿಕೆಯಿಡಬೇಕು. ಆಗ ಸೋಲಿನ ಭಯವಿರುವುದಿಲ್ಲ. ಆತ್ಮವಿಶ್ವಾಸ ಸಹಜವಾಗಿರಲಿ ಹಾಗೂ ಕಾರ್ಯತತ್ಪರತೆಯನ್ನು ಹೊಂದಿರಬೇಕು. ಆದರೆ, ಅತಿಯಾದ ಆತ್ಮವಿಶ್ವಾಸ ಒಳ್ಳೆಯದಲ್ಲ.

**ಸಕಾರಾತ್ಮಕ ಚಿಂತನೆ:** ಪರೀಕ್ಷಾರ್ಥಿಗಳು ಸಮಾಧಾನ ಹಾಗೂ ಸಕಾರಾತ್ಮಕ ಮನಸ್ಥಿತಿ ಹೊಂದಿರಬೇಕು. ಉದ್ವೇಗಗೊಂಡ ಮನಸ್ಸು ಹಿತಕರ ಅನುಭವವನ್ನು ನಿರಾಕರಿಸಿ, ಹತಾಶೆ, ಖಿನ್ನತೆ, ಒಂಟಿತನ, ಆತಂಕ, ಚಂಚಲದಂತಹ ನಕಾರಾತ್ಮಕ ಭಾವದತ್ತ ಸಾಗುತ್ತದೆ. ಭಾವನೆಗಳ ತಾಕಲಾಟ ಖಿನ್ನತೆಯಂತಹ ಮಾನಸಿಕ ಕಾಯಿಲೆಗೂ ಕಾರಣವಾಗಬಹುದು. ಸಕಾರಾತ್ಮಕ ಚಿಂತನೆಗಳು ವ್ಯಕ್ತಿಯ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

> ಯುಪಿಎಸ್‌ಸಿ ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದಿನಾಂಕ ನಿಗದಿಯಾಗಿದೆ. ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವವರು ಅನುಸರಿಸಬಹುದಾದ ಸರಳ ಸೂತ್ರಗಳು ಇಲ್ಲಿವೆ.

**ಕಾಲದ ಪರಿಜ್ಞಾನ:** ಕಾಲವೆಂಬುದು ಎಲ್ಲವನ್ನು ಮೀರಿದ್ದು. ಅದನ್ನು ತಡೆಯಲು ಸಾಧ್ಯವಿಲ್ಲ. ಕಾಲಕ್ಕೆ ಅನುಗುಣವಾಗಿ ಸಾಗಬೇಕು. ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ನಡೆಸುವವರು ದೊರೆಯುವ ಪ್ರತಿ ಅವಕಾಶವನ್ನು ಕೊನೆಯ ಅವಕಾಶವೆಂದು ಭಾವಿಸಿಯೇ ತಯಾರಿ ನಡೆಸಬೇಕು. ವಯಸ್ಸಾದಂತೆಲ್ಲ ಗ್ರಹಿಸುವ ಸಾಮರ್ಥ್ಯ, ಆತ್ಮವಿಶ್ವಾಸ, ಸ್ಮರಣ ಸಾಮರ್ಥ್ಯ, ನಿರ್ಧಾರ ಶಕ್ತಿ, ಆಸಕ್ತಿ ಮತ್ತು ವೇಗ ಕ್ಷೀಣಿಸಲಾರಂಭಿಸುತ್ತದೆ. ದೇಹ ಹಾಗೂ ಮನಸ್ಸು ಪೂರ್ಣಪ್ರಮಾಣದ ಸಾಮರ್ಥ್ಯ ಹೊಂದಿರುವಾಗಲೇ ಕಂಡ ಕನಸನ್ನು ನನಸು ಮಾಡಿಕೊಳ್ಳಬೇಕು.

**ಕಲಿಯಬೇಕು:** ಮೇಲುಸ್ತರದ ಓದು ಅಥವಾ ಕಂಠಪಾಠ ಕೆಲ ಸಮಯದ ಮಟ್ಟಿಗೆ ನೆನಪಿನಲ್ಲಿ ಉಳಿಯುತ್ತದೆ. ಹಾಗಾಗಿ ಕಲಿಕೆ ಸಹಜ ಹಾಗೂ ವಸ್ತು ಆಧಾರಿತವಾಗಿರಬೇಕು.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಯ ವಿಷಯದ ಪಾಂಡಿತ್ಯವನ್ನಷ್ಟೆ ಪರೀಕ್ಷಿಸದೆ, ವಿಷಯ ಅರ್ಥೈಸಿಕೊಂಡ ಶೈಲಿ, ವಿಶ್ಲೇಷಣಾ ಸಾಮರ್ಥ್ಯ, ತುಲನಾತ್ಮಕ ಮನೋಬಲ, ಒತ್ತಡ ನಿರ್ವಹಣಾ ಕೌಶಲ, ಸಮಯ ನಿರ್ವಹಣೆ ಗುಣ, ವಿಷಯ ಪ್ರಸ್ತುತಪಡಿಸುವ ಚಾಕಚಕ್ಯತೆಯನ್ನು ಪರೀಕ್ಷಿಸಲಾಗುತ್ತದೆ. ಆದ್ದರಿಂದ ಕಂಠಪಾಠಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಉಪಯೋಗಕ್ಕೆ ಬರುವುದಿಲ್ಲ.




**ಸ್ಪಷ್ಟತೆಯಿರಲಿ:** ನಾವು ಮಾಡುವ ಕೆಲಸದ ಬಗ್ಗೆ ಸ್ಪಷ್ಟತೆ ಇರಬೇಕು. ನಿರ್ದಿಷ್ಟ ಗುರಿಯ ಬಗ್ಗೆ ನಿಖರತೆ ಇದ್ದಾಗ ಸ್ಪಷ್ಟತೆ ತಾನಾಗಿಯೇ ಮೂಡುತ್ತದೆ. ವಿಷಯವನ್ನು ಸತತವಾಗಿ ಅವಲೋಕಿಸಿ ಆಲೋಚಿಸಿದಾಗ ಮನಸಿನಲ್ಲಿ ಸ್ಪಷ್ಟತೆ ಮೂಡುತ್ತದೆ. ಭಾವನಾತ್ಮಕವಾಗಿ ಆಲೋಚಿಸಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಬದಲಾಗಿ, ತರ್ಕಬದ್ಧವಾಗಿ ಆಲೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆ ಸಿದ್ಧತೆಯಲ್ಲಿ ಇದು ಮುಖ್ಯ.

ತರಬೇತಿ ಕೇಂದ್ರದ ಆಯ್ಕೆ, ಅಧ್ಯಯನ ಸಾಮಗ್ರಿಗಳ ಸಂಗ್ರಹಣೆ, ಸಮಯದ ನಿರ್ವಹಣೆ, ವಿಷಯದ ಟಿಪ್ಪಣಿ ಸಿದ್ಧಪಡಿಸುವಿಕೆ, ನಿಗದಿತ ಸಮಯದಲ್ಲಿ ಪಠ್ಯಕ್ರಮವನ್ನು ಪೂರ್ಣಗೊಳಿಸುವುದು. ಘಟಕ ಪರೀಕ್ಷೆಗಳ ಫಲಿತಾಂಶದ ತುಲನೆಯಂತಹ ವಿಷಯದ ಬಗ್ಗೆ ಸ್ಪಷ್ಟತೆ ಮೂಡಿದರೆ ಸಾಕು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಧ ಯಶಸ್ಸು ಸಾಧಿಸಿದಂತೆ.

**ಉತ್ತಮ ವಾತಾವರಣ:** ನಮ್ಮ ಸುತ್ತಮುತ್ತಲಿನ ವಾತಾವರಣ ಚೆನ್ನಾಗಿದ್ದರೆ, ಮನಸ್ಸು ಆಹ್ಲಾದಕರವಾಗಿರುತ್ತದೆ. ಕ್ರಿಯಾಶೀಲವಾಗಿರಲು ಪೂರಕವಾಗಿರುತ್ತದೆ. ಹಾಗಾಗಿ, ತಮ್ಮ ಸುತ್ತಲಿನ ವಾತಾವರಣವನ್ನು ತಿಳಿಯಾಗಿಟ್ಟುಕೊಳ್ಳಲು ಪ್ರಯತ್ನಿಸಬೇಕು. ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳಲು ಉತ್ತಮ ಮಿತ್ರರ ಬಳಗವಿರಬೇಕು. ಗೆದ್ದಾಗ ಸಂಭ್ರಮಿಸಲು, ಸೋತಾಗ ಉಪಚರಿಸಿ, ಸಮಾಧಾನ ಹೇಳುವಂತಹ ಉತ್ತಮ ವ್ಯಕ್ತಿತ್ವವುಳ್ಳ ಸ್ನೇಹಿತರು ಬಳಗವಿರಬೇಕು.

**ಅಹಂ ರಹಿತ ಮನಸ್ಥಿತಿ:** ತಾನು ತಿಳಿದಿದ್ದೇ ಸರಿ ಎಂಬ ಅಹಂ ಭಾವ ಬೇಡ. ಒಳ್ಳೆಯದನ್ನು ಸ್ವೀಕರಿಸುವ ಹಾಗೂ ತಿಳಿದವರು ಹೇಳಿದ್ದನ್ನು ಕೇಳಿಸಿಕೊಳ್ಳುವಂತಹ ಗುಣ ಬೆಳೆಸಿಕೊಳ್ಳಬೇಕು. ಆಗ ನಿಮ್ಮ ಆಯ್ಕೆ ಹಾಗೂ ನಿರ್ಧಾರಗಳು ಬದಲಾಗುತ್ತವೆ. ಹೊಂದಾಣಿಕೆಯ ಅಲೆಗಳು ಕಾಣುತ್ತವೆ ಅವಕಾಶಗಳು ತೆರೆದುಕೊಳ್ಳುತ್ತವೆ.

**ಉತ್ತಮ ನಿದ್ರೆ:** ಸಾಮಾನ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳು ಪ್ರತಿ ದಿನ ಕನಿಷ್ಠ 8 ರಿಂದ 9 ಗಂಟೆ ಗಾಢವಾದ ನಿದ್ರೆ ಮಾಡಬೇಕು. ಸಾಮಾನ್ಯವಾಗಿ ತಯಾರಿ ಒತ್ತಡಕ್ಕೆ ಒಳಗಾಗಿ 6 ರಿಂದ 7 ಗಂಟೆ ನಿದ್ರಿಸುತ್ತಾರೆ. ನಿದ್ರಾವಸ್ಥೆಯಲ್ಲಿ ಮಿದುಳಿನ ನರಕೋಶಗಳು ಸ್ಮರಣಾ ಸಂಪರ್ಕವನ್ನು ರೂಪಿಸಿ ಗಟ್ಟಿಗೊಳಿಸುತ್ತದೆ. ನಿದ್ರಾಹೀನತೆಯಿಂದ ಗ್ರಹಣ ಸಾಮರ್ಥ್ಯ ಕುಸಿಯುತ್ತದೆ. ಅಷ್ಟೇ ಅಲ್ಲದೆ ಏಕಾಗ್ರತೆ, ಸ್ಮರಣೆ, ನಿರ್ಧಾರ, ಸಾಮರ್ಥ್ಯ ಹಾಗೂ ಸೃಜನಶೀಲತೆಯ ಮೇಲೂ ಪ್ರಭಾವ ಬೀರುತ್ತದೆ.

**ಒತ್ತಡ ರಹಿತ ಪ್ರಯತ್ನ:** ಒತ್ತಡದಲ್ಲಿ ಪರೀಕ್ಷೆಗೆ ಸಿದ್ಧತೆ ನಡೆಸುವವರು ಮನಸ್ಸಿನ ಸ್ವಾಸ್ಥ್ಯ ಹಾಳಾಗುತ್ತದೆ. ಮನಸ್ಸು ಒತ್ತಡದಲ್ಲಿದ್ದಾಗ ಮಿದುಳಿನ ಸೊಮೊಟೊ ಸೆನ್ಸರಿ ಮೋಟೊರ್ ಸಂಪರ್ಕ ಬಿಗಿಯಾಗಿರುತ್ತದೆ. ಸಹಜ ಸಂದರ್ಭದಲ್ಲಿ ಆರಾಮವಾಗಿರುತ್ತದೆ. ಮಿದುಳಿಗೆ ತೀವ್ರ ಒತ್ತಡವಾದಾಗ ತನ್ನನ್ನು ತಾನು ರಕ್ಷಿಸಿಕೊಳ್ಳಲು 'ರಕ್ಷಣಾತ್ಮಕ ಯಂತ್ರ (ಡಿಫೆನ್ಸಿವ್ ಮೆಕ್ಯಾನಿಸಂ) ವನ್ನು ಉಪಯೋಗಿಸುತ್ತದೆ. ಇಂತಹ ಸಂದರ್ಭದಲ್ಲಿ ಅತೀ ನಿದ್ರೆ, ಮರೆವು, ನಿರಾಸೆ, ಸಂದಿಗ್ಧ ವಾತಾವರಣ ಕಂಡುಬರುತ್ತದೆ. ಹಾಗಾಗಿ ಒತ್ತಡ ರಹಿತವಾಗಿ ಸಿದ್ಧತೆ ನಡೆಸಿ.

# ಮಾದರಿ ಪ್ರಶ್ನೋತ್ತರ

**ಸಾಮಾನ್ಯ ಜ್ಞಾನ**

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಮಾರ್ಚ್ 12ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯುತ್ತಿದೆ. ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ಹಾಗೂ ಕೆಎಸ್‌ಐಎಸ್‌ಎಫ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

**ಭಾಗ – 11**

**1) ಉಕ್ರೇನ್ ದೇಶದ ಮೇಲೆ ರಷ್ಯಾ ದಾಳಿ ಮಾಡಿದೆ. ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ.**

1) ಉಕ್ರೇನ್ ದೇಶವು 10 ಮತ್ತು 11ನೇ ಶತಮಾನಗಳಲ್ಲಿ ಕೈವಾನ್ ರುಸ್ (Kievan Rus) ಎಂಬ ಹೆಸರಿನ ದೇಶವಾಗಿತ್ತು. ಕಾಲಾನಂತರ ಈ ದೇಶವು ಒಡೆದು ಹೋಗಿ ಅನೇಕ ದೇಶಗಳು ಹುಟ್ಟಿದವು ಅದರಲ್ಲಿ ರಷ್ಯಾ ದೇಶವೂ ಒಂದು.

2) ಉಕ್ರೇನ್‌ನ ಚರ್ನೋಬಿಲ್ ಪರಮಾಣು ವಿದ್ಯುತ್ ಸ್ಥಾವರವನ್ನು ರಷ್ಯಾದ ಪಡೆಗಳು ವಶಪಡಿಸಿಕೊಂಡಿವೆ. 1986ರಲ್ಲಿ ಚರ್ನೋಬಿಲ್‌ನಲ್ಲಿ ಅಣುಶಕ್ತಿ ಉತ್ಪಾದನೆ ವೇಳೆ ತಾಂತ್ರಿಕ ದೋಷ ಉಂಟಾಗಿ ಭಾರಿ ಪ್ರಮಾಣದ ಸ್ಫೋಟ ಸಂಭವಿಸಿತ್ತು.

3) 1991ರಲ್ಲಿ ರಷ್ಯಾ ಒಡೆದು 15 ರಾಷ್ಟ್ರಗಳಾದ ಸಂದರ್ಭದಲ್ಲಿ ಅಮೆರಿಕ ನೇತೃತ್ವದ ದೇಶಗಳು ರಷ್ಯಾದ ಹತ್ತಿರವಿರುವ ಅದರಲ್ಲೂ ಹೊಸ ಸ್ವತಂತ್ರ ದೇಶಗಳನ್ನು ನ್ಯಾಟೊ ಮಿಲಿಟರಿ ಒಕ್ಕೂಟಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದು ಭರವಸೆ ನೀಡಿದ್ದವು. ಆದರೆ ಅದನ್ನು ಉಲ್ಲಂಘಿಸಿದ್ದು ರಷ್ಯಾ ಕೋಪಕ್ಕೆ ಕಾರಣವಾಗಿದೆ.

4) ಭದ್ರತಾ ಮಂಡಳಿ ಅಧ್ಯಕ್ಷ ಸ್ಥಾನ ಹೊಂದಿರುವ ಭಾರತ, ವಿಶ್ವಸಂಸ್ಥೆಯಲ್ಲಿ ರಷ್ಯಾ ಬಣವನ್ನಾಗಲಿ, ಅಮೆರಿಕ ಬಣವನ್ನಾಗಲಿ ಬೆಂಬಲಿಸದೇ ತಟಸ್ಥವಾಗಿ ನಿಂತಿದೆ.

**ಈ ಕೆಳಗಿನ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?**

ಎ) ಹೇಳಿಕೆ 1ರಿಂದ 4ರ ತನಕ ಎಲ್ಲವೂ ಸರಿಯಾಗಿದೆ
ಬಿ) 1 ಮತ್ತು 4ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ

**ಉತ್ತರ: ಎ**

**2) ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗಾಗಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಅಕ್ರಮಗಳ ಹೊರತಾಗಿಯೂ ಆ ಆಯ್ಕೆ ಪಟ್ಟಿಯನ್ನು ಊರ್ಜಿತಗೊಳಿಸಲು ವಿಧಾನಮಂಡಲದಲ್ಲಿ ಶಾಸನ ಮಂಡಿಸುವ ಮೂಲಕ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್ ತೀರ್ಪನ್ನೇ ಪಕ್ಕಕ್ಕೆ ಸರಿಸಲು ಹೊರಟಿದೆ. ಹಾಗಾದರೆ ಯಾವ ವರ್ಷ ಅಧಿಸೂಚಿಸಿದ ಕೆಎಎಸ್ ಪರೀಕ್ಷೆಯನ್ನು ಊರ್ಜಿತಗೊಳಿಸಿ 362 ಜನರಿಗೆ ಹುದ್ದೆಗಳನ್ನು ನೀಡಲು ಹೊರಟಿದೆ?**

ಎ) 1998 ಬಿ) 2004
ಸಿ) 2011 ಡಿ) 2015

**ಉತ್ತರ: ಸಿ**

**4) ಕರ್ನಾಟಕ ಸರ್ಕಾರ ಶಾಸಕರು ಸೇರಿದಂತೆ ಜನಪ್ರತಿನಿಧಿಗಳ ವೇತನವನ್ನು ಹೆಚ್ಚಿಗೆ ಮಾಡಿದೆ. ಹಾಗಾದರೆ ಮುಖ್ಯಮಂತ್ರಿಗಳ ತಿಂಗಳ ಸಂಬಳ ಎಷ್ಟು?**

ಎ) ₹75 ಸಾವಿರ ಬಿ) ₹1 ಲಕ್ಷ
ಸಿ) ₹ 60 ಸಾವಿರ ಡಿ) ಈ ಯಾವುದೂ ಅಲ್ಲ

**ಉತ್ತರ: ಎ**

**5) ಈ ಕೆಳಗೆ ಹೆಸರಿಸಿರುವ ಯಾರಿಗೆ ಪಾಕಿಸ್ತಾನದ ಎರಡನೇ ಅತ್ಯುನ್ನತ ಗೌರವವಾದ 'ಹಿಲಾಲ್ ಇ ಪಾಕಿಸ್ತಾನ್' ನೀಡಿ ಸಮ್ಮಾನಿಸಲಾಗಿದೆ?**

ಎ) ಆಂಟೋನಿಯೊ ಗುಟರೆಸ್
ಬಿ) ಕೋಫಿ ಅನ್ನಾನ್
ಸಿ) ಎಂ.ಸಿ. ಭಾಗಲಾ
ಡಿ) ಬಿಲ್ ಗೇಟ್ಸ್

**ಉತ್ತರ:ಡಿ**

**6) ಈ ಕೆಳಗಿನ ಯಾರು ಚೆಸ್ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದರು?**

ಎ) ಆರ್. ಪ್ರಜ್ಞಾನಂದ ಬಿ) ವಿಶ್ವನಾಥ್ ಆನಂದ್
ಸಿ) ಶ್ರೀನಾಥ್ ಶ್ರೀಕಾಂತ್ ಡಿ) ಈ ಯಾರೂ ಅಲ್ಲ

ಉತ್ತರ: ಎ

**7) ಶಿವಮೊಗ್ಗ ಜಿಲ್ಲೆಯಿಂದ ಈವರೆಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶಾಸಕರ ಸಂಖ್ಯೆ ಎಷ್ಟು?**

ಎ) 5 ಬಿ) 4
ಸಿ) 6 ಡಿ) 7

**ಉತ್ತರ: ಬಿ**

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಪ್ರಜಾವಾಣಿ ನೋಡಿಯೊ
'ನಿಮಗಿದು ಗೊತ್ತೇ?' ಹಾಗೂ ಮತ್ತಷ್ಟು 'ಸಾಮಾನ್ಯ ಜ್ಞಾನ'ದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಪ್ರಜಾವಾಣಿ ಉದ್ಯೋಗ ವಾರ್ತೆ

**ಭಾರತೀಯ ಅಂಚೆ ಇಲಾಖೆಯಲ್ಲಿ 17 ಹುದ್ದೆಗಳು**

ಭಾರತೀಯ ಅಂಚೆ ಇಲಾಖೆಯಲ್ಲಿ ಖಾಲಿ ಇರುವ ಚಾಲಕರ ಹುದ್ದೆಯ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ವಿದ್ಯಾರ್ಹತೆ:** 10ನೇ ತರಗತಿ ಉತ್ತೀರ್ಣರಾಗಿರಬೇಕು ಮತ್ತು 03 ವರ್ಷ ಅನುಭವ ಹೊಂದಿರಬೇಕು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮಾರ್ಚ್ 10, 2022
- **ಹೆಚ್ಚಿನ ಮಾಹಿತಿಗೆ:** https://www.indiapost.gov.in

**ಎನ್‌ಟಿಪಿಸಿಯಲ್ಲಿ ಹುದ್ದೆಗಳು**

ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ (ಎನ್‌ಟಿಪಿಸಿ) ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ವಿದ್ಯಾರ್ಹತೆ:** ಗಣಿಗಾರಿಕೆ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಮತ್ತು ಕಲ್ಲಿದ್ದಲು ಕ್ಷೇತ್ರದಲ್ಲಿ 5 ವರ್ಷ ಅನುಭವ ಹಾಗೂ ಗಣಿಗಾರಿಕಾ ಸಿರ್‌ದಾರ್‌ಗಾಗಿ 10ನೇ ತರಗತಿ ಉತ್ತೀರ್ಣರಾಗಿ 01 ವರ್ಷ ಅನುಭವ ಹೊಂದಿರಬೇಕು.
- **ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ:** ಮಾರ್ಚ್ 15, 2022
- **ಹೆಚ್ಚಿನ ಮಾಹಿತಿಗೆ:** www.ntpc.co.in

## ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 8

# ನಮ್ಮ ಪರಿಸರ

ಜೀವಶಾಸ್ತ್ರ

### ಪ್ರಮುಖಾಂಶಗಳು:

- ಪರಿಸರ ವ್ಯವಸ್ಥೆಯು ಜೈವಿಕ ಮತ್ತು ಅಜೈವಿಕ ಘಟಕಗಳೆರಡನ್ನೂ ಒಳಗೊಂಡಿರುತ್ತದೆ.
- ಉದ್ಯಾನವನ, ಅರಣ್ಯ, ಕೆರೆ, ಸರೋವರಗಳು ಪರಿಸರ ವ್ಯವಸ್ಥೆಗಳಿಗೆ ಉದಾಹರಣೆಗಳಾಗಿವೆ.
- ಒಂದನ್ನೊಂದು ಭಕ್ಷಿಸುವ ಜೀವಿಗಳ ಸರಣಿಯನ್ನು ಆಹಾರ ಸರಪಳಿ ಎನ್ನುವರು.
- ಆಹಾರ ಸರಪಳಿಯ ಪ್ರತಿಯೊಂದು ಹಂತ ಅಥವಾ ಮಟ್ಟವು ಒಂದು ಪೋಷಣಾಸ್ತರವನ್ನು ರೂಪಿಸುತ್ತದೆ.
- ಉತ್ಪಾದಕ ಜೀವಿಗಳು ಮೊದಲ ಪೋಷಣಾಸ್ತರದಲ್ಲಿರುತ್ತವೆ. ಸಸ್ಯಹಾರಿಗಳು ಅಥವಾ ಪ್ರಾಥಮಿಕ ಭಕ್ಷಕರು ಎರಡನೇ, ಸಣ್ಣ ಮಾಂಸಾಹಾರಿಗಳು ಅಥವಾ ದ್ವಿತೀಯಕ ಭಕ್ಷಕರು ಮೂರನೇ ಮತ್ತು ಉನ್ನತ ಮಾಂಸಾಹಾರಿಗಳು ಅಥವಾ ತೃತೀಯಕ ಭಕ್ಷಕರು ನಾಲ್ಕನೇ ಪೋಷಣಾಸ್ತರವನ್ನು ರೂಪಿಸುತ್ತವೆ.
- ಸಾಮಾನ್ಯವಾಗಿ ಪರಿಸರವ್ಯವಸ್ಥೆಯ ಕೆಳಗಿನ ಪೋಷಣಾಸ್ತರದಲ್ಲಿ ಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ, ಅವುಗಳಲ್ಲಿ ಉತ್ಪಾದಕರ ಸಂಖ್ಯೆಯೇ ಅಧಿಕ.
- ಪರಿಸರವ್ಯವಸ್ಥೆಯಲ್ಲಿ ಶಕ್ತಿಯ ಹರಿವು ಏಕಮುಖವಾಗಿರುತ್ತದೆ.
- ಒಂದು ಪೋಷಣಾಸ್ತರದಿಂದ ಮತ್ತೊಂದು ಪೋಷಣಾಸ್ತರಕ್ಕೆ ಶೇ 10 ರಷ್ಟು ಶಕ್ತಿ ಮಾತ್ರ ತಲುಪುತ್ತದೆ.
- ಓಝೋನ್ ಎಂಬುದು ಆಕ್ಸಿಜನ್‌ನ ಮೂರು ($O_3$) ಪರಮಾಣುಗಳಿಂದ ರೂಪುಗೊಂಡ ಒಂದು ಅಣುವಾಗಿದೆ.
- ಓಝೋನ್ ಪದರವು ನೇರಳಾತೀತ ವಿಕಿರಣಗಳಿಂದ ಭೂಮಿಯ ಮೇಲ್ಮೈಯನ್ನು ರಕ್ಷಿಸುತ್ತದೆ.
- ಓಝೋನ್ ಪದರವು ಸಿ.ಎಫ್.ಸಿ. ಎಂಬ ರಾಸಾಯನಿಕಗಳಿಂದ ಹಾಳಾಗುತ್ತದೆ.
- ಜೈವಿಕ ವಿಘಟನೆಗೆ ಒಳಪಡದ ತ್ಯಾಜ್ಯಗಳು ಪರಿಸರದಲ್ಲಿ ದೀರ್ಘಕಾಲ ಉಳಿದು ಮಾಲಿನ್ಯವನ್ನು ಉಂಟುಮಾಡುತ್ತವೆ.

### ಸಂಭವನೀಯ ಪ್ರಶ್ನೆ-ಉತ್ತರಗಳು

**1.ಆಹಾರ ಜಾಲ ಎಂದರೇನು?**

- ಪರಿಸರ ವ್ಯವಸ್ಥೆಯ ಒಂದು ಜೀವಿಯು ತಾನು ತಿನ್ನುವ ಮತ್ತು ಇತರ ಜೀವಿಗಳಿಂದ ತಿನ್ನಲ್ಪಡುವ ವ್ಯವಸ್ಥೆಯನ್ನು ಆಹಾರಜಾಲ ಎನ್ನುತ್ತಾರೆ .

**2.ಪರಿಸರ ವ್ಯವಸ್ಥೆಯ ವಿವಿಧ ಘಟಕಗಳನ್ನು ವಿವರಿಸಿ.**

- ಪರಿಸರ ವ್ಯವಸ್ಥೆಯ ವಿವಿದ ಘಟಕಗಳೆಂದರೆ,
ಎ)ಉತ್ಪಾದಕರು:- ಇವು ಸೂರ್ಯನ ವಿಕಿರಣಶಕ್ತಿಯನ್ನು ಬಳಸಿಕೊಂಡು ದ್ಯುತಿಸಂಶ್ಲೇಷಣೆ ಕ್ರಿಯೆಯ ಮೂಲಕ ಆಹಾರವನ್ನು ತಯಾರಿಸುತ್ತವೆ. ಎಲ್ಲಾ ಹಸಿರು ಸಸ್ಯಗಳು ಈ ಗುಂಪಿಗೆ ಸೇರುತ್ತವೆ.
ಬಿ)ಭಕ್ಷಕರು:- ಉತ್ಪಾದಕರು ತಯಾರಿಸಿದ ಆಹಾರವನ್ನು ನೇರವಾಗಿ ಅಥವಾ ಪರೋಕ್ಷವಾಗಿ ಭಕ್ಷಿಸುವ ಜೀವಿಗಳೇ ಭಕ್ಷಕರು. ಇವುಗಳನ್ನು ಸಸ್ಯಾಹಾರಿಗಳು, ಮಾಂಸಾಹಾರಿಗಳು, ಸರ್ವಹಾರಿಗಳು ಮತ್ತು ಪರಾವಲಂಬಿಗಳು ಎಂದು ಹಲವು ವಿಧಗಳಾಗಿ ವರ್ಗೀಕರಿಸಬಹುದು.
ಸಿ)ವಿಘಟಕಗಳು:- ಬ್ಯಾಕ್ಟೀರಿಯಾ ಮತ್ತು ಶಿಲೀಂದ್ರಗಳು ಈ ಗುಂಪಿಗೆ ಸೇರುತ್ತವೆ. ಇವು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತವೆ.



**3.ಆಹಾರ ಸರಪಣಿಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಒಳಗೊಂಡಿರುತ್ತವೆ. ಏಕೆ?**

- ಶಕ್ತಿಯು ಒಂದು ಹಂತದಿಂದ ಮುಂದಿನ ಹಂತಕ್ಕೆ ಕೇವಲ ಶೇ 10ಮಾತ್ರ ಹರಿಯುತ್ತದೆ. ಭಕ್ಷಕರ ಮುಂದಿನ ಹಂತಕ್ಕೆ ಸ್ವಲ್ಪವೇ ಶಕ್ತಿಯು ಲಭ್ಯವಿರುವುತ್ತದೆ. ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕ ಆಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯು ಉಳಿಯುತ್ತದೆ.

**4.ಜೈವಿಕ ಸಂವರ್ಧನೆ ಎಂದರೇನು?**

- ಜೈವಿಕ ವಿಘಟನೆಗೆ ಒಳಗಾಗದ ರಾಸಾಯನಿಕಗಳು ಪ್ರತಿ ಪೋಷಣಾಸ್ತರದಲ್ಲಿ ಸಂಗ್ರಹಿಸಲ್ಪಡುತ್ತವೆ. ಯಾವುದೇ ಆಹಾರ ಸರಪಳಿಯಲ್ಲಿ ಮಾನವರು ಉನ್ನತಮಟ್ಟವನ್ನು ಆಕ್ರಮಿಸಿಕೊಳ್ಳುವುದರಿಂದ ಈ ರಾಸಾಯನಿಕಗಳು ಗರಿಷ್ಠ ಸಾಂದ್ರತೆಯಲ್ಲಿ ನಮ್ಮ ದೇಹದಲ್ಲಿ ಸಂಗ್ರಹವಾಗುತ್ತವೆ. ಈ ವಿದ್ಯಮಾನವನ್ನು ಜೈವಿಕಸಂವರ್ಧನೆ ಎನ್ನವರು.

**5.ಜೈವಿಕ ವಿಘಟನೆಗೆ ಒಳಗಾಗುವ ಮತ್ತು ಒಳಗಾಗದ ವಸ್ತುಗಳ ನಡುವಿನ ವ್ಯತ್ಯಾಸಗಳನ್ನು ಉದಾಹರಣೆಗಳೊಂದಿಗೆ ತಿಳಿಸಿ.**

- ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳು:
  - ಜೈವಿಕ ಕ್ರಿಯೆಗಳಿಂದ ವಿಭಜಿಸಿ ಸರಳ ವಸ್ತುಗಳಾಗುತ್ತವೆ.
  - ಪರಿಸರದಲ್ಲಿ ದೀರ್ಘಕಾಲ ಉಳಿಯುವುದಿಲ್ಲ.
  - ಮಾಲಿನ್ಯವನ್ನು ಉಂಟುಮಾಡುವುದಿಲ್ಲ.
  ಉದಾ: ತರಕಾರಿ ಸಿಪ್ಪೆ, ಅಡುಗೆಮನೆಯ ತ್ಯಾಜ್ಯಗಳು, ಚರಂಡಿನೀರು ಇತ್ಯಾದಿ.
- ಜೈವಿಕ ವಿಘಟನೆಗೆ ಒಳಗಾಗದ ವಸ್ತುಗಳು:
  - ಜೈವಿಕ ಕ್ರಿಯೆಗಳಿಂದ ವಿಭಜನೆ ಹೊಂದುವುದಿಲ್ಲ.
  - ಪರಿಸರದಲ್ಲಿ ದೀರ್ಘಕಾಲ ಉಳಿದುಬಿಡುತ್ತವೆ.
  - ಮಾಲಿನ್ಯವನ್ನು ಉಂಟುಮಾಡುತ್ತವೆ.
  ಉದಾ: ಡಿ.ಡಿ.ಟಿ., ಪ್ಲಾಸ್ಟಿಕ್, ಗಾಜು ಇತ್ಯಾದಿ.

**6.ಓಝೋನ್ ಶಿಥಿಲೀಕರಣದಿಂದ ಉಂಟಾಗುವ ಪರಿಣಾಮಗಳೇನು?**

- ನೇರಳಾತೀತ ವಿಕಿರಣಗಳು ವಾತಾವರಣವನ್ನು ಪ್ರವೇಶಿಸುವುದರಿಂದ ಮಾನವರಲ್ಲಿ ಚರ್ಮದ ಕ್ಯಾನ್ಸರ್, ಕಣ್ಣಿನ ಕ್ಯಾಟ್ರ್ಯಾಕ್ಟ್‌ಗಳಿಗೆ ಕಾರಣವಾಗುತ್ತದೆ.
- ಸಸ್ಯ ಮತ್ತು ಪ್ರಾಣಿಗಳ ಬೆಳವಣಿಗೆ ಮತ್ತು ಶಾರೀರಿಕ ಕ್ರಿಯೆಗಳ ಮೇಲೆ ಪ್ರಭಾವ ಬೀರುತ್ತದೆ.
- ಡಿ.ಎನ್.ಎ.ಯ ಉತ್ಪರಿವರ್ತನೆಗೆ ಕಾರಣವಾಗುತ್ತದೆ.

**7.ಓಝೋನ್ ಪದರ ಹೇಗೆ ಉಂಟಾಗುತ್ತದೆ?**

- ಓಝೋನ್ ಎಂಬುದು ವಾತಾವರಣದ ಉನ್ನತ ಸ್ತರದಲ್ಲಿ ನೇರಳಾತೀತ ವಿಕಿರಣವು ಆಕ್ಸಿಜನ್ ಅಣುವಿನ($O_2$) ಜೊತೆ ವರ್ತಿಸಿ ಉಂಟಾದ ಸಂಯುಕ್ತವಾಗಿದೆ. ಹೆಚ್ಚಿನ ತೀವ್ರತೆಯ ನೇರಳಾತೀತ ವಿಕಿರಣಗಳು ಕೆಲವು ಆಕ್ಸಿಜನ್ ಅಣುಗಳನ್ನು ($O_2$), ಆಕ್ಸಿಜನ್ ಪರಮಾಣುಗಳಾಗಿ (O) ವಿಭಜಿಸುತ್ತದೆ. ನಂತರ ಈ ಪರಮಾಣುಗಳು ಇತರ ಆಕ್ಸಿಜನ್ ಅಣುಗಳೊಂದಿಗೆ ಸೇರಿ ಓಝೋನ್ ರೂಪುಗೊಳ್ಳುತ್ತದೆ.

$O_2$ -------> O + O
O + $O_2$ -------> $O_3$ (ಓಝೋನ್)

ಎ. ಬಾಲರಾಜು. ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿ ಜೀವಶಾಸ್ತ್ರದ 'ಅವರ್ ಎನ್ವಿರಾನ್‌ಮೆಂಟ್' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಮಾದರಿ ಪ್ರಶ್ನೋತ್ತರ

# ದ್ರಾವಕ ಮತ್ತು ದ್ರಾವಣಗಳು

ರಸಾಯನ ಶಾಸ್ತ್ರ

ಪಿಯುಸಿ

**15) ಯಾವ ಪ್ರಕ್ರಿಯೆಯನ್ನು ಪರಾಸರಣ (Osmosis) ಎನ್ನುವರು?**

ಉತ್ತರ:- ಪೊರೆಯನ್ನು ದ್ರಾವಕ ಮತ್ತು ದ್ರಾವಣಗಳ ನಡುವೆ ಇಟ್ಟಾಗ ದ್ರಾವಕದ ಅಣುಗಳು ಪೊರೆಯ ಮೂಲಕ ಶುದ್ಧ ದ್ರಾವಕದಿಂದ ದ್ರಾವಣಕ್ಕೆ ಹರಿಯುತ್ತವೆ. ದ್ರಾವಕದ ಹರಿವಿನ ಈ ಪ್ರಕ್ರಿಯೆಯನ್ನು ಪರಾಸರಣ (Osmosis) ಎನ್ನುವರು.

**16) ಯಾವುದನ್ನು ದ್ರಾವಣದ ಪರಾಸರಣ ಒತ್ತಡ ಎನ್ನುವರು**

ಉತ್ತರ:- ದ್ರಾವಕದ ಹರಿವನ್ನು ಕೇವಲ ನಿಲ್ಲಿಸುವ ಒತ್ತಡವನ್ನು ದ್ರಾವಣದ ಪರಾಸರಣ ಒತ್ತಡ ಎನ್ನುವರು (Osmotic pressure).

**17) ಸಮಪರಾಸರಣ ದ್ರಾವಣಗಳು (Isotonic solutions) ಎಂದು ಯಾವುದಕ್ಕೆ ಕರೆಯುವರು?**

ಉತ್ತರ:- ತಾಪಮಾನ ಒಂದರಲ್ಲಿ ಒಂದೇ ಪರಾಸರಣ ಒತ್ತಡವನ್ನು ಹೊಂದಿರುವ ಎರಡು ದ್ರಾವಣಗಳಿಗೆ, ಸಮಪರಾಸರಣ ದ್ರಾವಣಗಳು (Isotonic solutions) ಎಂದು ಕರೆಯುವರು.

**18) ಲೋಹಗಳಲ್ಲಿ ಎಲೆಕ್ಟ್ರಾನಿಕ್ ವಾಹಕತೆಯು ಯಾವೆಲ್ಲಾ ಅಂಶಗಳ ಮೇಲೆ ಅವಲಂಬಿತವಾಗಿದೆ.?**

ಉತ್ತರ:- ಲೋಹಗಳಲ್ಲಿ ವಿದ್ಯುದ್ವಾಹಕತೆಯನ್ನು ಲೋಹೀಯ ಅಥವಾ ಎಲೆಕ್ಟ್ರಾನಿಕ್ ವಾಹಕತೆ ಎನ್ನಬಹುದು ಮತ್ತು ಇದು ಎಲೆಕ್ಟ್ರಾನಿಕ್‌ಗಳ ಚಲನೆಯಿಂದ ಆಗುತ್ತದೆ. ಎಲೆಕ್ಟ್ರಾನಿಕ್ ವಾಹಕತೆಯು ಈ ಕೆಳಗಿನ ಅಂಶಗಳ ಮೇಲೆ ಅವಲಂಬಿತವಾಗಿದೆ.

(i) ಲೋಹದ ಸ್ವರೂಪ ಮತ್ತು ರಚನೆ
(ii) ಪ್ರತಿ ಪರಮಾಣುವಿನ ವೇಲೆನ್ಸ್ ಎಲೆಕ್ಟ್ರಾನಿಕ್‌ಗಳ ಸಂಖ್ಯೆ
(iii) ತಾಪಮಾನ (ತಾಪಮಾನದ ಏರಿಕೆಯಿಂದ ಅದು ಕಡಿಮೆಯಾಗುತ್ತದೆ)

**19) ವಿದ್ಯುದ್ವಿಭಾಜ್ಯ (ಅಯಾನಿಕ) ವಾಹಕತೆಯು ಯಾವೆಲ್ಲಾ ಅಂಶಗಳ ಮೇಲೆ ಅವಲಂಬಿತವಾಗಿದೆ?**

ಉತ್ತರ:-ವಿದ್ಯುದ್ವಿಭಾಜ್ಯವನ್ನು ನೀರಿನಲ್ಲಿ ವಿಲೀನಗೊಳಿಸಿದಾಗ ದ್ರಾವಣದಲ್ಲಿ ಇದು ತನ್ನ ಸ್ವಂತ ಅಯಾನುಗಳನ್ನು ಒದಗಿಸುತ್ತವೆ, ಅದರ ವಾಹಕತೆಯು ಸಹ ಹೆಚ್ಚಾಗುತ್ತದೆ. ವಿದ್ಯುದ್ವಾಹಕತೆಗೆ ದ್ರಾವಣದಲ್ಲಿರುವ ಅಯಾನುಗಳು ಕಾರಣವಾಗಿರುವುದರಿಂದ ಇದನ್ನು ವಿದ್ಯುದ್ವಿಭಾಜ್ಯ ಅಥವಾ ಅಯಾನಿಕ ವಾಹಕತೆ ಎನ್ನಬಹುದು.

ವಿದ್ಯುದ್ವಿಭಾಜ್ಯ (ಅಯಾನಿಕ) ವಾಹಕತೆಯು ಈ ಕೆಳಗಿನ ಅಂಶಗಳ ಮೇಲೆ ಅವಲಂಬಿತವಾಗಿದೆ.

(i) ಹಾಕಿದ ವಿದ್ಯುದ್ವಿಭಾಜ್ಯದ ಸ್ವರೂಪ
(ii) ಅಯಾನುಗಳ ಗಾತ್ರ ಮತ್ತು ಅವುಗಳ ದ್ರಾವಕೀಕರಣ
(iii) ದ್ರಾವಕದ ಸ್ವರೂಪ ಮತ್ತು ಅದರ ಸ್ನಿಗ್ಧತೆ
(iv) ವಿದ್ಯುದ್ವಿಭಾಜ್ಯದ ಸಾರತೆ
(v) ತಾಪಮಾನ (ತಾಪದ ಏರಿಕೆಯಿಂದ ಇದು ಹೆಚ್ಚುತ್ತದೆ)

**20) ಫಾರಡೇಯ ವಿದ್ಯುದ್ವಿಭಜನೆಯ ನಿಯಮಗಳು ಯಾವುವು?**

ಉತ್ತರ:- ವಿದ್ಯುದ್ವಿಭಾಜ್ಯಗಳ ದ್ರಾವಣಗಳ ಮತ್ತು ಕರಗಿದ ವಿದ್ಯುದ್ವಿಭಾಜ್ಯಗಳ, ವಿದ್ಯುದ್ವಿಭಜನೆಯ ವ್ಯಾಪಕ ಪರಿವೀಕ್ಷಣೆಯ ನಂತರ ಫಾರಡೆಯು 1833-34ರಲ್ಲಿ ಎರಡು ವಿದ್ಯುದ್ವಿಭಜನೆಯ ನಿಯಮಗಳನ್ನು ಪ್ರಕಟಿಸುತ್ತಾರೆ. ಅವು ಹೀಗಿವೆ:-

**ಮೊದಲನೆಯ ನಿಯಮ:** ವಿದ್ಯುದ್ವಿಭಜನೆಯಲ್ಲಿ ವಿದ್ಯುತ್ ನಿಂದ ಯಾವುದೇ ವಿದ್ಯುದಾಗ್ರದಲ್ಲಿ ಉಂಟಾದ ರಾಸಾಯನಿಕ ಕ್ರಿಯೆಯ ಪ್ರಮಾಣವು ವಿದ್ಯುದ್ವಿಭಾಜ್ಯದ (ದ್ರಾವಣ ಅಥವಾ ಕರಗಿದ) ಮೂಲಕ ಹಾಯಿಸಿದ ವಿದ್ಯುಚ್ಛಕ್ತಿಗೆ ಅನುಲೋಮದಲ್ಲಿರುತ್ತದೆ.

**ಎರಡನೆಯ ನಿಯಮ:** ವಿದ್ಯುದ್ವಿಭಾಜ್ಯ ದ್ರಾವಣಗಳ ಮೂಲಕ ಒಂದೇ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಹಾಯಿಸಿದಾಗ, ಬಿಡುಗಡೆಗೊಂಡ ವಿವಿಧ ವಸ್ತುಗಳ ಪ್ರಮಾಣವು ಅವುಗಳ ರಾಸಾಯನಿಕ ಸಮಾನ ತೂಕಕ್ಕೆ ನೇರ ಅನುಲೋಮವಾಗಿರುತ್ತದೆ.

(ಲೋಹದ ಪರಮಾಣು ರಾಶಿ ÷ ಧನ ಅಯಾನ್‌ನ್ನು ಅಪಕರ್ಷಣಗೊಳ್ಳಲು ಬೇಕಾದ ಎಲೆಕ್ಟ್ರಾನಿಕ್‌ಗಳ ಸಂಖ್ಯೆ)

**21) ಕ್ರಿಯೆಯ ಆಣ್ವಿಕತೆ ಎಂದು ಯಾವುದನ್ನು ಕರೆಯುತ್ತಾರೆ?**

ಉತ್ತರ:- ಒಂದು ರಾಸಾಯನಿಕ ಕ್ರಿಯೆಯನ್ನು ಉಂಟು ಮಾಡಲು, ಒಂದು ಮೂಲ ಕ್ರಿಯೆಯಲ್ಲಿ ಭಾಗವಹಿಸಿ ಏಕಕಾಲದಲ್ಲಿ ಸಂಘಟ್ಟ ಮಾಡುವ ಪ್ರತಿಕಾರಕ ಪ್ರಬೇಧಗಳ (ಪರಮಾಣುಗಳು, ಅಯಾನುಗಳು ಅಥವಾ ಅಣುಗಳು) ಸಂಖ್ಯೆಯನ್ನು ಕ್ರಿಯೆಯ ಆಣ್ವಿಕತೆ ಎಂದು ಕರೆಯಲಾಗಿದೆ.

**22) ಯಾವುದನ್ನು ಕ್ರಿಯೆಯೊಂದರ ಅರ್ಧಾಯು ಎನ್ನುವರು.**

ಉತ್ತರ:- ಒಂದು ಕ್ರಿಯಾಕಾರಕದ ಸಾರತೆಯನ್ನು ಆರಂಭಿಕ ಸಾರತೆಯ ಅರ್ಧದಷ್ಟು ಕಡಿಮೆ ಮಾಡಲು ತೆಗೆದುಕೊಳ್ಳುವ ಸಮಯವನ್ನು (ಕಾಲಾವಧಿಯನ್ನು) ಕ್ರಿಯೆಯೊಂದರ ಅರ್ಧಾಯು ಎನ್ನುವರು. ಇದನ್ನು $t_{1/2}$ ಎಂದು ಸೂಚಿಸಲಾಗುತ್ತದೆ. ಒಂದು

23) ಒಂದು ಕ್ರಿಯೆಯ ಕ್ರಿಯಾವೇಗ ಸ್ಥಿರಾಂಕಗಳು 500k ಮತ್ತು 700K ನಲ್ಲಿ ಅನುಕ್ರಮವಾಗಿ 0.02 $s^{-1}$ ಮತ್ತು 0.07$s^{1}$ ಆಗಿದೆ.

Ea ಮತ್ತು A ಮೊತ್ತಗಳನ್ನು ಲೆಕ್ಕಮಾಡಿ

ಉತ್ತರ:-

$$\log\frac{k_2}{k_1} = \frac{E_a}{2.303R}\left[\frac{T_2 - T_1}{T_1T_2}\right]$$

$$\log\frac{0.07}{0.02} = \left(\frac{E_a}{2.303 \times 8.314 JK^{-1}\ mol^{-1}}\right)\left[\frac{700-500}{700 \times 500}\right]$$

$$0.544 = E_a \times 5.714 \times 10^{-4}/19.15$$

$$E_a = 0.544 \times 19.15/5.714 \times 10^{-4} = 18230.8\ J$$

$k = Ae^{-Ea/RT}$ ಆಗಿರುವುದರಿಂದ

$$0.02 = Ae^{-18230.8/8.314 \times 500}$$

$$A = 0.02/0.012 = 1.61$$

**ಸಹಕಾರ:** ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ರಸಾಯನಶಾಸ್ತ್ರದ ಆಂಗ್ಲ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

# ಅಭಿಮತ

**ಸುಭಾಷಿತ**

ಪ್ರೀತಿಯಿಂದ ಆಡುವ ಪ್ರತಿಯೊಂದು ನುಡಿಯೂ ಸಿಡಿಲಿನಂತೆ ಪರಿಣಾಮಕಾರಿ.

–ಸ್ವಾಮಿ ವಿವೇಕಾನಂದ

# ಹೃದಯ ಕಲಕಿತು ವಿದ್ಯಾರ್ಥಿಯ ಸಾವು ಸರ್ಕಾರದ ಯತ್ನ ತ್ವರಿತಗೊಳ್ಳಲಿ

**ವೈದ್ಯಕೀಯ** ವಿದ್ಯಾರ್ಥಿಯಾಗಿದ್ದ ಹಾವೇರಿ ಜಿಲ್ಲೆ ಚಳಗೇರಿಯ ನವೀನ್ ಶೇಖರಪ್ಪ ಗ್ಯಾನಗೌಡರ್ ಯುದ್ಧಪೀಡಿತ ಉಕ್ರೇನ್‌ನಲ್ಲಿ ರಷ್ಯನ್ನರ ಶೆಲ್ ದಾಳಿಯಿಂದ ಸಾವು ಕಾಣುವಂತಾಗಿದ್ದು ಅಂತಃಕರಣ ಕಲಕುವ ದುರಂತ. ವೈದ್ಯನಾಗುವ ಕನಸು ಕಾಣುತ್ತಿದ್ದ ಯುವಕನ ಬದುಕು ಈ ರೀತಿ ಕಮರಿಹೋದದ್ದು ಹೃದಯವನ್ನು ಹಿಂಡುವಂಥದ್ದು ಕೂಡ. ಉಕ್ರೇನ್‌ನ ಹಾರ್ಕಿವ್‌ನಲ್ಲಿ ಎಂಬಿಬಿಎಸ್ ಓದುತ್ತಿದ್ದ ನವೀನ್, ರಷ್ಯಾ–ಉಕ್ರೇನ್ ಸಂಘರ್ಷ ಶುರುವಾದೊಡನೆ ಇತರ ಸಾವಿರಾರು ವಿದ್ಯಾರ್ಥಿಗಳಂತೆ ಸ್ವದೇಶಕ್ಕೆ ಮರಳಲಾಗದೆ ಇದ್ದಲ್ಲಿಯೇ ಆಶ್ರಯವನ್ನು ಪಡೆಯಬೇಕಾಯಿತು. ಕರ್ಫ್ಯೂ ಸಡಿಲಿಕೆಯ ಸಮಯದಲ್ಲಿ ಆಹಾರದ ವ್ಯವಸ್ಥೆ ಮಾಡಿಕೊಳ್ಳಲು ಹೋಗಿದ್ದ ಸಂದರ್ಭದಲ್ಲೇ ಶೆಲ್ ದಾಳಿ ನಡೆದಿದ್ದರಿಂದ ಈ ದುರಂತ ಸಂಭವಿಸಿದೆ. ವೈದ್ಯನಾಗಿ ಮರಳಿ ಬಂದು, ಬಾಳಿ ಬದುಕಬೇಕಾಗಿದ್ದ ಮಗ ಹೀಗೆ ಕಣ್ಣೆದುರಿಗೆ ದುರಂತ ಅಂತ್ಯ ಕಾಣುವಂತಾದ ನೋವು–ಸಂಕಟವನ್ನು ಅವರ ತಂದೆ–ತಾಯಿ ಸಹಿಸಿಕೊಳ್ಳುವುದು ಬಲು ಕಷ್ಟ. ಯಾವುದೇ ತಂದೆ–ತಾಯಿಯ ಪಾಲಿಗೆ ಮಕ್ಕಳ ಈ ರೀತಿಯ ಅಗಲಿಕೆ ಹೃದಯವಿದ್ರಾವಕ ಕೂಡ. ಈ ಸಾವಿನ ಸುದ್ದಿಯ ಬೆನ್ನಿಗೇ ಉಕ್ರೇನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಲು ತ್ವರಿತಗತಿಯ ಕಾರ್ಯಾಚರಣೆ ನಡೆಸುವಂತೆ ದೇಶದಾದ್ಯಂತ ಬಲವಾದ ಕೂಗು ಎದ್ದಿದೆ. ಸರ್ಕಾರವೇನೋ ಪ್ರಯತ್ನ ಮಾಡುತ್ತಿದೆ ನಿಜ. ಆದರೆ, ಆ ಪ್ರಯತ್ನದ ವೇಗ ಸಾಲದಾಗಿದೆ. ಏಕೆಂದರೆ ಉಕ್ರೇನ್‌ನಿಂದ ಹೊರಬರುವುದು ಎಷ್ಟೊಂದು ಪ್ರಯಾಸಕರ ಎನ್ನುವುದನ್ನು ಸ್ವದೇಶಕ್ಕೆ ಮರಳಿದ ವಿದ್ಯಾರ್ಥಿಗಳು ವಿವರಿಸಿದ್ದಾರೆ. ರೊಮೇನಿಯಾ ಗಡಿ ತಲುಪಿದರೂ ಗಡಿ ದಾಟಲು ಉಕ್ರೇನ್‌ನ ನಾಗರಿಕರಿಗೇ ಆದ್ಯತೆ ನೀಡುತ್ತಿರುವುದು, ಅತಿಯಾದ ಶೀತದ ವಾತಾವರಣದಲ್ಲಿ, ಅದೂ ಸುರಿಯುತ್ತಿರುವ ಹಿಮದ ನಡುವೆ ದಿನಗಟ್ಟಲೆ ಕಾಯಬೇಕಾದುದು ಮತ್ತು ಭಾರತೀಯ ವಿದ್ಯಾರ್ಥಿಗಳ ಮೇಲೆ ಕೆಲವೆಡೆ ಹಲ್ಲೆ ನಡೆದಿರುವುದು ಆತಂಕಕ್ಕೆ ಈಡುಮಾಡುವ ವಿದ್ಯಮಾನಗಳು.

**ಎಲ್ಲ ವಿದ್ಯಾರ್ಥಿಗಳನ್ನೂ ಸುರಕ್ಷಿತವಾಗಿ ಕರೆತರುವುದೇ ಸರ್ಕಾರದ ಆದ್ಯತೆ ಆಗಬೇಕು**

ಉಕ್ರೇನ್‌ನ ಯುದ್ಧಪೀಡಿತ ಪ್ರದೇಶ ಹೊರತುಪಡಿಸಿ ಇತರ ಪ್ರಾಂತಗಳಿಂದ ವಿದ್ಯಾರ್ಥಿಗಳ ಕೆಲವು ತಂಡಗಳನ್ನು ಸ್ವದೇಶಕ್ಕೆ ಕರೆತಂದಾಗ ಸ್ವತಃ ವಿಮಾನ ನಿಲ್ದಾಣಕ್ಕೆ ದೌಡಾಯಿಸಿದ ಕೇಂದ್ರ ಸಚಿವ ಪಿಯೂಷ್ ಗೋಯಲ್, ಆ ತಂಡಗಳನ್ನು ಸ್ವಾಗತಿಸಿ, ಭಾಷಣ ಮಾಡಿದರು. ಅದಕ್ಕೆ ದೊಡ್ಡ ಪ್ರಚಾರ ಪಡೆಯುವ ಯತ್ನವನ್ನೂ ಮಾಡಿದರು. ಜಗತ್ತಿನಲ್ಲಿ ಎಲ್ಲಿಯೇ ಆಗಲಿ, ಇಂತಹ ದುರಂತಗಳು ಸಂಭವಿಸಿದಾಗ ಅಲ್ಲಿರುವ ತಮ್ಮ ಪ್ರಜೆಗಳ ರಕ್ಷಣೆಗೆ ಧಾವಿಸುವುದು ಸರ್ಕಾರದ ಹೊಣೆ. ಅದನ್ನೊಂದು ಸಾಧನೆ ಎಂಬಂತೆ ಬಿಂಬಿಸುವ ಅಗತ್ಯ ಇಲ್ಲ. ಅಂತೆಯೇ ಇಂತಹ ವಿಚಾರಗಳನ್ನು ಯಾವುದೇ ಪಕ್ಷ ಅಥವಾ ಮುಖಂಡ ರಾಜಕೀಯ ಪ್ರಯೋಜನಕ್ಕೆ ಬಳಸಿಕೊಳ್ಳಲೂಬಾರದು. ಇನ್ನು ಪರಿಸ್ಥಿತಿಯ ಗಾಂಭೀರ್ಯವನ್ನೇ ಅರಿಯದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ವಿದೇಶದಲ್ಲಿ ವೈದ್ಯ ಪದವಿ ಪಡೆದವರು ಇಲ್ಲಿ ಪಾಸಾಗುವುದಿಲ್ಲ' ಎಂದು ಹೇಳುವ ಮೂಲಕ ತಾವು ಎಷ್ಟೊಂದು ಅಸೂಕ್ಷ್ಮ ಎಂಬುದನ್ನು ಎತ್ತಿ ತೋರಿದ್ದಾರೆ. 'ಸಂಘರ್ಷದ ನಡುವೆ ಸಿಲುಕಿಕೊಂಡಿರುವ ಮಕ್ಕಳು ಹೇಗಾದರೂ ಮನೆಗೆ ಬಂದರೆ ಸಾಕು' ಎಂದು ಪಾಲಕರೆಲ್ಲ ತುದಿಗಾಲ ಮೇಲೆ ಕಾಯುತ್ತಾ ನಿಂತಿರುವಾಗ ಸಚಿವರ ಈ ಪ್ರಲಾಪ ಅನಗತ್ಯವಾಗಿತ್ತು.

ಯುದ್ಧ ನಡೆಯುವಾಗ ಆ ಪ್ರದೇಶದಲ್ಲಿ ಸಿಲುಕಿದವರನ್ನು ಸುರಕ್ಷಿತವಾಗಿ ಕರೆತರುವುದು ಸುಲಭದ ಕೆಲಸವಲ್ಲ. ಅದಕ್ಕೆ ನೂರೆಂಟು ಅಡ್ಡಿಗಳು. ಅವುಗಳನ್ನೆಲ್ಲ ಯಶಸ್ವಿ ರಾಯಭಾರದ ಮೂಲಕ ಮೆಟ್ಟಿ-ನಿಲ್ಲಬೇಕು. ಈ ವಿಷಯದಲ್ಲಿ ಕೆಲವು ದೇಶಗಳು ಮುನ್ನೆಚ್ಚರಿಕೆ ವಹಿಸಿ ತಮ್ಮ ದೇಶದ ಪ್ರಜೆಗಳನ್ನು ವಾಪಸು ಕರೆಸಿಕೊಂಡಿರುವುದು ವರದಿಯಾಗಿದೆ. ಭಾರತ ಸರ್ಕಾರವು ನಾಲ್ವರು ಸಚಿವರ ತಂಡಗಳನ್ನು ರಚಿಸಿ ಉಕ್ರೇನ್ ಗಡಿಗೆ ಕಳುಹಿಸಿಕೊಟ್ಟಿದೆ. ಆದರೆ, ಯುದ್ಧಪೀಡಿತ ಕೀವ್ ಮತ್ತು ಹಾರ್ಕಿವ್ ಭಾಗಗಳಿಂದ ವಿದ್ಯಾರ್ಥಿಗಳನ್ನು ಕರೆತರುವುದು ಇನ್ನೂ ಸಾಧ್ಯವಾಗಿಲ್ಲ. ಅಲ್ಲಿ ದಿನದಿಂದ ದಿನಕ್ಕೆ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಮುಂದಿನ 3–4 ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ವಿಮಾನಗಳನ್ನು ಕಳುಹಿಸಿ, ವಿದ್ಯಾರ್ಥಿಗಳನ್ನೆಲ್ಲ ಕರೆತರುವುದಾಗಿ ಸರ್ಕಾರ ಪ್ರಕಟಿಸಿದೆ. ರಾಜತಾಂತ್ರಿಕ ಕೌಶಲವನ್ನು ಸಮರ್ಪಕವಾಗಿ ಬಳಸಿ, ರಷ್ಯಾದೊಂದಿಗಿನ ಗೆಳೆತನದ ಲಾಭವನ್ನೂ ಪಡೆದುಕೊಂಡು ಎಲ್ಲ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವುದೇ ಸರ್ಕಾರದ ಆದ್ಯತೆ ಆಗಬೇಕು. ಅಪಾಯದಲ್ಲಿ ಸಿಲುಕಿರುವ ಎಲ್ಲ ವಿದ್ಯಾರ್ಥಿಗಳು ಸುರಕ್ಷಿತವಾಗಿ ತವರಿಗೆ ಮರಳಲಿ ಎನ್ನುವುದೇ ದೇಶದ ಎಲ್ಲರ ಹಾರೈಕೆ.

## ದಿನದ ಟ್ವೀಟ್

### ಮತ್ತೆ ಸಿಇಟಿ ತನ್ನಿ

**ಟ್ಯೂಶನ್ ಮಾಫಿಯಾ ಕೈಗೆ ಸಿಲುಕಿರುವ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯನ್ನು ಮೊದಲು ಸರಿಪಡಿಸಬೇಕಿದೆ. ವೈದ್ಯಕೀಯ ಶಿಕ್ಷಣಕ್ಕೆ ಇರುವ ನೀಟ್ ಪರೀಕ್ಷೆಯನ್ನು ತೆಗೆದು, ಮೊದಲಿದ್ದಂತೆಯೇ ಸಿಇಟಿ ಪರೀಕ್ಷೆಯನ್ನು ಮಾಡಿ ಆಯ್ಕೆ ನಡೆಸಲಿ.**
**#BanNeet #BringbackCET**

**ಅರುಣ್ ಜಾವಗಲ್,** ಕನ್ನಡಪರ ಕಾರ್ಯಕರ್ತ

## ಕಿಡಿನುಡಿ



**ಭಾರತದ ವಿದ್ಯಾರ್ಥಿಗಳನ್ನು ಉಕ್ರೇನ್‌ನಿಂದ ಕರೆತರುವ ಸರ್ಕಾರದ ಪ್ರಯತ್ನ ಅತ್ಯವಶ್ಯಕ ಮತ್ತು ಪ್ರಶಂಸನೀಯ. ಆದರೆ ಅದನ್ನು 'ಆಪರೇಷನ್ ಗಂಗಾ' ಎಂದು ಕರೆದಿರುವುದೇಕೆ? ಈ ಕಾರ್ಯಾಚರಣೆಗೂ ಗಂಗೆಗೂ ಏನು ಸಂಬಂಧ– ಉತ್ತರಪ್ರದೇಶದಲ್ಲಿ ಚುನಾವಣೆ ನಡೆಯುತ್ತಿರುವುದನ್ನು ಹೊರತುಪಡಿಸಿ? ರಾಷ್ಟ್ರೀಯ ಪ್ರಯತ್ನದಲ್ಲೂ ಮೋದಿ ಅವರು ಚುನಾವಣಾ ಪ್ರಯೋಜನ ಪಡೆಯಲು ಬಯಸುವುದೇಕೆ?**

**ಸುಧೀಂದ್ರ ಕುಲಕರ್ಣಿ,** ಲೇಖಕ

## 25 ವರ್ಷಗಳ ಹಿಂದೆ

ಸೋಮವಾರ, 3-3-1997

**• ಅಕ್ರಮ ಸಂಪತ್ತು ಗಳಿಕೆ ಆರೋಪ ತನಿಖೆಗೆ ಸಿದ್ಧ– ದೇವೇಗೌಡ**

**ಹೊಳೆನರಸೀಪುರ, ಮಾ. 2–** ತಮ್ಮ ಕುಟುಂಬದ ಸದಸ್ಯರ ವಿರುದ್ಧ ಮಾಡಲಾದ ಅಕ್ರಮ ಸಂಪಾದನೆ ಆರೋಪಗಳ ಸಂಬಂಧ ಯಾವುದೇ ತನಿಖೆಗೂ ತಾವು ಸಿದ್ಧ ಎಂದು ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಹೇಮಾವತಿ ನದಿ ತೀರದ ಪಟ್ಟಣವಾದ ಇಲ್ಲಿ ಇಂದು, ಹೊಸದಾಗಿ ಪರಿವರ್ತಿಸಲಾದ ಹಾಸನ– ಹೊಳೆನರಸೀಪುರ ಬ್ರಾಡ್‌ಗೇಜ್ ರೈಲು ಮಾರ್ಗದ ಉದ್ಘಾಟನೆ, ಹೊಸ ರೈಲು ಮಾರ್ಗದ ಉದ್ಘಾಟನೆ, ಹೊಸ ರೈಲು ನಿಲ್ದಾಣಕ್ಕೆ ಶಂಕುಸ್ಥಾಪನೆ ಹಾಗೂ ಇನ್ನೂ ಹಲವಾರು ಕಾರ್ಯಕ್ರಮಗಳ ಪ್ರಾರಂಭೋತ್ಸವ ಹಾಗೂ ಶಿಲಾನ್ಯಾಸ ನೆರವೇರಿಸಿ ಪ್ರಧಾನಿ ಮಾತನಾಡಿದರು.

'ನನಗೆ ಒಂದು ಸಾವಿರ ಕೋಟಿ ಆಸ್ತಿ ಇದೆ ಎಂದು ಕೆಲವರು ಹುಡುಕುತ್ತಾ ಇದ್ದಾರೆ. ಯಾರದ್ದು ಎಷ್ಟು ಇದೆ ಎಂದು ನಾನು ಬೇಕಾದರೆ ಒಂದೇ ದಿನದಲ್ಲಿ ಹೊರ ತೆಗೆಯಬಲ್ಲೆ' ಎಂದು ಅವರು ಹೇಳಿದರು.

**• ಲೋಕಪಾಲರ ನೇಮಕ ಅಧಿಕಾರ ಪ್ರಧಾನಿಗೆ ಬೇಡ**

**ನವದೆಹಲಿ, ಮಾ. 2–** 'ಉನ್ನತ ಸ್ಥಾನದಲ್ಲಿರುವವರ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುವ ಲೋಕಪಾಲರ ನೇಮಕ ಮಾಡುವ ಅಧಿಕಾರವನ್ನು ಆಳುವ ಪಕ್ಷದ ಪ್ರಮುಖರಿಗೆ ನೀಡಬಾರದು. ಅದರ ಬದಲಾಗಿ ನ್ಯಾಯಾಂಗ, ಪತ್ರಿಕಾರಂಗ ಹಾಗೂ ಸಾರ್ವಜನಿಕ ಕ್ಷೇತ್ರದ ಪ್ರಮುಖರ ಸಮಿತಿಗೆ ವಹಿಸಿಕೊಡಬೇಕು. ಈ ಸಮಿತಿಯಲ್ಲಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರೂ ಇರಬೇಕು' ಎಂದು ಲೋಕಪಾಲ ಮಸೂದೆಯನ್ನು ಪರಿಶೀಲಿ-ಸುತ್ತಿರುವ ಗೃಹ ಖಾತೆಯ ಸ್ಥಾಯಿ ಸಮಿತಿ ಅಭಿಪ್ರಾಯಪಟ್ಟಿದೆ.

ಸಾರ್ವಜನಿಕ ಪ್ರಮುಖರ ಜತೆ ಚರ್ಚಿಸಿ ಮಸೂದೆಯನ್ನು ಅಂತಿಮಗೊಳಿಸುತ್ತಿರುವ ಸಮಿತಿಯು ವರದಿಯನ್ನು ಏಪ್ರಿಲ್ ಎರಡನೇ ವಾರದೊಳಗೆ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

## 50 ವರ್ಷಗಳ ಹಿಂದೆ

ಶುಕ್ರವಾರ, 3-3-1972

**• ಆಡಳಿತ ಕಾಂಗ್ರೆಸ್‌ನ ದೃಢವಿಶ್ವಾಸ ಜನಸಂಘದ ಸೆಣಸಾಟ**

**ಕಾರವಾರ, ಮಾ. 2–** ಸುಭದ್ರವಾಗಿದೆ ಎನ್ನಬಹುದಾದ ಉತ್ತರ ಕನ್ನಡ ಜಿಲ್ಲೆಯ ಆಡಳಿತ ಕಾಂಗ್ರೆಸ್‌ನ ತೀರಕ್ಕೆ ಜನಸಂಘದ ಹಾಗೂ ಸಂಸ್ಥಾ ಕಾಂಗ್ರೆಸ್‌ನ ಭಾರಿ ಅಲೆಗಳು ಬಂದಪ್ಪಳಿಸುತ್ತಿವೆ.

ಈ ಅಲೆಗಳು ತೀರ ಮುಟ್ಟುತ್ತಿದ್ದಂತೆ ಕರಗಿ ಹೋಗಿ, ಬಂದ ದಾರಿಯಲ್ಲೇ ವಾಪಸಾಗುವುವು ಎಂಬ ವಿಶ್ವಾಸವಿರುವ ಆಡಳಿತ ಕಾಂಗ್ರೆಸ್, ಜಿಲ್ಲೆಯ ಆರು ಕ್ಷೇತ್ರಗಳು 'ಪ್ರಯಾಸಕರ'ವೆನಿಸಿದರೂ ಇಲ್ಲೂ ಜಯದ ಬಗ್ಗೆ ಸಂಶಯವಿಲ್ಲವೆಂಬುದು ಇವರ ನಂಬಿಕೆ.

**• ಕಲ್ಬುರ್ಗಿಯಲ್ಲಿ ಶಾಂತ ಪರಿಸ್ಥಿತಿ; ಕರ್ಫ್ಯೂ ಅವಧಿ ಅಂತ್ಯ**

**ಕಲ್ಬುರ್ಗಿ, ಮಾ. 2–** ಕಲ್ಬುರ್ಗಿಯಲ್ಲಿ ನಡೆಯುತ್ತಿದ್ದ ಕಲ್ಲು ತೂರಾಟ, ಬೆಂಕಿ ಹಚ್ಚುವಿಕೆ ಮತ್ತು ಲೂಟಿ ಪ್ರಕರಣಗಳನ್ನು ಹತ್ತಿಕ್ಕಿ ಶಾಂತಿ ಸ್ಥಾಪಿಸಲು ನಿನ್ನೆ ಮಧ್ಯಾಹ್ನ 12 ಗಂಟೆಗೆ ಮತ್ತೆ ಜಾರಿಮಾಡಿದ್ದ ಕರ್ಫ್ಯೂ ಇಂದು ಮಧ್ಯಾಹ್ನ 12 ಗಂಟೆಗೆ ಮುಕ್ತಾಯಗೊಂಡು ಪರಿಸ್ಥಿತಿ ಬಹುಮಟ್ಟಿಗೆ ಹತೋಟಿಗೆ ಬಂದಿದೆ.

ಆ ರಾಷ್ಟ್ರದಲ್ಲಿ ಆಗುತ್ತಿರುವ ಯುದ್ಧದ ಘೋರ ಪರಿಣಾಮಗಳು ನಮಗೆ ತಟ್ಟದೆ ಇರುತ್ತವೆಯೇ?

# ಯುದ್ಧೋನ್ಮಾದ ಮತ್ತು ಬಹುತ್ವದ ಸಂಸ್ಕೃತಿ

**ವಿಶ್ಲೇಷಣೆ**

**ಡಾ. ನಿಂಗಪ್ಪ ಮುದೇನೂರು**

**'ಯುದ್ಧ** ಯಾರಿಗೆ ಬೇಕು' ಎಂಬ ಪ್ರಶ್ನೆಯನ್ನು ಇಟ್ಟುಕೊಳ್ಳೋಣ. ಶಸ್ತ್ರಾಸ್ತ್ರಗಳನ್ನು ಧಾನ್ಯದಂತೆ ಅಪಾರವಾಗಿ ಸಂಗ್ರಹಿಸಿ ಇಟ್ಟುಕೊಂಡವರಿಗೆ, ತನ್ನ ಗಡಿಯೊಳಗೆ ತಾಗಿಕೊಂಡು ಆ ದೇಶ ಬೆಳೆಯುತ್ತದೆಯಲ್ಲ ಎಂಬ ಹೊಟ್ಟೆಕಿಚ್ಚು ಬೆಳೆಸಿಕೊಂಡವರಿಗೆ, ಪರಮಾಣು ಬಾಂಬುಗಳು ತನ್ನ ಬತ್ತಳಿಕೆಯಲ್ಲಷ್ಟೇ ಇರಬೇಕು, ತಾನು ಮಾತ್ರ 'ಹೀರೊ', ಉಳಿದವರು 'ಖಳನಾಯಕ' ಎಂಬ ಮನಃಸ್ಥಿತಿಯುಳ್ಳವರಿಗೆ, ಯುದ್ಧವನ್ನು ಒಂದು ಉದ್ಯಮ ಮಾಡಿಕೊಂಡವರಿಗೆ, ತನ್ನ ನೆರೆಹೊರೆಯನ್ನು ಆಕ್ರಮಿಸಿಕೊಂಡು ಅಲ್ಲಿ ತನ್ನ ಗೋಡೆಯನ್ನೋ ಧ್ವಜವನ್ನೋ ನೆಟ್ಟು ಬದುಕಬೇಕೆಂಬ ಹಿಪಾಕ್ರಸಿ ಮನಸ್ಸು-ಳ್ಳವರಿಗೆ, ಪ್ರಜಾಪ್ರಭುತ್ವ, ಸಂವಿಧಾನ, ಸ್ವಾತಂತ್ರ್ಯದ ಹಕ್ಕು ಬಾಧ್ಯತೆಗಳಿದ್ದರೂ ತನ್ನ ಆಂತರಿಕ ಬದುಕಿಗೆಲ್ಲೋ ಅಪಾಯವಿದೆಯೆಂದು ಸ್ವಗತವಾಗಿ ನರಳುವವರಿಗೆ, ನಮ್ಮ ಪ್ರಾಚೀನ ಕಾವ್ಯಗಳಲ್ಲಿರುವಂತೆ ದಾಯಾದಿ ಮತ್ಸರ, ಹಗೆ, ಸ್ವಾರ್ಥ ತುಂಬಿಕೊಂಡವರಿಗೆ... ಹೀಗೆ ಇವನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ಇವುಗಳ ಮಧ್ಯೆಯೂ ಎಲ್ಲೋ ಕರ್ಣ, ಏಕಲವ್ಯ, ಬಾಹುಬಲಿ, ಕುವೆಂಪು ಅವರ ಶಂಬೂಕ, ಜಲಗಾರ, ಕನಕನ ರಾಗಿ ತೋರುವ ಆತ್ಮವಿಶ್ವಾಸ, ಅಂತಃಕರಣ, ಮನುಷ್ಯನನ್ನು, ಮನುಷ್ಯತ್ವವನ್ನು ಬಾಳಿಸುತ್ತದೆಯಲ್ಲಾ ಎಂದು ನೆನೆದರೆ ಒಂದಿಷ್ಟು ನೆಮ್ಮದಿಯಂತೂ ಆಗುತ್ತದೆ. ಹಾಗೆಯೇ ಜಗತ್ತು ನಾವು ನೆಮ್ಮದಿಯಿಂದ ಇದ್ದೇವೆ ಎನ್ನುವಾಗಲೇ ನಮ್ಮ ಹೊರಗೂ ಒಳಗೂ ಯುದ್ಧವೊಂದು ಸದಾ ಜಾಗೃತಿಯಲ್ಲಿರುತ್ತದೆ. 'ಗೋವಿನ ಹಾಡು'ವಿನಲ್ಲೂ 'ಅಮ್ಮಗಳಿರಾ ಅಕ್ಕಗಳಿರಾ ನಮ್ಮ ತಾಯ್ ಒಡಹುಟ್ಟುಗಳಿರಾ ನಿಮ್ಮ ಕಂದನೆಂದು ಕಾಣಿರಿ ತಬ್ಬಲಿಯನೀ ಕರುವನು' ಎಂದು ಸ್ವತಃ ತಾಯಿ ಆಕಳು ಹುಲಿಯ ಬಾಯಿಗೆ ತಾನು ಈಡಾಗಬಹುದಾದ ಪ್ರಸಂಗವನ್ನು ನೆನೆದು ಅಲವತ್ತುಕೊಳ್ಳುವುದನ್ನು ನೋಡಿದರೆ ನಮಗೆ ಸದ್ಯದ 'ಉಕ್ರೇನ್'ನ ದುಗುಡ ನೆನಪಾಗುತ್ತದೆ. ಗೋವಿನ ಹಾಡಿನ ಹುಲಿ ರಷ್ಯಾ ಆಗಲು ಸಾಧ್ಯವೇ? ಮಕ್ಕಳು, ತಾಯಂದಿರು, ಅವರ ಸಂಕುಲ, ಪರಿಸರವೇ ನಾಶ ಹೊಂದುತ್ತಿರುವ ಕರುಳು ಹಿಂಡುವ ಯುದ್ಧದ ದೃಶ್ಯಗಳನ್ನು ನಾವು ಹೇಗೆ ಅರಗಿಸಿಕೊಳ್ಳುವುದು?

ಹಲವಾರು ಹುಲಿಗಳ ಶಕ್ತಿ- ಸಾಮರ್ಥ್ಯ ಸೇರಿ ಇಲ್ಲಿ 'ನ್ಯಾಟೊ' ಎನ್ನುವ ಒಂದು ಬಲಿಷ್ಠ ಒಕ್ಕೂಟವಾಗಿದೆ. ಅಮೆರಿಕವು ಇದರ ರಿಮೋಟ್ ಹಿಡಿದಿದೆ. ಅದು ಉಕ್ರೇನಿಗೆ ಸಹಾಯಹಸ್ತ ಚಾಚುವ ಭರವಸೆ ನೀಡಿದೆ. ಆದರೂ ಅದಕ್ಕೂ ಯುದ್ಧೋನ್ಮಾದವೇ ಬೇಕು. ಅತ್ತ ಬೇಟೆ ಸಿಕ್ಕಿದೆಯೆಂದು ನಿರಂತರ ದಾಳಿ ಎಸಗುತ್ತಲೇ ಇರುವ ಇನ್ನೊಂದು ಬಲಿಷ್ಠ ಹುಲಿ ರಷ್ಯಾ. ಈ ಬಲಿಷ್ಠ ಹುಲಿಗಳನ್ನು ಗಮನಿಸುತ್ತಲೇ ಹೊಂಚುಹಾಕಿ, ಬೇಟೆಯಿಂದ ಉಳಿದ ಆಹಾರವನ್ನು ನಾವು ಹಂಚಿಕೊಂಡು ಸವಿಯಬಹುದು ಎಂದು ಎದುರು ನೋಡುತ್ತಿರುವ ಚೀನಾ, ಪಾಕಿಸ್ತಾನ, ದಕ್ಷಿಣ ಕೊರಿಯಾದಂಥ ದೇಶಗಳು. ಇಲ್ಲಿ ಭಾರತವೇನೋ ತಟಸ್ಥವಾಗಿದೆ. ಆದರೆ ಒಮ್ಮೊಮ್ಮೆ ಈ ತಟಸ್ಥ ನೀತಿ ಅದಕ್ಕೆ ಮುಳುವಾಗಲೂಬಹುದು. ನಮ್ಮ ಬಲವಾದ ಅಭಿಪ್ರಾಯವನ್ನು ಹೇಳದೇ ಇರುವ, ದಾಖಲಿಸದೇ ಇರುವ ಈ ನಡೆ ನಮ್ಮ ತಾಯಿನಾಡಿಗೆ ಎಂಥ ಸುಖವನ್ನು ಕೊಡುತ್ತದೆಯೋ ಗೊತ್ತಿಲ್ಲ. ಸದಾ ವೀರಾವೇಶದಿಂದ ಬದುಕುವ ನಮಗೆ, ಅಲ್ಲಿ ಕಲಿಯಲು ಹೋದ ನಮ್ಮ ಮಕ್ಕಳನ್ನು ಉಳಿಸಿಕೊಳ್ಳಲು ಆಗುತ್ತಿಲ್ಲ. ಆ ರಾಷ್ಟ್ರದಲ್ಲಿ ಆಗುತ್ತಿರುವ ಯುದ್ಧದ ಘನಘೋರ ಅಪಾಯಗಳು ನಮಗೆ ತಟ್ಟದೆ ಇರುತ್ತವೆಯೇ? ಯುದ್ಧವೆಂದರೆ ಸಾವೇ ಅದರ ಹೆಬ್ಬಾಗಿಲು!

ನಾವೆಷ್ಟೇ ಸ್ವಾವಲಂಬಿ, ಸ್ವದೇಶಿ, ಮೇಕ್ ಇನ್ ಇಂಡಿಯಾ ಎಂದು ಹೇಳಿಕೊಂಡರೂ ಕಚ್ಚಾ ರೇಷ್ಮೆಯನ್ನು, ಸ್ಟೀಲು, ಉಕ್ಕು, ಕಲ್ಲಿದ್ದಲನ್ನು, ಯುದ್ಧ ಸಾಮಗ್ರಿಗಳು, ಆಧುನಿಕ ತಂತ್ರಜ್ಞಾನದ ಬಿಡಿಭಾಗಗಳನ್ನು ಜೊತೆಗೆ ಗೋಧಿ, ಸೂರ್ಯಕಾಂತಿ ಎಣ್ಣೆ, ಈರುಳ್ಳಿ, ಆಲೂಗಡ್ಡೆಯಂತಹ ಮೂಲಭೂತ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲು ನಾವು ಹಲವು ರಾಷ್ಟ್ರಗಳನ್ನು ಆಶ್ರಯಿಸಬೇಕು. ಅದರಲ್ಲಿ ನೆರೆಯ 'ವೈರಿ' ಎಂದು ಬಿಂಬಿಸುತ್ತಲೇ ಬಂದಿರುವ ರಾಷ್ಟ್ರವೂ ಇದೆ. ಅಷ್ಟೊಂದು ಪರಾವಲಂಬಿಗಳು ನಾವು. ಪರಸ್ಪರ ಸೌಹಾರ್ದ, ರಾಜತಾಂತ್ರಿಕತೆ, ಬಾಂಧವ್ಯ ಇದ್ದಾಗಲೂ ಕ್ರೀಡೆ, ಕಲೆ, ಸಾಹಿತ್ಯ, ಸಂಸ್ಕೃತಿ, ಧಾರ್ಮಿಕ ಆಚರಣೆ, ಗೋಷ್ಠಿಗಳಲ್ಲೂ ನಾವು ಮತ್ತು ಅವರು ಪರಸ್ಪರ ಕಹಿ ಭಾವನೆಗಳನ್ನು ಆಗಾಗ ವ್ಯಕ್ತಪಡಿಸುತ್ತಿರುತ್ತೇವೆ. ಇದೇ ವೈರುಧ್ಯದ ದೇಶೀಯತೆ ಮತ್ತು ರಾಷ್ಟ್ರಪ್ರೇಮ!

ಹೋಗಲಿ ಒಂದು ಕಾಲದಲ್ಲಿ ನಾವೇ ಆಗಿದ್ದ ಅಕ್ಕಪಕ್ಕದ ಗಡಿರಾಜ್ಯಗಳ ವಿಷಯದಲ್ಲೂ ನಾವು ಪರಸ್ಪರ ಕೂಡಿ ಬದುಕುವ ಸೌಹಾರ್ದವನ್ನು ಇಟ್ಟುಕೊಂಡಿಲ್ಲವಲ್ಲ. ಭಾಷೆಯ ವಿಷಯದಲ್ಲಿ, ಜಲದ ವಿಷಯದಲ್ಲಿ, ಭೂಮಿ ಗಡಿಯ ವಿಷಯದಲ್ಲಿ, ಜಾತಿ, ವರ್ಗ, ಧರ್ಮದ ವಿಷಯದಲ್ಲಿ ನಾವು ಸದಾ ಒಡಕಲು ಬಿಂಬಗಳೇ. ಹೋಗಲಿ ನಮ್ಮ ಕನ್ನಡ ಕುಲಪುರೋಹಿತರು ಎನಿಸಿಕೊಂಡವರ, ಮರಾಠಿ ಕುಲಪುರೋಹಿತರು ಎನಿಸಿಕೊಂಡವರ, ತಮಿಳು ಕುಲಪುರೋಹಿತರು ಎನಿಸಿಕೊಂಡವರ ಹಾಗೇ ತೆಲುಗು, ಮಲಯಾಳಂ ಹೀಗೆ ಸಾಂಸ್ಕೃತಿಕವಾಗಿ ಹೆಚ್ಚು ಶ್ರೀಮಂತವಿರುವ ದಕ್ಷಿಣ ದ್ರಾವಿಡ ಪರಿಸರದಲ್ಲಿಯೇ ಅನನ್ಯ ಅಸ್ಮಿತೆಗಳಿಂದ ಬದುಕಿರುವ ನಮ್ಮನಮ್ಮಲ್ಲಿಯೇ ಎಷ್ಟೊಂದು ಜಗಳಗಳನ್ನು ನಮ್ಮ ಸಾಹಿತ್ಯಿಕ ಕೃತಿಗಳು ಹುಟ್ಟುಹಾಕಿಲ್ಲ. ಕೆಲವು ಪಠ್ಯಗಳನ್ನು ಓದುತ್ತಿದ್ದರೆ ನಮ್ಮೊಳಗೇ ಒಂದು 'ದ್ವೇಷ' ಹುಟ್ಟಿಕೊಂಡುಬಿಡುತ್ತದೆ. ಇದು ಹೀಗೇಕಾಯ್ತು? ಅಷ್ಟೊಂದು ಕಠಿಣವಿತ್ತೇ ಈ ಭಾಷಾ ಬಹುತ್ವದ ಸಂಸ್ಕೃತಿಯ ಬದುಕು ಎನ್ನುವ ಆತಂಕವೂ ಎದುರಾಗುತ್ತದೆ.

ಇಷ್ಟಿದ್ದರೂ ಬೇಂದ್ರೆಯವರು 'ನಮ್ಮ ಬೇಂದ್ರೆ'ಯಾಗಿ ನಮ್ಮಲ್ಲಿಯೇ ಬದುಕಿದರು. 'ಮಾತೃಭಾಷೆ ತಮಿಳು, ಹೃದಯದ ಭಾಷೆ ಕನ್ನಡ'ವೆಂದು ಕನ್ನಡದ ಆಸ್ತಿ ಎನಿಸಿದ 'ಮಾಸ್ತಿ' ಬದುಕಿದರು. ಹಾಗೇ ತಂಜಾವೂರು ಪರಮಶಿವ ಕೈಲಾಸಂ, ಬಾಲ್ಯದಿಂದಲೂ ನಮ್ಮನ್ನು ನಾಯಿಮರಿ, ಬಣ್ಣದ ತಗಡಿನ ತುತ್ತೂರಿ ಮೂಲಕ ಬೆಳೆಸಿದ 'ರತ್ನನ ಪದ'ದ ನಮ್ಮ ಜಿ.ಪಿ.ರಾಜರತ್ನಂ, 'ಆಲ್ ಇಂಡಿಯಾ ರೇಡಿಯೊ' ಎಂದು ನಾಮಕರಣ ಮಾಡಿದ್ದ ನಾ.ಕಸ್ತೂರಿ (ಮೂಲ ಕೇರಳದವರು) ನಮ್ಮ ಮನ, ಮನೆಯ ಬೆಳಗಿ ನಿಂತವರು. ಹಾಗೆ ನೋಡಿದರೆ ಬುದ್ಧ, ಮಹಾವೀರ, ಪೈಗಂಬರ, ಕ್ರಿಸ್ತ, ನಮ್ಮ ವಚನಕಾರರು, ದಾಸರು, ಸಂತರು, ಸೂಫಿಗಳು, ತತ್ವಪದಕಾರರು, ಗಾಂಧಿ, ಅಂಬೇಡ್ಕರ್, ಲೋಹಿಯಾ, ಕಾರ್ಲ್‌ಮಾರ್ಕ್ಸ್ ಮುಂತಾದವರು ಯಾವ ಯಾವುದೊ ನಾಡುಗಳಿಂದಲೂ ಚಿಂತನೆಗಳಿಂದಲೂ ಬಂದು ಇಲ್ಲಿ ನದಿಯಾಗಿ ಕೂಡಿಕೊಂಡರು. ಈ ಬೆಳಕೇ ನಮ್ಮನ್ನಿಂದು ಆಂತರಿಕ ಶಕ್ತಿಯಾಗಿ ಬೆಳಗುತ್ತಿದೆ ತಾನೆ?

ಮರಾಠಿ ನಾಟಕಗಳು ಕನ್ನಡ ಪರಿಸರದಲ್ಲಿ ಪ್ರಯೋಗಗೊಂಡರೆ, ಕನ್ನಡ ನಾಟಕಗಳು ಮರಾಠಿ ನೆಲದಲ್ಲಿ ಪ್ರಯೋಗಗೊಂಡರೆ ಸಂಸ್ಕೃತಿಯ ಬಹುತ್ವದ ಪ್ರಸರಣದಲ್ಲಿ ದ್ವೇಷ ಮಾಡುವುದೇನಿದೆ? ನಮ್ಮ ದುಡಿಮೆ, ಹಕ್ಕು, ಆದಾಯವನ್ನು ಅವು ಗಳಿಸಿ ಬಲಿಷ್ಠವಾಗುತ್ತವೆ ಎಂಬ ಆತಂಕವೇ ಹೆಚ್ಚಾಗಿದೆ. ನಮ್ಮ ವಿವೇಕವನ್ನು ಅವು ಬೆಳಗಿ ನಮ್ಮದಾಗುವ ಹಂಬಲಕ್ಕೆ ಇಂಬಾಗುತ್ತವೆ ಎಂದು ನಂಬಿ ನಾವು ಪರಸ್ಪರ ಹೃದಯ ತೆರೆದುಕೊಳ್ಳಲೇ ಇಲ್ಲ. ಪುರಾಣದ ಆಂಜನೇಯನೇನೋ ತನ್ನ ಭಕ್ತಿ, ಪ್ರೇಮ, ಸೇವಕತನಕ್ಕೆ ಎದೆ ತೆರೆದು ಒಟ್ಟಾಗಿ ರಾಮ, ಲಕ್ಷ್ಮಣ, ಸೀತೆಯರನ್ನು ಕಾಣಿಸಿದ. ನಾವು ಹಾಗೆ ಕಾಣಿಸಲು ಸಿದ್ಧರಿದ್ದೇವೆಯೇ? ಎದೆಯ ಕದ ತೆರೆಯುವುದಷ್ಟೇ ಇರಲಿ ಹೊರಗಿನ ಯಾವ ಶುದ್ಧ ಗಾಳಿಯೂ ಒಳಬರಬಾರದೆಂದು ನಮ್ಮೆಲ್ಲ ಮನ ಮನೆಗಳ ಕಿಟಕಿ ಬಾಗಿಲುಗಳನ್ನು ಭದ್ರಪಡಿಸಿಕೊಂಡು, ಸಮನ್ವಯ-ವಿಲ್ಲದೆ ಒಳಗೊಳಗೇ ಮಾನಸಿಕವಾಗಿ ನರಳುತ್ತಿದ್ದೇವೆ. ಅಷ್ಟೊಂದು ಅಭದ್ರತೆ ನಮ್ಮ ವರ್ತಮಾನದ ಬದುಕಿಗಿದೆ.

ಬೇಂದ್ರೆಯವರು ಕನ್ನಡದ ಮೂಲಕ ಜಗದೇಳಿಗೆ ಬಯಸಿದ್ದರು. ವಾಸ್ತವದಲ್ಲಿ ಜಗತ್ತೇ ಇಂದು ಉದ್ವಿಗ್ನ, ಬೇಗುದಿಯ ಸ್ಥಿತಿಯಲ್ಲಿದೆ. ನಾವು ಈಗ ಯಾವ ಜಗತ್ತನ್ನು ಆದರ್ಶವೆಂದು ಭಾವಿಸುವುದು? ಪರಸ್ಪರ ಉದ್ವಿಗ್ನತೆ-ಯನ್ನು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಔದ್ಯೋಗಿಕವಾಗಿ ಮೀರದಿದ್ದರೆ ನಮಗೆ ಉಳಿಗಾಲವಿಲ್ಲ. ನಮ್ಮ ಮನುಷ್ಯತ್ವಕ್ಕೂ ಬೆಲೆ ಇರುವುದಿಲ್ಲ. ನಾವು ಜಗತ್ತಿನ ಯುದ್ಧಗಳನ್ನು ಗೆಲ್ಲುವು-ದಕ್ಕಿಂತ ನಮ್ಮೊಳಗಿನ ಯುದ್ಧದ ತಾಪಗಳನ್ನು ಕಳೆದು-ಕೊಳ್ಳುವುದು ಹೆಚ್ಚು ಅರ್ಥಪೂರ್ಣ. ಅದೇ ಬಾಳಿನ ನಿಜವಾದ ಸೊಗಸು.

ಲೇಖಕ: ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಚುರುಮುರಿ

### ಬಂಗಾರ ಭಾರ

• ಮಣ್ಣೆ ರಾಜು

**ಗಂಡನ** ಜೊತೆ ಮದುವೆ ಸಮಾರಂಭ ಮುಗಿಸಿ ಬಂದ ಸುಮಿ ಅಪ್‌ಸೆಟ್ಟಾಗಿದ್ದಳು. ಬೇಸಿಗೆ ತಾಪದಿಂದ ಬಳಲಿರಬೇಕು ಎಂದುಕೊಂಡ ಶಂಕ್ರಿ. ಮದುವೆಗಳಿಗೆ ಹೋಗಿಬರುವ ಹೆಚ್ಚಿನ ಮಹಿಳೆಯರಿಗೆ ಹೀಗೆ ಮೂಡ್ ಆಫ್ ಆಗುತ್ತೆ ಎನ್ನುವ ಸಾಮಾನ್ಯ ಜ್ಞಾನ ಅವನಿಗೆ ಇರಲಿಲ್ಲ.

'ಇನ್ಮೇಲೆ ನಾನು ಮದುವೆಗಳಿಗೆ ಹೋಗಲ್ಲ...' ಸುಮಿ ಸಿಡುಕಿದಳು. 'ಯಾಕೆ? ಊಟ ಚೆನ್ನಾಗಿರ-ಲಿಲ್ವಾ?' ಶಂಕ್ರಿ ಕೇಳಿದ.

'ಅಲ್ಲಾ, ಹೆಂಗಸರ ನೋಟ ಚೆನ್ನಾಗಿರಲಿಲ್ಲ...'

'ಚೆನ್ನಾಗೇ ಇತ್ತಲ್ಲಾ, ಎಲ್ಲರೂ ನನ್ನನ್ನು ನೋಡಿ ನಗ್ತಿದ್ರು'.

'ನಗದೆ ಇನ್ನೇನು ಮಾಡ್ತಾರೆ, ಮೀಸೆಗೆ ಹೇರ್‌ಡೈ ಹಚ್ಚಿಕೊಳ್ಳುವಾಗ ಕೆನ್ನೆಗೂ ಬಳಿದು-ಕೊಂಡಿರುವುದು ಎದ್ದು ಕಾಣುತ್ತಿತ್ತು... ನಾನು ಅಂದವಾಗಿ ಮೇಕಪ್ ಮಾಡಿಕೊಂಡಿದ್ದರೂ ಮುಖವನ್ನು ಯಾರೂ ನೋಡುತ್ತಿರಲಿಲ್ಲ, ನನ್ನ ಕತ್ತು ನೋಡಿಕೊಂಡೇ ಮಾತನಾಡಿಸುತ್ತಿದ್ದರು. ನನಗಂತೂ ಕತ್ತು ಹಿಸುಕಿಕೊಳ್ಳುವಂತಾಗಿತ್ತು'.

'ಹೌದಾ? ಯಾಕೆ?'

'ಎಲ್ಲರೂ ಕೇಜಿಗಟ್ಟಲೆ ಬಂಗಾರದ ಸರಗಳನ್ನು ಹಾಕ್ಕೊಂಡಿದ್ರು, ನನ್ನ ಕುತ್ತಿಗೆಯಲ್ಲಿ ಸಾಧಾರಣ ಸಿಂಗಲ್ ಸರ ಅದ್ಕೆ...'

'ನಿಜ, ಹೆಂಗಸರು ತೊಟ್ಟಿದ್ದ ಮಣ ಭಾರದ ಒಡವೆಗಳನ್ನು ನೋಡಿ, ಮದುವೆ ಮನೆಯೋ ಆಭರಣ ಮಳಿಗೆಯೋ ಎಂದು ಅನಿಸಿತು. ಒಡವೆ ಪ್ರದರ್ಶನಕ್ಕೆ ಗೋಲ್ಡ್ ಮೆಡಲ್ ಕೊಡುವುದಿದ್ದರೆ ಮದುವೆಗಳಿಗೆ ಕೊಡಬೇಕು'.

'ಹೆಂಗಸರಿಗೆ ಚಿನ್ನದ ವ್ಯಾಮೋಹ ಇದ್ದೇ ಇರುತ್ತದೆ ಕಣ್ರೀ'.

'ಬಂಗಾರದ ಅಮಲು ಅಪಾಯಕಾರಿ. ಅದು ಬಂಗಾರದಂತಹ ಸಂಸಾರ ಕೆಡಿಸಿಬಿಡುತ್ತದೆ. ಬಂಗಾರವನ್ನು ಮಾದಕ ಪದಾರ್ಥ ಎಂದು ಪರಿಗಣಿಸಿ ಬ್ಯಾನ್ ಮಾಡಬೇಕು'.

'ಮಾನ ಕಾಪಾಡುವಷ್ಟು ಒಡವೆ ಕೊಡಿಸದಿದ್ದರೆ ನಾನು ಮದುವೆಗಳಿಗೆ ಹೋಗೋದನ್ನೇ ಬ್ಯಾನ್ ಮಾಡ್ತೀನಿ'.

'ಯುದ್ಧ ಶುರುವಾಗಿ ಬಂಗಾರದ ಬೆಲೆ ಮೂಗಿಗಿಂತ ಮೂಗುತಿ ಭಾರ ಎನ್ನುವಷ್ಟಾಗಿದೆ. ಬೆಲೆ ಹೀಗೇ ಏರುತ್ತಿದ್ದರೆ ಕೊಳ್ಳುವುದಿರಲಿ, ಇರುವ ಒಡವೆಯನ್ನೂ ಮಾರುವ ಸ್ಥಿತಿ ಬರುತ್ತದೆ'.

'ಹೀಗೇ ನೆಪ ಹೇಳುತ್ತಿದ್ದರೆ ನಾನು ನಿಮ್ಮ ಮೇಲೆ ಯುದ್ಧ ಸಾರಬೇಕಾಗುತ್ತದೆ...' ಎಚ್ಚರಿಸಿದಳು ಸುಮಿ.

## ಸಂಗತ

# ಅಲೆಮಾರಿಗಳ ದೋಣಿ ದಡ ಸೇರುವುದೆಂದು?

ಅಲೆಮಾರಿ ಸಮುದಾಯಗಳನ್ನು ಇನ್ನಾದರೂ ಮುಖ್ಯವಾಹಿನಿಗೆ ಕರೆತರಬೇಕಾಗಿದೆ

• ಕಿರಣ್ ಕುಮಾರ್ ಕೊತ್ತಗೆರೆ

**ಆಧುನಿಕ** ಜಗತ್ತಿನ ಸ್ಪರ್ಶವೇ ಇಲ್ಲದೆ, ವಿಜ್ಞಾನ–ತಂತ್ರಜ್ಞಾನದ ಅರಿವೇ ಇಲ್ಲದೆ, ನೆಲೆ ನಿಲ್ಲಲೊಂದು ಸೂರು ಇಲ್ಲದೆ, ಹಾದಿ- ಬೀದಿ, ಕಾಡು- ಮೇಡು ಅಲೆಯುವ ಅಲೆಮಾರಿ ಸಮುದಾಯಗಳ ಜನರ ಬದುಕು ಇಂದಿಗೂ ಬಟಾಬಯಲಿನಲ್ಲಿ ಮೂರಾಬಟ್ಟೆಯಾಗಿ ನಿಂತಿದೆ. ಜಗತ್ತು ಇಷ್ಟೆಲ್ಲಾ ನಾಗಾಲೋಟದಲ್ಲಿ ಮುನ್ನುಗ್ಗುತ್ತಿದ್ದರೂ ಈ ಸಮುದಾಯಗಳಿಗೆ ಅದರ ಕಿಂಚಿತ್ತು ಫಲವೂ ದೊರಕದೆ ತಮ್ಮ ಅಸ್ಮಿತೆಯನ್ನೇ ಕಳಚಿಕೊಳ್ಳುವ ಹಂತಕ್ಕೆ ಬಂದು ನಿಂತಿವೆ.

ಪರಿಶಿಷ್ಟ ಜಾತಿಯಲ್ಲಿ ಸುಡುಗಾಡುಸಿದ್ಧ, ಸಿಳ್ಳೇಕ್ಯಾತಾಸ್, ದೊಂಬರು, ಹಂದಿಜೋಗಿ, ಚನ್ನದಾಸರ್, ಕೊರಮ, ಕೊರಚ ಇತರೆ 51 ಮತ್ತು ಪರಿಶಿಷ್ಟ ಪಂಗಡದಲ್ಲಿ ಮೇದ, ಇರುಳಿಗ, ಹಕ್ಕಿಪಿಕ್ಕಿ, ಕಮ್ಮಾರ ಇತರೆ 23 ಬುಡಕಟ್ಟುಗಳನ್ನು ಅಲೆಮಾರಿ ಸಮುದಾಯಗಳು ಎಂದು ಸರ್ಕಾರ ಗುರುತಿಸಿದೆ. ಈ 74 ಸಮುದಾಯಗಳು ಒಟ್ಟು 9.63 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿವೆ. ನಾಗರಿಕತೆಯ ಪೂರ್ವದಲ್ಲಿ ಎಲ್ಲರೂ ಅಲೆಮಾರಿಗಳೇ ಆಗಿದ್ದರು ಎಂದು ಇತಿಹಾಸ ಹೇಳುತ್ತದೆ. ನಾವು ನಾಗರಿಕ ಸಮಾಜದಲ್ಲಿ ಇದ್ದೇವೆ ಎಂದುಕೊಳ್ಳುವ ಈ ಸಂದರ್ಭದಲ್ಲೇ ನಿರ್ದಿಷ್ಟ ವಿಳಾಸವಿಲ್ಲದೇ ನೆಲೆಯ ಹುಡುಕಾಟದಲ್ಲಿ ಇಷ್ಟು ಸಮುದಾಯಗಳಿರುವುದು ಇಡೀ ವ್ಯವಸ್ಥೆಯನ್ನೇ ಅಣಕಿಸುವಂತಿದೆ.

ಅಭಿವೃದ್ಧಿಯ ಸ್ಪರ್ಶವೇ ಸೋಕದ ಅಲೆಮಾರಿ ಸಮುದಾಯಗಳು ತಮ್ಮದೇ ಆದ ಸಾಂಸ್ಕೃತಿಕ ಅಸ್ಮಿತೆ ಉಳಿಸಿಕೊಳ್ಳಲು ತಡಕಾಡುತ್ತಿವೆ. ಪರಿಶಿಷ್ಟರ ಮುಖ್ಯವಾಹಿನಿಯ ಸಮುದಾಯಗಳಿಗಿಂತಲೂ ವಿಭಿನ್ನ ಮತ್ತು ವಿಶಿಷ್ಟವಾದ ಜೀವನಶೈಲಿ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯಿಂದಾಗಿ ಔದ್ಯೋಗಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳಲು ಇವರು ಶಕ್ತರಲ್ಲ ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನೇಕ ಅಧ್ಯಯನ ವರದಿಗಳೇ ಹೇಳಿವೆ. ಗುರುತಿಸಲ್ಪಟ್ಟ ಅಲೆಮಾರಿಗಳ ಸಾಕ್ಷರತೆಯ ಪ್ರಮಾಣ ಒಟ್ಟಾರೆಯಾಗಿ ಶೇ 41.92ರಷ್ಟಿದೆ. ಸಾಕ್ಷರತೆ ಎಂದರೆ ಅಕ್ಷರ ಜ್ಞಾನವೇ ವಿನಾ ಅದು ಪೂರ್ಣ ಪ್ರಮಾಣದ ಶಿಕ್ಷಣವಲ್ಲ. ಇನ್ನು ಶೇ 96.56ರಷ್ಟು ಜನರಿಗೆ ಭೂಮಿಯ ಹಕ್ಕಿಲ್ಲ.

ಇವೆಲ್ಲವನ್ನೂ ಗಮನಿಸಿದರೆ, ಪರಿಶಿಷ್ಟ ಜಾತಿ, ಪಂಗಡದ ಮುಖ್ಯವಾಹಿನಿಯ ಸಮುದಾಯಗಳು ಮತ್ತು ಅಲೆಮಾರಿ ಸಮುದಾಯಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿವೆ ಎಂದೇ ಹೇಳಬೇಕು. ಈ ಏರುಪೇರು ದಿನದಿಂದ ದಿನಕ್ಕೆ ಹೆಚ್ಚುತ್ತಿದೆಯೇ ವಿನಾ ಕಡಿಮೆಯಾಗಿಸುವ ಯಾವ ಹರಿಗೋಲೂ ಕಾಣಿಸದಿರುವುದು ಅತ್ಯಂತ ಆತಂಕದ ವಿಷಯ.

ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ 2016ರಲ್ಲಿ ಸರ್ಕಾರವು ಅಭಿವೃದ್ಧಿ ಕೋಶವೊಂದನ್ನು ಸ್ಥಾಪಿಸಿತು. ಅದು ಅಲೆಮಾರಿಗಳನ್ನು ದಡ ಸೇರಿಸುವ ದೋಣಿಯಾಗಲಿದೆ ಎಂಬ ಕನಸು ನನಸಾಗಲೇ ಇಲ್ಲ. ಅನುದಾನದ ಅಲಭ್ಯತೆ, ಜನಪ್ರತಿನಿಧಿಗಳ ನಿರ್ಲಕ್ಷ್ಯ, ಸಿಬ್ಬಂದಿ ಕೊರತೆಯಿಂದ ಅಭಿವೃದ್ಧಿ ಕೋಶವೇ ಮುಳುಗುವ ದೋಣಿಯಂತೆ ಕಾಣಿಸುತ್ತಿದೆ.

ಆರು ವರ್ಷಗಳ ಅವಧಿಯಲ್ಲಿ, ಅಲೆಮಾರಿಗಳಿಗೆ ನೆಲೆ ಕಲ್ಪಿಸುವ ಯೋಜನೆ ರೂಪಿಸುವ ಮಾತು ಹಾಗಿರಲಿ, ಕೋಶಕ್ಕೊಂದು ಪ್ರತ್ಯೇಕ ಕಚೇರಿಯನ್ನೇ ತೆರೆದುಕೊಳ್ಳಲು ಸಾಧ್ಯವಾಗಿಲ್ಲ. ಅಲೆಮಾರಿ ಸಮುದಾಯಗಳ ಬದುಕಿನಂತೆ ಅಲೆಮಾರಿ ಅಭಿವೃದ್ಧಿ ಕೋಶವೂ ಕಚೇರಿಯ ವಿಳಾಸವಿಲ್ಲದೇ ಅಲೆಮಾರಿಯಾಗಿದೆ. ಜಾತಿಗೊಂದೊಂದು ನಿಗಮ ಮಾಡಿ ಜಾತಿಗಳ ಮಠಾಧೀಶರನ್ನು ಓಲೈಸುತ್ತಿರುವ ಸರ್ಕಾರ, ಅಲೆಮಾರಿ ಅಭಿವೃದ್ಧಿ ಕೋಶಕ್ಕೆ ಹೆಚ್ಚಿನ ಆರ್ಥಿಕ, ಆಡಳಿತಾತ್ಮಕ ಚೈತನ್ಯ ತುಂಬಿ, ನಿಗಮದ ಸ್ವರೂಪದ ಮಾದರಿಯಲ್ಲಿ ಮೇಲ್ದರ್ಜೆಗೇರಿಸಿ ಸದರಿ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು. ಈ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಬೇಕು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಇತರ ರಾಜ್ಯಗಳಲ್ಲಿ ಅಲೆಮಾರಿಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಸಮಗ್ರ ಸಮೀಕ್ಷೆ ನಡೆಸಿ, ಸಮಸ್ಯೆಗಳನ್ನು ಗುರುತಿಸಿ ಯೋಜನೆಗಳನ್ನು ರೂಪಿಸಲಾಗಿದೆ. ಕರ್ನಾಟಕ ಸರ್ಕಾರ ಇವುಗಳನ್ನು ಮಾದರಿಯಾಗಿ ಪರಿಗಣಿಸಬೇಕಿದೆ.

ನೆಲೆಯನ್ನೇ ನಿಲ್ಲದವರಿಗೆ ಶಾಶ್ವತ ವಸತಿ ಮತ್ತು ಮೂಲಸೌಕರ್ಯ ಒದಗಿಸಲು ವಿಶೇಷ ಆರ್ಥಿಕ ಪ್ಯಾಕೇಜ್‌ಗಳನ್ನು ಒದಗಿಸಿ ಮುಖ್ಯವಾಹಿನಿಗೆ ಇನ್ನಾದರೂ ಕರೆತರಬೇಕಾದ ಜವಾಬ್ದಾರಿ ಎಲ್ಲ ನಾಗರಿಕ ಸರ್ಕಾರಗಳ ಮೇಲಿದೆ. ಇನ್ನು ಅಲೆಮಾರಿ ಸಮುದಾಯಗಳನ್ನು ಬಹುವಾಗಿ ಕಾಡುತ್ತಿರುವುದು ಜಾತಿ, ಉಪಜಾತಿ ಹಾಗೂ ಪರ್ಯಾಯ ಪದಗಳ ಗೊಂದಲಗಳು. ಈ ಗೊಂದಲಗಳ ನಿವಾರಣೆಗೆ ಪ್ರತ್ಯೇಕ ಅಲೆಮಾರಿ ಆಯೋಗ ನೇಮಿಸುವ ಅನಿವಾರ್ಯವೂ ಇದೆ. ಜೊತೆಗೆ ಅಲೆಮಾರಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ವೈಜ್ಞಾನಿಕ ಕಾರ್ಯಕ್ರಮಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರಷ್ಟೇ ಇವರ ಸಮಗ್ರ ಅಭಿವೃದ್ಧಿ ಸಾಧ್ಯ.

ಆದರೆ, ಅಲೆಮಾರಿಗಳ ಪರ ಹೋರಾಟಗಾರರ ಬೇಡಿಕೆ ಹಲವು ವರ್ಷಗಳಿಂದ ಅರಣ್ಯರೋದನವಾಗಿಯೇ ಉಳಿದುಕೊಂಡಿದೆ. ಮತ ರಾಜಕೀಯದ ದೃಷ್ಟಿಯಲ್ಲಿ ಬಲಿಷ್ಠವಲ್ಲದ ಅಲೆಮಾರಿ ಸಮುದಾಯಗಳು ಸರ್ಕಾರದ ಗಮನ ಸೆಳೆಯಲು ತಿಣುಕಾಡುತ್ತಿವೆ. ಚುನಾವಣೆ ಮತ್ತು ಮತಬ್ಯಾಂಕಿನ ದೃಷ್ಟಿಯಿಂದಷ್ಟೇ ಈ ಸೂಕ್ಷ್ಮ ಸಮುದಾಯಗಳನ್ನು ನೋಡದೆ, ಸಂವೇದನಾಶೀಲ ದೃಷ್ಟಿಕೋನದಿಂದ ನೋಡಬೇಕಾದುದು ಸರ್ಕಾರದ ಕರ್ತವ್ಯ.

ಆಡಳಿತ ಪಕ್ಷದ ಶಾಸಕರಿರಲಿ ಅಥವಾ ವಿರೋಧ ಪಕ್ಷದ ಜನಪ್ರತಿನಿಧಿಗಳೇ ಇರಲಿ ಧ್ವನಿಯೇ ಇಲ್ಲದ ಈ ಸಮುದಾಯಗಳ ಪರವಾಗಿ ಅಂತಃಕರಣದ ದನಿಯನ್ನು ಸದನದಲ್ಲಿ ಎತ್ತುವ ಮನಸ್ಸು ಮಾಡಬೇಕಿದೆ.

## ವಾಚಕರ ವಾಣಿ

### ಈ ಸಾವು ನ್ಯಾಯವೇ?

ಉಕ್ರೇನ್ ದೇಶದಲ್ಲಿ ಶೆಲ್ ದಾಳಿಗೆ ಬಲಿಯಾದ ಚಳಗೇರಿ ಗ್ರಾಮದ ನವೀನ್ ಎನ್ನುವ ವಿದ್ಯಾರ್ಥಿಯ ಸಾವು ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದೆ. ಮಾಧ್ಯಮಗಳೊಂದಿಗೆ ಮಾತನಾಡಿದ ನವೀನ್ ತಂದೆ, 'ಭಾರತದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗ ಕಷ್ಟಸಾಧ್ಯವಾಗಿದೆ. ಪಿಯುವಿನಲ್ಲಿ ಶೇಕಡ 97ರಷ್ಟು ಅಂಕ ಗಳಿಸಿದ್ದರೂ ಭಾರತದಲ್ಲಿ ನಮ್ಮ ಮಗನಿಗೆ ಎಂಬಿಬಿಎಸ್ ಸೀಟ್‌ಗಾಗಿ ಒಂದೂವರೆ ಕೋಟಿ ರೂಪಾಯಿ ಕೇಳಿದ್ದರು' ಎಂದು ನೋವಿನಿಂದ ಹೇಳಿದರು. ನಮ್ಮ ದೇಶದಲ್ಲಿ ಬಹುತೇಕ ಮೆಡಿಕಲ್ ಕಾಲೇಜುಗಳು ಡೀಮ್ಡ್ ಸ್ಥಾನಮಾನ ಪಡೆದುಕೊಂಡಿದ್ದು, ಮಂತ್ರಿಗಳು, ರಾಜಕಾರಣಿಗಳ ಒಡೆತನದಲ್ಲಿವೆ. ಬೆರಳೆಣಿಕೆಯಷ್ಟು ಇರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಸಿಗದಿದ್ದಾಗ ಅನಿವಾರ್ಯವಾಗಿ ಈ ಡೀಮ್ಡ್ ಕಾಲೇಜುಗಳನ್ನು ಅವಲಂಬಿಸಬೇಕಾಗುತ್ತದೆ. ಅದು ಸಾಧ್ಯವಾಗದಿದ್ದಾಗ ಅನ್ಯ ದೇಶಗಳಿಗೆ ತೆರಳುವಂತಾಗಿದೆ. ಬದುಕಿ ಬೆಳಗಬೇಕಾಗಿದ್ದ ನವೀನ್ ಈ ರೀತಿ ಸಾವು ಕಾಣುವಂತಾಗಿದ್ದು ಅತ್ಯಂತ ನೋವಿನ ಸಂಗತಿ.

**ಭುವನೇಶ್ವರಿ ಅಚ್ಚೀಗಾಂವ,** ವಿಜಯಪುರ

### ಅತಿರೇಕದ ಪ್ರಚಾರ: ಸ್ವಯಂ ಲಕ್ಷ್ಮಣರೇಖೆ ಇರಲಿ

ಉಕ್ರೇನ್ ಮತ್ತು ರಷ್ಯಾ ಯುದ್ಧ ಸಂಬಂಧಿ ಸುದ್ದಿಯನ್ನು ವೈಭವೀಕರಿಸುವ ಭರದಲ್ಲಿ ಕೆಲವು ಮಾಧ್ಯಮಗಳು ಸಾಮಾಜಿಕ ಬದ್ಧತೆ, ಜವಾಬ್ದಾರಿಯನ್ನು ಮರೆತು ಅತಿರೇಕದಿಂದ ವರ್ತಿಸುತ್ತಿವೆ. ಸಾವು ನೋವಿನ ದೃಶ್ಯ ಮತ್ತು ವಿವರಣೆಯನ್ನು ಅತಿರಂಜಿತವಾಗಿ ಪ್ರಸಾರ ಮಾಡುವಲ್ಲಿ ಚಾನೆಲ್‌ಗಳು ಪೈಪೋಟಿಗಿಳಿದಿವೆ. ಕನ್ನಡಿಗರೂ ಸೇರಿದಂತೆ ಅನೇಕ ಸಹಸ್ರ ಸಂಖ್ಯೆಯ ಭಾರತೀಯ ವಿದ್ಯಾರ್ಥಿಗಳು ಯುದ್ಧಭೂಮಿಯಾಗಿರುವ ಉಕ್ರೇನ್‌ನ ನಗರಗಳಲ್ಲಿ ವಾಸವಾಗಿದ್ದು, ಅವರ ಸಂಬಂಧಿಕರು ಟೆಲಿವಿಷನ್‌ಗಳಲ್ಲಿ ಬರುವ ಭಯಾನಕ ದೃಶ್ಯಗಳನ್ನು ನೋಡಿ ಮತ್ತಷ್ಟು ಗಾಬರಿಗೆ ಒಳಗಾಗುತ್ತಿದ್ದಾರೆ.

ವಿದ್ಯಾರ್ಥಿ ನವೀನ್ ಸಾವಿನ ನಂತರ ಉಳಿದ ವಿದ್ಯಾರ್ಥಿಗಳ ಪಾಲಕರ ಸ್ಥಿತಿ ಅಯೋಮಯವಾಗುತ್ತಿದೆ. ಮೃತದೇಹವನ್ನು ಪದೇಪದೇ ತೋರಿಸಲಾಗುತ್ತಿದೆ. ಅಷ್ಟೇ ಅಲ್ಲ ನವೀನ್ ಸಾವಿಗೀಡಾದ ಸ್ಥಳದ ಬಳಿ ಶೆಲ್ ಬಿದ್ದು ಸ್ಫೋಟಗೊಂಡಿದ್ದನ್ನು ದಿನವಿಡೀ ತೋರಿಸುವ ಅವಶ್ಯಕತೆ ಇತ್ತೇ? ಇದರಿಂದ ಪಾಲಕರ ಮನಸ್ಸು ಎಷ್ಟು ಗಾಸಿಗೊಳ್ಳಬಹುದು ಎಂಬ ಅರಿವು ಮಾಧ್ಯಮಗಳಿಗೆ ಇರಬೇಕಿತ್ತು. ನವೀನ್ ಅವರ ಪಾಲಕರನ್ನು ಸಂದರ್ಶಿಸುವ ಪ್ರತಿನಿಧಿಗಳು ಕೇಳುವ ಪ್ರಶ್ನೆಗಳಂತೂ ಅನಗತ್ಯ ಮತ್ತು ಅತಿರೇಕದಿಂದ ಕೂಡಿವೆ. ನವೀನ್ ಮೃತದೇಹ ಬರುವುದು ಇನ್ನೂ ಕೆಲ ದಿನಗಳಾಗಬಹುದು. ಮಾಧ್ಯಮಗಳ ದಾಳಿ ಇದೇ ರೀತಿ ಮುಂದುವರಿದರೆ ಮನೆಯವರೆಲ್ಲ ಹೈರಾಣಾಗುವಂತಾಗುತ್ತದೆ. ಇಂಥ ಅತಿರೇಕಗಳಿಗೆ ಮಾಧ್ಯಮಗಳು ಸ್ವಯಂ ಲಕ್ಷ್ಮಣರೇಖೆ ಹಾಕಿಕೊಳ್ಳಬೇಕಾಗಿದೆ.

**ನಾರಾಯಣರಾವ ಕುಲಕರ್ಣಿ,** ಹಿರೇಅರಳಿಹಳ್ಳಿ, ಯಲಬುರ್ಗಾ

### ಕೇಳಲಾರಿರಾ?

ಯುದ್ಧದಾಹಿ ಮನಸುಗಳೇ
ಕೇಳದೆ ನಿಮಗೀಗ?
ಯುದ್ಧದಲ್ಲಿ ವೀರ ಮರಣವನ್ನಪ್ಪಿದ
ಮಕ್ಕಳ ತಂದೆ- ತಾಯಿಯ ಆಕ್ರಂದನ,
ಪತಿಯ ನಿರೀಕ್ಷೆಯಲ್ಲಿದ್ದ
ಸತಿಯ ರೋದನ,
ಅಪ್ಪನ ನಿರೀಕ್ಷೆಯಲ್ಲಿದ್ದ
ಮಗಳ ವೇದನೆ,
ಛಿದ್ರ ಛಿದ್ರವಾಗಿರುವ ಭೂತಾಯಿ
ಒಡಲ ಕಂಪನ,
ಯುದ್ಧದ ಕಾರ್ಮೋಡಗಳಿಗೆ
ಉಸಿರುಗಟ್ಟಿರುವ ಪ್ರಕೃತಿಯ ಅಳಲು.

**ಚಿಕ್ಕೋಬನಹಳ್ಳಿ ಚಾಂದ್ ಬಾಷ**
ತಳಕು, ಚಳ್ಳಕೆರೆ

### ಮೇಕೆದಾಟು ಪಾದಯಾತ್ರೆ ಈಗ ಅವಶ್ಯವೇ?

ಕಾವೇರಿ ನೀರು ಬಳಕೆಯ ಹಕ್ಕು ಜನರಿಗೆ ಸಿಗುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಕಾಂಗ್ರೆಸ್ ಪಕ್ಷವು ಮೇಕೆದಾಟು ಎರಡನೇ ಹಂತದ ಪಾದಯಾತ್ರೆ ಆರಂಭಿಸಿರುವುದು ರಾಜ್ಯದ ಈಗಿನ ಪರಿಸ್ಥಿತಿಯಲ್ಲಿ ಸರಿಯಿಲ್ಲ. ಅನೇಕ ಜ್ವಲಂತ ಸಮಸ್ಯೆಗಳು ಸರ್ಕಾರದ ಮುಂದಿವೆ. ಅತ್ತ ರಷ್ಯಾ- ಉಕ್ರೇನ್ ಯುದ್ಧದಿಂದಾಗಿ ರಾಜ್ಯದ ನೂರಾರು ವಿದ್ಯಾರ್ಥಿಗಳು ಆತಂಕದಲ್ಲಿದ್ದಾರೆ. ಇತ್ತ ಬಜರಂಗದಳದ ಕಾರ್ಯಕರ್ತ ಹರ್ಷ ಅವರ ಭೀಕರ ಹತ್ಯೆ, ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಗಲಾಟೆ... ಈ ಎಲ್ಲಾ ಅವಾಂತರಗಳನ್ನು ನಿಭಾಯಿಸುವ ಹೊಣೆ ಸರ್ಕಾರದ ಮೇಲಿದೆ. ವಿರೋಧ ಪಕ್ಷಗಳ ಹೊಣೆಗಾರಿಕೆಯೂ ಹೆಚ್ಚಿಗೇ ಇದೆ.

**ಕೆ.ಎಸ್.ಕುಮಾರಸ್ವಾಮಿ,** ತುಮಕೂರು

### ಆತ್ಮಾವಲೋಕನ ಮಾಡಿಕೊಳ್ಳಲಿ

ಜನಪ್ರತಿನಿಧಿಗಳೇ, ನಿಮ್ಮ ವೇತನ– ಭತ್ಯೆಯನ್ನು ನೀವು ಶೇ 50ರಷ್ಟು ಏರಿಸಿಕೊಂಡಿರುವುದು ಸಮಂಜಸವೇ? ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಚಳವಳಿ ಮಾಡುತ್ತಲೇ ಇರಲಿ ಬಿಡಿ. ಬಿಸಿಯೂಟ ತಯಾರಕರಿಗೆ ₹ 2,700ರಷ್ಟು ಭಾರಿ ಮೊತ್ತವನ್ನು ಕೇವಲ 30 ದಿನಕ್ಕೆ ನೀಡುತ್ತಿದ್ದೀರಿ! ದುರಂತವೆಂದರೆ, ಆಳಿಗೆ ಒಂದು ದಿನಕ್ಕೆ ಕೂಲಿ ₹ 289 ಎಂಬುದು ನಿಮ್ಮದೇ ಕಾನೂನು. ಅದರಂತೆ ತಿಂಗಳಿಗೆ ₹ 8670 ಅನ್ನಾದರೂ ಅನ್ನದಾತೆ ಮಾತೆಯರಿಗೆ ನೀಡುತ್ತಿಲ್ಲವೆಂದರೆ? ನಿಮ್ಮಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವವರು ಯಾರೂ ಇಲ್ಲವೇ?

ಅಸಾಮಾನ್ಯ ಪ್ರಭುಗಳೇ, ನೀವು ಪಡೆಯುವ ಸೌಲಭ್ಯ ಸಾರ್ವಜನಿಕರ ಬೆವರಿನ ಫಲವೆಂಬುದನ್ನು ಮರೆಯದಿರಿ. ಪರಸ್ಪರ ಕಿತ್ತಾಟ, ಧರಣಿ, ವಿರೋಧಗಳಲ್ಲಿ ಸಾರ್ವಜನಿಕ ಸಂಪತ್ತನ್ನು ಹಾಳು ಮಾಡದಿರಿ. ಇನ್ನಾದರೂ ಜನತೆಯ ಹಿತಕ್ಕಾಗಿ, ನಾಡಿನ ಅಭ್ಯುದಯಕ್ಕಾಗಿ ನಿಸ್ವಾರ್ಥಿಗಳಾಗಿ ಸೇವೆ ಸಲ್ಲಿಸಿ.

**ರಾಮ ಸುಬ್ರಾಯ ಶೇಟ್,** ಶಿವಮೊಗ್ಗ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಣಜಿ

# ದೇಶಿ ಕ್ರಿಕೆಟ್ 'ರಾಜ'ನಿಗೆ ಐದು ಸಾವಿರದ ಗರಿ

ರಾಹುಲ್ ದ್ರಾವಿಡ್ (ಎಡ) ಮತ್ತು ಅನಿಲ್ ಕುಂಬ್ಳೆ – ಪ್ರಜಾವಾಣಿ ಚಿತ್ರ

• ಗಿರೀಶ ದೊಡ್ಡಮನಿ

**1934-35..** ಭಾರತದ ಕ್ರಿಕೆಟ್ ಕ್ಷೇತ್ರಕ್ಕೆ ಬಹಳ ಮಹತ್ವದ ವರ್ಷ. ಅದಕ್ಕೆ ಕಾರಣ ಆ ಸಾಲಿನಲ್ಲಿ ಶುರುವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ. ಬ್ರಿಟಿಷ್ ಪ್ರಭಾವದಿಂದ ಭಾರತಕ್ಕೆ ಕಾಲಿಟ್ಟ ಕ್ರಿಕೆಟ್ ಇಲ್ಲಿಯ 'ಧರ್ಮ'ವಾಗಿ ಹಾಸುಹೊಕ್ಕಾಗುವಷ್ಟು ಬೆಳೆಯಲು ಈ ಟೂರ್ನಿಯೇ ಪ್ರಮುಖ ಕಾರಣ. ಭಾರತದ ವಿವಿಧ ಪ್ರಾಂತಗಳ ತಂಡಗಳ ನಡುವಣ ಶುರುವಾದ ಈ ಟೂರ್ನಿ ಇವತ್ತು ಬೃಹದಾಕಾರವಾಗಿ ಬೆಳೆದಿದೆ. ಲಾಗಾಯ್ತಿನಿಂದಲೂ ರಾಷ್ಟ್ರೀಯ ತಂಡದ ಆಯ್ಕೆಗಾರರನ್ನು ಗಮನ ಸೆಳೆಯಲು ಪ್ರಮುಖ ವೇದಿಕೆಯಾಗಿದೆ.

ಏಕದಿನ ಮತ್ತು ಟಿ20 ಕ್ರಿಕೆಟ್ ಜನಪ್ರಿಯವಾದ ಮೇಲೂ ರಣಜಿ ಟ್ರೋಫಿ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಇದೀಗ ಐದು ಸಾವಿರಕ್ಕೂ ಹೆಚ್ಚು ಪಂದ್ಯಗಳನ್ನು ಆಯೋಜಿಸಿದ ಕೀರ್ತಿಗೆ ಈ ಟೂರ್ನಿ ಪಾತ್ರವಾಗಲಿದೆ.

'ಬಿಸಿಸಿಐ ಪ್ರಕಟಿಸಿರುವ ವೇಳಾಪಟ್ಟಿಯ ಪ್ರಕಾರ ಗುರುವಾರ ಆರಂಭವಾಗಲಿರುವ ಮೂರನೇ ಸುತ್ತಿನಲ್ಲಿ ನಡೆಯಲಿರುವ ಜಮ್ಮು-ಕಾಶ್ಮೀರ ಮತ್ತು ರೈಲ್ವೆ ನಡುವಣ ಹಣಾಹಣಿಯು ಐದು ಸಾವಿರದ ಪಂದ್ಯವಾಗಲಿದೆ. ಕರ್ನಾಟಕ ಮತ್ತು ಪುದುಚೇರಿ ನಡುವಣ ಪಂದ್ಯವು 4999ನೇಯದ್ದಾಗಲಿದೆ. ಆದರೆ ಬಿಸಿಸಿಐ ಈ ಮೈಲುಗಲ್ಲನ್ನು ಆಚರಿಸುವುದೋ ಇಲ್ಲವೋ ಗೊತ್ತಿಲ್ಲ' ಎಂದು ಬೆಂಗಳೂರಿನ ದೇಶಿ ಕ್ರಿಕೆಟ್ ಅಂಕಿ ಅಂಶ ಲೇಖಕ ಚನ್ನಗಿರಿ ಕೇಶವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

| ಜಯದ ಸಾಧನೆ (ಅಗ್ರ 5 ತಂಡಗಳು) | |
|---|---|
| ತಂಡ | ವಿಜಯ |
| ಮುಂಬೈ | 41 |
| ಕರ್ನಾಟಕ | 8 |
| ದೆಹಲಿ | 7 |
| ಬರೋಡ | 5 |
| ಹೋಳ್ಕರ್ | 4 |

ವಿನಯ್ ಕುಮಾರ್

ಕಳೆದ 86 ವರ್ಷಗಳಲ್ಲಿ ಕ್ರಿಕೆಟ್ ಹಲವು ಮಗ್ಗಲುಗಳನ್ನು ಬದಲಾಯಿಸಿದೆ. ಟ್ವೆಂಟಿ-20 ಕ್ರಿಕೆಟ್, ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗಳ ಅಬ್ಬರ ಮೇರೆ ಮೀರಿದೆ. ಅಂತಹದರಲ್ಲಿಯೂ ರಣಜಿ ಪಂದ್ಯಗಳನ್ನು ಪ್ರೀತಿಸುವವರು ಇನ್ನೂ ಇದ್ದಾರೆ. ಅದಕ್ಕಾಗಿಯೇ ಬಿಸಿಸಿಐಗೂ ಕೂಡ ರಣಜಿ ಟೂರ್ನಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಾಗಿಲ್ಲ. ರಣಜಿ ಟೂರ್ನಿಯ ಪಂದ್ಯಗಳಲ್ಲಿಯೇ ಆಟಗಾರರ ನಿಜವಾದ ಪ್ರತಿಭೆ ಹೊರಹೊಮ್ಮುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಇವತ್ತು ಭಾರತ ತಂಡದ ಬೆಂಚ್ ಶಕ್ತಿ ಅಸಾಧಾರಣವಾಗಿ ಬೆಳೆಯಲು ರಣಜಿ ಟೂರ್ನಿಯಂತಹ ದೇಶಿ ಕ್ರಿಕೆಟ್ ಕಾರಣ. ಇಂಗ್ಲೆಂಡ್‌ನಲ್ಲಿ 1890ರಲ್ಲಿ ಇಂಗ್ಲಿಷ್ ಕ್ರಿಕೆಟ್ ಕೌಂಟಿ ಮತ್ತು 1892ರಲ್ಲಿ ಆಸ್ಟ್ರೇಲಿಯಾದಲ್ಲಿ ಆರಂಭವಾದ ಶೆಫೀಲ್ಡ್ ಶೀಲ್ಡ್ ಟ್ರೋಫಿ ಟೂರ್ನಿಗಳು ಅತ್ಯುನ್ನತ ದೇಶಿ ಟೂರ್ನಿಗಳ ಗೌರವ ಹೊಂದಿವೆ. ರಣಜಿ ಟ್ರೋಫಿ ಕೂಡ ಈ ಸಾಲಿನಲ್ಲಿ ತನ್ನ ಗೌರವ ಸಂಪಾದಿಸಿದೆ. ಅಷ್ಟೇ ಅಲ್ಲ. ವಿಶ್ವದ ಬೇರೆಲ್ಲ ದೇಶಿ ಕ್ರಿಕೆಟ್ ಟೂರ್ನಿಗಳಿಗಿಂತಲೂ ಹೆಚ್ಚು ಪ್ರಭಾವಶಾಲಿಯೆಂಬ ಕೀರ್ತಿಯೂ ಇದಕ್ಕಿದೆ.

| ಅತಿ ಹೆಚ್ಚು ಪಂದ್ಯಗಳನ್ನಾಡಿದ ತಂಡಗಳು | |
|---|---|
| ತಂಡ | ಪಂದ್ಯ |
| ಮುಂಬೈ | 521 |
| ದೆಹಲಿ | 459 |
| ಕರ್ನಾಟಕ | 451 |
| ತಮಿಳುನಾಡು | 450 |
| ಬಂಗಾಳ | 437 |
| ಹೈದರಾಬಾದ್ | 424 |

ಏಕೆಂದರೆ, ಭಾರತವನ್ನು ಕ್ರಿಕೆಟ್ ಲೋಕದ ಸಾಮ್ರಾಟನನ್ನಾಗಿ ರೂಪಿಸಿದ ದಿಗ್ಗಜ ಕ್ರಿಕೆಟಿಗರೆಲ್ಲ ರಣಜಿ ಟೂರ್ನಿಯೆಂಬ ತೊಟ್ಟಿಲಿನಲ್ಲಿ ಬೆಳೆದು ಬಂದವರು. ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಟೂರ್ನಿಗಳಲ್ಲಿ ಆಡುವ ತಂಡಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿಲ್ಲ. ಕೌಂಟಿಯಲ್ಲಿ 18 ಮತ್ತು ಶೆಫೀಲ್ಡ್‌ನಲ್ಲಿ 6 ತಂಡಗಳಿವೆ. ಆದರೆ, ರಣಜಿ ಟೂರ್ನಿಯ ಆರಂಭದಲ್ಲಿ 15 ತಂಡಗಳಿದ್ದವು. ಇದೀಗ ಸಂಖ್ಯೆಯೂ 38ಕ್ಕೇರಿದೆ. ಈ ಮೊದಲು ಈಶಾನ್ಯ ಭಾರತದ ತಂಡಗಳು ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ. ಆದರೆ, ಬಿಸಿಸಿಐ ಆಡಳಿತಕ್ಕೆ ಸುಧಾರಣೆ ಮತ್ತು ಹೊಸ ನಿಯಮಾವಳಿ ತಂದ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯ ಶಿಫಾರಸ್ಸಿನಂತೆ ಈಶಾನ್ಯ ರಾಜ್ಯಗಳೂ ಈಗ ಕ್ರಿಕೆಟ್ ಅಂಗಳದಲ್ಲಿ ಕಾಣಿಸಿಕೊಳ್ಳುತ್ತಿವೆ. ಅದರಿಂದಾಗಿ ತಂಡಗಳ ಸಂಖ್ಯೆ ಹೆಚ್ಚಿದೆ. ಇದು ಸ್ಪರ್ಧೆಯನ್ನು ಮತ್ತಷ್ಟು ತೀವ್ರಗೊಳಿಸುತ್ತಿದೆ. ಹೊಸ ಪ್ರತಿಭೆಗಳಿಗೆ ಅವಕಾಶ ದೊರೆಯುತ್ತಿದೆ.

## ಮೈಲುಗಲ್ಲು ಆಚರಣೆ ಏಕಿಲ್ಲ?

ಇಲ್ಲಿಯವರೆಗೆ ಒಟ್ಟು ಎಷ್ಟು ಟೆಸ್ಟ್ ಪಂದ್ಯಗಳು ನಡೆದಿವೆ ಎಂದು ಕೇಳಿ. ಕ್ರಿಕೆಟ್ ಆಸಕ್ತರು ಇದಕ್ಕೆ ಥಟ್ಟನೆ ಉತ್ತರಿಸುತ್ತಾರೆ. ಎಷ್ಟು ಅಂತರ ರಾಷ್ಟ್ರೀಯ ಪಂದ್ಯಗಳು ಜರುಗಿವೆ ಎಂದು ಪ್ರಶ್ನೆ ಹಾಕಿ. ಇದಕ್ಕೂ ಅವರು ತಡಬಡಿಸದೆ ಕರಾರುವಾಕ್ ಸಂಖ್ಯೆ ಉಲ್ಲೇಖಿಸುತ್ತಾರೆ. ಎಷ್ಟು ಚುಟುಕು (ಟ್ವೆಂಟಿ-20) ಪಂದ್ಯಗಳು ಆಗಿವೆ ಎಂದಾಗ ಅದಕ್ಕೂ ಸರಿ ಉತ್ತರ ಬಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ ಕ್ರಿಕೆಟ್ ಆಟದ ಜನಪ್ರಿಯತೆಯಿಂದಾಗಿ, ಈ ಎಲ್ಲ ಮಾಹಿತಿಗಳು ಅಂತರ್ಜಾಲದ ಕ್ರಿಕೆಟ್ ವೆಬ್ ಸೈಟ್ ಗಳಲ್ಲಿ ಲಭ್ಯವಿರುತ್ತವೆ. ಆದರೆ ಎಷ್ಟು ರಣಜಿ ಪಂದ್ಯಗಳು ನಡೆದಿವೆ ಎಂಬ ಪ್ರಶ್ನೆ ಎತ್ತಿದಾಗ, ಕ್ರಿಕೆಟ್ ಅಂಕಿ ಅಂಶ ತಜ್ಞರನ್ನು ಹೊರತುಪಡಿಸಿದರೆ, ಬಹುತೇಕ ಯಾರೂ ಈ ಪ್ರಶ್ನೆಗೆ ಉತ್ತರಿಸಲು ಮುಂಬರುವುದಿಲ್ಲವೆಂದೇ ಹೇಳಬಹುದು.

ಏಕೆಂದರೆ ಐತಿಹಾಸಿಕ ರಣಜಿ ಟೂರ್ನಿಯಲ್ಲಿ ಪಂದ್ಯಗಳ ಸಂಖ್ಯೆ 1,000 (1970-71ರಲ್ಲಿ), 2,000 (1987-88ರಲ್ಲಿ), 3,000 (2000-01ರಲ್ಲಿ) ಮತ್ತು 4,000ದ (2012-13ರಲ್ಲಿ) ಮೈಲುಗಲ್ಲು ಮುಟ್ಟಿದಾಗ ಯಾವ ಸಂಭ್ರಮಾಚರಣೆಯೂ ನಡೆದಂತಿಲ್ಲ. ಪ್ರತಿ ವರ್ಷ ರಣಜಿ ಪಂದ್ಯಗಳನ್ನು ಆಯೋಜಿಸುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯೇ ಆಸಕ್ತಿ ತೋರದೆ ಇದ್ದಾಗ ಅದರ ಅಧೀನದಲ್ಲಿರುವ ಹಲವಾರು ರಾಜ್ಯ ಕ್ರಿಕೆಟ್ ಸಂಸ್ಥೆಗಳು ಇದರ ಬಗ್ಗೆ ಯಾವುದೇ ಕಾಳಜಿ ವ್ಯಕ್ತಪಡಿಸದಿರುವುದು ಸಹಜ. ಕ್ರಿಕೆಟ್ ಆಟಗಾರರೂ ಕೂಡ ತಮ್ಮ ವಿಶಿಷ್ಟ ದಾಖಲೆಗಳಿಗೆ ಕಾರಣವಾಗುವ ಇಂತಹ ಐತಿಹಾಸಿಕ ಪಂದ್ಯಗಳ ಸಂಭ್ರಮಾಚರಣೆ ಬಗ್ಗೆ ನಿರಾಸಕ್ತಿ ಹೊಂದಿದ್ದಾರೆ.

ಪ್ರಸಕ್ತ ಋತುವಿನಲ್ಲಿ ರಣಜಿ ಪಂದ್ಯಗಳ ಸಂಖ್ಯೆ 5000 ದಾಟಲಿದೆ. ರಣಜಿ ಟ್ರೋಫಿಯಿಂದಾಗಿ ಈ ದೇಶದ ಕ್ರಿಕೆಟ್ ಅಪಾರವಾಗಿ ಬೆಳೆದಿದೆ. ಇಂತಹ ಮೈಲುಗಲ್ಲುಗಳು ವಿಶೇಷವಾಗಿ ದಾಖಲಾಗಬೇಕು.

**ಚನ್ನಗಿರಿ ಕೇಶವಮೂರ್ತಿ,** ಕ್ರಿಕೆಟ್ ಅಂಕಿ ಅಂಶ ತಜ್ಞರು

## ಮುಂಬೈ ಮಹಾರಾಜ

• ವಿಕ್ರಂ ಕಾಂತಿಕೆರೆ

ಮೊದಲ ಆವೃತ್ತಿಯಲ್ಲೇ ಚಾಂಪಿಯನ್. ನಂತರ ಟೂರ್ನಿಯುದ್ದಕ್ಕೂ ಆಧಿಪತ್ಯ. ಈಚೆಗೆ ಎರಡು ಆವೃತ್ತಿಗಳಲ್ಲಿ ನಿರಾಸೆ.

ದೇಶಿ ಕ್ರಿಕೆಟ್‌ನ ಮಹಾರಾಜ ಆಗಿರುವ ಮುಂಬೈ ತಂಡ ನಾಲ್ಕು ದಿನಗಳ ಟೂರ್ನಿಯಾದ ರಣಜಿಯಲ್ಲೂ ಅಮೋಘ ಸಾಧನೆ ಮಾಡಿದೆ. 41 ಬಾರಿ ಚಾಂಪಿಯನ್ ಅಗಿ ಮೆರೆದಿದೆ. ಈವರೆಗೆ 86 ಆವೃತ್ತಿಗಳಲ್ಲಿ ಟೂರ್ನಿ ನಡೆದಿದ್ದು ಐದು ಬಾರಿ ಮಾತ್ರ ತಂಡ ಫೈನಲ್‌ನಲ್ಲಿ ಸೋತಿದೆ. ಕರ್ನಾಟಕವೂ ಟೂರ್ನಿಯಲ್ಲಿ ಪಾರಮ್ಯ ಮೆರೆದಿದ್ದು ಅತಿ ಹೆಚ್ಚು ಚಾಂಪಿಯನ್ ಆದ ತಂಡಗಳ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

1934-35ರ ಮೊದಲ ಸಾಲಿನಲ್ಲೇ ಮುಂಬೈ ತಂಡ ಪ್ರಶಸ್ತಿ ಗಳಿಸಿತ್ತು. ಮುಂದಿನ ವರ್ಷವೂ ಪ್ರಶಸ್ತಿ ಈ ತಂಡದ ಮುಡಿಯನ್ನೇ ಅಲಂಕರಿಸಿತು. ನಂತರದ ಐದು ಆವೃತ್ತಿಗಳಲ್ಲಿ (1940-41ರ ವರೆಗೆ) ತಂಡಕ್ಕೆ ಪ್ರಶಸ್ತಿ ಗೆಲ್ಲಲು ಆಗಲಿಲ್ಲ. ಮುಂದಿನ ವರ್ಷ ಚೇತರಿಸಿಕೊಂಡು ಮೈಸೂರು ತಂಡವನ್ನು ಮಣಿಸಿ ಮತ್ತೆ ಮುನ್ನೆಲೆಗೆ ಬಂತು.

1956-57ರ ಆವೃತ್ತಿವರೆಗೆ ಆಗೊಮ್ಮೆ ಈಗೊಮ್ಮೆ ಚಾಂಪಿಯನ್ ಆಗುತ್ತಿದ್ದ ತಂಡ ನಂತರ ಬೃಹತ್ ಶಕ್ತಿಯಾಗಿ ಬೆಳೆಯಿತು. 1958-59ನೇ ಅವಧಿಯಿಂದ ಸತತ 15 ಬಾರಿ ಪ್ರಶಸ್ತಿ ಮುಡಿಗೇರಿಸಿಕೊಂಡು ಸಂಭ್ರಮಿಸಿತು. ಈ ನಾಗಾಲೋಟಕ್ಕೆ ಕರ್ನಾಟಕ ತಡೆ ಹಾಕಿತು. ನಂತರ ಮುಂಬೈ ಪಾರಮ್ಯಕ್ಕೆ ಪೆಟ್ಟು ಬಿತ್ತು. ದೆಹಲಿ, ತಮಿಳುನಾಡು, ಹೈದರಾಬಾದ್, ಬೆಂಗಾಲ್ ಮಾತ್ರವಲ್ಲದೆ ಹರಿಯಾಣ, ಪಂಜಾಬ್‌ನಂಥ ತಂಡಗಳು ಕೂಡ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡವು.

ಮುಂಬೈ ತಂಡ ಆರು ಬಾರಿ ಸತತ ಎರಡು ಆವೃತ್ತಿಗಳಲ್ಲಿ ಚಾಂಪಿಯನ್ ಆಗಿದೆ. ಇದರಲ್ಲಿ ಒಂದು ಹ್ಯಾಟ್ರಿಕ್ ಕೂಡ ಒಳಗೊಂಡಿದೆ.

ಸುನಿಲ್ ಗಾವಸ್ಕರ್, ಪಾಲಿ ಉಮ್ರಿಗರ್, ದಿಲೀಪ್ ವೆಂಗಸರ್ಕಾರ್, ವಿಜಯ್ ಮರ್ಚಂಟ್, ಸಚಿನ್ ತೆಂಡೂಲ್ಕರ್, ರೋಹಿತ್ ಶರ್ಮಾ, ಅಜಿಂಕ್ಯ ರಹಾನೆ ಮುಂತಾದವರು ತಂಡದ ಜೈತ್ರಯಾತ್ರೆಯಲ್ಲಿ ಭಾಗಿಯಾಗಿ ಸರ್ಫರಾಜ್ ಖಾನ್ ಅವರಂಥ ಯುವ ಆಟಗಾರರು ಭವಿಷ್ಯದ ಭರವಸೆ ಎನಿಸಿದ್ದಾರೆ.

ವಾಸಿಂ ಜಾಫರ್

| ಕರ್ನಾಟಕದ ಸಾಧನೆ | |
|---|---|
| 451 | ಪಂದ್ಯ |
| 202 | ಜಯ |
| 67 | ಸೋಲು |
| 182 | ಡ್ರಾ |



ಸುನಿಲ್ ಜೋಶಿ

## ಪ್ರಮುಖ ಅಂಶಗಳು

| | |
|---|---|
| 6ಕ್ಕೆ 944 ಡಿಕ್ಲೇರ್ಡ್ | ಹೈದರಾಬಾದ್ ತಂಡವು ಆಂಧ್ರದ ಎದುರು 1993-94ರಲ್ಲಿ ಗಳಿಸಿದ್ದ ಮೊತ್ತ. ಇದೇ ಅತ್ಯಧಿಕ ದಾಖಲೆ. 1990-91ರಲ್ಲಿ ಕರ್ನಾಟಕ ತಂಡವು ಬಂಗಾಳ ವಿರುದ್ಧ 6ಕ್ಕೆ 791 ಗಳಿಸಿತ್ತು. |
| 21 | ರಣಜಿಯಲ್ಲಿ ದಾಖಲಾದ ಕನಿಷ್ಠ ಮೊತ್ತ. 2010-11ರಲ್ಲಿ ಹೈದರಾಬಾದ್ ತಂಡವು ರಾಜಸ್ಥಾನ ಎದುರು ಗಳಿಸಿದ್ದು. 1951-52ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕವು ಮುಂಬೈ ಎದುರು 28 ರನ್ ಗಳಿಸಿತ್ತು. |
| 443* | ಮಹಾರಾಷ್ಟ್ರದ ಬಿ.ಬಿ. ನಿಂಬಾಳ್ಕರ್ 1948-49ರಲ್ಲಿ ಗಳಿಸಿದ ವೈಯಕ್ತಿಕ ಶ್ರೇಷ್ಠ ಸ್ಕೋರ್ ಈಗಲೂ ದಾಖಲೆಯಾಗಿ ಉಳಿದಿದೆ. |
| 156 | ಅತ್ಯಧಿಕ ರಣಜಿ ಪಂದ್ಯಗಳನ್ನು ಆಡಿದ ಆಟಗಾರ ವಾಸಿಂ ಜಾಫರ್, ಮುಂಬೈ-ವಿದರ್ಭ ತಂಡಗಳನ್ನು ಪ್ರತಿನಿಧಿಸಿದ್ದರು ಕರ್ನಾಟಕದ ಸುನೀಲ್ ಜೋಶಿ 117 ಪಂದ್ಯಗಳನ್ನು ಆಡಿದ್ದಾರೆ. |
| 636 | ಅತಿ ಹೆಚ್ಚು ವಿಕೆಟ್ ಪಡೆದ ಸಾಧಕ ರಾಜೇಂದ್ರ ಗೋಯಲ್. ಎರಡನೇ ಸ್ಥಾನದಲ್ಲಿರುವ ಸುನೀಲ್ ಜೋಶಿ 479 ವಿಕೆಟ್ ಪಡೆದಿದ್ದಾರೆ. |
| 12,038 | ಅತಿ ಹೆಚ್ಚು ರನ್ ಗಳಿಸಿದ್ದು ವಾಸೀಂ ಜಾಫರ್. ಕರ್ನಾಟಕದ ಬ್ರಿಜೇಶ್ ಪಟೇಲ್ 7126 ರನ್ ಗಳಿಸಿದ್ದಾರೆ. |
| 337 ರನ್ | ಕರ್ನಾಟಕದ ಪರ ವೈಯಕ್ತಿಕ ಗರಿಷ್ಠ ಸ್ಕೋರ್ ಗಳಿಸಿದ್ದು ಕೆ.ಎಲ್. ರಾಹುಲ್. |
| 20ಕ್ಕೆ10 | ಬಂಗಾಳದ ಸಿ.ಎಂ. ಚಟರ್ಜಿ ಇನಿಂಗ್ಸ್‌ವೊಂದರಲ್ಲಿ ಮಾಡಿದ ಶ್ರೇಷ್ಠ ಬೌಲಿಂಗ್ ಸಾಧನೆ. ಕನ್ನಡಿಗ ಬಿ.ಎಸ್. ಚಂದ್ರಶೇಖರ್ (72ಕ್ಕೆ9) ಸಾಧನೆ ಮಾಡಿದ್ದಾರೆ. |
| 99ಕ್ಕೆ16 | ಪಂದ್ಯಶ್ರೇಷ್ಠ ಬೌಲಿಂಗ್ ಸಾಧನೆ ಮಾಡಿದ್ದು ಕರ್ನಾಟಕದ ಅನಿಲ್ ಕುಂಬ್ಳೆ. |

## ಕರ್ನಾಟಕಕ್ಕೆ ಪುದುಚೇರಿ ಸವಾಲು

**ಚೆನ್ನೈ:** ಈ ಬಾರಿಯ ರಣಜಿ ಟೂರ್ನಿಯ ಸಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿರುವ ಕರ್ನಾಟಕ ತಂಡವು ಲೀಗ್ ಹಂತದ ಮೂರನೇ ಸುತ್ತಿನಲ್ಲಿ ಪುದುಚೇರಿಯ ಸವಾಲು ಎದುರಿಸಲಿದೆ.

ಗುರುವಾರ ಇಲ್ಲಿ ಆರಂಭವಾಗಲಿರುವ ಪಂದ್ಯದಲ್ಲಿ ಮನೀಷ್ ಪಾಂಡೆ ಬಳಗವೇ ಗೆಲುವಿನ ನೆಚ್ಚಿನ ತಂಡವಾಗಿದೆ. ಟೂರ್ನಿಯ ಮೊದಲ ಪಂದ್ಯದಲ್ಲಿ ಕರ್ನಾಟಕವು ರೈಲ್ವೆಸ್ ವಿರುದ್ಧ ಡ್ರಾ ಮಾಡಿಕೊಂಡಿತ್ತು. ಎರಡನೇ ಪಂದ್ಯದಲ್ಲಿ ಜಮ್ಮು-ಕಾಶ್ಮೀರದ ಸವಾಲನ್ನು ಸಮರ್ಥವಾಗಿ ಮೆಟ್ಟಿನಿಂತಿತ್ತು. ಒಟ್ಟು 9 ಪಾಯಿಂಟ್‌ಗಳು ರಾಜ್ಯ ತಂಡದ ಖಾತೆಯಲ್ಲಿವೆ.

ಪ್ರಸಿದ್ಧ ಕೃಷ್ಣ, ಕೃಷ್ಣಪ್ಪ ಗೌತಮ್, ಶ್ರೇಯಸ್ ಗೋಪಾಲ್ ಮತ್ತು ಯುವ ಬೌಲರ್ ವಿದ್ಯಾಧರ್ ಪಾಟೀಲ ಅವರ ಬೌಲಿಂಗ್ ಪಡೆಯೂ ಕಳೆದೆರಡು ಪಂದ್ಯಗಳಲ್ಲಿ ಪರಿಣಾಮಕಾರಿಯಾಗಿ ಆಡಿದ್ದಾರೆ. ಅದರಲ್ಲಿಯೂ ಕಾಶ್ಮೀರ ಎದುರಿನ ಪಂದ್ಯದಲ್ಲಿ ಪ್ರಸಿದ್ಧ ಕೃಷ್ಣ ಒಟ್ಟು ಹತ್ತು ವಿಕೆಟ್ ಗಳಿಸಿದ್ದರು. ದಾಮೋದರನ್ ರೋಹಿತ್ ನಾಯಕತ್ವದ ಪುದುಚೇರಿ ತಂಡವು ಒಂದು ಪಂದ್ಯ ಸೋತು ಮತ್ತೊಂದರಲ್ಲಿ ಡ್ರಾ ಮಾಡಿಕೊಂಡಿದೆ. ಕಳೆದ ಪಂದ್ಯದಲ್ಲಿ ಪಾರಸ್ ಡೋಗ್ರಾ ಆಕರ್ಷಕ ಶತಕ ದಾಖಲಿಸಿದ್ದರು. ತಂಡದಲ್ಲಿರುವ ಕನ್ನಡಿಗ ಪವನ್ ದೇಶಪಾಂಡೆ ಕೂಡ ಅರ್ಧಶತಕ ದಾಖಲಿಸಿದ್ದರು. ಬೌಲರ್ ಸಾಗರ್ ಉದೇಶಿ ಕರ್ನಾಟಕದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಛಲದಲ್ಲಿದ್ದಾರೆ. ಈ ಪಂದ್ಯದಲ್ಲಿ ಗೆದ್ದರೆ ಕರ್ನಾಟಕ ತಂಡಕ್ಕೆ ಕ್ವಾರ್ಟರ್‌ಫೈನಲ್ ಹಾದಿ ಸುಗಮವಾಗಲಿದೆ.

**ಪಂದ್ಯ ಆರಂಭ: ಬೆಳಿಗ್ಗೆ 9**



## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 59

### ಪಾರ್ಥಿವಲಿಂಗ ಮಂತ್ರೋಚ್ಚಾರ

ಶಿವಭಕ್ತರು ಪಾರ್ಥಿವಲಿಂಗವನ್ನು ಪೂಜಿಸಬೇಕಾದ ವಿಧಾನವನ್ನು ಸೂತಮುನಿ ಮತ್ತಷ್ಟು ತಿಳಿಸುತ್ತಾನೆ.

ಗೃಹ್ಯಸೂತ್ರದಲ್ಲಿ ಹೇಳಿರುವ ವಿಧಿಯಂತೆ ನಿತ್ಯಕರ್ಮಗಳನ್ನೆಲ್ಲಾ ಆಚರಿಸಿದ ಬಳಿಕ ಶಿವನನ್ನು ಸ್ಮರಿಸುತ್ತಾ ಭಸ್ಮ ಮತ್ತು ರುದ್ರಾಕ್ಷಿಗಳನ್ನು ಧರಿಸಿಕೊಂಡು ಪಾರ್ಥಿವಲಿಂಗವನ್ನು ಪೂಜಿಸಬೇಕು. ಇದಕ್ಕಾಗಿ ನದಿಯ ದಡ, ಸರೋವರತೀರ, ಬೆಟ್ಟ ಮತ್ತು ಶಾಂತವಾದ ಅರಣ್ಯ, ಶಿವದೇವಾಲಯಗಳಂಥ ಶುದ್ಧವಾದ ಪ್ರದೇಶದಲ್ಲಿ ಮಣ್ಣನ್ನು ಜಲದಿಂದ ಶೋಧಿಸಿ, ವೇದೋಕ್ತವಿಧಿಯಂತೆ ಪಾರ್ಥಿವಲಿಂಗವನ್ನು ನಿರ್ಮಿಸಬೇಕು. 'ನಮಃ ಶಿವಾಯ' ಎಂಬ ಮಂತ್ರದಿಂದ ಪೂಜಾಸಾಮಗ್ರಿಗಳನ್ನು ಪ್ರೋಕ್ಷಿಸಬೇಕು. ಭೂರಸಿ ಎಂಬ ಮಂತ್ರದಿಂದ ಕ್ಷೇತ್ರಸಿದ್ಧಿಯನ್ನು ಮಾಡಬೇಕು. 'ಆಪೋ ಸ್ಮಾಂ' ಎಂಬ ಮಂತ್ರದಿಂದ ಜಲಶುದ್ಧಿಯನ್ನು ಮಾಡಬೇಕು. 'ನಮಸ್ತೇ ರುದ್ರ' ಎಂಬ ಮಂತ್ರದಿಂದ ಫಾಟಿಕಾಬಂಧ ಮಾಡಬೇಕು. 'ನಮಃ ಶಂಭವಾಯ' ಎಂಬ ಮಂತ್ರದಿಂದ ಪಂಚಾಮೃತಗಳಿಗೆ ಪ್ರೋಕ್ಷಣ ಮಾಡಬೇಕು. 'ನೀಲಗ್ರೀವಾಯ ನಮಃ' ಎಂಬ ಮಂತ್ರದಿಂದ ಶಿವಲಿಂಗವನ್ನು ಭಕ್ತಿಯಿಂದ ಪ್ರತಿಷ್ಠಾಪಿಸಬೇಕು. ಬಳಿಕ 'ಎತತ್ತೇ ರುದ್ರಾಯ' ಎಂಬ ಮಂತ್ರದಿಂದ ಆಸನವನ್ನು, 'ಮಾನೋಮಹಾಂತಂ' ಎಂಬ ಮಂತ್ರದಿಂದ ಶಿವನನ್ನು ಆವಾಹನೆ ಮಾಡಬೇಕು. 'ಯಾತೇ ರುದ್ರ' ಎಂಬ ಮಂತ್ರದಿಂದ ಉಪದೇಶ(ಕೂರಿಸುವಿಕೆ)ವನ್ನು ಮಾಡಬೇಕು.

(ಮುಂದಿನ ಶ್ಲೋಕಗಳಲ್ಲಿ ಹೇಳಿರುವ ಮಂತ್ರಗಳು ಯಜುರ್ವೇದದ ರುದ್ರಾಧ್ಯಾಯದಲ್ಲಿವೆ. ತೈ.ಸಂ. 4-5)

'ಯಾಮಿಷುಂ' ಎಂಬ ಮಂತ್ರದಿಂದ ಶಿವನಿಗೆ ನ್ಯಾಸವನ್ನೂ, 'ಆಧ್ಯವೋಚತ್' ಎಂಬ ಮಂತ್ರದಿಂದ ಅಧಿವಾಸವನ್ನೂ ಭಕ್ತಿಯಿಂದ ಆಚರಿಸಬೇಕು. 'ಅಸೌ' ಎಂಬ ಮಂತ್ರದಿಂದ ದೇವತಾನ್ಯಾಸಗಳನ್ನು ಮಾಡಬೇಕು. 'ಅಸೌಯೊವಸರ್ಪತಿ' ಎಂಬ ಮಂತ್ರದಿಂದ ಉಪಸರ್ಪಣ (ಅಂದರೆ ಸೇರುವಿಕೆ)ವನ್ನು ಆಚರಿಸಬೇಕು. 'ನಮೋ ಅಸ್ತು ನೀಲಗ್ರೀವಾಯ' ಎಂಬ ಮಂತ್ರದಿಂದ ಪಾದ್ಯವನ್ನೂ, ರುದ್ರಗಾಯತ್ರಿಯಿಂದ (ತತ್ಪುರುಷಾಯ ವಿದ್ಮಹೇ-ಯಾತ್) ಅರ್ಘ್ಯವನ್ನೂ, 'ತ್ರ್ಯಂಬಕಂ ಯಜಾಮಹೆ' ಎಂಬ ಮಂತ್ರದಿಂದ ಆಚಮನವನ್ನು ಶಿವನಿಗೆ ಅರ್ಪಿಸಬೇಕು.

ಶಿವಲಿಂಗಕ್ಕೆ ಪಂಚಾಮೃತಸ್ನಾನ ಮಾಡಿಸುವಾಗ 'ಪಯಃ ಪ್ರಥಿವ್ಯಾಂ' ಎಂಬ ಮಂತ್ರದಿಂದ ಕ್ಷೀರಸ್ನಾನವನ್ನೂ, 'ದಧಿಕ್ರಾವ್ಣೋ ಅಕಾರಿಷಂ' ಎಂಬ ಮಂತ್ರದಿಂದ ದಧಿ(ಮೊಸರು)ಸ್ನಾನವನ್ನೂ, 'ಘೃತಂ ಘೃತಯೋನೇಪಿಬ ಪ್ರಪ್ರಯಜ್ಞಪತಿಂತಿರ' ಎಂಬ ಮಂತ್ರದಿಂದ ಘೃತ(ತುಪ್ಪ)ಸ್ನಾನವನ್ನೂ 'ಮಧುವಾತಾ' 'ಮಧುನಕ್ತಂ' 'ಮಧುಮಾನ್ನೋ' ಎಂಬ ಮೂರು ಮಂತ್ರಗಳಿಂದ ಮಧು(ಜೇನುತುಪ್ಪ)ಸ್ನಾನವನ್ನೂ ಮಾಡಿಸಬೇಕು. ಅಥವಾ ಶಿವಲಿಂಗವನ್ನು 'ನಮೋ ಅಸ್ತು ನೀಲಗ್ರೀವಾಯ' ಎಂಬ ಪಾದ್ಯಮಂತ್ರ ಹೇಳಿ ಪಂಚಾಮೃತಸ್ನಾನ ಮಾಡಿಸಬೇಕು.

'ಮಾನಸ್ತೋಕೆ' ಎಂಬ ಮಂತ್ರದಿಂದ ಉಡುವ ವಸ್ತ್ರವನ್ನೂ, 'ನಮಃ ಶ್ವಭ್ಯಃ' ಎಂಬ ಮಂತ್ರದಿಂದ ಗಂಧವನ್ನೂ, 'ನಮಸ್ತ ಕ್ಷಭ್ಯಃ' ಎಂಬ ಮಂತ್ರದಿಂದ ಅಕ್ಷತೆಗಳನ್ನೂ ಭಕ್ತಿಯಿಂದ ಅರ್ಪಿಸಬೇಕು. 'ನಮಃ ಪಾರ್ಯಾಯ' ಎಂಬ ಮಂತ್ರದಿಂದ ಪುಷ್ಪಗಳನ್ನೂ, 'ನಮಃ ಪರ್ಣಾಯ' ಎಂಬ ಮಂತ್ರದಿಂದ ಬಿಲ್ವಪತ್ರಗಳನ್ನೂ ಅರ್ಪಿಸಬೇಕು. 'ನಮಃ ಕಪರ್ದಿನೇ ಚ' ಎಂಬ ಮಂತ್ರದಿಂದ ಧೂಪವನ್ನೂ ಮತ್ತು 'ನಮಃ ಆಶವೇ' ಎಂಬ ಮಂತ್ರಗಳಿಂದ ದೀಪವನ್ನೂ ಅರ್ಪಿಸಬೇಕು. 'ನಮೋ ಜ್ಯೇಷ್ಠಾಯಚ' ಎಂಬ ಮಂತ್ರದಿಂದ ಉತ್ತಮವಾದ ನೈವೇದ್ಯವನ್ನು, 'ತ್ರ್ಯಂಬಕಂ ಯಜಾಮಹೆ' ಎಂಬ ಮಂತ್ರದಿಂದ ಪುನರಾಚಮನವನ್ನೂ ಅರ್ಪಿಸಬೇಕು. 'ಇಮಾ ರುದ್ರಾಯ' (ಇಮಾ ರುದ್ರಾಯತವಸೇ ಯ.ಸಂ.1-8) ಎಂಬ ಮಂತ್ರದಿಂದ ಫಲಗಳನ್ನು ಸಮರ್ಪಿಸಬೇಕು. 'ನಮೋ ವ್ರಜ್ಯಾಯ ಚ' ಎಂಬ ಮಂತ್ರದಿಂದ ಎಲ್ಲಾ ವಸ್ತುಗಳನ್ನು ಅರ್ಪಿಸಬೇಕು.

'ನಮಃ ಆಶವೇ' ಎಂಬ ಮಂತ್ರದಿಂದ ಶಿವನಿಗೆ ಮಂಗಳಾರತಿಯನ್ನು ಮಾಡಬೇಕು. 'ಇಮಾ ರುದ್ರಾಯ' ಎಂಬ ಮೂರು ಮಂತ್ರಗಳಿಂದ ಮಂತ್ರಪುಷ್ಪವನ್ನು ಅರ್ಪಿಸಬೇಕು. 'ಮನೋಮಹಾಂತಂ' ಎಂಬ ಮಂತ್ರದಿಂದ ಪ್ರದಕ್ಷಿಣವನ್ನೂ, 'ಮಾನಸ್ತೋಕೆ' ಎಂಬ ಮಂತ್ರದಿಂದ ಸಾಷ್ಟಾಂಗ ನಮಸ್ಕಾರವನ್ನೂ, 'ಏಷತೇ' ಎಂಬ ಮಂತ್ರದಿಂದ ಶಿವಮುದ್ರೆಯನ್ನು ಪ್ರದರ್ಶಿಸಬೇಕು. 'ಯಶೋಯತ' ಎಂಬ ಮಂತ್ರದಿಂದ ಅಭಯಮುದ್ರೆಯನ್ನು ಮತ್ತು 'ತ್ರ್ಯಂಬಕಂ' ಎಂಬ ಮಂತ್ರದಿಂದ ಜ್ಞಾನಮುದ್ರೆಯನ್ನು ಪ್ರದರ್ಶಿಸಬೇಕು. 'ನಮಃ ಸೇನಾಭ್ಯಃ' ಎಂಬ ಮಂತ್ರದಿಂದ ಮಹಾಮುದ್ರೆಯನ್ನು, 'ನಮೋ ಗೋಭ್ಯಃ' ಎಂಬ ಮಂತ್ರದಿಂದ ಸುರಭಿಮುದ್ರೆಯನ್ನು ಪ್ರದರ್ಶಿಸಬೇಕು. ಶಿವಮಂತ್ರವನ್ನು ಮಾಡಬೇಕು. ನೂರು ಬಾರಿ ರುದ್ರನಮಕ- ಚಮಕಗಳನ್ನು ಜಪಿಸಿ, ಪಂಚಾಂಗವನ್ನು ಪಠಿಸಬೇಕು. ಬಳಿಕ 'ದೇವಾಗಾತು ವಿದೋಗಾತುಂ ವಿತ್ವಾ' ಎಂಬ ಮಂತ್ರದಿಂದ ಶಿವನನ್ನು ವಿಸರ್ಜಿಸಬೇಕು. •

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಗುರುವಾರ ಮಾರ್ಚ್ 3, 2022

**ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ-ಶಿಶಿರ ಋತು ಕುಂಭ ಮಾಸದ 19 ನೇ ದಿನ ತಿಥಿ:** (ಫಾಲ್ಗುಣ ಶುಕ್ಲ) ಪ್ರತಿಪದ್ ಗಂ. 21-37 ನಕ್ಷತ್ರ: ಪೂರ್ವಾಭಾದ್ರಾ ಗಂ. 25-56 ಯೋಗ: ಸಾಧ್ಯ ಗಂ. 27-28, ಕರಣ: ಕಿಂಸ್ತುಘ್ನ ಗಂ. 10-17. ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-49 ಸೂರ್ಯಾಸ್ತ : 06-36 ಮುಸ್ಲಿಂ ದಿನಾಂಕ : 29 ರಜಬ್ ಅದೃಷ್ಟ ಸಂಖ್ಯೆ: 10, 17

**ಮೇಷ:** ಕಾಲಕ್ಕೆ ತಕ್ಕಂತೆ ಕೆಲವು ಬದಲಾವಣೆಯನ್ನು ಮಾಡಿಕೊಳ್ಳಲು ಸಿದ್ಧರಾಗಬೇಕು. ಇಂದಿನ ಪರಿಸ್ಥಿತಿಯಲ್ಲಿ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಸಾಹಸ. ಹೊರ ಪ್ರಪಂಚದಲ್ಲಿ ಬೆರೆಯುವುದನ್ನು ರೂಢಿಸಿಕೊಳ್ಳಿ.

**ವೃಷಭ:** ಧನಾಗಮನಕ್ಕೆ ಹಲವು ದಾರಿಗಳು ಕಂಡರೂ, ಸರಿಯಾದ ದಾರಿಯನ್ನು ಆರಿಸಿಕೊಳ್ಳುವುದು ನಿಮ್ಮ ವಿವೇಚನೆಗೆ ಬಿಟ್ಟಂತಹ ವಿಚಾರ. ಧಾರ್ಮಿಕ ವ್ಯಕ್ತಿಗಳಿಂದ ನಿಮಗೆ ಅನುಕೂಲ. ಭವಿಷ್ಯದ ಯೋಚನೆ ಬರಲಿದೆ.

**ಮಿಥುನ:** ಗೌರವಾನ್ವಿತ ವ್ಯಕ್ತಿಯೆಂದು ಅನಿಸಿಕೊಂಡ ನಿಮಗೆ ಸಮಾಜದಲ್ಲಿ ಅಪಮಾನವಾಗಬಹುದು. ಪತ್ರ ವ್ಯವಹಾರದಲ್ಲಿ ಸಂಕಷ್ಟದ ಪರಿಸ್ಥಿತಿ. ನಿಮ್ಮ ಕೆಲವು ನಿರ್ಧಾರದ ಫಲವಾಗಿ ಆತ್ಮೀಯರು ದೂರವಾಗುವ ಲಕ್ಷಣಗಳಿವೆ.

**ಕರ್ಕಾಟಕ:** ಸತ್ಕಾರ್ಯಗಳಿಂದ ಮನೆಯಲ್ಲಿ ಸಡಗರ. ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಕೂಡ ಆತಂಕಕ್ಕೆ ಕಾರಣವಾಗಬೇಕಿಲ್ಲ. ಆಹಾರದಲ್ಲಿ ಎಣ್ಣೆಯ ಪದಾರ್ಥ ಮತ್ತು ಕಾರದ ಪದಾರ್ಥಗಳ ಮಿತಬಳಕೆ ಮಾಡಿ.

**ಸಿಂಹ:** ಈ ದಿನ ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ. ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸುವಿರಿ. ಅನಿರೀಕ್ಷಿತ ಕೆಲಸಗಳು ನಿಮ್ಮ ಕೈಸೇರಲಿವೆ.

**ಕನ್ಯಾ:** ಕೌಟುಂಬಿಕವಾಗಿ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವಿರಿ. ಸ್ಥಾನ ಬದಲಾವಣೆಯಿಂದ ಧನ ಲಾಭ. ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ರೈತವರ್ಗದವರಿಗೆ ಅನುಕೂಲಕರ ದಿನ. ಅಲಂಕಾರಿಕ ವಸ್ತುಗಳ ಮಾರಾಟದಲ್ಲಿ ಹೆಚ್ಚಳ.

**ತುಲಾ:** ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಊರಿನ ಹಿರಿಯರು ಕೊಡುವ ಸಲಹೆಯಿಂದ ಅನುಕೂಲವಾಗುವಂತಹ ಸನ್ನಿವೇಶ. ನ್ಯಾಯಾಲಯದ ಮೆಟ್ಟಿಲನ್ನು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ.

**ವೃಶ್ಚಿಕ:** ಬಹಳ ದಿನಗಳ ನಂತರ ಕ್ರೀಡೆಗಳಲ್ಲಿ ಹೆಚ್ಚಿನ ಸಮಯ ಕಳೆಯುವಿರಿ. ಹಣದ ಅಭಾವ ಇರುವುದಿಲ್ಲ. ಮನೆಯಲ್ಲಿ ವಿವಾಹದ ವಿಷಯಗಳ ಚರ್ಚೆ. ಕುಟುಂಬದ ಅಭಿವೃದ್ಧಿಯಲ್ಲಿ ನಿಮ್ಮ ಅವಿರತ ಪ್ರಯತ್ನ ಫಲಕಾರಿಯಾಗುವುದು.

**ಧನು:** ಸಜ್ಜನರ ಸಹವಾಸ ಮಾಡುವುದರಿಂದ ಜನಬಳಕೆ, ಪ್ರಾಪಂಚಿಕವಾದ ಜ್ಞಾನ ವೃದ್ಧಿಯಾಗುತ್ತದೆ. ಸರಕು ಸಾಗಾಣೆ ದಾರರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬಂದರೂ, ಕಾರ್ಯದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು.

**ಮಕರ:** ನೀವು ಆಡಿದ ಮಾತುಗಳನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ಸೋಲಬೇಕಾಗುತ್ತದೆ. ನರ ರೋಗ ತಜ್ಞರಿಗೆ ವೃತ್ತಿಯಲ್ಲಿ ಹೆಸರು ಸಂಪಾದಿಸಲು ಈ ದಿನ ಸಹಕಾರಿಯಾಗುತ್ತದೆ. ಕೃಷಿ ಮಾಡುವ ಬಗ್ಗೆ ಆಸಕ್ತಿ ಮೂಡುವುದು.

**ಕುಂಭ:** ಎಂಜಿನಿಯರ್‌ಗಳ ನಿರುದ್ಯೋಗದ ಸಮಸ್ಯೆ ಸ್ನೇಹಿತನ ಪ್ರಯತ್ನ ಬಲದಿಂದ ದೂರವಾಗಲಿದೆ. ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ದುಡುಕಬೇಡಿ. ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಲಾಭ.

**ಮೀನ:** ಈ ದಿನ ನಿಮಗೆ ಕಾಡುವ ಸಮಸ್ಯೆಯಿಂದಾಗಿ ಮತ್ತು ಅಸಹಾಯಕ ಸ್ಥಿತಿಯಿಂದಾಗಿ ಯಾರಲ್ಲೂ ನಂಬಿಕೆ ಇಡದಂಥ ಪರಿಸ್ಥಿತಿ ತೋರಿ ಬರುವುದು. ಮಿತ್ರರು ಶತ್ರುಗಳಾಗಬಹುದು. ಹೊಸ ಬಟ್ಟೆ ಖರೀದಿಯ ಮನಸ್ಸಾಗಲಿದೆ.

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಪುಣ್ಯಶಾಲಿಯ ಬದುಕು

**ತನ್ನ ಶಕ್ತಿಯನಳೆದು, ತನ್ನ ಗುಣಗಳ ಬಗೆದು |**
**ಸನ್ನಿವೇಶದ ಸೂಕ್ಷ್ಮವರಿತು, ಧೃತಿದಳೆದು ||**
**ತನ್ನ ಕರ್ತವ್ಯಪರಿಧಿಯ ಮೀರದುಜ್ಜುಗಿಸೆ |**
**ಪುಣ್ಯಶಾಲಿಯ ಪಾಡು – ಮಂಕುತಿಮ್ಮ || 576 ||**

**ಪದ-ಅರ್ಥ:** ಶಕ್ತಿಯನಳೆದು = ಶಕ್ತಿಯನು + ಅಳೆದು, ಬಗೆದು = ತಿಳಿದು, ಧೃತಿ = ಧೈರ್ಯ, ಕರ್ತವ್ಯಪರಿಧಿ = ಕರ್ತವ್ಯದ ಮಿತಿ, ಮೀರದುಜ್ಜುಗಿಸೆ = ಮೀರದೆ + ಉಜ್ಜುಗಿಸೆ (ಕರ್ತವ್ಯ ಮಾಡಿದರೆ)

**ವಾಚ್ಯಾರ್ಥ:** ತನ್ನ ಶಕ್ತಿಯನ್ನು ಅಳೆದು, ತನ್ನ ಗುಣಗಳನ್ನು ತಿಳಿದುಕೊಂಡು, ಸನ್ನಿವೇಶದ ಸೂಕ್ಷ್ಮತೆಯನ್ನು ಅರಿತುಕೊಂಡು, ಧೈರ್ಯದಿಂದ ತನ್ನ ಕರ್ತವ್ಯದ ಮಿತಿಗಳನ್ನು ಮೀರದೆ ಕರ್ತವ್ಯ ಪಾಲನೆ ಮಾಡುವುದು ಪುಣ್ಯಶಾಲಿಯ ಬದುಕು.

**ವಿವರಣೆ:** ಈ ಕಗ್ಗ ಒಂದು ರೀತಿಯಲ್ಲಿ ಯಶಸ್ಸಿನ ಸಾಧನೆಗೆ ತಾಳೆಪಟ್ಟಿ ಇದ್ದಂತಿದೆ. ಒಬ್ಬ ಮನುಷ್ಯ ಸಾಧನೆಯ ಮೆಟ್ಟಿಲನ್ನೇರಿ ಪುಣ್ಯಶಾಲಿ ಎನ್ನಿಸಿಕೊಳ್ಳಬೇಕಾದರೆ ಮಾಡಬೇಕಾದ ಪ್ರತಿಯೊಂದು ಹಂತದ ಮೆಟ್ಟಿಲಿದೆ. ಯಾವುದೇ ಕಾರ್ಯ ಮಾಡುವಾಗ ವ್ಯಕ್ತಿ ತನ್ನ ಶಕ್ತಿಯ ಮಟ್ಟವನ್ನು ತಿಳಿದಿರಬೇಕು. ತನ್ನ ಶಕ್ತಿಗೆ ಮೀರಿದ್ದಕ್ಕೆ ಕೈ ಹಾಕಿದರೆ ಯಶಸ್ಸು ಕಷ್ಟ ಮಾತ್ರವಲ್ಲ, ಪೆಟ್ಟೂ ಬಿದ್ದೀತು. ಇದರೊಂದಿಗೆ, ತನ್ನ ಗುಣಗಳ ಪರಿಚಯವೂ ಚೆನ್ನಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಗೆ ಅವನದೇ ಆದ ವಿಶಿಷ್ಟ ಗುಣಗಳಿವೆ. ಆ ಗುಣಗಳಿಗೆ ಹೊಂದುವ ಕಾರ್ಯ ಮಾಡಿದರೆ ಕೆಲಸ ಸುಲಭವಾಗುತ್ತದೆ. ಆತನ ಗುಣಗಳಿಗೆ ವಿರುದ್ಧವಾದ ಕಾರ್ಯ ಸುಗಮವಾಗಿ ನಡೆಯುವುದು ಕಷ್ಟ. ಮೃದು ಸ್ವಭಾವದ ವ್ಯಕ್ತಿ ಪೋಲೀಸ್ ಅಥವಾ ಸೈನ್ಯ ಸೇರಿದಾಗ ಅವನು ತನ್ನ ಗುಣಗಳಿಗೆ ವಿರುದ್ಧವಾದ ಕೆಲಸ ಮಾಡಬೇಕಾಗುತ್ತದೆ. ಅಂತೆಯೇ ಅತ್ಯಂತ ಧೃಡಕಾಯನಾದ, ಕಠಿಣಪರಿಶ್ರಮಿ ಮತ್ತು ಉಗ್ರ ಸ್ವಭಾವದ ವ್ಯಕ್ತಿ ಹೂಗಳನ್ನು ಕಟ್ಟಿ ಮಾಲೆ ಮಾಡುವುದೂ ಕಷ್ಟದ ಕೆಲಸ. ಕಾರ್ಯ ಮಾಡಲಾಗುವುದಿಲ್ಲವೆಂದಲ್ಲ. ಆದರೆ ಮನಸ್ಸಿನ ಸ್ವಭಾವಕ್ಕೆ ಹೊಂದುವ ಕಾರ್ಯ ಸುಲಲಿತವಾಗಿರುತ್ತದೆ.

ತನ್ನ ಶಕ್ತಿಯನ್ನು ಅಳೆದು, ತನ್ನ ಗುಣಗಳನ್ನು ಚೆನ್ನಾಗಿ ತಿಳಿದ ವ್ಯಕ್ತಿ ಕೂಡ ಸನ್ನಿವೇಶವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಒಂದು ಸನ್ನಿವೇಶದಲ್ಲಿ ಸುಸೂತ್ರವಾಗಿ ನಡೆದ ಕೆಲಸ ಮತ್ತೊಂದು ಸನ್ನಿವೇಶದಲ್ಲಿ ಹಾಗೆಯೇ ನಡೆದೀತು ಎಂದು ಹೇಳಲಾಗುವುದಿಲ್ಲ. ಬದಲಾದ ಸನ್ನಿವೇಶದಲ್ಲಿ ಕಾರ್ಯನಕ್ಷೆಯೇ ಬದಲಾಗಬೇಕಾಗುತ್ತದೆ.

**ಕಃ ಕಾಲಃ ಕಾನಿ ಮಿತ್ರಾಣಿ ಕೋ ದೇಶಃ ಕೌ ವ್ಯಯಾಗಮೌ |**
**ಕಸ್ಯಾಹಂ ಕಾ ಚ ಮೇ ಶಕ್ತಿರಿತಿ ಚಿಂತ್ಯಂ ಮುಹುರ್ಮುಹುಃ ||**

– ಸುಭಾಷಿತ

'ಈಗ ಯಾವ ಕಾಲ ಸನ್ನಿವೇಶ ಇದಿರಾಗಿದೆ? ನಮಗೆ ಸಹಾಯ ಮಾಡುವ ಮಿತ್ರರು ಯಾರು? ನಾನಿರುವ ದೇಶದ ಪರಿಸರ ಹೇಗಿದೆ? ನನ್ನ ಸಂಕಲ್ಪದಂತೆ ನಡೆಯುವುದರಿಂದ ಲಾಭವೇನು? ನಷ್ಟವೇನು? ಇಷ್ಟಾಗಿ ನಾನು ಯಾರು? ನನ್ನಲ್ಲಿರುವ ವಿಶಿಷ್ಟ ಶಕ್ತಿ ಏನು? ಹೀಗೆ ಹಲವು ದೃಷ್ಟಿಕೋನಗಳಿಂದ ಚಿಂತನೆ ಮಾಡುತ್ತ ಕಾರ್ಯನಿರತನಾಗಬೇಕು.

ಸನ್ನಿವೇಶವನ್ನು ಅರಿತ ಮೇಲೆ ಯಾವ ಸಮಸ್ಯೆ ಬಂದರೂ ಅದನ್ನು ಎದುರಿಸುತ್ತೇನೆ ಎಂಬ ಧೈರ್ಯ ಬೇಕು. ಕೊನೆಗೆ ತನ್ನ ಕರ್ತವ್ಯದ ಮಿತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕರ್ತವ್ಯದ ಮಿತಿಗಳನ್ನು ದಾಟಿದಾಗ ಅಥವಾ ಮಿತಿಮೀರಿ ಸ್ವಾತಂತ್ರ್ಯ ತೆಗೆದುಕೊಂಡರೆ ಆಪತ್ತು ತಪ್ಪಿದ್ದಲ್ಲ. ಕಗ್ಗ ಈ ಎಲ್ಲ ಗುಣಗಳನ್ನು ಒಂದೇ ಚೌಪದಿಯಲ್ಲಿ ಕಟ್ಟಿಕೊಡುತ್ತದೆ. ಶಕ್ತಿಯ ಮಿತಿಗಳನ್ನು ತಿಳಿದು, ತನ್ನ ಗುಣಗಳ ಸ್ವರೂಪವನ್ನು ಅರಿತು, ಸನ್ನಿವೇಶದ ಸೂಕ್ಷ್ಮತೆಯನ್ನು ಅಳೆದು, ಧೈರ್ಯವನ್ನು ಕಳೆದುಕೊಳ್ಳದೆ, ತನ್ನ ಕರ್ತವ್ಯದ ಪರಿಧಿಯಲ್ಲೇ ದುಡಿದ ವ್ಯಕ್ತಿ ಒಬ್ಬ ಪುಣ್ಯಶಾಲಿ ಅವನ ಬದುಕು ಒಂದು ಜೈತ್ರಕಥೆ. ❖

## ಪದಬಂಧ 4886

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಸಂಗೀತದ ಏಳು ಸ್ವರಗಳು (4)
3.ಅತಿಯಾಗಿ ಉಪದ್ರವ ಕೊಡುವ ವ್ಯಕ್ತಿ! (4)
4.ಪಟ್ಟಾಗಿ ಕುಳಿತು ವಾಚನ ಮಾಡು! (3)
5.ಮೆಚ್ಚುಗೆಗೆ ಪಾತ್ರನಾದವನು (4)
7.ಬಟ್ಟೆಗಳನ್ನು ಮಡಿಮಾಡುವವನು (4)
9.ಇದು ಬೇರೆಯವರ ಹಣ (4)
11.ಕವಲು ದಾರಿಯಲ್ಲಿಯೇ ಸವೆದು ಹೋದುದು! (4)
12.ಅನೇಕ ಮನೆಗಳುಳ್ಳ ಆವಾರ (3)
14.ಜೈನ ತೀರ್ಥಂಕರನಿವನು (4)
15.ತಿರುಪೆ ಬೇಡುವವ ಇಲ್ಲಿದ್ದಾನೆ (4)

**ಮೇಲಿಂದ ಕೆಳಕ್ಕೆ**

1.ಆ ಸನ್ನಿಧಿಯಲ್ಲಿ ಅಧಿಕ ಜ್ವರದಿಂದಾದ ಪರಿಣಾಮು! (2)
2.ಪುಸ್ತಕದ ಮೇಲು ಹೊದಿಕೆ (4)
3.ಆಗ ತಾನೇ ಅರಳಿರುವ ಪುಷ್ಪ (4)
6.ಅಂಧಕಾರ ಇಲ್ಲಿದೆ (3)
8.ವಾದ್ಯವನ್ನು ನುಡಿಸುವವನು (3)
10.ಕೆನೆ ಕಡೆದು ಹೊಸದಾಗಿ ತೆಗೆದ ಬೆಣ್ಣೆ (4)
11.ಈಕೆ ವಿದ್ಯಾಧಿದೇವತೆ (4)
13.ಅಗ್ನಿ ಇಲ್ಲಿ ಕಾಣಿಸುತ್ತಿದೆಯಲ್ಲಾ? (2)



### 4885ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಜ್ಞಾತಿಕಲಹ 3.ಕುಲಾವಿ 5.ಕನವರಿಕೆ 7.ಸಾವಿರ 8.ಮತಿಭ್ರಮಣೆ 10.ಸದರ 11.ವಾರಸುದಾರ 14.ಕುಲುಮೆ 15.ಅನುವಾದಕ

**ಮೇಲಿಂದ ಕೆಳಕ್ಕೆ:** 1.ಜ್ಞಾಪಕ 2.ಕರ್ತವ 4.ವಿಧುರ 6.ರಿಗುತಿ 7.ಸಾರಣೆ 8.ಮಸೂರ 9.ಮತ್ಸರ 10.ಸರಕು 12.ಸುದಿವಾ 13.ರಸಿಕ

## ಸುಡೊಕು 5272

| | | | | | | | | |
|---|---|---|---|---|---|---|---|---|
| 2 | | 9 | | | 7 | 1 | | 4 |
| | | | | 3 | | | | |
| 5 | | 7 | 4 | | 6 | 2 | | 3 |
| | | | | | 5 | | 3 | 1 |
| | 5 | 1 | | 8 | | | 2 | |
| 3 | | | 9 | | | | | 8 |
| | | 2 | | 1 | | 8 | | 5 |
| 9 | | | 7 | | 8 | | | |
| | 8 | | | 2 | | 4 | | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5271 ಸುಡೊಕು

| | | | | | | | | |
|---|---|---|---|---|---|---|---|---|
| 2 | 1 | 6 | 3 | 7 | 4 | 8 | 5 | 9 |
| 9 | 4 | 7 | 5 | 8 | 6 | 3 | 1 | 2 |
| 3 | 8 | 5 | 9 | 2 | 1 | 4 | 6 | 7 |
| 1 | 2 | 3 | 8 | 6 | 5 | 9 | 7 | 4 |
| 5 | 9 | 8 | 2 | 4 | 7 | 1 | 3 | 6 |
| 6 | 7 | 4 | 1 | 9 | 3 | 5 | 2 | 8 |
| 7 | 3 | 9 | 6 | 1 | 8 | 2 | 4 | 5 |
| 4 | 5 | 2 | 7 | 3 | 9 | 6 | 8 | 1 |
| 8 | 6 | 1 | 4 | 5 | 2 | 7 | 9 | 3 |

**ಷೇರುಪೇಟೆ ವಹಿವಾಟು** 778

| | |
|---|---|
| ಇಂದಿನ ಅಂತ್ಯ | 55,469 |
| ಹಿಂದಿನ ಅಂತ್ಯ | 56,247 |

**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 16,794 |
| ಇಂದಿನ ಅಂತ್ಯ | 16,606 |
| ▼ | 188 |
| ದಿನದ ಕನಿಷ್ಠ | 16,478 |

**ವಿನಿಮಯ ದರ**

| | |
|---|---|
| $ ಡಾಲರ್ | 75.80 |
| £ ಪೌಂಡ್ | 100.57 |
| € ಯುರೊ | 84.05 |
| ¥ ಯೆನ್ (100ಕ್ಕೆ) | 66 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹390 |
| 12 ಮೊಟ್ಟೆಗೆ | ₹58 |
| ಮೈಸೂರು | |
| 100 ಮೊಟ್ಟೆಗೆ | ₹395 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1540 (1540) |
| ಸೋಯಾ (ರಿಫೈನ್ಡ್) | ₹1600 (1580) |
| ಸೂರ್ಯಕಾಂತಿ (ರಿಫೈನ್ಡ್) | --- (---) |
| ಪಾಮೋಲಿನ್ | ₹1562 (1520) |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಕೆ.ಆರ್.ಪೇಟೆ | ₹8950-8950 |
| ಪುತ್ತೂರು | ₹4000-10500 |
| ಮಂಗಳೂರು | ₹7500-13619 |
| ತುರುವೇಕೆರೆ | ₹17500-17500 |

**ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹2000-2700 |
| ಮಧ್ಯಮ | ₹1200-2000 |
| ಸಣ್ಣ | ₹800-1200 |

**ತೆಂಗು ಧಾರಣೆ (ಸಾವಿರಕ್ಕೆ)**

| | |
|---|---|
| ಮಂಗಳೂರು | |
| 1ನೇ ದರ್ಜೆ | ₹18000-20000 |
| 2ನೇ ದರ್ಜೆ | ₹10000-16000 |

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಯಾರೊಂದಿಗೂ ಹಸ್ತಲಾಘವ ಮಾಡಬೇಡಿ
ಪೌಷ್ಟಿಕ ಆಹಾರ ಸೇವಿಸಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ

# ಸೆನ್ಸೆಕ್ಸ್ 778 ಅಂಶ ಇಳಿಕೆ

ಮುಂಬೈ (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವಿನ ಸಮರವು ಹೂಡಿಕೆದಾರರ ವಿಶ್ವಾಸಕ್ಕೆ ಪೆಟ್ಟು ಕೊಟ್ಟಿದ್ದು, ದೇಶಿ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಕುಸಿತ ಕಾಣುವಂತಾಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ ಕಂಡಿದ್ದು, ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆತವನ್ನು ಮುಂದುವರಿಸಿದ್ದು ಕೂಡ ಕುಸಿತಕ್ಕೆ ಕಾರಣವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ದಿನದ ನಡುವೆ 1,200 ಅಂಶಗಳವರೆಗೂ ಕುಸಿದಿತ್ತು. ದಿನದ ಕೊನೆಯಲ್ಲಿ ತುಸು ಚೇತರಿಕೆ ಕಂಡು, 778 ಅಂಶ ಇಳಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸಿತು. ಸೂಚ್ಯಂಕ ಇಳಿಕೆ ಕಂಡಿದ್ದರಿಂದ ಹೂಡಿಕೆದಾರರ ಸಂಪತ್ತು ಮೌಲ್ಯ ₹ 86,742 ಕೋಟಿಗಳಷ್ಟು ಕರಗಿತು. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 251.52 ಲಕ್ಷ ಕೋಟಿಗಳಿಗೆ ಇಳಿಕೆ ಆಯಿತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 188 ಅಂಶ ಕುಸಿಯಿತು.

‘ಯುದ್ಧದ ತೀವ್ರತೆ ಜಾಸ್ತಿ ಆಗಿದ್ದು ಜಾಗತಿಕ ಮಾರುಕಟ್ಟೆಗಳ ಮೇಲೆ ಕೆಟ್ಟ ಪರಿಣಾಮ ಬೀರಿತು. ಡಿಸೆಂಬರ್ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ದರವು ಅಷ್ಟೇನೂ ಉತ್ತಮವಾಗಿ ಇಲ್ಲದಿರುವುದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಅಂದಾಜನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಶೇ 8.9ರಷ್ಟಕ್ಕೆ ತಗ್ಗಿಸಿರುವುದು ಕೂಡ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ. ಕಚ್ಚಾ ತೈಲ ಬೆಲೆ ಹೆಚ್ಚಳ, ವಿಧಾನಸಭಾ ಚುನಾವಣೆ ಫಲಿತಾಂಶವು ಮಾರುಕಟ್ಟೆಯಲ್ಲಿ ಅಸ್ಥಿರತೆಯನ್ನು ಮುಂದುವರಿಸಬಹುದು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 38 ಪೈಸೆ ಇಳಿಕೆಯಾಗಿ ₹ 75.71ಕ್ಕೆ ತಲುಪಿದೆ.

### ಕಚ್ಚಾತೈಲ ದರ ಏರಿಕೆ: ಜೆಪಿ ಮೋರ್ಗನ್ ವರದಿ

# ಮುಂದಿನ ವಾರದಿಂದ ಇಂಧನ ದರ ಏರಿಕೆ?

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಲ್ಲಿ ಮುಂದಿನ ವಾರದಿಂದ ಪೆಟ್ರೋಲ್, ಡೀಸೆಲ್ ದರ ಏರಿಕೆಯನ್ನು ಮತ್ತೆ ಆರಂಭಿಸುವ ಸಾಧ್ಯತೆ ಇದೆ ಎಂದು ಜೆಪಿ ಮೋರ್ಗನ್ ವರದಿ ಹೇಳಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರವು ಪ್ರತಿ ಬ್ಯಾರಲ್‌ಗೆ 100 ಡಾಲರ್ ದಾಟಿದ್ದಕ್ಕೆ ಅನುಗುಣವಾಗಿ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ದರವು ₹ 9ರಷ್ಟು ಹೆಚ್ಚಳ ಆಗಬೇಕಿತ್ತು. ಆದರೆ, ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆಯ ಕಾರಣಕ್ಕಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಇಂಧನ ದರವನ್ನು ಈಚೆಗೆ ಹೆಚ್ಚಳ ಮಾಡಿಲ್ಲ. ಆದರೆ, ಮುಂದಿನ ವಾರದಿಂದ ಇಂಧನ ದರ ಹೆಚ್ಚಳವು ಆರಂಭ ಆಗಲಿದೆ. 118 ದಿನಗಳಿಂದ ಪೆಟ್ರೋಲ್, ಡೀಸೆಲ್ ದರದಲ್ಲಿ ಬದಲಾವಣೆ ಆಗಿಲ್ಲ.

ರಷ್ಯಾ–ಉಕ್ರೇನ್ ಸಂಘರ್ಷ ಆರಂಭ ಆದಾಗಿನಿಂದ ಕಚ್ಚಾತೈಲ ದರವು ಭಾರಿ ಏರಿಕೆ ಕಾಣುತ್ತಿದೆ. ಎಕ್ಸೈಸ್ ಸುಂಕದಲ್ಲಿ ಪ್ರತಿ ಲೀಟರಿಗೆ ₹ 1ರಿಂದ ₹ 3ರವರೆಗೆ ಕಡಿತ ಹಾಗೂ ರಿಟೇಲ್ ಮಾರಾಟ ದರದಲ್ಲಿ ಪ್ರತಿ ಲೀಟರಿಗೆ ₹ 5ರಿಂದ ₹ 8ರವರೆಗೆ ಏರಿಕೆ ಮಾಡುವ ಮೂಲಕ ಕಚ್ಚಾ ತೈಲ ದರ ಏರಿಕೆಯನ್ನು ಸರಿದೂಗಿಸುವ ನಿರೀಕ್ಷೆ ಇದೆ ಎಂದು ಜೆಪಿ ಮೋರ್ಗನ್ ಹೇಳಿದೆ.

**ಮುಖ್ಯಾಂಶಗಳು**

- ಎಕ್ಸೈಸ್ ಸುಂಕ ಲೀಟರಿಗೆ ₹ 3ರವರೆಗೆ ಕಡಿತ ಸಂಭವ
- ಪೆಟ್ರೋಲ್, ಡೀಸೆಲ್ ದರ ಲೀಟರಿಗೆ ₹ 8ರವರೆಗೆ ಹೆಚ್ಚಳ ಸಾಧ್ಯತೆ



ಪೆಟ್ರೋಲಿಯಂ ಸಚಿವಾಲಯದ ‘ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಘಟಕ’ದ (ಪಿಪಿಎಸಿ) ಪ್ರಕಾರ, ಭಾರತವು ಖರೀದಿಸುವ ಕಚ್ಚಾ ತೈಲ ದರವು ಮಾರ್ಚ್ 1ರಂದು ಪ್ರತಿ ಬ್ಯಾರಲ್‌ಗೆ 102 ಡಾಲರ್ ಇತ್ತು. ಕಳೆದ ವರ್ಷ ನವೆಂಬರ್ ಆರಂಭದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಬದಲಾವಣೆ ಮಾಡದೇ ಇರಲು ನಿರ್ಧರಿಸಿದಾಗ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ ಸರಾಸರಿ 81.5 ಡಾಲರ್ ಇತ್ತು.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಅಂತಿಮ ಹಂತದ ಮತದಾನವು ಮಾರ್ಚ್ 7ರಂದು ನಡೆಯಲಿದ್ದು, 10ರಂದು ಮತ ಎಣಿಕೆ ನಡೆಯಲಿದೆ. ಆ ಬಳಿಕ ನಿತ್ಯವೂ ಇಂಧನ ದರದಲ್ಲಿ ಏರಿಕೆ ಆರಂಭ ಆಗುವ ನಿರೀಕ್ಷೆ ಹೊಂದಲಾಗಿದೆ ಎಂದು ವರದಿ ತಿಳಿಸಿದೆ.

**ಕಚ್ಚಾ ತೈಲ ಮತ್ತಷ್ಟು ದುಬಾರಿ**

ಉಕ್ರೇನ್–ರಷ್ಯಾ ಸಂಘರ್ಷ ತೀವ್ರವಾಗಿತ್ತಿರುವ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 110 ಡಾಲರ್ ಗಡಿಯನ್ನು ದಾಟಿದೆ.

ಫೆಬ್ರುವರಿ 24ರಂದು ರಷ್ಯಾವು ಯುದ್ಧ ಘೋಷಣೆ ಮಾಡಿದಾಗ, ಕಚ್ಚಾ ತೈಲದ ಬೆಲೆಯು 100 ಡಾಲರ್‌ಗಿಂತ ಹೆಚ್ಚಾಗಿತ್ತು.

**ತೈಲ ದರ ಇನ್ನಷ್ಟು ಏರಿಕೆ ಸಂಭವ:** ಒಂದೊಮ್ಮೆ ರಷ್ಯಾದಿಂದ ತೈಲ ಪೂರೈಕೆಯು ಸಂಪೂರ್ಣವಾಗಿ ಸ್ಥಗಿತಗೊಂಡಲ್ಲಿ ಕಚ್ಚಾ ತೈಲ ದರವು ಬ್ಯಾರಲ್‌ಗೆ 150 ಡಾಲರ್‌ಗಳವರೆಗೂ ಏರಿಕೆ ಆಗಬಹುದು ಎಂದು ಜೆಪಿ ಮೋರ್ಗನ್ ಅಂದಾಜು ಮಾಡಿದೆ.

**ಸಂಕ್ಷಿಪ್ತ ಸುದ್ದಿ**

## ತಯಾರಿಕಾ ಚಟುವಟಿಕೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಹೆಚ್ಚಳ ಆಗಿದೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಕಂಪನಿಯು ಬುಧವಾರ ತಿಳಿಸಿದೆ.

ಬೇಡಿಕೆಯು ಅನುಕೂಲಕರ ಸ್ಥಿತಿಯಲ್ಲಿ ಇರುವುದರಿಂದ ತಯಾರಿಕೆ ಹೆಚ್ಚಾಗಿದ್ದು ಹೊಸ ಯೋಜನೆಗಳು ಉತ್ತಮ ಬೆಳವಣಿಗೆ ಕಂಡಿವೆ ಎಂದು ಅದು ಹೇಳಿದೆ.

ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ ಜನವರಿಯಲ್ಲಿ 54 ಇದ್ದಿದ್ದು ಫೆಬ್ರುವರಿಯಲ್ಲಿ 54.9ಕ್ಕೆ ಏರಿಕೆ ಕಂಡಿದೆ. ಸತತ ಎಂಟನೇ ತಿಂಗಳಿನಲ್ಲಿಯೂ ವಲಯದ ಚಟುವಟಿಕೆಯು ಸಕಾರಾತ್ಮಕ ಮಟ್ಟದಲ್ಲಿಯೇ ಇದೆ.

## ಕೆನರಾ ಬ್ಯಾಂಕ್ ಎಫ್.ಡಿ. ಬಡ್ಡಿ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಮಂಗಳವಾರದಿಂದ ಜಾರಿಗೆ ಬರುವಂತೆ ತನ್ನ ನಿಶ್ಚಿತ ಠೇವಣಿಗಳ (ಎಫ್.ಡಿ.) ಮೇಲಿನ ಬಡ್ಡಿ ದರವನ್ನು ಶೇಕಡ 0.25ರವರೆಗೆ ಹೆಚ್ಚಿಸಿದೆ.

ಒಂದು ವರ್ಷದ ಎಫ್.ಡಿ. ಮೇಲಿನ ಬಡ್ಡಿ ದರವು ಶೇ 5.1ಕ್ಕೆ ಹೆಚ್ಚಾಗಿದೆ. 1–2 ವರ್ಷಗಳ ಅವಧಿಯ ಎಫ್.ಡಿ. ಮೇಲಿನ ಬಡ್ಡಿದರ ಶೇ 5 ಇದ್ದಿದ್ದು ಶೇ 5.15ಕ್ಕೆ ಹೆಚ್ಚಾಗಿದೆ. 2–3 ವರ್ಷಗಳ ಅವಧಿಗೆ ಬಡ್ಡಿ ದರವು ಶೇ 5.20ಕ್ಕೆ ತಲುಪಿದೆ. 3ರಿಂದ 5 ವರ್ಷಗಳ ಅವಧಿಗೆ ಶೇ 5.45ರಷ್ಟು ಬಡ್ಡಿ ದರ ನಿಗದಿಯಾಗಿದೆ (ಮೊದಲು ಶೇ 5.25 ಇತ್ತು). 5ರಿಂದ 10 ವರ್ಷಗಳ ಅವಧಿಯದ್ದಕ್ಕೆ ಶೇ 5.5ರಷ್ಟು ಬಡ್ಡಿದರ ನಿಗದಿ ಮಾಡಲಾಗಿದೆ. ಹಿರಿಯ ನಾಗರಿಕರು ಶೇ 0.50ರಷ್ಟು ಹೆಚ್ಚುವರಿ ಬಡ್ಡಿ ದರ ಪಡೆಯಬಹುದಾಗಿದೆ.

## ಆಸ್ಟ್ರೇಲಿಯಾ ಪ್ರಧಾನಿಗೆ ಕೋವಿಡ್

ಕ್ಯಾನ್‌ಬೆರಾ (ಎಪಿ): ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಐಸೋಲೇಶನ್‌ನಲ್ಲಿಯೇ ಕರ್ತವ್ಯ ಮುಂದುವರಿಸುವುದಾಗಿ ಅವರು ಹೇಳಿದ್ದಾರೆ.

ಸಿಡ್ನಿಯ ಅಧಿಕೃತ ನಿವಾಸದಲ್ಲಿ ಪ್ರತ್ಯೇಕವಾಗಿರುವ ಅವರು, ಜ್ವರದ ಲಕ್ಷಣಗಳು ಮಾತ್ರ ಇವೆ. ಮುಂದಿನ ವಾರದೊಳಗೆ ಚೇತರಿಸಿಕೊಳ್ಳುವೆ. ಚಿಕಿತ್ಸೆಯೊಂದಿಗೆ ಕಾರ್ಯಾಲಯದ ಕೆಲಸ ಮುಂದುವರೆಸಿದ್ದೇನೆ. ದೇಶದ ಕರಾವಳಿ ಪ್ರದೇಶದ ಪ್ರವಾಹ ಹಾಗೂ ಉಕ್ರೇನ್ ಯುದ್ಧದ ಪರಿಸ್ಥಿತಿ ಕುರಿತು ಗಮನ ಹರಿಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಹಿರಿಯ ಸಚಿವರೊಬ್ಬರಿಗೆ ಸಹ ಸೋಂಕು ತಗುಲಿದೆ.

## ಸಿಡ್ನಿಯಲ್ಲಿ ಪ್ರವಾಹ: 14 ಮಂದಿ ಸಾವು

ಸಿಡ್ನಿ(ಎಪಿ): ಸುಮಾರು 14 ಮಂದಿಯ ಸಾವಿಗೆ ಕಾರಣವಾದ ಪ್ರವಾಹ ಪರಿಸ್ಥಿತಿ ಸಿಡ್ನಿಯಲ್ಲಿ ಇದೀಗ ಸುಧಾರಿಸಿದ್ದು, ಮತ್ತೆ ಭಾರಿ ಮಳೆಯಾಗುವ ಎಚ್ಚರಿಕೆಯನ್ನು ನೀಡಲಾಗಿದೆ. ಸಾಮೂಹಿಕ ಸ್ವಚ್ಛತಾ ಕಾರ್ಯಾಚರಣೆ ಬುಧವಾರ ಆರಂಭಗೊಂಡಿದೆ. ಎಂಟು ಸಾವಿರ ಸ್ವಯಂ ಸೇವಕರು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ. ಲಿಸ್‌ಮೋರ್ ನಗರದಲ್ಲಿ ಸಂಭವಿಸಿದ ಪ್ರವಾಹದಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಬ್ರಿಸ್ಬೇನ್‌ನಲ್ಲಿ ಸಹ ಪ್ರವಾಹ ಪರಿಸ್ಥಿತಿ ನೆಲೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಉಕ್ರೇನ್ ಬಿಕ್ಕಟ್ಟು: ಎಲ್‌ಐಸಿ ಐಪಿಒ ಮುಂದೂಡಿಕೆ ಸಾಧ್ಯತೆ

ನವದೆಹಲಿ (ಪಿಟಿಐ): ರಷ್ಯಾ–ಉಕ್ರೇನ್ ಸಂಘರ್ಷವು ಜಾಗತಿಕ ಹಣಕಾಸು ಮಾರುಕಟ್ಟೆಯ ಮೇಲೆ ದುಷ್ಪರಿಣಾಮ ಉಂಟುಮಾಡುತ್ತಿರುವ ಕಾರಣ ಕೇಂದ್ರ ಸರ್ಕಾರವು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ಮುಂದೂಡುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಇದು ಯುದ್ಧದ ಸಂದರ್ಭ. ಈಗ ಐಪಿಒಗೆ ಹೋಗುವ ಮುನ್ನ ಪರಿಸ್ಥಿತಿಯನ್ನು ಸರಿಯಾಗಿ ಅವಲೋಕಿಸುವ ಅಗತ್ಯ ಇದೆ. ಕಂಪನಿಯು ಗರಿಷ್ಠ ಮಟ್ಟದ ಮಾರುಕಟ್ಟೆ ಮೌಲ್ಯ ಪಡೆಯುವ ಅವಕಾಶಕ್ಕಾಗಿ ಕಾದು ನೋಡಬೇಕಾಗಿದೆ ಎಂದು ಮೂಲಗಳು ತಿಳಿಸಿವೆ.

ಜಾಗತಿಕ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಐಪಿಒ ಸಮಯದ ಬಗ್ಗೆ ಮರುಪರಿಶೀಲನೆ ನಡೆಸುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಹ ಸೂಚನೆ ನೀಡಿದ್ದಾರೆ.

‘ಯೋಜನೆಗೆ ಅನುಗುಣವಾಗಿಯೇ ನಾವು ಮುಂದುವರಿಯಲು ಬಯಸುತ್ತೇವೆ. ಆದರೆ, ಜಾಗತಿಕ ಪರಿಸ್ಥಿತಿಯನ್ನು ಗಮನಿಸಿದರೆ ಮತ್ತೊಮ್ಮೆ ಪರಿಶೀಲನೆ ನಡೆಸುವ ಅಗತ್ಯ ಇದೆ’ ಎಂದು ಅವರು ‘ಹಿಂದು ಬಿಸಿನೆಸ್ ಲೈನ್’ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರವು ಷೇರು ವಿಕ್ರಯದಿಂದ ₹ 78 ಸಾವಿರ ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ. ಇದಕ್ಕೆ ಪೂರಕವಾಗಿ ಎಲ್‌ಐಸಿಯಲ್ಲಿ ಹೊಂದಿರುವ ಷೇರುಗಳಲ್ಲಿ ಶೇಕಡ 5ರಷ್ಟನ್ನು ಮಾರಾಟ ಮಾಡುವ ಮೂಲಕ ₹ 63 ಸಾವಿರ ಕೋಟಿ ಸಂಗ್ರಹಿಸಲು ಮುಂದಾಗಿದೆ.

**ಮುಖ್ಯಾಂಶಗಳು**

- ಐಪಿಒ ಮೂಲಕ ₹ 63 ಸಾವಿರ ಕೋಟಿ ಸಂಗ್ರಹ ನಿರೀಕ್ಷೆ
- ಕೇಂದ್ರದ ಷೇರು ವಿಕ್ರಯ ಗುರಿ ಈಡೇರಿಕೆಗೆ ಹಿನ್ನಡೆ ಸಂಭವ

ಒಂದೊಮ್ಮೆ ಎಲ್‌ಐಸಿ ಐಪಿಒ ಅನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದೂಡಿದರೆ ಕೇಂದ್ರ ಸರ್ಕಾರದ ಷೇರುವಿಕ್ರಯದ ಗುರಿಯು ಭಾರಿ ಪ್ರಮಾಣದಲ್ಲಿ ತಪ್ಪಲಿದೆ.

ಐಪಿಒಗೆ ಅನುಕೂಲ ಮಾಡಿಕೊಡಲು ಎಲ್‌ಐಸಿಯಲ್ಲಿ ಶೇ 20ರವರೆಗೆ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ತಿದ್ದುಪಡಿಗೆ ಕೇಂದ್ರ ಸಚಿವ ಸಂಪುಟ ಈಚೆಗಷ್ಟೇ ಒಪ್ಪಿಗೆ ನೀಡಿದೆ.

### ರಷ್ಯಾ ಮೇಲೆ ಪಾಶ್ಚಿಮಾತ್ಯ ದೇಶಗಳ ನಿರ್ಬಂಧ

# ವಹಿವಾಟಿಗೆ ಧಕ್ಕೆ, ಬ್ಯಾಂಕ್‌ಗಳ ಆತಂಕ

ಮುಂಬೈ (ರಾಯಿಟರ್ಸ್): ರಷ್ಯಾದಿಂದ ಆಮದು ಮಾಡಿಕೊಂಡ ಉತ್ಪನ್ನಗಳಿಗೆ ಹಣವು ಪಾವತಿ ಆಗುತ್ತಿಲ್ಲದಿರುವುದು ಹಾಗೂ ರಷ್ಯಾಕ್ಕೆ ರಫ್ತು ಮಾಡಿದ ಉತ್ಪನ್ನಗಳಿಗೆ ಪ್ರತಿಯಾಗಿ ಹಣ ಬರದಿರುವುದು ಭಾರತದ ಬ್ಯಾಂಕ್‌ಗಳಿಗೆ ಸಮಸ್ಯೆ ಸೃಷ್ಟಿಸಿದೆ. ಪಾಶ್ಚಿಮಾತ್ಯ ದೇಶಗಳು ರಷ್ಯಾ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಿವೆ.

‘ಆರ್ಥಿಕ ನಿರ್ಬಂಧಗಳ ಕಾರಣದಿಂದಾಗಿ ಪಾವತಿಗಳು ಸ್ಥಗಿತಗೊಂಡಿವೆ. ಬ್ಯಾಂಕ್‌ಗಳಿಗೆ ಇದು ಈಗ ತಲೆಬಿಸಿಗೆ ಕಾರಣವಾಗಿದೆ. ಈ ವಿಚಾರವನ್ನು ಬ್ಯಾಂಕ್‌ಗಳು ಆರ್‌ಬಿಐ ಮತ್ತು ಉದ್ಯಮದ ಪ್ರತಿನಿಧಿಗಳ ಗಮನಕ್ಕೆ ತಂದಿವೆ’ ಎಂದು ಬ್ಯಾಂಕಿಂಗ್ ವಲಯದ ಮೂಲಗಳು ಹೇಳಿವೆ.

ಆರ್‌ಬಿಐ ಪ್ರತಿನಿಧಿಗಳು ದೇಶದ ಕೆಲವು ಆಯ್ದ ಬ್ಯಾಂಕ್ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಿದ್ದು, ದೇಶದ ಬ್ಯಾಂಕ್‌ಗಳು ರಷ್ಯಾ ಹಾಗೂ ಉಕ್ರೇನ್ ಜೊತೆ ಹೊಂದಿರುವ ವಹಿವಾಟಿನ ಪ್ರಮಾಣವನ್ನು, ಅದರಿಂದ ಬ್ಯಾಂಕ್‌ಗಳ ಮೇಲೆ ಆಗಬಹುದಾದ ಪರಿಣಾಮವನ್ನು ಅಂದಾಜಿಸಲು ಯತ್ನಿಸುತ್ತಿದ್ದಾರೆ ಎಂದು ಗೊತ್ತಾಗಿದೆ.

**ಮುಖ್ಯಾಂಶಗಳು**

- ಆರ್ಥಿಕ ನಿರ್ಬಂಧಗಳ ಕಾರಣದಿಂದಾಗಿ ಪಾವತಿಗಳು ಸ್ಥಗಿತ
- ಆಯ್ದ ಬ್ಯಾಂಕ್‌ಗಳ ಜೊತೆ ಆರ್‌ಬಿಐ ಪ್ರತಿನಿಧಿಗಳ ಮಾತುಕತೆ

ಸ್ಥಗಿತಗೊಂಡಿರುವ ಪಾವತಿಗಳ ಒಟ್ಟು ಮೊತ್ತ ಎಷ್ಟು ಎಂಬುದು ಸ್ಪಷ್ಟವಾಗಿಲ್ಲ. ಆರ್‌ಬಿಐ ಆ ಮೊತ್ತವನ್ನು ಅಂದಾಜು ಮಾಡುತ್ತಿದೆ. ವಾಣಿಜ್ಯ ವಹಿವಾಟಿಗೆ ಆಗಿರುವ ಅಡ್ಡಿಯ ಪರಿಣಾಮ ಏನು ಎಂಬುದನ್ನು ಅಂದಾಜಿಸಲು ಭಾರತೀಯ ಬ್ಯಾಂಕ್‌ಗಳ ಒಕ್ಕೂಟ ಕೂಡ ಕೆಲವು ಬ್ಯಾಂಕ್ ಪ್ರತಿನಿಧಿಗಳ ಜೊತೆ ಸೋಮವಾರ ಸಭೆ ನಡೆಸಿದೆ.

ಭಾರತದ ಕಾರ್ಪೊರೇಟ್ ಗ್ರಾಹಕರು ಉಕ್ರೇನ್ ಮತ್ತು ರಷ್ಯಾದ ಜೊತೆ ನಡೆಸುತ್ತಿರುವ ವಹಿವಾಟಿನ ಮೊತ್ತ ಎಷ್ಟು, ಸಂಘರ್ಷದ ಕಾರಣದಿಂದಾಗಿ ಅವರ ವಹಿವಾಟುಗಳಿಗೆ ಎಷ್ಟು ಧಕ್ಕೆ ಆಗಬಹುದು, ಅದರಿಂದ ಅವರ ಸಾಲ ಮರುಪಾವತಿ ವಿಳಂಬ ಆಗಬಹುದೇ ಎಂಬುದನ್ನು ತಿಳಿದುಕೊಳ್ಳಲು ಬ್ಯಾಂಕ್‌ಗಳು ಮುಂದಾಗಿವೆ.

ಭಾರತೀಯ ಸ್ಟೇಟ್ ಬ್ಯಾಂಕ್ ಸೇರಿದಂತೆ ಹಲವು ಬ್ಯಾಂಕ್‌ಗಳು ರಷ್ಯಾದ ಸಂಸ್ಥೆ, ಕಂಪನಿಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು ಸ್ಥಗಿತಗೊಳಿಸಿವೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 430-450 |
| ನಡುಗೋಲು | 500-550 |
| ರಾಶಿ | 600-650 |
| ರಾಶಿ ಉತ್ತಮ | 650-700 |
| ಜರಡಿ | 750-800 |
| ಹೆರಕಿದ್ದು | 1100-1150 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-950 |
| ಹಸಿರು ಅತಿ ಉತ್ತಮ | 1200-1250 |
| ಕಾಳು ಮೆಣಸು | 500 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಕಾರ್ಕಳ** | |
| ಹೊಸತು | 40000-44500 |
| ಹಳತು | 46000-53000 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 27500-45000 |
| **ಸಿದ್ದಾಪುರ** | |
| ಬಿಳಿಗೋಟು | 22699-29899 |
| ಚಾಲಿ | 40529-43099 |
| ಕೋಕ | 19880-28390 |
| ಹೊಸಚಾಲಿ | 36299-40480 |
| ಕೆಂಪುಗೋಟು | 28869-32689 |
| ರಾಶಿ | 44899-46780 |
| ತಟ್ಟಿಬೆಟ್ಟೆ | 35469-45699 |
| **ಶಿರಸಿ** | |
| ಬೆಟ್ಟೆ | 35421-44301 |
| ಬಿಳಿಗೋಟು | 22069-32099 |
| ಚಾಲಿ | 31299-41261 |
| ರಾಶಿ | 44419-47599 |
| **ಶಿವಮೊಗ್ಗ** | |
| ಬೆಟ್ಟೆ | 47400-51899 |
| ಗೊರಬಲು | 17060-33798 |
| ರಾಶಿ | 42099-45809 |
| ಸರಕು | 52009-75299 |
| **ಸಾಗರ** | |
| ಬಿಳಿಗೋಟು | 23129-29144 |
| ಚಾಲಿ | 32699-36889 |
| ಕೋಕ | 27221-31809 |
| ಕೆಂಪುಗೋಟು | 30899-36492 |
| ರಾಶಿ | 36786-45429 |
| ಸಿಪ್ಪೆಗೋಟು | 14881-18569 |
| **ರೇಷ್ಮೆಗೂಡು** | |
| ಮಿಶ್ರ ತಳಿ | 400-759 |
| ದ್ವಿತಳಿ | 536-900 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ ಮುದ್ರೆಮನೆ | ಹಾಸನ ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
|---|---|---|---|---|
| ಎಪಿ | 15900 | 15800 | --- | 236 ಸೆಂಟ್ಸ್ |
| ಎಸಿ | 7560 | 7600 | --- | |
| ಆರ್‌ಪಿ | 8000 | 8100 | --- | ಲಂಡನ್ |
| ಆರ್‌ಸಿ | 4030 | 3900 | --- | 2084 ಡಾಲರ್ಸ್ |

**ಮುಂಬೈ ಧಾರಣೆ**

**ಶೇಂಗಾ** 2-3-2022

| | |
|---|---|
| ಜಾವಾ 70/80(ಹೊಸ) | 10100-10200 |
| ಜಾವಾ 80/90(ಹೊಸ) | 9600-9700 |
| ದಪ್ಪ ಮಧ್ಯಪ್ರದೇಶ(ಹೊಸ) | 9600-9650 |
| ದಪ್ಪ ಗುಜರಾತ್(ಹೊಸ) | 8500-8600 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1550 (1550) |
| ಒಂದು ವಾರದ ಡೆಲಿವರಿ | 1545 (1545) |
| ಸೋಯಾ ಕಚ್ಚಾ | 1600 (1550) |
| ಪಾಮ್ ವಾರದ ಡೆಲಿವರಿ | 1560 (1518) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | --- (---) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ 51,120 (51,500)

ಬೆಳ್ಳಿ ಕೆ.ಜಿ 67,150 (66,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

GRT JEWELLERS Since 1964
ಉದ್ಯೋಗ ಅವಕಾಶಗಳು
1964 ರಿಂದ ಅತ್ಯಂತ ವಿಶ್ವಾಸಕ್ಕೆ ಪಾತ್ರವಾಗಿರುವ GRT ಜ್ಯುವೆಲ್ಲರ್ಸ್
ಕೆ.ಆರ್. ಪುರಂ, ಬೆಂಗಳೂರು
ಷೋರೂಂಗಳಿಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ. ಹೊಸದಾಗಿ ಕೆಲಸವನ್ನು ಹುಡುಕುತ್ತಿರುವ ಹಾಗೂ ಅನುಭವವಿರುವ ಅಭ್ಯರ್ಥಿಗಳು ತಮ್ಮ ಸ್ವವಿವರಗಳು ಹಾಗೂ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನಕಲು ಪ್ರತಿಯೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು.
ಸೇಲ್ಸ್‌ಮನ್ / ಸೇಲ್ಸ್‌ಗರ್ಲ್ಸ್
ಪದವೀಧರರು ಅಥವಾ PUC ಉತ್ತೀರ್ಣತೆ ಪಡೆದವರು (ಹೊಸಬರು ಅಥವಾ ಆಭರಣ ಮಾರಾಟ ಹಾಗೂ ಇತರೆ ರೀಟೈಲ್ ವಿಭಾಗದಲ್ಲಿ ಅನುಭವವಿರುವವರು)
ವಯೋಮಿತಿ : 22 ರಿಂದ 27 ವರ್ಷಗಳ ವರೆಗೆ
ಸೇಲ್ಸ್ ಅಸಿಸ್ಟೆಂಟ್ಸ್
PUC ಮತ್ತು 10ನೇ ತರಗತಿ (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು).
ವಯೋಮಿತಿ : 18 ರಿಂದ 22 ವರ್ಷಗಳ ವರೆಗೆ
ದಿನಾಂಕ ಮತ್ತು ಸಮಯ
03-03-2022, ಗುರುವಾರ ; 04-03-2022, ಶುಕ್ರವಾರ
(ಬೆಳಿಗ್ಗೆ 10.00 ರಿಂದ ಸಂಜೆ 5.00 ರ ವರೆಗೆ)
ಸಂದರ್ಶನದ ಸ್ಥಳ
ಕೆಆರ್ ಇನ್, ಕೃಷ್ಣರಾಜಪುರಂ
ನಂ. 16-17, ಎನ್.ಹೆಚ್-75, ಹಳೆಯ ಮದ್ರಾಸ್ ರಸ್ತೆ, ಕೆ.ಆರ್. ಪುರಂ, ಬೆಂಗಳೂರು - 560 036.
ಸಂಪರ್ಕ ಸಂಖ್ಯೆಗಳು : 96869 05786 96867 99888
ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.
ನಿಮ್ಮ ಸ್ವವಿವರಗಳನ್ನು (Resume) recruitment@grtjewels.comಗೆ ಕಳುಹಿಸಬಹುದು.

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

Drivers

ಉಬರ್ ಮತ್ತು ಓಲಾಗೆ ಚಾಲಕರು ಬೇಕಾಗಿದ್ದಾರೆ! ಪ್ರತಿ ತಿಂಗಳು ರೂ.30000/- ವರೆಗೆ ಗಳಿಸಬಹುದು. ಎವರೆಸ್ಟ್ ಫ್ಲೀಟ್: 080-47179009 ಅನ್ನು ಸಂಪರ್ಕಿಸಿ .

General

NGO ದಲ್ಲಿ ಪೂರ್ಣ ಅವಧಿ ಕಾರ್ಯನಿರ್ವಹಿಸಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ: 1.ಕ್ಷೇತ್ರ ಸಂಘಟರು(Field Organizer): ಕ್ಷೇತ್ರ ಭೇಟಿಯ ಜೊತೆಗೆ (slums) ಸರ್ಕಾರಿ ಹಾಗೂ ಇತರೆ ಸಂಸ್ಥೆಗಳೊಂದಿಗೆ ಸಮನ್ವಯ ಮಾಡಿಕೊಂಡು ಹೋಗುವುದು. 12 ನೇ ತರಗತಿ ಅಥವಾ ಪದವಿ ಮುಗಿಸಿರಬೇಕು, ಕಂಪ್ಯೂಟರ್ ಬಗ್ಗೆ ತಿಳುವಳಿಕೆ ಇರಬೇಕು, ಕ್ಷೇತ್ರ ಭೇಟಿ ಮಾಡಲು ಸಿದ್ಧರಿರುವ, ಕನ್ನಡ, ತಮಿಳು ಹಾಗೂ ಹಿಂದಿ ಭಾಷೆಯು ತಿಳಿದಿರಬೇಕು. 2-3 ವರ್ಷ ಅನುಭವ ಇರುವವರಿಗೆ ಪ್ರಥಮ ಆದ್ಯತೆ. 2.ತರಬೇತಿದಾರರು(Trainer): ಸ್ಲಂ ನಲ್ಲಿರುವ ಮಹಿಳೆಯರಿಗೆ ಸರಳ ಭಾಷೆಯಲ್ಲಿ ತರಬೇತಿ ನೀಡಲು ಸಕ್ಷಮರಿರುವ 12 ನೇ ತರಗತಿ ಅಥವಾ ಪದವಿ ಮುಗಿಸಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ, 2-3 ವರ್ಷಗಳ ಅನುಭವ ಇರುವವರಿಗೆ ಮೊದಲ ಆದ್ಯತೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ: 6362602364, 07926587725. Email: info@mahilahsg.org

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ /ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ot 17800/- 68000/- 8884666597, 8884666594.

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ- 15000 to 28000 ಸಂಪರ್ಕಿಸಿರಿ 8904879948/ 8904879491

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

Wanted

ಶ್ರೀ ಶಕ್ತಿ ಹೆಲ್ತ್ ಕೇರ್ ಯುವಕ-ಯುವತಿಯರು Helper ಕೆಲಸಕ್ಕೆ ಬೇಕಾಗಿದ್ದಾರೆ. ತಿಂಗಳಿಗೆ ವೇತನ 10,000/- ರಿಂದ 12,000 ಊಟ ವಸತಿಯೊಂದಿಗೆ ಕೆಲಸ ಖಾಲಿ ಇದೆ.ಸ್ಥಳ: ಶೇಷಾದ್ರಿಪುರಂ, ಬೆಂಗಳೂರು- 90196 26612

ಪ್ರವಾಸ

Travel

27.04.2022ರಿಂದ ರೈಲು/ಏಸಿ ಬಸ್ಸಿನಲ್ಲಿ 35/22ದಿನಗಳ 'ಚಾರೋಧಾಮ್'ಸಮೇತ ವೈಷ್ಣೋದೇವಿ, ಕೋಲ್ಕತ್ತಾ, ಪುರಿ,ಅಮೃತಸರ್,ಕಾಶಿ, ಗಯಾ,ಹರಿದ್ವಾರ್. 28.05.2022ರಿಂದ ವಿಮಾನ/ಬಸ್ಸಿನಲ್ಲಿ 13ದಿನಗಳ 'ಚಾರೋಧಾಮ್',ಮಸ್ಸೂರಿ, ಗುಪ್ತಕಾಶಿ,ನವದೆಹಲಿ, ಹರಿದ್ವಾರ್. ಜೂನ್/ಜುಲೈ ತಿಂಗಳಲ್ಲಿ ಅಮರನಾಥ್ ಸಮೇತ,ಕಾಶ್ಮೀರ್,ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ,ಹರಿದ್ವಾರ್ 19ದಿನಗಳು. ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್,#164, ಆರ್.ವಿ.ರಸ್ತೆ (ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:8105657052, 9480182865. 08026565085.

22-03-2022 ಕಾಶಿ, ಪ್ರಯಾಗ್ ರಾಜ್, ಗಯಾ, 21-04-2022 ದೆಹಲಿ, ಆಗ್ರಾ, ಅಮೃತ್‌ಸರ್, ವೈಷ್ಣೋದೇವಿ, ಹರಿದ್ವಾರ, ಕಾಶಿ, ಗಯಾ,8-5-2022 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್. 26-6-2022 ಅಮರ್‌ನಾಥ್ ಯಾತ್ರೆ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ASTRO YATRA

ಓಂ ದುರ್ಗಾ ಅಂಜನ ಜ್ಯೋತಿಷ್ಯ ಮತ್ತು ವಾಸ್ತು ಕೇಂದ್ರ
OM DURGA ANJANAM ASTRO & VASTU CENTRE
ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್
ಯೋಗಿ. ಶ್ರೀದೇವಾನಂದನ್ ರವರಿಂದ
ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ, ಸುಖ ಶಾಂತಿ ನೆಮ್ಮದಿಗಾಗಿ, ಸಿರಿಸಂಪತ್ತು ಸ್ತ್ರೀ–ಪುರುಷ,ದಾಂಪತ್ಯ, ಮದುವೆ, ಸಂತಾನ, ಆರೋಗ್ಯಕ್ಕೆ ಬೇಕಾಗುವ ಸರ್ವಮನ ಇಚ್ಛ ಅತೀಘೋರ ನೀಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ, ಆಕರ್ಷಣ ಸಂಮ್ಮೋಹನ, ದುಷ್ಟಶಕ್ತಿಗಳು ಉದ್ವಾಟನೆ, ಶತೃ ಸಂಬಂದಿತ ಮಾಟ ದೃಷ್ಟಿಶಾಪಗಳಿಗೆ ಇಂದೇ ಪರಿಹಾರಕ್ಕೆ ಸಂಪರ್ಕಿಸಿ.
8217437023 / 9845005009
#36, ಎಸ್.ವಿ ಕಾಂಪ್ಲೆಕ್ಸ್, ಅಗ್ರಹಾರ ದಾಸರಹಳ್ಳಿ, ಮಾಗಡಿ ರಸ್ತೆ, ಬೆಂ–40

23.03.2022,19.04.2022, 18.05.2022 ಶ್ರೀಲಂಕಾ 8ದಿನಗಳು.18.03.2022, 12.04.2022, 11:05.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 20.03.2022, 03.04.2022 ಗುಜರಾತ್ 8ದಿನಗಳು.21.03.2022, 12.04.2022, 27.04.2022, 23.05.2022 ಶಿಮ್ಲಾ, ಕುಲುಮನಾಲಿ 7ದಿನಗಳು. 11.03.2022, 19.04.2022 ದೆಹಲಿ, ಆಗ್ರಾ,ಜೈಪುರ, 6ದಿನಗಳು. 18.03.2022,22.04.2022, 16.05.2022 ರಾಮೇಶ್ವರ, ಕನ್ಯಾಕುಮಾರಿ 5ದಿನಗಳು. ಮಲೆನಾಡು ಪ್ರವಾಸ 3ದಿನಗಳು. ಇದಲ್ಲದೆ ಕಸ್ಟಮೈಸ್ ಫ್ಯಾಮಿಲಿ ಪ್ರವಾಸ ಹಾಗೂ ಇತರ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248, 7022547922, 9342483417

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ನೈಮಿಶಾರಣ್ಯ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ/ ಹಾಗು ಜುಲೈ, ಅಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

13.05.2022 12/16 ದಿನಗಳು ಸಿಮ್ಲಾ,ಕುಲುಮನಾಲಿ, ವೈಷ್ಣೋದೇವಿ,ಸಪ್ತಶಕ್ತಿಪೀಠಗಳು, 17.03.2022 3 ದಿನಗಳು ತಿರುನಲ್ಲಾರು,ನವಗ್ರಹ ದೇವಸ್ಥಾನ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809/ 9902433500

ಭವಿಷ್ಯ

Astrology

ಸ್ತ್ರೀ-ವಶೀಕರಣ, ಪುರುಷ -ವಶೀಕರಣ, ಮಾಟ-ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ-ಭವಿಷ್ಯ, ಖಚಿತ- ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ : ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಬ್ರಹ್ಮಜ್ಞಾನ ಪಂಡಿತ ಶಂಕರ್ ಗುರೂಜಿ ಪ್ರಖ್ಯಾತ ವಾಸ್ತು ಜ್ಯೋತಿಷ್ಯರು ಪ್ರೀತಿಯಲ್ಲಿ ನಂಬಿ ಮೋಸ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರುಕಾಟ ಆಸ್ತಿಯಲ್ಲಿ ಕಿರಿಕಿರಿ ಪ್ರಯೋಗ ನಿಮ್ಮ ಜೀವನದ ಯಾವುದೇ ಕಠಿಣ ಹಾಗೂ ಗುಪ್ತ ಸಮಸ್ಯೆಗಳಿಗೆ ಸಂಪರ್ಕಿಸಿ 9845167316

‖ಉಚಿತ ಭವಿಷ್ಯ‖: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಪವನ್‌ಭಟ್. 8095569819

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಉತ್ತರ ಪ್ರದೇಶ: ಪಕ್ಷಾಂತರಿಗಳಿಂದ ಬಹುಜನ ಸಮಾಜ ಪಕ್ಷಕ್ಕೆ ಪೆಟ್ಟು • ಐದೂ ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ

# ಅಂಬೇಡ್ಕರ್ ನಗರ ವಶಕ್ಕೆ ಬಿಎಸ್‌ಪಿ ಯತ್ನ

ಅಂಬೇಡ್ಕರ್ ನಗರ (ಉತ್ತರ ಪ್ರದೇಶ) (ಪಿಟಿಐ): ಮಾಯಾವತಿ ನೇತೃತ್ವದ ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ಅಂಬೇಡ್ಕರ್ ನಗರ ಜಿಲ್ಲೆಯ ಐದೂ ವಿಧಾನಸಭಾ ಕ್ಷೇತ್ರಗಳನ್ನು ಮತ್ತೆ ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಭಾರಿ ಸವಾಲು ಎದುರಿಸುತ್ತಿದೆ. ಪಕ್ಷದ ಹಿರಿಯ ಮುಖಂಡರು ಸಮಾಜವಾದಿ ಪಕ್ಷಕ್ಕೆ ವಲಸೆ ಹೋಗಿರುವುದರಿಂದ ಬಿಎಸ್‌ಪಿಗೆ ಇಲ್ಲಿ ಅಗ್ನಿಪರೀಕ್ಷೆ ಎದುರಾಗಿದೆ.

1995ರಲ್ಲಿ ಮಾಯಾವತಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಈಗ ಅಯೋಧ್ಯೆ ಎಂದು ಕರೆಯಲಾಗುವ ಅಂದಿನ ಫೈಜಾಬಾದ್‌ನಿಂದ ಬೇರ್ಪಡಿಸಿ, ಅಂಬೇಡ್ಕರ್‌ನಗರ ಜಿಲ್ಲೆಯನ್ನು ಹೊಸದಾಗಿ ಸೃಷ್ಟಿಸಿದ್ದರು. ಸಾಕಷ್ಟು ವರ್ಷಗಳ ಕಾಲ ಮಾಯಾವತಿ ಅವರ ಕೋಟೆ ಎಂದೇ ಕರೆಯಿಸಿಕೊಂಡಿದ್ದ ಈ ಜಿಲ್ಲೆಯ ಮೇಲೆ ಕಳೆದ ಎರಡು ಚುನಾವಣೆಗಳಲ್ಲಿ ಎಸ್‌ಪಿ ಹಾಗೂ ಬಿಜೆಪಿ ಹಿಡಿತ ಸಾಧಿಸಿದ್ದವು.

2012ರ ಚುನಾವಣೆಯಲ್ಲಿ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಕಥೇರಿ, ಅಕ್ಬರಪುರ, ಜಲಾಲಪುರ, ತಾಂಡಾ ಮತ್ತು ಅಲಾಪುರ ವಿಧಾನಸಭಾ ಕ್ಷೇತ್ರಗಳಿಂದ ಬಿಎಸ್‌ಪಿಯನ್ನು ಸಮಾಜವಾದಿ ಪಕ್ಷ ಹೊರಗಟ್ಟಿತ್ತು. ಆದರೆ 2017ರಲ್ಲಿ ಈ ಸಮೀಕರಣ ಬದಲಾಯಿತು. ಐದರ ಪೈಕಿ ಬಿಜೆಪಿ ಎರಡು ಕ್ಷೇತ್ರಗಳನ್ನು ಗೆದ್ದುಕೊಂಡಿತು. ಉಳಿದ ಮೂರು ಮಾಯಾವತಿ ಅವರ ಪಕ್ಷದ ಪಾಲಾದವು.

ಈ ಬಾರಿಯ ಚುನಾವಣೆಗೂ ಮುನ್ನ ಬಿಎಸ್‌ಪಿಗೆ ದೊಡ್ಡ ಹೊಡೆತ ನೀಡಿದ್ದು ಲಾಲ್‌ಜಿ ವರ್ಮಾ, ರಾಮ್ ಅಚಲ್ ರಾಜ್‌ಭರ್ ಮತ್ತು ರಾಕೇಶ್ ಪಾಂಡೆ ಅವರ ಪಕ್ಷಾಂತರ. ಈ ಮೂವರೂ ಈ ಬಾರಿ ಸಮಾಜವಾದಿ ಪಕ್ಷದ ಟಿಕೆಟ್‌ನಡಿ ಸ್ಪರ್ಧಿಸುತ್ತಿದ್ದಾರೆ. ಬಿಎಸ್‌ಪಿಗೆ ದ್ರೋಹ ಬಗೆದು ಹೊರಹೋಗಿರುವ ಮುಖಂಡರಿಂದ ಪಕ್ಷಕ್ಕೆ ಯಾವುದೇ ನಷ್ಟ ಉಂಟಾಗುವುದಿಲ್ಲ ಎಂದು ಬಿಎಸ್‌ಪಿ ಹೇಳಿಕೊಂಡಿದೆ. ರಾಜ್ಯದಲ್ಲಿ ಬಿಜೆಪಿಯನ್ನು ಬುಡಸಮೇತ ಕಿತ್ತು ಹಾಕಲುಸಮಾಜವಾದಿಗಳು ಹಾಗೂ ಅಂಬೇಡ್ಕರ್‌ವಾದಿಗಳು ಕೈಜೋಡಿಸಿದ್ದಾರೆ ಎಂದು ಅಖಿಲೇಶ್ ಪ್ರತಿಪಾದಿಸಿದ್ದಾರೆ.

ಲಾಲ್‌ಜಿ ವರ್ಮಾ ಅವರು ಕಥೇರಿ ಕ್ಷೇತ್ರದಲ್ಲಿ ಬಿಎಸ್‌ಪಿಯ ಪ್ರತೀಕ್ ಪಾಂಡೆ ಅವರಿಗೆ ಸವಾಲೊಡ್ಡಿದ್ದಾರೆ. ಬಿಜೆಪಿ ತನ್ನ ಮಿತ್ರಪಕ್ಷವಾದ ನಿಶಾದ್ ಪಕ್ಷಕ್ಕೆ ಈ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದು, ಅವದೀಶ್ ಕುಮಾರ್ ಮೈತ್ರಿಕೂಟದ ಅಭ್ಯರ್ಥಿಯಾಗಿ ಇಲ್ಲಿಂದ ಕಣಕ್ಕಿಳಿದಿದ್ದಾರೆ.

ಅಕ್ಬರ್‌ಪುರದಿಂದ ರಾಮ್ ಅಚಲ್ ರಾಜ್‌ಭರ್ ಅವರು ಕಣಕ್ಕಿಳಿದಿದ್ದಾರೆ. ಚಂದ್ರಪ್ರಕಾಶ್ ವರ್ಮಾ ಅವರಿಗೆ ಬಿಎಸ್‌ಪಿ ಟಿಕೆಟ್ ನೀಡಿದೆ. ಧರ್ಮರಾಜ್ ನಿಶಾದ್ ಅವರನ್ನು ಬಿಜೆಪಿ ಹೆಸರಿಸಿದೆ.

ಅಂಬೇಡ್ಕರ್ ನಗರದ ಮಾಜಿ ಸಂಸದ ರಾಕೇಶ್ ಪಾಂಡೆ ಅವರು ಜಲಾಲ್‌ಪುರದಿಂದ ಎಸ್‌ಪಿ ಟಿಕೆಟ್‌ನಡಿ ಸ್ಪರ್ಧೆಗಿಳಿದಿದ್ದಾರೆ. ಇವರು ಕಳೆದ ಬಾರಿ ಬಿಎಸ್‌ಪಿಯಿಂದ ಗೆದ್ದಿದ್ದರು. ಈ ಬಾರಿ ಬಿಎಸ್‌ಪಿಯ ರಾಜೇಶ್ ಸಿಂಗ್ ಹಾಗೂ ಬಿಜೆಪಿಯ ಸುಭಾಷ್ ರಾಯ್ ಅವರಿಂದ ಸ್ಪರ್ಧೆ ಎದುರಿಸುತ್ತಿದ್ದಾರೆ. ತಾಂಡಾ ಹಾಗೂ ಅಲಾಪುರದಲ್ಲಿ ಎಸ್‌ಪಿ, ಬಿಎಸ್‌ಪಿ ಹಾಗೂ ಬಿಜೆಪಿ ತೀವ್ರ ಸ್ಪರ್ಧೆ ಒಡ್ಡಿವೆ. ಈ ಎಲ್ಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಜಿಲ್ಲೆಯ ಎಲ್ಲ ಕ್ಷೇತ್ರಗಳನ್ನೂ ಬಿಜೆಪಿ ಗೆದ್ದುಕೊಳ್ಳಲಿದೆ ಎಂದು ಬಿಜೆಪಿ ಅಭ್ಯರ್ಥಿ ಸುಭಾಷ್ ಚಂದ್ರ ರಾಯ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಮುಖ್ಯಾಂಶಗಳು**

- ಜಿಲ್ಲೆಯ ಐದೂ ಕ್ಷೇತ್ರಗಳ ಚುನಾವಣೆ ಗುರುವಾರ (ಮಾ.3) ನಡೆಯಲಿದೆ
- ಅಂಬೇಡ್ಕರ್ ನಗರ ಕ್ಷೇತ್ರವನ್ನು ಮಾಯಾವತಿ ಆರು ಬಾರಿ ಪ್ರತಿನಿಧಿಸಿದ್ದಾರೆ

**ಕಳೆದ ಚುನಾವಣೆಗೆ ಹೋಲಿಸಿದರೆ ಈ ಬಾರಿ ನನ್ನ ಗೆಲುವಿನ ಅಂತರ 25,000 ಮತಗಳಿಗಿಂತ ಹೆಚ್ಚಿರಲಿದೆ. ಎಸ್‌ಪಿ ಈ ಬಾರಿ ಸರ್ಕಾರ ರಚಿಸುವುದರಲ್ಲಿ ಅನುಮಾನವಿಲ್ಲ**

**ಲಾಲ್‌ಜಿ ವರ್ಮಾ,** ಎಸ್‌ಪಿ ಅಭ್ಯರ್ಥಿ

ಬಿಎಸ್‌ಪಿ ಸಮಾವೇಶವೊಂದರಲ್ಲಿ ಸೇರಿರುವ ಕಾರ್ಯಕರ್ತರು–ಪಿಟಿಐ ಚಿತ್ರ

## ‘ಯಾವುದೇ ಅಲೆ ಕಾಣಿಸುತ್ತಿಲ್ಲ’

‘ಹಿರಿಯ ಮುಖಂಡ ಲಾಲ್‌ಜಿ ವರ್ಮಾ ಅವರು ಚುನಾವಣೆ ಹೊಸ್ತಿಲಲ್ಲಿ ಸಮಾಜವಾದಿ ಪಕ್ಷಕ್ಕೆ ಸೇರಿರುವುದರಿಂದ ಜಿಲ್ಲೆಯಲ್ಲಿ ಪಕ್ಷವು ಎಲ್ಲರಿಗಿಂತ ಸ್ವಲ್ಪ ಮುನ್ನಡೆ ಕಾಣಬಹುದು’ ಎಂದು ಔಷಧ ವ್ಯಾಪಾರಿ ಮೋನು ಸಿಂಗ್ ಎಂಬುವರು ಅಭಿಪ್ರಾಯಪಟ್ಟಿದ್ದಾರೆ. ಕ್ಷೇತ್ರದಲ್ಲಿ ಎಸ್‌ಪಿ ಪ್ರಬಲವಾಗಿದೆ ಎಂದು ಭೀಟಿ ಪ್ರದೇಶದ ನಿವಾಸಿ ಭಾಸ್ಕರ್ ಸಿಂಗ್ ಹೇಳುತ್ತಾರೆ. ಎಸ್‌ಪಿ, ಬಿಎಸ್‌ಪಿ ಹಾಗೂ ಬಿಜೆಪಿ ಸ್ಪರ್ಧೆಯಿಂದ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ ಎಂದು ಮತ್ತೊಬ್ಬ ನಿವಾಸಿ ಲವಕುಶ್ ಶ್ರೀವಾಸ್ತವ್ ಅಭಿಪ್ರಾಯಪಟ್ಟಿದ್ದಾರೆ. ‘2014, 2017 ಹಾಗೂ 2019ರ ಚುನಾವಣೆಗಳಲ್ಲಿ ಬಿಜೆಪಿ ಗೆಲುವಿಗೆ ಕಾರಣವಾಗಿದ್ದ ಯಾವುದೇ ಅಲೆಯನ್ನು ನಾನು ಈ ಬಾರಿ ನೋಡಿಲ್ಲ’ ಎಂದು ಅವರು ಹೇಳಿದ್ದಾರೆ.

## ಉತ್ತರ ಪ್ರದೇಶ: ಆರನೇ ಹಂತದ ಮತದಾನ ಇಂದು

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಆರನೇ ಹಂತದ ಮತದಾನ ಗುರುವಾರ ನಡೆಯಲಿದೆ. 10 ಜಿಲ್ಲೆಗಳ 57 ಕ್ಷೇತ್ರಗಳಲ್ಲಿ 676 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕಾಂಗ್ರೆಸ್ ನಾಯಕ ಅಜಯ್ ಕುಮಾರ್ ಲಲ್ಲು, ಎಸ್‌ಪಿ ಅಭ್ಯರ್ಥಿ ಸ್ವಾಮಿ ಪ್ರಸಾದ್ ಮೌರ್ಯ ಸೇರಿ ಹಲವರ ಭವಿಷ್ಯ ನಿರ್ಧಾರವಾಗಲಿದೆ.

ಅಂಬೇಡ್ಕರ್ ನಗರ, ಬಲರಾಮ್‌ಪುರ, ಸಿದ್ಧಾರ್ಥ್‌ನಗರ, ಬಸ್ತಿ, ಸಂತ ಕಬೀರ್ ನಗರ, ಮಹಾರಾಜ್‌ಗಂಜ್, ಗೋರಖಪುರ, ಕುಶೀನಗರ, ದೇವರಿಯಾ ಮತ್ತು ಬಲ್ಲಿಯಾ ಜಿಲ್ಲೆಗಳಲ್ಲಿ ಮತದಾನ ನಡೆಯಲಿದೆ.

ಯೋಗಿ ಆದಿತ್ಯನಾಥ

57 ಕ್ಷೇತ್ರಗಳಲ್ಲಿ 11 ಮೀಸಲು ಕ್ಷೇತ್ರಗಳಿವೆ. ಇಲ್ಲಿ ಬಿಜೆಪಿಗೆ ಕಠಿಣ ಸ್ಪರ್ಧೆ ಇದೆ ಎನ್ನಲಾಗಿದೆ. ಸುಮಾರು 2.14 ಕೋಟಿ ಮತದಾರರು ಮತ ಚಲಾಯಿಸಲಿದ್ದಾರೆ.

ಗೋರಖ್‌ಪುರ ನಗರ ಕ್ಷೇತ್ರದಲ್ಲಿ ಯೋಗಿ ಆದಿತ್ಯನಾಥ ಅವರ ಎದುರು ಸಮಾಜವಾದಿ ಪಕ್ಷದಿಂದ, ಬಿಜೆಪಿಯ ಮಾಜಿ ನಾಯಕ ಉಪೇಂದ್ರ ದತ್ತ ಶುಕ್ಲಾ ಅವರ ಪತ್ನಿ ಸ್ಪರ್ಧಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಇಟ್ಟಿಗೆಯ ಭಟ್ಟಿಯಲ್ಲಿ ಬದುಕು ಬೇಯಿಸುತ್ತ...
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್. ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ

## ಸ್ಥಳೀಯಾಡಳಿತ: ವಿಪಕ್ಷಗಳನ್ನು ಕಿತ್ತೊಗೆದ ಟಿಎಂಸಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ) 102 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಭಾರಿ ಜಯ ಸಾಧಿಸಿದೆ ಎಂದು ರಾಜ್ಯ ಚುನಾವಣಾ ಆಯೋಗದ ಅಧಿಕಾರಿ ತಿಳಿಸಿದ್ದಾರೆ.

ರಾಜ್ಯದ 108 ನಗರ ಸಭೆ ಕ್ಷೇತ್ರಗಳಿಗೆ ಚುನಾವಣೆ ನಡೆದಿತ್ತು. ಬಿಜೆಪಿ ಯಾವುದೇ ಸ್ಥಾನ ಗೆದ್ದಿಲ್ಲ. ಕಾಂಗ್ರೆಸ್ ಕೂಡ ಒಂದೂ ಸ್ಥಾನ ಗೆದ್ದಿಲ್ಲ. 27 ನಗರಸಭೆಗಳ ಎಲ್ಲಾ ವಾರ್ಡ್‌ಗಳನ್ನು ಟಿಎಂಸಿ ಗೆಲ್ಲುವ ಮೂಲಕ, ಅಲ್ಲಿ ವಿರೋಧ ಪಕ್ಷವೇ ಇಲ್ಲದಂತಹ ಸ್ಥಿತಿಯನ್ನು ನಿರ್ಮಾಣವಾಗಿದೆ.

ಟಿಎಂಸಿ 102 ಸ್ಥಾನ, ಎಡರಂಗ ಒಂದು ಸ್ಥಾನ ಮತ್ತು ಹಮ್ರೊ ಪಕ್ಷ ಒಂದು ಸ್ಥಾನ ಗೆದ್ದಿದೆ. ನಾಲ್ಕು ನಗರ ಸಭೆಗಳಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಬಿಜೆಪಿಯ ಪ್ರಮುಖ ನಾಯಕ, ನಂದಿಗ್ರಾಮದ ಶಾಸಕ ಸುವೇಂದು ಅಧಿಕಾರಿ ಅವರ ಭದ್ರಕೋಟೆ ಕಾಂತಿ ನಗರ ಸಭೆಯಲ್ಲೂ ಟಿಎಂಸಿ ಜಯಗಳಿಸಿದೆ.

ಕಾರುಗಳು ಜಖಂ • ಬಿಜೆಪಿ ಕಾರ್ಯಕರ್ತರಿಂದ ಹಲ್ಲೆ ಆರೋಪ

# ಮೌರ್ಯ ಬೆಂಬಲಿಗರ ಮೇಲೆ ದಾಳಿ

ಗೋರಖಪುರ (ಪಿಟಿಐ): ಚುನಾವಣಾ ಪ್ರಚಾರದ ವೇಳೆ ಬಿಜೆಪಿ ಕಾರ್ಯಕರ್ತರು ತಮ್ಮ ಬೆಂಬಲಿಗರ ಮೇಲೆ ದಾಳಿ ನಡೆಸಿದ್ದಾರೆ ಎಂದು ಉತ್ತರ ಪ್ರದೇಶದ ಮಾಜಿ ಸಚಿವ ಸ್ವಾಮಿ ಪ್ರಸಾದ್ ಮೌರ್ಯ ಆರೋಪಿಸಿದ್ದಾರೆ. ಬಿಜೆಪಿ ತೊರೆದಿದ್ದ ಮೌರ್ಯ ಅವರು ಈ ಬಾರಿಯ ಚುನಾವಣೆಯಲ್ಲಿ ಫಜಿಲ್‌ನಗರ ಕ್ಷೇತ್ರದಿಂದ ಎಸ್‌ಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

ಸ್ವಾಮಿಪ್ರಸಾದ್ ಮೌರ್ಯ ಅವರ ಪುತ್ರಿ ಮತ್ತು ಬಿಜೆಪಿ ಸಂಸದೆ ಸಂಘಮಿತ್ರ ಮೌರ್ಯ ಅವರೂ ಸಹ ತಮ್ಮ ತಂದೆ ಮಾಡಿರುವ ಆರೋಪಕ್ಕೆ ದನಿ ಗೂಡಿಸಿದ್ದಾರೆ. ತಮ್ಮ ತಂದೆಯ ಪರವಾಗಿ ಮೂರ್ನಾಲ್ಕು ದಿನಗಳಿಂದ ಚುನಾವಣಾ ಪ್ರಚಾರದಲ್ಲಿ ತೊಡಗಿರುವ ಸಂಘಮಿತ್ರ ಅವರು ಘಟನೆಯನ್ನು ಖಂಡಿಸಿದ್ದಾರೆ.

ಈ ದಾಳಿಯನ್ನು ಖಂಡಿಸಿರುವ ಅಖಿಲೇಶ್ ಯಾದವ್, ‘ಬಾಕಿ ಉಳಿದಿರುವ ಎರಡು ಹಂತಗಳ ಮತದಾನದಲ್ಲಿ ಬಿಜೆಪಿಗೆ ಒಂದೂ ಸ್ಥಾನ ಸಿಗದಂತೆ ಮಾಡುತ್ತೇವೆ’ ಎಂದು ಪ್ರತಿಜ್ಞೆ ಮಾಡಿದ್ದಾರೆ.

ಘಟನೆಯ ಬಗ್ಗೆ ಕುಷಿನಗರ ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ. ‘ಪುಲ್ವಾರಿಯಾದಲ್ಲಿ ಬಿಜೆಪಿ ಬೆಂಬಲಿಗರು ಮೆರವಣಿಗೆ ಹೋಗುತ್ತಿದ್ದ ಸ್ಥಳವನ್ನು, ಮೌರ್ಯ ಅವರ 25 ಬೆಂಬಲಿಗರ ಗುಂಪು ಸಮೀಪಿಸಿತು. ಈ ವೇಳೆ ಘೋಷಣೆಗಳನ್ನು ಕೂಗಲಾಯಿತು. ಕಲ್ಲು ತೂರಾಟ ನಡೆದಿರುವುದು ವಿಡಿಯೊಗಳಲ್ಲಿ ದಾಖಲಾಗಿದೆ. ಮೌರ್ಯ ಅವರ ಬೆಂಗಾವಲು ವಾಹನಗಳು ಜಖಂಗೊಂಡಿವೆ’ ಎಂದು ಅವರು ತಿಳಿಸಿದ್ದಾರೆ.

ಎರಡೂ ಕಡೆಗಳಿಂದ ದೂರು ಸಲ್ಲಿಕೆಯಾಗಿದ್ದು, ಘಟನೆಯ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಬಿಜೆಪಿ ಕಾರ್ಯಕರ್ತರು ಮೆರವಣಿಗೆ ನಡೆಸಲು ಮೊದಲು ಅನುಮತಿ ನೀಡಲಾಗಿತ್ತು. ಮೆರವಣಿಗೆಗೆ ಅವರು ಅನುಮತಿ ಪಡೆದಿದ್ದರು. ಎಸ್‌ಪಿ ಅಭ್ಯರ್ಥಿಯ ವಾಹನದ ಜೊತೆ ಕೇವಲ ಒಂದು ವಾಹನ ಸಂಚರಿಸುವಂತೆ ಸೂಚಿಸಲಾಗಿತ್ತು.

‘ವಿಷುಪುರ ಖಾನ್ವಾ ಪಟ್ಟಿ ಗ್ರಾಮದ ಬಳಿ ರೋಡ್‌ಶೋ ನಡೆಸುತ್ತಿದ್ದಾಗ ಬಿಜೆಪಿ ಕಾರ್ಯಕರ್ತರು ಲಾಠಿ, ಕಲ್ಲುಗಳಿಂದ ತಮ್ಮ ಕಾರ್ಯಕರ್ತರ ಮೇಲೆ ದಾಳಿ ನಡೆಸಿದರು. ಹಲವರು ಗಾಯಗೊಂಡಿದ್ದಾರೆ. ಕೆಲವು ವಾಹನಗಳಿಗೆ ಹಾನಿಯಾಗಿದೆ’ ಎಂದು ಮೌರ್ಯ ಆರೋಪಿಸಿದ್ದಾರೆ. ಈ ದಾಳಿಯಲ್ಲಿ ತಮ್ಮ ವಾಹನದ ಚಾಲಕನ ಕಿವಿಗೆ ಪೆಟ್ಟು ಬಿದಿದೆ ಎಂದು ಅವರು ಹೇಳಿದ್ದಾರೆ. ಮೌರ್ಯ ಅವರಿಗೆ ಯಾವುದೇ ಗಾಯಗಳಾಗಿಲ್ಲ.

ಮೌರ್ಯ ಅವರು ಸ್ಪರ್ಧಿಸಿರುವ ಫಜಿಲ್‌ನಗರ ಕ್ಷೇತ್ರದಲ್ಲಿ ಮಾರ್ಚ್ 3ರಂದು ಮತದಾನ ನಡೆಯಲಿದೆ. ಚುನಾವಣಾ ಪ್ರಚಾರಕ್ಕೆ ಮಂಗಳವಾರ ಕೊನೆಯ ದಿನವಾಗಿತ್ತು.

**ಈ ದಾಳಿ ಪೂರ್ವ ನಿಯೋಜಿತ ಸಂಚು. ಬಿಜೆಪಿ ಕಾರ್ಯಕರ್ತರು ಶಸ್ತ್ರಾಸ್ತ್ರ, ಕಟ್ಟಿಗೆ, ಕಲ್ಲುಗಳಿಂದ ಯೋಜಿತ ರೀತಿಯಲ್ಲಿ ದಾಳಿ ನಡೆಸಿದರು. ನೂರಾರು ಜನರನ್ನು ಥಳಿಸಲಾಗಿದೆ**

**ಸ್ವಾಮಿ ಪ್ರಸಾದ್ ಮೌರ್ಯ**
ಎಸ್‌ಪಿ ಅಭ್ಯರ್ಥಿ

**ಘಟನೆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ನಿರೀಕ್ಷಿಸುವುದರಲ್ಲಿ ಅರ್ಥವಿಲ್ಲ. ನಮ್ಮ ಕಾರ್ಯಕರ್ತರು, ಮುಖಂಡರ ಮೇಲೆ ಇದೇ ರೀತಿಯ ಹಲವು ದಾಳಿಗಳಾಗಿವೆ**

**ಅಖಿಲೇಶ್ ಯಾದವ್,**
ಎಸ್‌ಪಿ ಮುಖ್ಯಸ್ಥ

**ಘಟನೆ ತಿಳಿದು ಫಜಿಲ್‌ನಗರಕ್ಕೆ ಬರುವಾಗ, ನಾನು ಬಿಜೆಪಿ ಸಂಸದೆ ಎಂಬುದನ್ನೂ ಪರಿಗಣಿಸದೆ ನನ್ನ ಕಾರನ್ನು ಬಿಜೆಪಿ ಕಾರ್ಯಕರ್ತರು ಸುತ್ತುವರಿದಿದ್ದರು**

**ಸಂಘಮಿತ್ರ ಮೌರ್ಯ**
ಸ್ವಾಮಿಪ್ರಸಾದ್ ಪುತ್ರಿ

ವೇದಿಕೆ ಮೇಲೆ ಬಸ್ಕಿ ಹೊಡೆದು ಗಮನ ಸೆಳೆದಿದ್ದ ಚೌಬೆ

# ಕಾಲಿಗೆ ಮಸಾಜ್ ಮಾಡಿದ ಬಿಜೆಪಿ ಶಾಸಕ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ರಾಬರ್ಟ್ಸ್‌ಗಂಜ್ ಕ್ಷೇತ್ರದಿಂದ ಕಣಕ್ಕಿಳಿದಿರುವ ಬಿಜೆಪಿ ಶಾಸಕ ಭೂಪೇಶ್ ಚೌಬೆ ಅವರು ವೃದ್ಧರೊಬ್ಬರ ಕಾಲಿಗೆ ಮಸಾಜ್ ಮಾಡುವ ಮೂಲಕ ಗಮನ ಸೆಳೆದಿದ್ದಾರೆ. ಈ ಘಟನೆ ಅವರ ಬೆಂಬಲಿಗರು ಹಾಗೂ ಸ್ಥಳೀಯರಲ್ಲಿ ಅಚ್ಚರಿ ಮೂಡಿಸಿದೆ. ಇದರ ವಿಡಿಯೊ ಸಾಕಷ್ಟು ವೈರಲ್ ಆಗಿದೆ.

ಚೌಬೆ ಅವರು ಈ ಹಿಂದೆ ಇಂತಹದೇ ಕಾರಣಕ್ಕೆ ಸುದ್ದಿಯಾಗಿದ್ದರು. ಗ್ರಾಮವೊಂದರಲ್ಲಿ ಚುನಾವಣಾ ಪ್ರಚಾರ ಸಭೆಯ ವೇದಿಕೆ ಮೇಲೆ ಅವರು ಬಸ್ಕಿ ಹೊಡೆದಿದ್ದರು. ಇದನ್ನು ಸಮರ್ಥಿಸಿಕೊಂಡಿದ್ದ ಅವರು, ಕಳೆದ ಐದು ವರ್ಷಗಳಲ್ಲಿ ತನಗೆ ತಿಳಿಯದಂತೆ ಏನಾದರೂ ತಪ್ಪುಗಳು ಮಾಡಿದ್ದರೆ ಕ್ಷಮಿಸಿ ಎಂದು ಜನರನ್ನು ಕೇಳಿಕೊಳ್ಳುವುದರಲ್ಲಿ ತಪ್ಪೇನಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ವೃದ್ಧರೊಬ್ಬರ ಕಾಲಿಗೆ ಮಸಾಜ್ ಮಾಡಿದ ಭೂಪೇಶ್ ಚೌಬೆ (ವಿಡಿಯೊ ಸ್ಕ್ರೀನ್‌ಶಾಟ್)

ಈ ಬಾರಿಯ ಚುನಾವಣೆಯಲ್ಲಿ ಮರು ಆಯ್ಕೆಯಾಗುವುದಿಲ್ಲ ಎಂಬುದು ಚೌಬೆ ಅವರಿಗೆ ಅರ್ಥವಾಗಿದೆ. ಹೀಗಾಗಿ ಅವರು ಜನರನ್ನು ಸೆಳೆಯಲು ಇಂತಹ ಅಗ್ಗದ ಪ್ರಚಾರದ ಯತ್ನಗಳನ್ನು ಮಾಡುತ್ತಿದ್ದಾರೆ ಎಂದು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡಿವೆ.

ಪ್ರತಿಪಕ್ಷಗಳ ಆರೋಪಕ್ಕೆ ತಿರುಗೇಟು ನೀಡಿರುವ ಚೌಬೆ, ‘ಮತದಾರರು ದೇವರಿದ್ದಂತೆ. ಹೀಗಾಗಿ ಅವರ ಮನವೊಲಿಸುವುದರಲ್ಲಿ ಯಾವ ತಪ್ಪೂ ಇಲ್ಲ’ ಎಂದು ಅವರು ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

‘ನಾವು ದೇವರ ಮುಂದೆ ಕೈಯೊಡ್ಡುತ್ತೇವೆ. ನಾವು ಮಾಡಿರುವ ತಪ್ಪುಗಳನ್ನು ಮನ್ನಿಸು ಎಂದು ಕೇಳಿಕೊಳ್ಳುತ್ತೇವೆ. ಇದೇ ರೀತಿ, ಮತದಾರರನ್ನು ದೇವರು ಎಂದು ಪರಿಗಣಿಸಿ ನಾನು ಅವರ ಕ್ಷಮೆ ಕೇಳಿದೆ. ಅವರನ್ನು ಸಮಾಧಾನಪಡಿಸಿದೆ’ ಎಂದು ಚೌಬೆ ಹೇಳಿದ್ದಾರೆ.

‘ಚೌಬೆ ಅವರು ತಮ್ಮ ಐದು ವರ್ಷಗಳ ಅವಧಿಯಲ್ಲಿ ಕ್ಷೇತ್ರಕ್ಕಾಗಿ ಏನನ್ನೂ ಮಾಡಿಲ್ಲ. ಚುನಾವಣೆ ಸಮಯದಲ್ಲಿ ಅವರಿಗೆ ಜನರ ನೆನಪಾಗಿದೆ. ಚೌಬೆ ಅವರ ಮನವೊಲಿಕೆ ಯತ್ನಗಳಿಗೆ ಜನರು ಮರುಳಾಗುವುದಿಲ್ಲ. ಜನರು ಅವರಿಗೆ ಪಾಠ ಕಲಿಸಲಿದ್ದಾರೆ’ ಎಂದು ಎಸ್‌ಪಿ ಮುಖಂಡರೊಬ್ಬರು ಹೇಳಿದ್ದಾರೆ.

## ನುಡಿ-ಕಿಡಿ

**ಐಷಾರಾಮಿ ಬಂಗಲೆಗಳಲ್ಲಿ ವಾಸಿಸುವ, ದೊಡ್ಡ ದೊಡ್ಡ ಕಾರುಗಳಲ್ಲಿ ಸಂಚರಿಸುವ ವಂಶಾಡಳಿತವಾದಿಗಳಿಗೆ ಬಡವರ ಕಷ್ಟ ಅರ್ಥವಾಗುವುದಿಲ್ಲ. ಕೋವಿಡ್‌ನಂತಹ ತೀವ್ರ ಬಿಕ್ಕಟ್ಟಿನ ಸಮಯದಲ್ಲೂ ದೇಶದ ಯಾವೊಬ್ಬ ಬಡವರೂ ಹಸಿವಿನಿಂದ ಬಳಲದಂತೆ ನಮ್ಮ ಸರ್ಕಾರ ನೋಡಿಕೊಂಡಿತು**

**ನರೇಂದ್ರ ಮೋದಿ, ,** ಪ್ರಧಾನಿ

**ಬಿಜೆಪಿ ಅತಿದೊಡ್ಡ ಸುಳ್ಳುಗಾರ ಪಕ್ಷ. ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಸರ್ಕಾರ ಮಾತು ಕೊಟ್ಟಿತ್ತು. ಆದರೆ ರೈತರ ಮೇಲೆ ಪ್ರಹಾರ ನಡೆಸಿತು**

**ಅಖಿಲೇಶ್ ಯಾದವ್,** ಎಸ್‌ಪಿ ಅಧ್ಯಕ್ಷ



**ರೈತರು ಅಸಮಾಧಾನಗೊಂಡಿರುವುದರಿಂದ ಉತ್ತರ ಪ್ರದೇಶದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ಸಾಧ್ಯತೆ ಕಡಿಮೆ. ಕನಿಷ್ಠ ಬೆಂಬಲ ಬೆಲೆಗೆ ಸರ್ಕಾರದ ಕಾನೂನಿನ ಖಾತರಿಯ ನಿರೀಕ್ಷೆಯಲ್ಲಿ ರೈತರು ಇದ್ದಾರೆ**

**ಪ್ರವೀಣ್ ತೊಗಾಡಿಯಾ,** ವಿಎಚ್‌ಪಿ ಮಾಜಿ ಮುಖ್ಯಸ್ಥ

**ಗೋವಾ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 24–26 ಸ್ಥಾನಗಳನ್ನು ಗೆಲ್ಲಲಿದೆ. ಪಕ್ಷ ಬಹುಮತ ಪಡೆದಿರುವುದು ಗೊತ್ತಾದ ಅರ್ಧ ಗಂಟೆಯಲ್ಲಿ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲಾಗುವುದು**

**ಗಿರೀಶ್ ಚೋಡನಕರ್,,** ಗೋವಾ ಕಾಂಗ್ರೆಸ್ ಅಧ್ಯಕ್ಷ

## ಕೋವಿಡ್: ಮಹಾರಾಷ್ಟ್ರದಲ್ಲಿ ನಿರ್ಬಂಧ ಸಡಿಲಿಕೆ

ಮುಂಬೈ: ಮಹಾರಾಷ್ಟ್ರದಲ್ಲಿ ಕೋವಿಡ್‌-19 ಪರಿಸ್ಥಿತಿ ಸುಧಾರಿಸುತ್ತಿದ್ದು, ಸರ್ಕಾರವು ಶಾಪಿಂಗ್ ಕಾಂಪ್ಲೆಕ್ಸ್, ರೆಸ್ಟೋರೆಂಟ್ ಮತ್ತು ಬಾರ್, ಕ್ರೀಡಾ ಸಂಕೀರ್ಣ, ಜಿಮ್, ಸ್ಪಾ, ಸಿನಿಮಾ ಹಾಲ್, ಪ್ರವಾಸಿ ಸ್ಥಳಗಳು ಮತ್ತು ಮನರಂಜನಾ ಉದ್ಯಾನವನಗಳ ಮೇಲಿನ ನಿರ್ಬಂಧವನ್ನು ಸಡಿಲಗೊಳಿಸಿ, ದೊಡ್ಡ ನಗರಗಳಲ್ಲಿ ಶೇ 100 ರಷ್ಟು ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ. ಈ ಕುರಿತು ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಹೊಸ ಮಾರ್ಗಸೂಚಿಗಳು ಮಾರ್ಚ್ 4 ರಿಂದ ಜಾರಿಗೆ ಬರಲಿವೆ, ಆದಾಗ್ಯೂ, ಕೋವಿಡ್ -19 ಮಾನದಂಡಗಳನ್ನು ನಿರ್ವಹಿಸುವುದು ಅಗತ್ಯ ಎಂದು ಹೇಳಿದೆ. ಸರ್ಕಾರಿ ಮತ್ತು ಖಾಸಗಿ ಕಚೇರಿಗಳು, ಕೈಗಾರಿಕೆ ಮತ್ತು ವೈಜ್ಞಾನಿಕ ಸಂಸ್ಥೆಗಳು ಪೂರ್ಣ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸಬಹುದು. ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಆಫ್‌ಲೈನ್ ತರಗತಿಗಳು ಪುನರಾರಂಭ ಮಾಡಲು ಅನುಮತಿ ನೀಡಲಾಗಿದೆ. ಆದರೆ, ಮಾಸ್ಕ್ ಬಳಸುವುದು ಕಡ್ಡಾಯ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

## ‘ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ವಾವಲಂಬನೆ ಅಗತ್ಯ’

ನವದೆಹಲಿ (ಪಿಟಿಐ): ಸಮಾಜದ ಕೊನೆಯ ವ್ಯಕ್ತಿಗೂ ವಿವಿಧ ಸೇವೆಗಳನ್ನು ತ್ವರಿತವಾಗಿ ತಲುಪಿಸಲು ಹಾಗೂ ಉದ್ಯೋಗ ಸೃಷ್ಟಿಯಲ್ಲಿ ತಂತ್ರಜ್ಞಾನ ಕ್ಷೇತ್ರ ಮಹತ್ತರ ಪಾತ್ರ ವಹಿಸುತ್ತದೆ. ಹೀಗಾಗಿ ಈ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವುದು ಅಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

‘ತಂತ್ರಜ್ಞಾನ ಆಧಾರಿತ ಅಭಿವೃದ್ಧಿ’ ಎಂಬ ವಿಷಯ ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು. ‘ವಿಜ್ಞಾನ ಮತ್ತು ತಂತ್ರಜ್ಞಾನಗಳು ಈಗ ನಮ್ಮ ಜೀವನದ ಭಾಗಗಳೇ ಆಗಿವೆ. ಅದರಲ್ಲೂ, ಅತ್ಯಾಧುನಿಕ ತಂತ್ರಜ್ಞಾನವು ಡಿಜಿಟಲ್ ಆರ್ಥಿಕತೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಈ ಎಲ್ಲ ಕಾರಣಗಳಿಂದಾಗಿ ವಿವಿಧ ಸೇವೆಗಳು ಜನರಿಗೆ ತ್ವರಿತವಾಗಿ ತಲುಪುವುದು ಹಾಗೂ ನಾಗರಿಕರ ಸಬಲೀಕರಣ ಸಾಧ್ಯವಾಗಿದೆ’ ಎಂದರು.

7ರಂದು ‘ವಾಯು ಶಕ್ತಿ ಅಭ್ಯಾಸ’

# ಮೊದಲ ಬಾರಿಗೆ ರಫೇಲ್ ಭಾಗಿ

ನವದೆಹಲಿ (ಪಿಟಿಐ): ರಾಜಸ್ಥಾನದ ಪೋಖರಣ್ ಪರೀಕ್ಷಾ ವಲಯದಲ್ಲಿ ಮಾರ್ಚ್ 7ರಂದು ವಾಯುಪಡೆ ‘ವಾಯು ಶಕ್ತಿ ಅಭ್ಯಾಸ’ ಆಯೋಜಿಸಿದೆ. 148 ಯುದ್ಧವಿಮಾನಗಳು ಈ ವೇಳೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲಿವೆ.

ಇದೇ ಮೊದಲ ಬಾರಿಗೆ ರಫೇಲ್ ಸಹ ಈ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು ಎಂದು ವಾಯುಪಡೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘148 ಯುದ್ಧವಿಮಾನಗಳ ಪೈಕಿ 109 ಫೈಟರ್ ಜೆಟ್‌ಗಳು ಇರಲಿವೆ. ಜಾಗ್ವಾರ್, ಸುಖೋಯ್‌-30, ಮಿಗ್‌–29 ಹಾಗೂ ತೇಜಸ್ ಸೇರಿದಂತೆ ವಿವಿಧ ಫೈಟರ್ ಜೆಟ್‌ಗಳು ಈ ಅಭ್ಯಾಸದಲ್ಲಿ ಪಾಲ್ಗೊಳ್ಳಲಿವೆ’ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

‘ಆಕಾಶ್’ ಹಾಗೂ ‘ಸ್ಪೈಡರ್’ ಕ್ಷಿಪಣಿ ವ್ಯವಸ್ಥೆಗಳ ಸಾಮರ್ಥ್ಯದ ಪ್ರಾತ್ಯಕ್ಷಿಕೆಯೂ ಇರಲಿದೆ. ಸರಕು ಸಾಗಣೆಗೆ ಬಳಸಲಾಗುವ ವಿಮಾನಗಳಾದ ಸಿ–17 ಹಾಗೂ ಸಿ–130ಜೆ ಸಹ ಈ ಸಮರಾಭ್ಯಸದಲ್ಲಿ ಪಾಲ್ಗೊಳ್ಳಲಿವೆ’ ಎಂದು ವಾಯುಪಡೆಯ ಅಧಿಕಾರಿ ತಿಳಿಸಿದ್ದಾರೆ.

ವಾಯುಪಡೆಯು ತನ್ನ ಯುದ್ಧಸನ್ನದ್ಧತೆಯ ಪ್ರದರ್ಶನಕ್ಕಾಗಿ ಮೂರು ವರ್ಷಗಳಿಗೊಮ್ಮೆ ‘ವಾಯು ಶಕ್ತಿ ಅಭ್ಯಾಸ’ವನ್ನು ಆಯೋಜಿಸುತ್ತದೆ.

ರಫೇಲ್ ಯುದ್ಧವಿಮಾನ (ಸಂಗ್ರಹ ಚಿತ್ರ)

## ಕಾಶ್ಮೀರ: ಎರಡೂವರೆ ವರ್ಷದ ನಂತರ ತೆರೆದ ಶಾಲೆಗಳು

ಪ್ರಜಾವಾಣಿ ವಾರ್ತೆ

ಶ್ರೀನಗರ: ಎರಡೂವರೆ ವರ್ಷಗಳ ನಂತರ ಕಾಶ್ಮೀರ ಕಣಿವೆಯಾದ್ಯಂತ ಬುಧವಾರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಪುನರ್ ಆರಂಭವಾಗಿದ್ದು, ವಿದ್ಯಾರ್ಥಿಗಳು ಲವಲವಿಕೆ ಹಾಗೂ ಬಹಳ ಉತ್ಸಾಹದಿಂದ ತರಗತಿಗಳಿಗೆ ಹಾಜರಾದರು.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ಸಂವಿಧಾನದ 370 ವಿಧಿಯನ್ನು 2019 ರ ಆಗಸ್ಟ್‌ನಲ್ಲಿ ರದ್ದುಗೊಳಿಸಿದ ನಂತರ ಏಳು ತಿಂಗಳು ಶಾಲೆಗಳನ್ನು ಮುಚ್ಚಲಾಗಿತ್ತು. ನಂತರ ಕೋವಿಡ್‌–19 ಸಾಂಕ್ರಾಮಿಕ ರೋಗದ ಭೀತಿಯಿಂದಾಗಿ ಶಾಲೆಗಳನ್ನು ಬಂದ್ ಮಾಡಲಾಗಿತ್ತು.

ಕೋವಿಡ್ ಪ್ರಕರಣಗಳು ಇಳಿಕೆ ಕಂಡ ಹಿನ್ನೆಲೆ ಹಾಗೂ ಶಾಲಾ ಕಾಲೇಜುಗಳ ಚಳಿಗಾಲದ ರಜೆ ಅವಧಿಯು ಫೆ.28ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಇಲ್ಲಿನ ಆಡಳಿತವು ಮಾರ್ಚ್ 1ರಿಂದ ಕಾಶ್ಮೀರದಾದ್ಯಂತ ಎಲ್ಲ ಹಂತದ ಶಾಲೆಗಳು ಹಾಗೂ ಎಲ್ಲ ಬಗೆಯ ಕಾಲೇಜುಗಳ ಭೌತಿಕ ತರಗತಿಯನ್ನು ಆರಂಭಿಸುವಂತೆ ಆದೇಶ ಹೊರಡಿಸಿತ್ತು.

ರೋಹಿತ್ ನಾಯಕತ್ವದಲ್ಲಿ ಮೈಲುಗಲ್ಲು ಸ್ಥಾಪಿಸುವತ್ತ ಭಾರತದ 'ಸೂಪರ್ ಸ್ಟಾರ್' ಬ್ಯಾಟರ್

# ಸಾಧನೆಯ ಹಾದಿ; 'ಶತಕ'ದತ್ತ ಕೊಹ್ಲಿ

ನವದೆಹಲಿ (ಎಎಫ್‌ಪಿ): ಭಾರತದ 'ಸೂಪರ್ ಸ್ಟಾರ್' ಕ್ರಿಕೆಟರ್ ವಿರಾಟ್ ಕೊಹ್ಲಿ ಅವರು ನೂರನೇ ಟೆಸ್ಟ್ ಪಂದ್ಯ ಆಡಲು ಸಜ್ಜಾಗುತ್ತಿದ್ದಾರೆ. ಈ ಬಾರಿ ಅವರು ನಾಯಕರಾಗಿ ಅಲ್ಲ, ಬರೀ ಬ್ಯಾಟರ್ ಆಗಿ ಕಣಕ್ಕೆ ಇಳಿಯಲಿದ್ದಾರೆ. ಮುಂಬೈಕರ್ ರೋಹಿತ್ ಶರ್ಮಾ ನಾಯಕತ್ವದಲ್ಲಿ ಈ ಮೈಲುಗಲ್ಲು ಸಾಧಿಸಲಿದ್ದಾರೆ.

ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ತಂಡಕ್ಕೆ ಪ್ರಶಸ್ತಿ ಗೆದ್ದುಕೊಡಲು ಸಾಧ್ಯವಾಗದೇ ಇದ್ದರೂ ಉಪಖಂಡದ ಹೊರಗೆ ನಾಯಕತ್ವದಲ್ಲಿ ಅವರು ಅಮೋಘ ಸಾಧನೆ ಮಾಡಿದ್ದಾರೆ. 33 ವರ್ಷದ ಈ ಆಟಗಾರ ಟೆಸ್ಟ್ ಜೀವನದಲ್ಲಿ ಅಮೂಲ್ಯ ಮತ್ತು ಅಪರೂಪದ ಇನಿಂಗ್ಸ್‌ಗಳ ಮೂಲಕ ಅನೇಕ ಬಾರಿ ತಂಡದ ಕೈ ಹಿಡಿದಿದ್ದಾರೆ.

2014ರಲ್ಲಿ ಅಡಿಲೇಡ್‌ನಲ್ಲಿ ನಡೆದ ಟೆಸ್ಟ್ ಸರಣಿ ಆರಂಭಕ್ಕೂ ಮೊದಲು ನಾಯಕ ಮಹೇಂದ್ರ ಸಿಂಗ್ ಧೋನಿ ಗಾಯಗೊಂಡ ಕಾರಣ ಕೊಹ್ಲಿ ತಂಡವನ್ನು ಮುನ್ನಡೆಸಿದ್ದರು. ಆ ಅವಕಾಶವನ್ನು ಸದುಪಯೋಗ-ಪಡಿಸಿಕೊಂಡು ಗಮನಾರ್ಹ ಸಾಧನೆ ಮಾಡಿದ್ದರು. ಮೊದಲ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 115 ರನ್ ಗಳಿಸಿದ ಅವರು 364 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ತಂಡದ ಪರ 141 ರನ್ ಗಳಿಸಿದ್ದರು. ಈ ಮೂಲಕ ತಂಡದ ಸೋಲಿನ ಅಂತರವನ್ನು 48 ರನ್‌ಗಳಿಗೆ ಇಳಿಸಿದ್ದರು. ಈ ಎರಡು ಇನಿಂಗ್ಸ್ ಕ್ರಿಕೆಟ್ ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿತ್ತು.

2017ರಲ್ಲಿ ಆಸ್ಟ್ರೇಲಿಯಾ ತಂಡ ಭಾರತ ಪ್ರವಾಸ ಕೈಗೊಂಡಿದ್ದಾಗ ಡಿಆರ್‌ಎಸ್ ತೆಗೆದುಕೊಳ್ಳುವ ಮುನ್ನ ಪ್ರವಾಸಿ ತಂಡದ ಸ್ಟೀವ್ ಸ್ಮಿತ್ ಅವರು ಡ್ರೆಸಿಂಗ್ ಕೊಠಡಿಯತ್ತ ನೋಡಿದ್ದರು. ಇದಕ್ಕೆ ಆಕ್ಷೇಪವೆತ್ತಿದ ಕೊಹ್ಲಿ ಎದುರಾಳಿ ತಂಡದವರು ಡಿಆರ್‌ಎಸ್ ನಿಯಮವನ್ನು ಗೇಲಿ ಮಾಡುತ್ತಿದ್ದಾರೆ ಎಂದು ದೂರಿದ್ದರು.

ಇದಾಗಿ ಎರಡು ವರ್ಷಗಳ ನಂತರ ಕೊಹ್ಲಿ ನೇತೃತ್ವದ ಭಾರತ ತಂಡ ಆಸ್ಟ್ರೇ-ಲಿಯಾದಲ್ಲಿ ಮೊದಲ ಟೆಸ್ಟ್ ಸರಣಿ ಗೆದ್ದುಕೊಂಡಿತ್ತು. ಮೆಲ್ಬರ್ನ್‌ನಲ್ಲಿ ನಡೆದ ಮೂರನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಅವರು ಗಳಿಸಿದ 82 ರನ್‌ಗಳು ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ತಂಡ 2-1ರಲ್ಲಿ ಜಯ ಗಳಿಸಿತ್ತು. ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಮೊದಲ ಸ್ಥಾನಕ್ಕೇರಿದ ತಂಡ 3 ವರ್ಷ ಅದನ್ನು ಉಳಿಸಿಕೊಂಡಿತ್ತು. ಈ ಅವಧಿಯಲ್ಲಿ ತವರಿನಲ್ಲೂ ವಿದೇಶದಲ್ಲೂ ಅನೇಕ ಪಂದ್ಯಗಳನ್ನು ಗೆದ್ದುಕೊಂಡಿತ್ತು. ಈ ಸಂದರ್ಭಗಳಲ್ಲೆಲ್ಲ ಕೊಹ್ಲಿ ಅವರ ಸ್ಫೋಟಕ ಬ್ಯಾಟಿಂಗ್ ಸೊಗಸಿತ್ತು.

ಟ್ವೆಂಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಸೋಲಿಗೆ ಮೊಹಮ್ಮದ್ ಶಮಿ ಕಾರಣ ಎಂದು ದ್ವೇಷದ ಕಿಡಿ ಹಚ್ಚಿದವರ ಬಾಯಿ ಮುಚ್ಚಿಸಿದ ಮತ್ತು ಶಮಿ ಪರವಾಗಿ ನಿಂತಿದ್ದರು.

ವಿರಾಟ್ ಕೊಹ್ಲಿ (ಎಡ) ಮತ್ತು ರೋಹಿತ್ ಶರ್ಮಾ –ಪಿಟಿಐ ಚಿತ್ರ

## ಭಾರತ ತಂಡಕ್ಕೆ ಹೊಸ ಫಿಜಿಯೊ, ಟ್ರೇನರ್ ನೇಮಕಕ್ಕೆ ಚಿಂತನೆ

ಚಂಡೀಗಢ (ಪಿಟಿಐ): ಭಾರತ ತಂಡಕ್ಕೆ ಹೊಸ ಫಿಜಿಯೊ ಮತ್ತು ಸ್ಟ್ರೆಂತ್-ಕಂಡೀಷನಿಂಗ್ ಕೋಚ್ ನೇಮಕ ಮಾಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಂದಾಗಿದೆ. ನಿತಿನ್ ಪಟೇಲ್ ನೇತೃತ್ವದ ಕ್ರೀಡಾವಿಜ್ಞಾನ ಹಾಗೂ ಕ್ರೀಡಾ ವೈದ್ಯಕೀಯ (ಎಸ್‌ಎಸ್‌ಎಸ್‌ಎಂ) ವಿಭಾಗವನ್ನು ಬಲಪಡಿಸುವುದಕ್ಕಾಗಿ ಈ ನೇಮಕಕ್ಕೆ ಮಂಡಳಿ ಮುಂದಾಗಿದೆ.

ಸೀನಿಯರ್ ಮತ್ತು ಜೂನಿಯರ್ ಪುರುಷ-ಮಹಿಳಾ ತಂಡಗಳ ಎಸ್‌ಎಸ್‌ಎಸ್‌ಎಂಗಾಗಿ ಅನೇಕ ನೇಮಕಾತಿಗಳು ನಡೆಯಲಿದ್ದು ಅವುಗಳಲ್ಲಿ ಇದೂ ಒಂದು. ಈ ತಂಡಗಳಿಗೆ ಗಾಯದ ಸಂದರ್ಭಗಳ ನಿರ್ವಹಣೆಗಾಗಿ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಪುನರ್ವಸತಿ ತಜ್ಞರ ನೇಮಕಾತಿಯೂ ನಡೆಯಲಿದೆ.

ಫಿಜಿಯೊ ಮತ್ತು ಸ್ಟ್ರೆಂತ್-ಕಂಡೀಷನಿಂಗ್ ಕೋಚ್‌ಗಳ ನೇಮಕಾತಿ ಎರಡು ವಿಭಾಗಗಳಲ್ಲಿ ನಡೆಯಲಿವೆ. ಮೊದಲ ವಿಭಾಗದಲ್ಲಿ ಸೀನಿಯರ್ ತಂಡಕ್ಕೆ ಮತ್ತು ಎರಡನೇ ವಿಭಾಗದಲ್ಲಿ ಜೂನಿಯರ್ ತಂಡಕ್ಕೆ ಸಿಬ್ಬಂದಿಯನ್ನು ಆಯ್ಕೆ ಮಾಡಲಾಗುವುದು.

ಈಗ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಕೂಡ ಆಯ್ಕೆ ಬಯಸಿದರೆ ಅರ್ಜಿ ಸಲ್ಲಿಬೇಕು. ಅರ್ಜಿ ಸಲ್ಲಿಕೆಗೆ ಕೊನೆಯ ದಿನ ಇದೇ ಒಂಬತ್ತನೇ ತಾರೀಕು.

## ಐಪಿಎಲ್: 14 ಅಥವಾ 15ರಿಂದ ತಂಡಗಳ ಅಭ್ಯಾಸ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ತಂಡಗಳು ಇದೇ 14 ಅಥವಾ 15ರಂದು ಮಹಾರಾಷ್ಟ್ರದ ಐದು ತಾಣಗಳಲ್ಲಿ ಅಭ್ಯಾಸ ಆರಂಭಿಸಲಿವೆ.

ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ-ರುವ ಎಂಸಿಎ ಕ್ರೀಡಾಂಗಣ, ಥಾಣೆಯ ಎಂಸಿಎ ಅಂಗಣ, ಡಾ. ಡಿ. ವೈ. ಪಾಟೀಲ್ ವಿಶ್ವವಿದ್ಯಾಲಯದ ಅಂಗಣ, ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದ ಫುಟ್‌ಬಾಲ್ ಪಿಚ್ ಜೊತೆಗೆ ಘನ್ಸೋಲಿಯ ರಿಲಯನ್ಸ್ ಕಾರ್ಪೊರೇಟ್ ಪಾರ್ಕ್ ಕ್ರೀಡಾಂಗಣ-ಗಳನ್ನು ಅಭ್ಯಾಸಕ್ಕಾಗಿ ಗುರುತಿಸಲಾಗಿದೆ ಎಂದು ತಿಳಿದುಬಂದಿದೆ. ಮಾರ್ಚ್ 26ರಂದು ಐಪಿಎಲ್ ಆರಂಭವಾಗಲಿದೆ. 10 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಇದೇ 8ರಿಂದ ಆಟಗಾರರು ನಗರಕ್ಕೆ ಆಗಮಿಸುವ ಸಾಧ್ಯತೆಯಿದೆ.

ಐಪಿಎಲ್ ಅನ್ನು ಸುಗಮವಾಗಿ ನಡೆಸಲು ಮಹಾರಾಷ್ಟ್ರ ಸರ್ಕಾರವು ಬಿಸಿಸಿಐ ಮತ್ತು ಮುಂಬೈ ಕ್ರಿಕೆಟ್ ಸಂಸ್ಥೆಯೊಂದಿಗೆ (ಎಂಸಿಎ) ದಕ್ಷಿಣ ಮುಂಬೈನಲ್ಲಿ ಸಭೆ ನಡೆಸಿತು. ರಾಜ್ಯ ಸರ್ಕಾರದ ಸಚಿವರಾದ ಆದಿತ್ಯ ಠಾಕ್ರೆ ಮತ್ತು ಏಕನಾಥ್ ಶಿಂಧೆ, ಎಂಸಿಎ ಮುಖ್ಯಸ್ಥ ವಿಜಯ್ ಪಾಟೀಲ್ ಮತ್ತು ಅಪೆಕ್ಸ್ ಕೌನ್ಸಿಲ್ ಸದಸ್ಯರಾದ ಅಜಿಂಕ್ಯ ನಾಯಕ್ ಮತ್ತು ಅಭಯ್ ಹಡಪ್ ಸಭೆಯಲ್ಲಿ ಉಪಸ್ಥಿತರಿದ್ದರು.

ಟೂರ್ನಿಯಲ್ಲಿ ಭಾಗವಹಿಸುವ ಎಲ್ಲರೂ ಮುಂಬೈಗೆ ಆಗಮಿಸುವ 48 ಗಂಟೆಗಳ ಮೊದಲು ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ತಿಳಿದುಬಂದಿದೆ. ಈ ಬಾರಿಯ ಐಪಿಎಲ್ ಮುಂಬೈ ಮತ್ತು ಪುಣೆಯ ಐದು ಕ್ರೀಡಾಂ ಗಣಗಳಲ್ಲಿ ನಿಗದಿಯಾಗಿದೆ.

## ಸುದ್ದಿ 2 ನಿಮಿಷ

### ಟಿ20 ಬ್ಯಾಟಿಂಗ್ ರ್‍ಯಾಂಕಿಂಗ್: ಶ್ರೇಯಸ್ ಅಯ್ಯರ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ರಕಟಿಸಿರುವ ಟಿ20 ರ್‍ಯಾಂಕಿಂಗ್‌ನಲ್ಲಿ ಭಾರಿ ಪ್ರಗತಿ ಸಾಧಿಸಿದ್ದಾರೆ. ಸದ್ಯ ಅವರು 27 ಸ್ಥಾನಗಳ ಏರಿಕೆ ದಾಖಲಿಸಿದ್ದು, 18ನೇ ಸ್ಥಾನದಲ್ಲಿದ್ದಾರೆ. ಆದರೆ ವಿರಾಟ್ ಕೊಹ್ಲಿ ಅಗ್ರ 10ರೊಳಗಿನ ಪಟ್ಟಿಯಿಂದ ಹೊರಗುಳಿದಿದ್ದಾರೆ.

ಶ್ರೀಲಂಕಾ ಎದುರು ತವರಿನಲ್ಲಿ ನಡೆದ ಸರಣಿಯಲ್ಲಿ ಅಮೋಘ ಸಾಮರ್ಥ್ಯ ತೋರಿದ್ದು, ಶ್ರೇಯಸ್ ಅವರ ಪ್ರಗತಿಗೆ ಕಾರಣವಾಗಿದೆ. 27 ವರ್ಷದ ಆಟಗಾರ ಮೂರು ಪಂದ್ಯಗಳಲ್ಲಿ 174ರ ಸರಾಸರಿಯಲ್ಲಿ 204 ರನ್ ಕಲೆಹಾಕಿದ್ದರು. ಅದರಲ್ಲಿ ಮೂರು ಅಜೇಯ ಅರ್ಧಶತಕಗಳಿದ್ದವು. ಭಾರತ ತಂಡವು ಈ ಸರಣಿಯನ್ನು 3-0ಯಿಂದ ಕ್ಲೀನ್‌ಸ್ವೀಪ್ ಮಾಡಿತ್ತು.

ಭಾರತದ ವೇಗಿ ಭುವನೇಶ್ವರ ಕುಮಾರ್ ಅವರು ಬೌಲರ್‌ಗಳ ರ್‍ಯಾಂಕಿಂಗ್‌ನಲ್ಲಿ ಮೂರು ಸ್ಥಾನ ಏರಿಕೆ ಕಂಡಿದ್ದು, 17ನೇ ಸ್ಥಾನದಲ್ಲಿದ್ದಾರೆ.

ಶ್ರೀಲಂಕಾದ ಪಾಥುಮ್ ನಿಸ್ಸಾಂಕ ಒಂಬತ್ತನೇ ಸ್ಥಾನ-ಕ್ಕೇರಿದ್ದು, ಭಾರತ ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ 10ರಿಂದ 15ನೇ ಸ್ಥಾನಕ್ಕೆ ಜಾರಿದ್ದಾರೆ.

ಲಂಕಾ ಎದುರಿನ ಟಿ20 ಸರಣಿಯಲ್ಲಿ ಅವರಿಗೆ ವಿಶ್ರಾಂತಿ ನೀಡಲಾಗಿತ್ತು.

### ಮಾತೃಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಇಂದಿನಿಂದ

ಬೆಂಗಳೂರು: ಮಹಿಳೆಯರಿಗಾಗಿ ರಾಜ್ಯಮಟ್ಟದ ಮಾತೃಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಗುರುವಾರದಿಂದ ನಡೆಯಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಚಾಂಪಿಯನ್‌ಷಿಪ್ ಇದೇ 8ರವರೆಗೆ ನಡೆಯಲಿದೆ. ಲೀಗ್, ಸೂಪರ್ ಲೀಗ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ತಂಡಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪ್ರತಿ ಗುಂಪಿನಿಂದ ಒಂದು ತಂಡವು ಸೆಮಿಫೈನಲ್‌ಗೆ ಅರ್ಹತೆ ಗಳಿಸಲಿವೆ.

ಎಲ್ಲ ಆಟಗಾರ್ತಿಯರು ಹಾಗೂ ಸಿಬ್ಬಂದಿ ಕೋವಿಡ್‌ಗೆ ಸಂಬಂಧಿಸಿದ ಆರ್‌ಟಿ-ಪಿಸಿಆರ್ 'ನೆಗೆಟಿವ್' ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ ಎಂದು ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ (ಕೆಎಸ್‌ಬಿಎ) ಪ್ರಕಟಣೆಯಲ್ಲಿ ತಿಳಿಸಿದೆ.

# ಉಕ್ರೇನ್‌ನ ಸ್ವಿಟೋಲಿನಾಗೆ ಮಣಿದ ರಷ್ಯಾದ ಪೊಟಪೊವಾ

ಮೆಕ್ಸಿಕೊ ಸಿಟಿ (ಎಪಿ): ತನ್ನ ದೇಶದ ಧ್ವಜದ ಬಣ್ಣದ (ಹಳದಿ ಮತ್ತು ನೀಲಿ) ಪೋಷಾಕು ಧರಿಸಿ ಕಣಕ್ಕಿಳಿದ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಅವರು ಮೊಂಟೆರಿ ಓಪನ್ ಟೆನಿಸ್ ಟೂರ್ನಿಯ ಪಂದ್ಯದಲ್ಲಿ ರಷ್ಯಾದ ಅನಸ್ತಾಸಿಯಾ ಪೊಟಪೊವಾ ಅವರನ್ನು ಸೋಲಿಸಿದರು.

ಟೂರ್ನಿಯ ಮೊದಲ ಸುತ್ತಿನಲ್ಲಿ ಎಲಿನಾ ಅವರಿಗೆ 6-2, 6-1ರಿಂದ ಜಯ ಒಲಿಯಿತು. ಉಕ್ರೇನ್ ಮೇಲಿನ ರಷ್ಯಾದ ದಾಳಿಯ ಹಿನ್ನೆಲೆಯಲ್ಲಿ ಪಂದ್ಯವನ್ನು ಬಹಿಷ್ಕರಿಸುವುದ-ಕ್ಕಿಂತ ದೇಶಕ್ಕಾಗಿ ಏನಾದರೂ ಹೆಚ್ಚಿನದನ್ನು ಮಾಡಬೇಕೆಂದು ಅವರು ನಿರ್ಧರಿಸಿದ್ದಾರೆ.

ತಮ್ಮ ದೇಶದ ರಾಷ್ಟ್ರೀಯ ಚಿಹ್ನೆಗಳನ್ನು ಬಳಸಿ ಆಡುವ ರಷ್ಯಾ ಅಥವಾ ಬೆಲಾರೂಸ್‌ನ ಅಥ್ಲೀಟ್‌ಗಳ ಮೇಲೆ ಅಂತ-ರರಾಷ್ಟ್ರೀಯ ಟೆನಿಸ್ ಫೆಡರೇಷನ್ ನಿರ್ಬಂಧ ಹೇರುವವರೆಗೆ ಆ ದೇಶಗಳ ಸ್ಪರ್ಧಿಗಳ ಎದುರು ಆಡುವುದಿಲ್ಲ ಎಂದು ಈ ಹಿಂದೆ ಸ್ವಿಟೋಲಿನಾ ಹೇಳಿದ್ದರು. ರಷ್ಯಾ ಮತ್ತು ಬೆಲಾರೂಸ್ ಅಥ್ಲೀಟ್‌ಗಳಿಗೆ ತಮ್ಮ ರಾಷ್ಟ್ರಧ್ವಜ ಬಳಸದೆ ಆಡಲು ಅನುಮತಿ ನೀಡಲಾಗುವುದು ಎಂದು ಮಂಗಳವಾರ ಟೆನಿಸ್ ಆಡಳಿತ ಮಂಡಳಿಗಳು ಹೇಳಿದ್ದವು.

ಎಲಿನಾ ಸ್ವಿಟೋಲಿನಾ (ಎಡ) ಮತ್ತು ಅನಸ್ತಾಸಿಯಾ ಪೊಟಪೊವಾ– ಎಪಿ ಚಿತ್ರ

## ಚಳಿಗಾಲದ ಪ್ಯಾರಾಲಿಂಪಿಕ್ಸ್‌ಗೆ ರಷ್ಯಾದ ಅಥ್ಲೀಟ್‌ಗಳು

ಬೀಜಿಂಗ್ (ಎಎಫ್‌ಪಿ/ಎಪಿ): ಮುಂಬರುವ ಚಳಿಗಾಲದ ಪ್ಯಾ-ರಾಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ರಷ್ಯಾ ಮತ್ತು ಬೆಲಾರೂಸ್‌ನ ಕ್ರೀಡಾಪಟು-ಗಳಿಗೆ ಅನುಮತಿ ನೀಡಲಾಗಿದೆ.

ರಷ್ಯಾ ಮತ್ತು ಅದರ ಮಿತ್ರದೇಶ ಬೆಲಾರೂಸ್, ಉಕ್ರೇನ್ ವಿರುದ್ಧ ಸಮರ ನಡೆಸುತ್ತಿವೆ. ಹೀಗಾಗಿ ಆ ದೇಶಗಳ ಅಥ್ಲೀಟ್‌ಗಳನ್ನು ಎಲ್ಲ ಕ್ರೀಡಾ ಫೆಡರೇಷನ್‌ಗಳು ಹೊರಗಿಡಬೇಕೆಂದು ಈ ಹಿಂದೆ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಒತ್ತಾಯಿಸಿತ್ತು.

ಆದರೆ ಬುಧವಾರದಂದು ಅಂತರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (ಐಪಿಸಿ) ಸಭೆಯನ್ನು ನಡೆಸಿ, 'ಎರಡೂ ದೇಶಗಳ ಕ್ರೀಡಾಪಟುಗಳು 'ತಟಸ್ಥ' ಎಂದು ಸ್ಪರ್ಧಿಸಲು ಅನುಮತಿಸಲಾಗುವುದು. ಅವರು ಪ್ಯಾರಾಲಿಂಪಿಕ್ ಧ್ವಜದ ಅಡಿಯಲ್ಲಿ ಸ್ಪರ್ಧಿಸುತ್ತಾರೆ ಮತ್ತು ಪದಕ ಪಟ್ಟಿಯಲ್ಲಿ ಅವರನ್ನು ಸೇರಿಸಲಾಗು-ವುದಿಲ್ಲ' ಎಂದು ಹೇಳಿದೆ.

ಚಳಿಗಾಲದ ಪ್ಯಾರಾಲಿಂಪಿಕ್ಸ್ ಇದೇ ಶುಕ್ರವಾರದಿಂದ ಮಾರ್ಚ್ 13ರವರೆಗೆ ನಡೆಯಲಿದೆ.

**ಮೋಟರಸ್ಪೋರ್ಟ್ಸ್ ಚಾಲಕರಿಗೆ ಇಂಗ್ಲೆಂಡ್ ನಿರ್ಬಂಧ:** ರಷ್ಯಾ ಮತ್ತು ಬೆಲಾಸರ್ ದೇಶದ ಪರವಾನಿಗೆ ಹೊಂದಿರುವ ಮೋಟರ್‌ಸ್ಪೋರ್ಟ್ಸ್ ಚಾಲಕರಿಗೆ ತನ್ನ ದೇಶದ ಕೂಟಗಳಲ್ಲಿ ಸ್ಪರ್ಧಿಸಲು ಇಂಗ್ಲೆಂಡ್ ನಿರ್ಬಂಧ ವಿಧಿಸಿದೆ. ಇದರಿಂದಾಗಿ ಫಾರ್ಮುಲಾ ಒನ್ ಚಾಲಕ ನಿಖಿತಾ ಮೇಜ್‌ಪಿನ್ ಅವರು ಈ ಬಾರಿ ಬ್ರಿಟಿಷ್ ಗ್ರ್ಯಾನ್ ಪ್ರಿಯಲ್ಲಿ ಭಾಗವಹಿಸಲಾಗುವುದಿಲ್ಲ.

ಸಿಲ್ವರ್‌ಸ್ಟೋನ್‌ನಲ್ಲಿ ಈ ವರ್ಷದ ಜುಲೈ 3ರಿಂದ ಬ್ರಿಟಿಷ್ ಗ್ರ್ಯಾನ್‌ಪ್ರಿ ನಡೆಯಲಿದೆ.

## ಡಿಯೊನಾ ಐದು ಗೋಲು

ಬೆಂಗಳೂರು: ಡಿಯೊನಾ ಡಿಸೋಜಾ ಗಳಿಸಿದ ಅಮೋಘ ಐದು ಗೋಲುಗಳ ನೆರವಿನಿಂದ ಪಿಂಕ್ ಪ್ಯಾಂಥರ್ಸ್ ತಂಡವು ಕೆಎಸ್‌ಎಫ್‌ಎ ಎ ಡಿವಿಷನ್ ಮಹಿಳಾ ಫುಟ್‌ಬಾಲ್ ಲೀಗ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬುಧವಾರ ನಡೆದ ಪಂದ್ಯದಲ್ಲಿ 7-0ಯಿಂದ ಸಾಯಿ ಸ್ಪೋರ್ಟ್ಸ್ ಅಕಾಡೆಮಿ ಎದುರು ಗೆದ್ದಿತು. ವಿಜೇತ ತಂಡದ ಪರ ಡಿಯೊನಾ 23, 26, 35, 36 ಮತ್ತು 40ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಇನ್ನೊಂದು ಗೋಲನ್ನು ತನುಶ್ರೀ ರಮೇಶ್ (51ನೇ ನಿಮಿಷ) ಗಳಿಸಿದರು. ಮತ್ತೊಂದು ಗೋಲು ಎದುರಾಳಿ ತಂಡದ ಕೀರ್ತಿ ಅವರಿಂದ 'ಉಡುಗೊರೆ' ರೂಪದಲ್ಲಿ ಬಂತು.

ಮತ್ತೊಂದು ಪಂದ್ಯದಲ್ಲಿ ಮಾಡರ್ನ್ ಗರ್ಲ್ಸ್ ಎಫ್‌ಸಿ 4-0ಯಿಂದ ಪಾಸ್ ಎಫ್‌ಸಿ ತಂಡವನ್ನು ಸೋಲಿಸಿತು. ತಂಡದ ಪರ ಮೈತ್ರೇಯಿ (3 ಮತ್ತು 45ನೇ ನಿ.), ಟ್ರೇಯಾ ಮತ್ತು ಆದಿರಾ ಗೋಲು ಹೊಡೆದರು.

ಸೆಕ್ಸ್ ಸಮಸ್ಯೆ
ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ, ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ, ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ಆಯುರ್ವೇದಿಕ್ ಪರಿಹಾರಕ್ಕಾಗಿ ಸತ್ಯ ಹಾಗೂ ಉಚಿತ ಸಲಹೆ ಪಡೆದುಕೊಳ್ಳಿ.
02262676816

## ಬಿಸಿಸಿಐ ಗುತ್ತಿಗೆ: ಪೂಜಾರ, ರಹಾನೆಗೆ ಹಿಂಬಡ್ತಿ

ಮೊಹಾಲಿ (ಪಿಟಿಐ): ಫಾರ್ಮ್ ಕಳೆದುಕೊಂಡಿರುವ ಅನುಭವಿ ಬ್ಯಾಟರ್ ಚೇತೇಶ್ವರ್ ಪೂಜಾರ ಮತ್ತು ಟೆಸ್ಟ್ ತಂಡದ ಮಾಜಿ ನಾಯಕ ಅಜಿಂಕ್ಯ ರಹಾನೆ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕೇಂದ್ರೀಯ ಗುತ್ತಿಗೆ ಪದ್ಧತಿಯಲ್ಲಿ ಹಿಂಬಡ್ತಿಗೆ ಒಳಗಾಗಿದ್ದಾರೆ.

ಮಂಡಳಿಯ ಅಪೆಕ್ಸ್ ಸಮಿತಿ ಬುಧವಾರ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಪೂಜಾರ, ರಹಾನೆ ಮತ್ತು ವೇಗದ ಬೌಲರ್ ಇಶಾಂತ್ ಶರ್ಮಾ ಅವರನ್ನು 'ಎ' ದರ್ಜೆಯಿಂದ 'ಬಿ' ದರ್ಜೆಗೆ ಇಳಿಸಲಾಗಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಮತ್ತು ಎಡಗೈ ಬ್ಯಾಟರ್ ಶಿಖರ್ ಧವನ್ ಅವರನ್ನು 'ಎ' ದರ್ಜೆಯಿಂದ 'ಸಿ' ದರ್ಜೆಗೆ ಇಳಿಸಲಾಗಿದೆ. ಈ ವರೆಗೆ 10 ಮಂದಿ ಇದ್ದ 'ಎ' ಈಗ ಐದು ಮಂದಿಗೆ ಇಳಿಕೆಯಾಗಿದೆ.

ಪೂಜಾರ

ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ರಿಷಭ್ ಪಂತ್, ಕೆ.ಎಲ್.ರಾಹುಲ್ ಮತ್ತು ಮೊಹಮ್ಮದ್ ಶಮಿ 'ಎ' ದರ್ಜೆಯಲ್ಲಿದ್ದಾರೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಜಸ್‌ಪ್ರೀತ್ ಬೂಮ್ರಾ 'ಎ +' ದರ್ಜೆಯಲ್ಲಿದ್ದಾರೆ.

ಈಚೆಗೆ ವಿವಾದಕ್ಕೆ ಕಾರಣರಾಗಿದ್ದ ವಿಕೆಟ್ ಕೀಪರ್ ಬ್ಯಾಟರ್ ವೃದ್ಧಿಮಾನ್ ಸಹಾ ಅವರು 'ಬಿ' ಗುಂಪಿಂದ 'ಸಿ' ಗುಂಪಿಗೆ ಹಿಂಬಡ್ತಿ ಪಡೆದಿದ್ದಾರೆ.

ಎ + ದರ್ಜೆಯವರಿಗೆ ವಾರ್ಷಿಕ ₹7 ಕೋಟಿ ನೀಡಲಾಗುತ್ತದೆ. ಎ, ಬಿ ಮತ್ತು ಸಿ ದರ್ಜೆಯವರಿಗೆ ಕ್ರಮವಾಗಿ ₹ 5 ಕೋಟಿ, ₹ 3 ಕೋಟಿ ಮತ್ತು ₹ 1 ಕೋಟಿಯನ್ನು ಬಿಸಿಸಿಐ ನೀಡುತ್ತದೆ.

## ಅಂಧರ ಕ್ರಿಕೆಟ್: ಕರ್ನಾಟಕದ ಗೆಲುವಿನ ಓಟ

ಬೆಂಗಳೂರು: ಗಂಗಾ (71) ಅವರ ಅರ್ಧಶತಕದ ನೆರವಿನಿಂದ ಕರ್ನಾಟಕ ತಂಡವು ಇಂಡಸ್‌ಇಂಡ್ ಬ್ಯಾಂಕ್ ಅಂಧ ಮಹಿಳೆಯರ ರಾಷ್ಟ್ರೀಯ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಎಂಟು ವಿಕೆಟ್‌ಗಳಿಂದ ಜಯಿಸಿತು.

ಸಚಿನ್ ತೆಂಡೂಲ್ಕರ್ ಕ್ರಿಕೆಟ್ ಕ್ರೀ-ಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಮಹಿಳೆಯರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಗುಜರಾತ್ 15 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 151 ರನ್ ಪೇರಿಸಿತು. ಗುರಿ ಬೆನ್ನಟ್ಟಿದ ಕರ್ನಾಟಕದ ಮಹಿಳೆಯರು 14.2 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಿದರು.

ಆತಿಥೇಯ ತಂಡದ ಪರ ತಂಡದ ಗಂಗಾ ಹಾಗೂ ವರ್ಷಾ ಯು. (38) ಉತ್ತಮ ಬ್ಯಾಟಿಂಗ್ ಮಾಡಿದರು.

ಗುಜರಾತ್ ಪರ ತಾಕುಬೆನ್ ಕುಕಡಿಯಾ (69) ಹಾಗೂ ಮೀನಾಬೆನ್ ಕೊತ್ವಾಲ್ (34) ಮಿಂಚಿದರು.

ಇನ್ನುಳಿದ ಪಂದ್ಯಗಳಲ್ಲಿ ಒಡಿಶಾ ತಂಡವು 66 ರನ್‌ಗಳಿಂದ ಮಧ್ಯಪ್ರದೇಶ ಎದುರು, ಜಾರ್ಖಂಡ್ ತಂಡವು ಒಂಬತ್ತು ವಿಕೆಟ್‌ಗಳಿಂದ ಪಶ್ಚಿಮ ಬಂಗಾಳ ವಿರುದ್ಧ, ಹರಿಯಾಣ ವಿರುದ್ಧ ಮಹಾರಾಷ್ಟ್ರ ತಂಡವು 10 ವಿಕೆಟ್‌ಗಳಿಂದ ಜಯ ಸಾಧಿಸಿದವು.

**ಸಂಕ್ಷಿಪ್ತ ಸ್ಕೋರ್: ಗುಜರಾತ್ ಮಹಿಳೆಯರು:** 15 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 151 (ತಾಕುಬೆನ್ ಕುಕಡಿಯಾ 69, ಮೀನಾಬೆನ್ 34, ಸುನಿತಾ ದೊಂಡಪ್ಪನವರ್ 12 ಕ್ಕೆ1). **ಕರ್ನಾಟಕ ಮಹಿಳೆಯರು:** 14.2 ಓವರ್‌ಗಳಲ್ಲಿ 152 (ಗಂಗಾ 71, ವರ್ಷಾ ಯು. 38; ಪುರಿಬೆನ್ ಬಾಬುಜಿ 27ಕ್ಕೆ1).

## ಕೋಚ್ ವಾಜ್ದಾರಿಂದ ಜೊಕೊವಿಚ್ ದೂರ

ಜೊಕೊವಿಚ್

ಪ್ಯಾರಿಸ್ (ಎಎಫ್‌ಪಿ): 20 ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್ ಸರ್ಬಿಯಾದ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರು ತಮ್ಮ ದೀರ್ಘಕಾಲದ ಕೋಚ್ ಮರಿಯನ್ ವಾಜ್ದಾ ಅವರಿಂದ ದೂರ ಉಳಿದಿದ್ದಾಗಿ ಬಹಿರಂಗಪಡಿಸಿದ್ದಾರೆ.

ಕಳೆದ ವರ್ಷ ನಡೆದ ಎಟಿಪಿ ಫೈನಲ್ಸ್ ನಂತರದಿಂದ ತಾನು ವಾಜ್ದಾ ಬಳಿ ತರಬೇತಿ ಪಡೆಯುತ್ತಿಲ್ಲ ಎಂದು ನೊವಾಕ್ ಹೇಳಿದ್ದಾರೆ.

ಕೋವಿಡ್ ಲಸಿಕೆ ತೆಗದುಕೊಳ್ಳದ ಕಾರಣದಿಂದ ಜನವರಿಯಲ್ಲಿ ಆಸ್ಟ್ರೇಲಿಯಾ ಓಪನ್ ಆಡುವುದರಿಂದ ವಂಚಿತರಾಗಿದ್ದ ಜೊಕೊವಿಚ್, ಇತ್ತೀಚೆಗೆ ವಿಶ್ವ ಟೆನಿಸ್ ಕ್ರಮಾಂಕದ ಅಗ್ರಸ್ಥಾನವನ್ನು ಕಳೆದುಕೊಂಡಿದ್ದರು.

2006ರಿಂದ ಸ್ಲೊವೇಕಿಯಾದ ವಾಜ್ದಾ ಬಳಿ ತರಬೇತಿ ಪಡೆಯುತ್ತಿದ್ದ ಜೊಕೊವಿಚ್, 2017ರಲ್ಲಿ ಒಮ್ಮೆ ಅವರಿಂದ ದೂರ ಉಳಿದಿದ್ದರು.

## ಐಎಸ್‌ಎಲ್: ಅಗ್ರ 4ರಲ್ಲಿ ಕೇರಳ

ವಾಸ್ಕೊ (ಪಿಟಿಐ): ಮಹತ್ವದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಮಣಿಸಿದ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಅಂತಿಮ ನಾಲ್ಕರ ಘಟ್ಟಕ್ಕೇರಿತು.

ತಿಲಕ್ ಮೈದಾನ್ ಕ್ರೀಡಾಂಗ-ಣದಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಬ್ಲಾಸ್ಟರ್ಸ್ 3-1ರಲ್ಲಿ ಜಯ ಗಳಿಸಿತು. ಮೊದಲ ಲೆಗ್‌ನಲ್ಲೂ ಮುಂಬೈ ತಂಡವನ್ನು ಕೇರಳ ಮಣಿಸಿತ್ತು.

ಮಿಡ್‌ಫೀಲ್ಡರ್ ಸಹಲ್ ಸಮದ್ 19ನೇ ನಿಮಿಷದಲ್ಲೇ ಗೋಲು ಗಳಿಸಿ ಕೇರಳ ಬ್ಲಾಸ್ಟರ್ಸ್‌ಗೆ ಮುನ್ನಡೆ ಗಳಿಸಿಕೊಟ್ಟರು. ಕ್ಯಾಸಿಯೊ ಗ್ಯಾಬ್ರಿಯೆಲ್ ಅವರಿಂದ ಚೆಂಡು ಕಸಿದುಕೊಂಡು ಏಕಾಂಗಿಯಾಗಿ ಮುನ್ನುಗ್ಗಿದ ಸಹಲ್ ಅವರನ್ನು ತಡೆಯಲು ಮೊರ್ತಜಾ ಫಾಲ್ ಮತ್ತು ಮೆಹತಾಬ್ ಸಿಂಗ್ ಮುನ್ನುಗ್ಗಿದರು. ಆದರೆ ಅವರನ್ನು ಹಿಂದಿಕ್ಕಿ ಮುಂದೆ ಸಾಗಿದ ಸಹಲ್ ಮೋಹಕವಾಗಿ ಗೋಲು ಗಳಿಸಿದರು.

ನಂತರ ಅಲ್ವಾರೊ ವಜ್ಕಿಜ್ ಆಟ ರಂಗೇರಿತು. 45ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಚೆಂಡನ್ನು ಗುರಿಸೇರಿಸಿದ ಅವರು 60ನೇ ನಿಮಿಷದಲ್ಲಿ ಮತ್ತೊಮ್ಮೆ ಮಿಂಚಿದರು. 71ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶ ಮುಂಬೈ ತಂಡದಲ್ಲಿ ನಿರೀಕ್ಷೆ ಮೂಡಿಸಿತು. ಡೀಗೊ ಮೌರಿಸಿಯೊ ಚೆಂಡನ್ನು ಗುರಿಮುಟ್ಟಿಸಿದರು. ಆದರೆ ಮುನ್ನಡೆ ಗಳಿಸಲು ಸಾಧ್ಯವಾಗಲಿಲ್ಲ.

**ಎಟಿಕೆಎಂಬಿಗೆ ಸೆಮಿಫೈನಲ್ ಮೇಲೆ ಕಣ್ಣು:** ಮಡಗಾಂವ್‌ನಲ್ಲಿ ಗುರುವಾರ ನಡೆಯಲಿರುವ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ಮತ್ತು ಚೆನ್ನೈಯಿನ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಅಲ್ವಾರೊ ವಜ್ಕಿಜ್

## ಟೆನಿಸ್: ಸೆಮಿಗೆ ತಥಾಗತ ಲಗ್ಗೆ

ಬೆಂಗಳೂರು: ಕರ್ನಾಟಕದ ತಥಾಗತ, ನವದೆಹಲಿಯಲ್ಲಿ ನಡೆಯುತ್ತಿರುವ ಎಐಟಿಎ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿ ದ್ದಾರೆ.

ಬುಧವಾರ ನಡೆದ ಎಂಟರಘಟ್ಟದ ಹಣಾಹಣಿಯಲ್ಲಿ ಅವರು 6-4,6-0ರಿಂದ ನವದೆಹಲಿಯ ಕಾರ್ತಿಕ್ ಸಕ್ಸೇನಾ ಅವರನ್ನು ಸೋಲಿಸಿದರು. ಪ್ರೀ-ಕ್ವಾರ್ಟರ್‌ಫೈನಲ್‌ನಲ್ಲಿ ತಥಾಗತ 7-6, 6-7, 6-3ರಿಂದ ಉತ್ಕರ್ಷ್ ತಿವಾರಿ ಅವರನ್ನು ಮಣಿಸಿದ್ದರು.

## ಮಹಿಳೆಯರ ವಿಶ್ವಕಪ್ ಕ್ರಿಕೆಟ್: ವಿಶೇಷ ಅಭಿಯಾನ ಆರಂಭ

ಬೆಂಗಳೂರು: ಭಾರತದ ಮಹಿಳೆಯರ ಕ್ರಿಕೆಟ್ ತಂಡ ಈ ವರ್ಷ ಆಡುವ ಟೂರ್ನಿಗಳಿಗೆ ಸಂಬಂಧಿಸಿ ಸ್ಟಾರ್ ಸ್ಪೋರ್ಟ್ಸ್ 'ಹಮಾರ ಬ್ಲೂ ಬಂಧನ್' ಅಭಿಯಾನ ಆರಂಭಿಸಿದೆ. ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್ ಮತ್ತು ಟ್ವೆಂಟಿ20 ವಿಶ್ವಕಪ್ ಸೇರಿದಂತೆ ವಿವಿಧ ಟೂರ್ನಿಗಳಲ್ಲಿ ದೇಶವಿಡೀ ಬೆಂಬಲಕ್ಕೆ ಇದೆ ಎಂಬುದನ್ನು ತೋರಿಸಲು ಈ ಅಭಿಯಾನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಭಿಯಾನದ ಮೊದಲ ಕಿರು ಚಿತ್ರವು ಮಹಿಳೆಯರ ವಿಶ್ವಕಪ್ ಟೂರ್ನಿಗೆ ಸಂಬಂಧಿಸಿದ್ದಾಗಿರಲಿದೆ. ಮಾರ್ಚ್ 4ರಿಂದ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್‌ನ-ಲ್ಲಿ ಇದು ಪ್ರಸಾರ ಆಗಲಿದೆ. ಮಾರ್ಚ್ 6ರಂದು ಪಾಕಿಸ್ತಾನ ಎದುರಿನ ಪಂದ್ಯ ದೊಂದಿಗೆ ಭಾರತದ ಅಭಿಯಾನ ಆರಂಭವಾಗಲಿದೆ.

## ಟಿಟಿ: ಅರ್ಚನಾಗೆ ಅರ್ಹತೆ

ನವದೆಹಲಿ: ಭಾರತದ ಅರ್ಚನಾ ಕಾಮತ್ ಮತ್ತು ಶ್ರೀಜಾ ಆಕುಳ ಅವರು ಮಸ್ಕತ್‌ನಲ್ಲಿ ನಡೆಯಲಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಲು ಅರ್ಹತೆ ಗಳಿಸಿದ್ದಾರೆ. ಪುರುಷ ಸ್ಪರ್ಧಿಗಳು ಹೊರ-ಬಿದ್ದಿದ್ದಾರೆ. ಮಣಿಕಾ ಭಾತ್ರಾ ಅವರು ನೇರ ಪ್ರವೇಶ ಪಡೆದುಕೊಂಡಿದ್ದಾರೆ.

ಮೂರನೆ ಸುತ್ತಿನ ಅರ್ಹತಾ ಪಂದ್ಯ ದಲ್ಲಿ ಅರ್ಚನಾ ಕಮತ್ 11-8 5-11 12-10 11-7ರಲ್ಲಿ ಟರ್ಕಿಯ ಯಿಲ್ಮಜ್ ವಿರುದ್ಧ ಜಯ ಗಳಿಸಿದರು. ಶ್ರೀಜಾ 11-5 11-13 12-10 11-4ರಲ್ಲಿ ಯಾಂಗ್ ಹುಯಿಜಿಂಗ್ ಅವರನ್ನು ಮಣಿಸಿದರು.